" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತಾರನೆಯ ಅಧಿವೇಶನ

15ನೇ ಮಾರ್ಚ್ 2022

ಮಂಗಳವಾರ

## ವಿಷಯಾನುಕ್ರಮಣಿಕೆ (INDEX)

**01.ಪ್ರಕಟಣೆ**

'The Kashmir Files' ಚಲನಚಿತ್ರದ ಪ್ರದರ್ಶನವನ್ನು ಏರ್ಪಡಿಸಿರುವ ಬಗ್ಗೆ

**02.ಪ್ರಶ್ನೋತ್ತರ**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**1892 – ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆದು ಎರಡು ತಿಂಗಳು ಕಳೆದರೂ ಮೀಸಲಾತಿ ಪ್ರಕಟಿಸದ ಕುರಿತು**

– ಶ್ರೀ ಯು.ಬಿ.ವೆಂಕಟೇಶ್

– ಶ್ರೀ ಬಿ.ಎ. ಬಸವರಾಜು (ನಗರಾಭಿವೃದ್ಧಿ ಸಚಿವರು)

(ಉತ್ತರ ಒದಗಿಸಲು ಒಂದು ವಾರ ಕಾಲಾವಕಾಶ ನೀಡಲಾಯಿತು)

**1878 – ಪ್ರಾಥಮಿಕ ಕೃಷಿ ಸಹಕಾರ ಸಂಘಗಳ ಸ್ಥಾಪನೆ ಕುರಿತು**

– ಶ್ರೀ ನಿರಾಣಿ ಹಣಮಂತ್ ರುದ್ರಪ್ಪ

– ಶ್ರೀ ಎಸ್.ಟಿ. ಸೋಮಶೇಖರ್ (ಸಹಕಾರ ಸಚಿವರು)

**1800 – ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಯೋಜನೆಗಳ ಕುರಿತು**

– ಶ್ರೀ ಕೆ.ಎ.ತಿಪ್ಪೇಸ್ವಾಮಿ

– ಶ್ರೀ ಬಿ.ಎ. ಬಸವರಾಜು (ನಗರಾಭಿವೃದ್ಧಿ ಸಚಿವರು)

**1802 – ಬೀದರ್ ನಗರ ಕುಡಿಯುವ ನೀರಿನ ಸಮಸ್ಯೆ ಕುರಿತು**

– ಅರವಿಂದ ಕುಮಾರ್ ಅರಳಿ

– ಶ್ರೀ ಬಿ.ಎ. ಬಸವರಾಜು (ನಗರಾಭಿವೃದ್ಧಿ ಸಚಿವರು)

**1863 – ಬಲ್ಕ್ ಡ್ರಗ್ ಪಾರ್ಕ್ ಯೋಜನೆ ಕುರಿತು**

– ಶ್ರೀ ಶಶೀಲ್ ಜಿ.ನಮೋಶಿ

– ಡಾ: ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

**1868 – ಆಸ್ತಿ ತೆರಿಗೆ ಸಂಗ್ರಹ ಸೋರಿಕೆ ಬಗ್ಗೆ**

– ಡಾ: ಕೆ.ಗೋವಿಂದರಾಜ್

– ಶ್ರೀ ಎನ್.ನಾಗರಾಜು (ಎಂ.ಟಿ.ಬಿ) (ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು)

**1840 – ದಾಸನಪುರ ಉಪ ಮಾರುಕಟ್ಟೆಯನ್ನು ಉಪಯೋಗಿಸದಿರುವ ಬಗ್ಗೆ**

– ಶ್ರೀ ಎಸ್.ರವಿ

– ಶ್ರೀ ಎಸ್.ಟಿ. ಸೋಮಶೇಖರ್ (ಸಹಕಾರ ಸಚಿವರು)

**1884 – ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ಬಗ್ಗೆ**

– ಶ್ರೀ ಆಯನೂರು ಮಂಜುನಾಥ್

– ಶ್ರೀ ಬಿ.ಎ. ಬಸವರಾಜು (ನಗರಾಭಿವೃದ್ಧಿ ಸಚಿವರು)

**1886 – ಕೊಡಗು ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಪೂರ್ಣವಾಗಿ ಯು.ಜಿ.ಡಿ. ವ್ಯವಸ್ಥೆ ಕಲ್ಪಿಸುವ ಕುರಿತು**

– ಎಸ್.ವೀಣಾ ಅಚ್ಚಯ್ಯ

– ಶ್ರೀ ಬಿ.ಎ. ಬಸವರಾಜು (ನಗರಾಭಿವೃದ್ಧಿ ಸಚಿವರು)

**1874 – ಸಣ್ಣ ಕೈಗಾರಿಕೆಯನ್ನು ಪ್ರಾರಂಭಿಸುವ ಕುರಿತು**

– ಶ್ರೀ ಕುಶಾಲಪ್ಪ ಎಂ.ಪಿ

– ಶ್ರೀ ಎನ್.ನಾಗರಾಜು (ಎಂ.ಟಿ.ಬಿ) (ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು)

**1858 – ನಿಗಮ/ಮಂಡಳಿಯ ಕುರಿತು**

– ಶ್ರೀ ಹರೀಶ್ ಕುಮಾರ್

– ಶ್ರೀ ಎನ್.ನಾಗರಾಜು (ಎಂ.ಟಿ.ಬಿ) (ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು)

**೧846 – ರಾಜ್ಯದ ಪಾಲಿಕೆ ಮತ್ತು ಮಹಾನಗರ ಪಾಲಿಕೆಗಳ ಕಾರ್ಯವೈಖರಿ ಕುರಿತು**

– ಶ್ರೀ ಪಿ.ಆರ್.ರಮೇಶ್

– ಶ್ರೀ ಬಿ.ಎ. ಬಸವರಾಜು (ನಗರಾಭಿವೃದ್ಧಿ ಸಚಿವರು)

**1880 – ಹೊಸ ಕೈಗಾರಿಕಾ ಆಸ್ತಿ ತೆರಿಗೆ ನೀತಿ ಕುರಿತು**

– ಶ್ರೀ ಮುನಿರಾಜು ಗೌಡ ಪಿ.ಎಂ.

– ಶ್ರೀ ಎನ್.ನಾಗರಾಜು (ಎಂ.ಟಿ.ಬಿ) (ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು)

**ತಡೆಹಿಡಿಯಲಾದ ಪ್ರಶ್ನೆ**

**1319 – ಮಂಗಳೂರು ಮಹಾನಗರ ಪಾಲಿಕೆಯ ಒಳಚರಂಡಿ ವ್ಯವಸ್ಥೆ ಕುರಿತು**

– ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.

– ಶ್ರೀ ಬಿ.ಎ. ಬಸವರಾಜು (ನಗರಾಭಿವೃದ್ಧಿ ಸಚಿವರು)

**1316 – ಮಂಗಳೂರು ಮಹಾನಗರ ಪಾಲಿಕೆಯ ಒಳಚರಂಡಿ ವ್ಯವಸ್ಥೆ ಕುರಿತು**

– ಶ್ರೀ ಆರ್.ರಾಜೇಂದ್ರ ರಾಜಣ್ಣ

– ಶ್ರೀ ಆಚಾರ ಹಾಲಪ್ಪ ಬಸಪ್ಪ (ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**೦3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

ಅ) **ಪುರಭವನ ಶಿಥಿಲಾವಸ್ಥೆ ಬಗ್ಗೆ.**

– ಶ್ರೀ ಕೆ.ಟಿ.ಶ್ರೀಕಂಠೇಗೌಡ

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಆ) ಸರ್ಕಾರಿ ಇಲಾಖೆಗಳಲ್ಲಿ ನೇಮಕಗೊಂಡ ಪರಿಶಿಷ್ಟ ಪಂಗಡದ ಗೊಂಡ, ಟೋಕರೆ, ಕೋಳಿ ಜಾತಿಗಳ ಸಿಂಧುತ್ವ ಪ್ರಮಾಣ ಪತ್ರ ನೀಡುವ ಕುರಿತು**

– ಡಾ: ತಳವಾರ್ ಸಾಬಣ್ಣ

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

---

**ಇ) ರಾಜ್ಯದಲ್ಲಿ ವಿವಾಹಿತ ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯ ಮತ್ತು ಯುವತಿಯರ ಮೇಲಿನ ಲೈಗಿಕ ದೌರ್ಜನ್ಯಕ್ಕೆ ಕಡಿವಾಣ ಹಾಕುವ ಕುರಿತು.**

- ಶ್ರೀ ಸಲೀಂ ಅಹಮದ್

- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಈ) ಕರೋನ ಸೋಂಕು ಸಂದರ್ಭದಲ್ಲಿ ನೇಮಕ ಮಾಡಿಕೊಂಡ 4000 ಸಿಬ್ಬಂದಿಗಳನ್ನು ಬಿಡುಗಡೆಗೊಳಸುತ್ತಿರುವ ಕುರಿತು**

- ಡಾ: ಡಿ.ತಿಮ್ಮಯ್ಯ

- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಉ) ಚೆನ್ನೈ ಎಕ್ಸ್‌ಪ್ರೆಸ್ ಕಾರಿಡಾರ್ ಕಾಮಗಾರಿಗೆ ಕೋಲಾರ ಜಿಲ್ಲಾಧಿಕಾರಿಯವರು ಕೆರೆಗಳಲ್ಲಿ ಮಣ್ಣು ತೆಗೆಯಲು ನೀಡಿರುವ ಅನುಮತಿಯನ್ನು ರದ್ದುಪಡಿಸಿ ಧೂಳನಿಂದ ಹಾಳಾಗಿರುವ ಬೆಳೆಗೆ ಪರಿಹಾರ ಮಂಜೂರು ಮಾಡುವ ಕುರಿತು**

- ಶ್ರೀ ಗೋವಿಂದರಾಜು

- ಶ್ರೀ ಆಚಾರ ಹಾಲಪ್ಪ ಬಸಪ್ಪ (ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು)

**ಊ) ರಾಜ್ಯದಲ್ಲಿರುವ ಸಾರಿಗೆ ಕಚೇರಿಗಳಲ್ಲಿ ದಲ್ಲಾಳಿಗಳು ಲಂಚದ ಆಮಿಷ ನೀಡುತ್ತಿರುವ ಬಗ್ಗೆ**

- ಶ್ರೀ ಮುನಿರಾಜು ಗೌಡ ಪಿ.ಎಂ.

- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಋ) 2021-22ನೇ ಸಾಲಿಗೆ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಸಿಬ್ಬಂದಿಗಳ ವೈದ್ಯಕೀಯ ವೆಚ್ಚ ಮರುಪಾವತಿ ಕುರಿತು**

- ಶ್ರೀ ಮರಿತಿಬ್ಬೇಗೌಡ

- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಎ) ರಾಜ್ಯದ ಗ್ರಾಮ ಪಂಚಾಯಿತಿ ಕಚೇರಿಗಳು ಸಾರ್ವಜನಿಕ ಹಿತಾಸಕ್ತಿ ಅನುಸಾರವಾಗಿ ಕಾರ್ಯನಿರ್ವಹಿಸದೇ ಇರುವ ಬಗ್ಗೆ**

- ಶ್ರೀ ಪ್ರದೀಪ್ ಶೆಟ್ಟರ್
- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಏ) ಆರ್ಥಿಕವಾಗಿ ಹಿಂದುಳಿದ ವರ್ಗಗಳ ಜನರಿಗೆ ಶಿಕ್ಷಣದಲ್ಲಿ ಶೇಕಡ 10ರಷ್ಟು ಮೀಸಲಾತಿ ಕಾಯ್ದೆ ತರುವ ಬಗ್ಗೆ**

- ಶ್ರೀ ಎಸ್.ವ್ಹಿ. ಸಂಕನೂರ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಐ) ಬಳ್ಳಾರಿ ಜಿಲ್ಲೆ ಸಂಡೂರು ತಾಲ್ಲೂಕು ಸುಲ್ತಾನಪುರ ಗ್ರಾಮವನ್ನು ಸ್ಥಳಾಂತರ ಮಾಡುವ ಬಗ್ಗೆ**

- ಶ್ರೀ ವೈ.ಎಂ.ಸತೀಶ್
- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**೦4. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಂಬಂಧಪಟ್ಟ ಸಚಿವರ ಹೇಳಿಕೆಗಳು**

**ಅ) ದಿನಾಂಕ 8-03-2022ರಂದು ಶ್ರೀ ದುಮ್ಮಾ ಉಳ್ವೇಕರ್‌ರವರು ಮೀನುಗಾರರ ಮಹಿಳೆಯರ ಸಬಲೀಕರಣದ ಬಗ್ಗೆ ಪ್ರಸ್ತಾಪಿಸಿರುವ ವಿಷಯ**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಪರವಾಗಿ)

**ಆ) ದಿನಾಂಕ 8-03-2022ರಂದು ಶ್ರೀ ಮುನಿರಾಜುಗೌಡ ಹಾಗೂ ಶ್ರೀ ರಮೇಶ್ ಗೌಡರವರುಗಳು ಕಾನೂನು ಹಾಗೂ ಸುವ್ಯವಸ್ಥೆಯನ್ನು ಕಾಪಾಡುವ ಸಮಾಜದ ರಕ್ಷಕರಾಗಿರುವವರು ಮಾಫಿಯಾಗಳ ಕೈಜೋಡಿಸಿ ರಕ್ಷಕರೇ ಭಕ್ಷಕರಾಗಿರುವುದರಿಂದ ಭ್ರಷ್ಟಾಚಾರ, ಅಕ್ರಮ, ಅನೈತಿಕ ವ್ಯವಸ್ಥೆಯನ್ನು ಬದಲಿಸುವ ಕುರಿತು ಪ್ರಸ್ತಾಪಿಸಿರುವ ವಿಷಯ**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಗೃಹ ಸಚಿವರ ಪರವಾಗಿ)

---

**ಇ) ದಿನಾಂಕ 9-03-2022ರಂದು ಶ್ರೀ ಆರ್.ಬಿ.ತಿಮ್ಮಾಪೂರ್‌ರವರು ಪ್ರಸ್ತಾಪಿಸಿರುವ ಮುಧೋಳ ತಾಲ್ಲೂಕಿನ ಲೋಕಾಪುರದ ಹೆದ್ದಾರಿಯಲ್ಲಿ ಪ್ರತಿಮೆ ಸ್ಥಾಪಿಸುವ ಕುರಿತು ಪ್ರಸ್ತಾಪಿಸಿರುವ ವಿಷಯ**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ)

**ಈ) ದಿನಾಂಕ 9-03-2022ರಂದು ಶ್ರೀ ಪಿ.ಎಂ.ಮುನಿರಾಜು ಗೌಡರವರು ತೋಟಗಾರಿಕಾ ಇಲಾಖೆಯಲ್ಲಿ ಮಹಿಳಾ ಸಿಬ್ಬಂದಿಗಳಿಗೆ ಅನಗತ್ಯ ಕಿರುಕುಳ ನೀಡುತ್ತಿರುವ ಬಗ್ಗೆ ಪ್ರಸ್ತಾಪಿಸಿರುವ ವಿಷಯ**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರ ಪರವಾಗಿ)

**ಉ) ದಿನಾಂಕ 9-03-2022ರಂದು ಶ್ರೀ ಸಿ.ಎಂ. ಇಬ್ರಾಹಿಂರವರು ಕಲಬುರ್ಗಿ ಜಿಲ್ಲೆ ಆಳಂದ ಪಟ್ಟಣದಲ್ಲಿ 1.3.2022ರಂದು ಸೆಕ್ಷನ್ 144ನ್ನು ಉಲ್ಲಂಘಿಸಿದ ಬಗ್ಗೆ ಪ್ರಸ್ತಾಪಿಸಿರುವ ವಿಷಯ**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಗೃಹ ಸಚಿವರ ಪರವಾಗಿ)

**ಊ) ದಿನಾಂಕ 10-03-2022ರಂದು ಶ್ರೀ ಕೆ.ಹರೀಶ್ ಕುಮಾರ್‌ರವರು ಬೆಂಗಳೂರು ನಗರದಲ್ಲಿ ಬೇಸಿಗೆ ಪ್ರಾರಂಭವಾಗುವ ಮುನ್ನವೇ ಕುಡಿಯುವ ನೀರಿಗೆ ತೊಂದರೆಯಾಗಿರುವ ಬಗ್ಗೆ ಪ್ರಸ್ತಾಪಿಸಿರುವ ವಿಷಯ**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಮುಖ್ಯಮಂತ್ರಿಗಳ ಪರವಾಗಿ)

**ಋ) ದಿನಾಂಕ 10-03-2022ರಂದು ಡಾ: ತಿಮ್ಮಯ್ಯರವರು ರಾಜ್ಯದಲ್ಲಿ ಕಳಪೆ ಗುಣ ಮಟ್ಟದ ಆಹಾರ ತಯಾರಿಕೆ ಮತ್ತು ಸೇವನೆಯಿಂದ ಜನರ ಆರೋಗ್ಯದ ಮೇಲೆ ಉಂಟಾಗುತ್ತಿರುವ ದುಷ್ಪರಿಣಾಮದ ಬಗ್ಗೆ ಪ್ರಸ್ತಾಪಿಸಿರುವ ವಿಷಯ**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಆರೋಗ್ಯ

---

ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಪರವಾಗಿ)

**ಎ) ದಿನಾಂಕ 10-03-2022ರಂದು ಅರುಣ ಶಹಾಪೂರ್‌ರವರು ಖಾಸಗಿ ಶಾಲೆಗಳ ನವೀಕರಣಕ್ಕೆ ಪ್ರತಿ ವರ್ಷ ಅರ್ಜಿ ಸಲ್ಲಿಸುವ ಬಗ್ಗೆ ಪ್ರಸ್ತಾಪಿಸಿರುವ ವಿಷಯ**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ)

**ಏ) ದಿನಾಂಕ 10-03-2022ರಂದು ಶ್ರೀಮತಿ ಭಾರತಿ ಶೆಟ್ಟಿರವರು ಧಾರವಾಡ ತಾಲ್ಲೂಕಿನ ಸೋಮನಪುರದ ಮಹಿಳೆಯೊಬ್ಬಳ ಮೇಲೆ ಟಿ.ವಿ.ಚಾನಲ್ ವರದಿಗಾರ ಅತ್ಯಾಚಾರ ಎಸಗಿರುವ ಬಗ್ಗೆ ಪ್ರಸ್ತಾಪಿಸಿರುವ ವಿಷಯ**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

(ಗೃಹ ಸಚಿವರ ಪರವಾಗಿ)

**ಐ) ದಿನಾಂಕ 10-03-2022ರಂದು ಎಸ್.ರವಿಯವರು ರಾಮನಗರ ಜಿಲ್ಲೆಯ ಕಾಡಂಚಿನ ಗ್ರಾಮಗಳಿಗೆ ಆನೆಗಳ ಹಾವಳಿಯಿಂದ ರೈತರಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ ಪ್ರಸ್ತಾಪಿಸಿರುವ ವಿಷಯ**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

(ಕಂದಾಯ ಸಚಿವರ ಪರವಾಗಿ)

**ಒ) ದಿನಾಂಕ 10-03-2022ರಂದು ಶ್ರೀ ಸಲೀಂ ಅಹಮದ್‌ರವರು ರಾಜ್ಯದಲ್ಲಿ ಕೋ-ಆಪರೇಟಿವ್ ಸೊಸೈಟಿಗಳು ಇತ್ತೀಚಿನ ದಿನಗಳಲ್ಲಿ ತನ್ನ ಆರಂಭದಲ್ಲಿ ಗ್ರಾಹಕರಿಗೆ ಅಧಿಕ ಬಡ್ಡಿಯ ಆಮಿಷವನ್ನು ಒಡ್ಡಿ ಗ್ರಾಹಕರಿಗೆ ತನ್ನ ಠೇವಣಿಯ ಹಣವನ್ನು ನೀಡಲು ಸಾಧ್ಯವಾಗದೇ, ಮೋಸ ಮಾಡುತ್ತಿರುವ ಆತಂಕಕಾರಿ ವಿಚಾರದ ಬಗ್ಗೆ ಪ್ರಸ್ತಾಪಿಸಿರುವ ವಿಷಯ**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

(ಸಹಕಾರ ಸಚಿವರ ಪರವಾಗಿ)

**ಓ) ದಿನಾಂಕ 11-03-2022ರಂದು ಶ್ರೀ ಅರುಣ ಶಹಾಪೂರರವರು ಖಾಸಗಿ ಅನುದಾನಿತ ಐಟಿಐ ಶಿಕ್ಷಣ ಸಂಸ್ಥೆಗಳಲ್ಲಿನ ಸಿಬ್ಬಂದಿಗಳಿಗೆ ನವೆಂಬರ್ 2021ರಿಂದ ವೇತನ ಬಿಡುಗಡೆಯಾಗದಿರುವ ಬಗ್ಗೆ ಪ್ರಸ್ತಾಪಿಸಿರುವ ವಿಷಯ**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)
(ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಪರವಾಗಿ)

**ಔ) ದಿನಾಂಕ 11-03-2022ರಂದು ಶ್ರೀರಾಜೇಂದ್ರ ರಾಜಣ್ಣರವರು ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನ ಅಮ್ಮನಘಟ್ಟ ಅರಣ್ಯ ಪ್ರದೇಶದಲ್ಲಿ ಜಮೀನು ಒತ್ತುವರಿ ಹೆಸರಿನಲ್ಲಿ ರೈತರು ಬೆಳೆದ ಬೆಳೆಗಳನ್ನು ಅರಣ್ಯ ಇಲಾಖೆ ನಾಶಪಡಿಸಿರುವ ಬಗ್ಗೆ ಪ್ರಸ್ತಾಪಿಸಿರುವ ವಿಷಯ**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)
(ಅರಣ್ಯ ಹಾಗೂ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರ ಪರವಾಗಿ)

**ಅಂ) ದಿನಾಂಕ 11-03-2022ರಂದು ಶ್ರೀ ಎಸ್.ರವಿರವರು ಕನಕಪುರ ತಾಲ್ಲೂಕಿನ ಹಾರೋಹಳ್ಳಿ ಕೊಟ್ಟಗಾಳು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸಿಂದ್ಯಾ ನಗರದಲ್ಲಿ ಸರ್ವೆ ಕಾರ್ಯದ ಬಗ್ಗೆ ಪ್ರಸ್ತಾಪಿಸಿರುವ ವಿಷಯ**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)
(ಕಂದಾಯ ಸಚಿವರ ಪರವಾಗಿ)

**ಅಃ) ದಿನಾಂಕ 14-03-2022ರಂದು ಶ್ರೀ ಶಶೀಲ್ ಜಿ.ನಮೋಶಿರವರು ಸರ್ಕಾರಿ ಇಲಾಖೆಗಳಲ್ಲಿ ನೇಮಕಗೊಂಡ ಪರಿಶಿಷ್ಟ ಪಂಗಡದ ಗೊಂಡ, ಟೋಕರೆ, ಕೋಳಿ ಜಾತಿಗಳ ಸಿಂಧುತ್ವ ಪ್ರಮಾಣ ಪತ್ರ ನೀಡಿಕೆ ಕುರಿತು ಪ್ರಸ್ತಾಪಿಸಿರುವ ವಿಷಯ**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)
(ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರ ಪರವಾಗಿ)

**೦5. ಪ್ರಕಟಣೆ**

**ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಸಚಿವರು ಹಾಗೂ ಅಧಿಕಾರಿಗಳ ಬಗ್ಗೆ**

**೦6. ಹಕ್ಕುಚ್ಯುತಿ ಪ್ರಸ್ತಾವ**

**ಶಾಸಕರ ಪ್ರದೇಶಾಭಿವೃದ್ಧಿ ನಿಧಿಯನ್ನು ಕರೋನಾ ನಿಮಿತ್ತ ಕಡಿತಗೊಳಿಸಿರುವುದು ಹಾಗೂ 2018-19ನೇ ಸಾಲಿನಲ್ಲಿ ಸಾರಾಸಗಟಾಗಿ ವಾಪಸ್ಸು ತೆಗೆದುಕೊಂಡಿರುವಂತಹ ದುರಂತದ ಬಗ್ಗೆ.**

- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ರಘುನಾಥ್‌ರಾವ್ ಮಲ್ಕಾಪೂರೆ
- ಶ್ರೀ ಮುನಿರತ್ನ (ತೋಟಗಾರಿಕೆ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು)

**೦7. ವರದಿಯನ್ನೊಪ್ಪಿಸುವುದು**

**2020-21ನೇ ಸಾಲಿನ ವಿಧಾನ ಮಂಡಲದ ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿಯ 37ನೇ ವರದಿ ಅಧ್ಯಕ್ಷರ ಪರವಾಗಿ ಶ್ರೀ ಬಿ.ಜಿ.ಪಾಟೀಲ್‌ರವರಿಂದ ಮಂಡನೆ**

**೦8. ವಿತ್ತೀಯ ಕಾರ್ಯಕಲಾಪ**

2022-23ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ

- ಶ್ರೀ ಮಂಜುನಾಥ್ ಭಂಡಾರಿ
- ಶ್ರೀ ಅಡಗೂರ್ ಹೆಚ್.ವಿಶ್ವನಾಥ್
- ಶ್ರೀ ಮರಿತಿಬ್ಬೇಗೌಡ

**೦9. ಪ್ರಕಟಣೆ**

**ಡಾ:ವೈ.ಎ.ನಾರಾಯಣಸ್ವಾಮಿಯವರನ್ನು ಸರ್ಕಾರಿ ಮುಖ್ಯ ಸಚೇತಕರನ್ನಾಗಿ ನೇಮಿಸಿರುವ ಬಗ್ಗೆ**

**10. ವಿತ್ತೀಯ ಕಾರ್ಯಕಲಾಪ**

2022-23ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ

- ಶ್ರೀ ಎಸ್.ವೀಣಾ ಅಚ್ಚಯ್ಯ
- ಶ್ರೀ ಡಿ.ಎಸ್.ಅರುಣ್

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(328) 15.03.2022 10.40 ಎಸ್‌ವಿ-ಎಕೆ

**ಕರ್ನಾಟಕ ವಿಧಾನ ಪರಿಷತ್ತು**

**ಮಂಗಳವಾರ, 15ನೇ ಮಾರ್ಚ್ 2022**

**ಸದನವು ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಬೆಳಗ್ಗೆ 10 ಗಂಟೆ 40 ನಿಮಿಷಗಳಿಗೆ ಸಮಾವೇಶಗೊಂಡಿತು.**

**ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಅವರು ಪೀಠದಲ್ಲಿ ಉಪಸ್ಥಿತರಾದರು.**

**01. ಪ್ರಕಟಣೆ**

**ಸಭಾಪತಿಯವರು:-** ದಿನಾಂಕ 15.03.2022ರಂದು ಅಂದರೆ ಇಂದು ಸಂಜೆ 06.45 ಗಂಟೆಗೆ ಬೆಂಗಳೂರು ನಗರದ ಮಂತ್ರಿ ಮಾಲ್‌ನಲ್ಲಿರುವ ಪಿ.ವಿ.ಆರ್. ಸ್ಕ್ರೀನ್ ಸಂಖ್ಯೆ 6 ರಲ್ಲಿ ಹಿಂದಿ ಭಾಷೆಯಲ್ಲಿ ಮೂಡಿ ಬಂದಿರುವ 'The Kashmir Files' ಚಲನಚಿತ್ರದ ಪ್ರದರ್ಶನವನ್ನು ಏರ್ಪಡಿಸಲಾಗಿದ್ದು, ಎಲ್ಲಾ ಮಾನ್ಯ ಶಾಸಕರು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕೆಂಬ ವಿಷಯವನ್ನು ಸದನದ ಗಮನಕ್ಕೆ ತರುತ್ತಿದ್ದೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, "ಫರ್ಜಾನಾ" ಎನ್ನುವ ಮತ್ತೊಂದು ಚಲನಚಿತ್ರವಿದ್ದು, ಅದನ್ನು ಕೂಡ ತೋರಿಸಲು ಕ್ರಮ ಕೈಗೊಳ್ಳಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇನೆ. ಫರ್ಜಾನಾ ಮತ್ತು 'Water' ಎನ್ನುವ ಎರಡು ಚಲನಚಿತ್ರಗಳಿದ್ದು, ಅದನ್ನು ಸಹ ಪ್ರದರ್ಶನ ಮಾಡುವುದು ಉತ್ತಮ.

**ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬಲವಂತವಾಗಿ ಚಲನಚಿತ್ರವನ್ನು ತೋರಿಸುವ ಕೆಲಸವನ್ನು ಸರ್ಕಾರ ಏಕೆ ಮಾಡುತ್ತಿದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ.

**ಸಭಾಪತಿಯವರು:-** ನನಗೇನು ಗೊತ್ತು? ನನ್ನ ಕೆಲಸವನ್ನಷ್ಟೇ ನಾನು ಮಾಡಿದ್ದೇನೆ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ಬಜೆಟ್ ಮೇಲಿನ ಚರ್ಚೆಯನ್ನು ಬಿಟ್ಟು, ಇಡೀ ವಿಧಾನ ಸೌಧದಲ್ಲಿ ಇದೇ ಚರ್ಚೆ ನಡೆಯುತ್ತಿದೆ. 'The Kashmir Files' ಬಗ್ಗೆ ಚರ್ಚೆ. ಬಜೆಟ್ ಬಗ್ಗೆ ಚರ್ಚೆ ಮಾಡಿ, ಅದರಲ್ಲಿ ಏನು ಸುಧಾರಣೆ ತರಬೇಕೋ ಅದನ್ನು ತರಲಿ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಬಜೆಟ್‌ಗೂ ಈ ಚಲನಚಿತ್ರಕ್ಕೂ ಸಂಬಂಧವಿರುವುದಿಲ್ಲ. ಕಡ್ಡಾಯವಾಗಿ ನೋಡಬೇಕು ಎಂದೇನಿಲ್ಲ. ಎಲ್ಲರಿಗೂ inform ಮಾಡುತ್ತಿದ್ದೇವೆ.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ಯಾರಿಗೆ ಆಸಕ್ತಿ ಇದೆಯೋ ಅವರು ಚಲನಚಿತ್ರವನ್ನು ವೀಕ್ಷಿಸುತ್ತಾರೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ತಮ್ಮ ಪೀಠದಿಂದ ಇಂತಹ ಆದೇಶಗಳು ಬರಬಾರದು. ಫರ್ಝಾನ ಚಲನಚಿತ್ರವನ್ನೂ ತೋರಿಸಲು ಕ್ರಮ ಕೈಗೊಳ್ಳಿ. ಬಾಬು ಭಜರಂಗಿ ಎನ್ನುವವನು ಗುಜರಾತ್‌ನಲ್ಲಿ ಬಸರಿ ಹೆಂಗಸರ ಹೊಟ್ಟೆಯಿಂದ ಯಾವ ರೀತಿ ಮಕ್ಕಳನ್ನು ಹೊರಗೆ ತೆಗೆದನು ಎನ್ನುವುದನ್ನು ತೋರಿಸಿದ್ದಾರೆ. ಆ ಚಲನಚಿತ್ರವನ್ನೂ ತೋರಿಸಿ. ಆ ರೀತಿ ಇವರ ಬಳಿ ದ್ವೇಷ ಅಸೂಯೆ ಭಾವನೆ ಇದ್ದರೆ ಅದು ನಮ್ಮ ಹತ್ತಿರವೂ ಇದೆ.

**ಸಭಾಪತಿಯವರು:-** ದಯವಿಟ್ಟು ಕುಳಿತುಕೊಳ್ಳಿ. ನನ್ನ ಮಾತನ್ನು ಒಂದು ನಿಮಿಷ ಕೇಳಿ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ಬೇಕಾದರೆ ಅವರು ಎಲ್ಲರಿಗೂ ಪತ್ರಿಕೆಯನ್ನು ಕಳುಹಿಸಲಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಇದು ಸದನದಲ್ಲಿ ಹೇಳುವಂತಹ ವಿಷಯವೇ? ಸರ್ಕಾರ ಆ ಚಲನಚಿತ್ರವನ್ನು ನಿರ್ಮಿಸಿರುವ ನಿರ್ಮಾಪಕರಿಗೆ ಲಾಭವನ್ನು ಮಾಡಿಕೊಡುವ ಉದ್ದೇಶದಿಂದ ಈ ರೀತಿ ಮಾಡುತ್ತಿದೆ. ಸದನದಲ್ಲಿ ತಾವು ಮಾಡಿರುವ ಈ ಪ್ರಕಟಣೆಯನ್ನು ವಾಪಸ್ ತೆಗೆದುಕೊಳ್ಳಬೇಕು. **(ಗೊಂದಲ)** 'Gujarat File' ಕೂಡ ತೋರಿಸಲಿ.

**(ಗೊಂದಲ)**

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ವಿರೋಧಪಕ್ಷದ ನಾಯಕರೇ, ಪಂಜಾಬ್‌ನಲ್ಲಿ ಏನಾಯಿತು? ಪಂಚರಾಜ್ಯ ಚುನಾವಣೆಗಳಲ್ಲಿ ನಿಮ್ಮ ಪರಿಸ್ಥಿತಿ ಏನಾಯಿತು?

**ಶ್ರೀ ಬಿ.ಕೆ.ಹರಿಪ್ರಸಾದ್:-** ಸಾವಿರ ಆಗುತ್ತದೆ. ಪಂಜಾಬ್ ಅಲ್ಲ, ಸಂಪೂರ್ಣ ನಿರ್ನಾಮವಾಗಲಿ. ಸಿದ್ಧಾಂತದಲ್ಲಿ ನಾವು compromise ಆಗುವುದಿಲ್ಲ. ಕಾರ್ಪೋರೇಟರ್ ಆಗಲು

ಕಾಂಗ್ರೆಸ್ ಬೇಕು, ಎಂ.ಎಲ್.ಎ. ಆಗುವುದಕ್ಕೆ ಕಾಂಗ್ರೆಸ್ ಬೇಕು, ಮಂತ್ರಿ ಆಗುವುದಕ್ಕೆ ಬಿ.ಜೆ.ಪಿ. ಬೇಕು. ನಾವು ನೋಡಿದ್ದೇವೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಈ ಪ್ರಕಟಣೆಯನ್ನು ತಾವು ವಾಪಸ್ ತೆಗೆದುಕೊಳ್ಳಬೇಕು.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಇದನ್ನು ವಾಪಸ್ ತೆಗೆದುಕೊಳ್ಳುವ ಪ್ರಶ್ನೆಯೇ ಇಲ್ಲ. ಯಾರಿಗೆಲ್ಲಾ ಮನಸ್ಸಿದೆಯೋ ಅವರು ಬಂದು ವೀಕ್ಷಣೆ ಮಾಡಲಿ.

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಿರತರಾದರು.)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಯಾವುದೇ ಕಾರಣಕ್ಕೂ ವಾಪಸ್ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಸರ್ಕಾರ ಕೊಟ್ಟಿರುವ ಪ್ರಕಟಣೆಯನ್ನು ತಾವು ಪೀಠದಿಂದ ಪ್ರಕಟಣೆ ಮಾಡಿದ್ದೀರಿ. ಯಾರಿಗೆ ಬರಲಿಕ್ಕೆ ಇಷ್ಟವುಂಟೋ ಅವರು ಬರಬಹುದು. ಕೆಳಮನೆಯಲ್ಲಿಯೂ ಅದನ್ನೇ ಮಾಡಿದ್ದಾರೆ. ಇವರ ಆರ್ಭಟಗಳು ಇಲ್ಲಿ ನಡೆಯುವುದಿಲ್ಲ.

**ಶ್ರೀ ಎನ್.ರವಿಕುಮಾರ್ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾವು ಇಲ್ಲಿ ಪಾಕಿಸ್ತಾನದ ಬಗ್ಗೆ ಮಾತನಾಡುತ್ತಿದ್ದೇವೆಯೇ? ಕಾಶ್ಮೀರದ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಕಾಶ್ಮೀರದ ಬಗ್ಗೆ ಏಕೆ ಚರ್ಚೆಯಾಗಬಾರದು?

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಈ ರೀತಿ ಮಾಡಿದರೆ ನನಗೆ ಸರಿಯೆನ್ನಿಸುವುದಿಲ್ಲ. ನಾನು ಹೇಳುವವರೆಗೆ ಕುಳಿತುಕೊಂಡು ಕೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈ ಚಲನಚಿತ್ರದ ಪ್ರದರ್ಶನದ ಬಗ್ಗೆ ಕೆಳಮನೆಯಲ್ಲಿ ಮಾನ್ಯ ಸಭಾಧ್ಯಕ್ಷರು ಪ್ರಕಟ ಮಾಡಿದ್ದಾರೆ. ಹೋಗುವವರು ಹೋಗಿದ್ದಾರೆ, ನೋಡುವವರು ನೋಡುತ್ತಾರೆ. ಅದು ಅಲ್ಲಿಗೆ ಮುಗಿದು ಹೋಗಿದೆ. ಮೇಲ್ಮನೆಯಲ್ಲಿ ಸರ್ಕಾರದ ಪರವಾಗಿ ತಾವು ಪ್ರಕಟಣೆ ಮಾಡಿದ್ದೀರಿ. ಅವರು ಬರುವುದು ಬಿಡುವುದು ಅವರಿಗೆ ಸಂಬಂಧಪಟ್ಟ ವಿಚಾರ. ಆದರೆ ತಾವು ಪ್ರಕಟಣೆ ಮಾಡಬಾರದು ಎಂದು ಹೇಳುವಂತಹ ಹಕ್ಕು ವಿರೋಧಪಕ್ಷದವರಿಗೆ ಇಲ್ಲ.

**(ಗೊಂದಲ)**

**ಸಭಾಪತಿಯವರು:–** ಕುಳಿತುಕೊಳ್ಳಿ. ನಾನು ಹೇಳುವುದಕ್ಕೇ ನೀವು ಬಿಡುತ್ತಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರೇ, ಎನ್.ನಾಗರಾಜ್, ಮಾನ್ಯ ಸಚಿವರು ಇವರು ಸರ್ಕಾರದಿಂದ ನನಗೆ ಒಂದು ಪ್ರಕಟಣೆಯನ್ನು ಕಳುಹಿಸಿದ್ದಾರೆ. ಅದರಲ್ಲಿ ಆಸಕ್ತರು ಚಲನಚಿತ್ರವನ್ನು ಸಂಜೆ 06.45 ಗಂಟೆಗೆ ನೋಡಬಹುದು ಎಂದು ಹೇಳಿದೆ. ಕಡ್ಡಾಯ ಎಂದು ಹೇಳಿರುವುದಿಲ್ಲ. ಈ ಒಂದು ಪ್ರಕಟಣೆಯನ್ನು ನಾನು ಇಲ್ಲಿ ಪ್ರಕಟಿಸಿದ್ದೇನೆ.

**(ಈ ಹಂತದಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು ತಮ್ಮ ಸ್ಥಾನಕ್ಕೆ ತೆರಳಿದರು)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನಾವು ಯಾವ ಚಲನಚಿತ್ರವನ್ನು ನೋಡಬೇಕು ಎನ್ನುವುದನ್ನು ಈ ಸದನದಲ್ಲಿ ಹೇಳಬೇಕಾಗಿಲ್ಲ. ಈ ಸದನದಲ್ಲಿ ಕೆಲವು ನೀಲಿಚಿತ್ರಗಳನ್ನು ವೀಕ್ಷಿಸಿದ್ದಾರೆ. ಅದನ್ನೂ ನಾವು ನೋಡಬೇಕೆ? ನಮಗೆ ತಮ್ಮ ಪೀಠದಿಂದ ಹೇಳಿಸುವುದು ಬೇಕಾಗಿಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಈ ಚಲನಚಿತ್ರದ ಬಗ್ಗೆ ಏಕಿಷ್ಟು ಕೋಪ ಎಂದು ನನಗೆ ತಿಳಿಯುತ್ತಿಲ್ಲ?

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಸರ್ಕಾರ ಚಲನಚಿತ್ರವನ್ನು ತೋರಿಸಲಿಕ್ಕಾಗಿ ಇದೆಯೇ?

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರ ಪೀಠದಿಂದ ಅದನ್ನು ಏಕೆ ಹೇಳಿಸುತ್ತೀರಿ. ಮಾನ್ಯ ಸಭಾಪತಿಯವರೇ, ಇದು ನಿಷ್ಪಕ್ಷಪಾತವಾಗಿರುವ ಪೀಠ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಕೆಳಮನೆಯಲ್ಲಿ ಪೀಠದಿಂದಲೇ ಪ್ರಕಟಣೆಯನ್ನು ನೀಡಲಾಯಿತು. ಅದನ್ನು ಯಾರೂ ಆಕ್ಷೇಪ ಮಾಡಲಿಲ್ಲ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಪಾಕಿಸ್ತಾನಕ್ಕೆ ಕರೆಯದೆ ಹೋಗುವ ಜನ ಇವರು. ಪಾಕಿಸ್ತಾನಕ್ಕೆ birthday ಗೆ ಹೋಗಿ cake ತಿಂದುಕೊಂಡು ಬಂದಂತಹ ನೀತಿಗೆಟ್ಟ ಪ್ರಧಾನ ಮಂತ್ರಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ತಾವು ಪೀಠದಲ್ಲಿ ಕುಳಿತಿದ್ದೀರಿ. ಪ್ರಧಾನ ಮಂತ್ರಿಯವರ ಬಗ್ಗೆ ಅವರು ಮಾತನಾಡುತ್ತಿದ್ದರೆ ನಾವು ಸುಮ್ಮನಿರಬೇಕೆ? ಕಡತದಿಂದ ತೆಗೆದು ಹಾಕಿ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ನಾನು ಹೇಳುವವರೆಗೆ ಕೇಳಿ. ಮಾನ್ಯ ವಿರೋಧಪಕ್ಷದ ನಾಯಕರೇ, ಇದು ನಾನು ನಿಮಗಿಬ್ಬರಿಗೂ ಹೇಳುತ್ತಿದ್ದೇನೆ. ಸರ್ಕಾರ ನಮಗೆ ಕೆಲವು ಪ್ರಕಟಣೆಗಳನ್ನು ಕಳುಹಿಸುತ್ತಾರೆ. ಅದೇ ರೀತಿ ಈ ಪ್ರಕಟಣೆಯನ್ನೂ ನಾನು ಓದಿದೆ. ಅದರಲ್ಲಿ

ಆಸಕ್ತರು ಸಂಜೆ 6.30 ಗಂಟೆಯ ನಂತರ ಚಲನಚಿತ್ರ ನೋಡಬಹುದು ಎಂದು ಇದೆ. ಬೇಕಾದವರು ಹೋಗಿ ನೋಡಿ. ಬೇಡವಾದವರು ಬಿಡಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅದನ್ನು ತಾವು ಏಕೆ ಹೇಳುತ್ತೀರಿ? ಸರ್ಕಾರ ಮಾಡಲಿ. ತಾವು ನಿಷ್ಪಕ್ಷಪಾತವಾಗಿರಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಈ ಕಡೆ ನೋಡಿ. ನಿಮಗೆ ಸ್ವಲ್ಪ ತಾಳ್ಮೆ ಇರಬೇಕು.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾನಾಯಕರೇ, ನಿಮ್ಮನ್ನು ಏಕೆ ನೋಡಲಿ. ಪ್ರಕಟಣೆ ಮಾಡಿರುವವರು ಮಾನ್ಯ ಸಭಾಪತಿಯವರು. **(ಗೊಂದಲ)**

**ಸಭಾಪತಿಯವರು:-** ಸದನವನ್ನು 10 ನಿಮಿಷಗಳ ಕಾಲ ಮುಂದೂಡುತ್ತಿದ್ದೇನೆ.

**(ಸದನವು ಬೆಳಗ್ಗೆ 10 ಗಂಟೆ 50 ನಿಮಿಷಗಳಿಗೆ ಹತ್ತು ನಿಮಿಷಗಳ ಕಾಲ ಮುಂದೂಡಲ್ಪಟ್ಟಿತು)**

(329) 15.03.2022 11.10 LL-VK(RN)

**(ಬೆಳಗ್ಗೆ 10 ಗಂಟೆ 50 ನಿಮಿಷಕ್ಕೆ 10 ನಿಮಿಷಗಳ ಕಾಲ ಮುಂದೂಡಲ್ಪಟ್ಟ ಸದನವು ಪುನಃ 11 ಗಂಟೆ 11 ನಿಮಿಷಕ್ಕೆ ಪ್ರಾರಂಭಗೊಂಡಿತು)**

**ಸಭಾಪತಿಯವರು ಪೀಠದಲ್ಲಿ ಉಪಸ್ಥಿತರಿದ್ದರು.**

**ಶ್ರೀ ಬಿ.ಕೆ. ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾವು ಈ ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ಕಾರಣ ಏನೆಂದರೆ, ನನ್ನ ಹತ್ತಿರ ಒಂದು ಆರ್.ಟಿ.ಐ. ಮಾಹಿತಿ ಇರುತ್ತದೆ. ಜನರಲ್ಲಿ ತಪ್ಪು ಮಾಹಿತಿ ಬರಬಾರದೆಂದು ನಾನು ಈ ವಿಚಾರವನ್ನು ಹೇಳುವುದಕ್ಕೆ ಬಯಸುತ್ತೇನೆ. DISTRICT POLICE HEADQUARTERS SRINAGAR ಶ್ರೀ ಪಿ.ಪಿ. ಕಪೂರ್ ಎನ್ನುವವರು ಆರ್.ಟಿ.ಐ. ಅರ್ಜಿ ಹಾಕಿರುತ್ತಾರೆ. ಅದರಲ್ಲಿ ಏನು ಹೇಳುತ್ತಾರೆಂದರೆ, *'In*

*connection with the above cited subject, it is to inform that your RTI Application has been received in this office through Assistant Commissioner (Rev), Srinagar (PIO) letter No.DCS/SQ/RTI/2021/144-46, dated:17.11.2021 with request to provide following information under RTI Act-2005, details of which are as under having been sought from concerned quarters:* ***Point No.08:*** *No. of Kashmir Pandits who were killed by terrorists attack since inception of militancy 1990=**89** .* ***Point No.9:*** *No. of people of other faiths other than Kashmir Pandits who were killed by terrorists attacks = **1635.***

ಈ ವಿಚಾರವನ್ನು ತಮ್ಮ ಗಮನಕ್ಕೆ ತರವುದಕ್ಕೆ ಬಯಸುತ್ತೇನೆ. ತಾವು ಬಯಸಿದರೆ ತಮಗೂ ಸಹ ಈ ಆರ್.ಟಿ.ಐ. ಪ್ರತಿಯನ್ನು ತಮಗೆ ಕಳುಹಿಸಿಕೊಡುತ್ತೇನೆ.

**ಡಾ: ವೈ.ಎ. ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸದರಿ ಆರ್.ಟಿ.ಐ. ಪ್ರತಿಯನ್ನು ವೆರಿಫೈ ಮಾಡಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಕಾಶ್ಮೀರಿ ಫೈಲ್ಸ್ ಸಿನಿಮಾದ ಬಗ್ಗೆ ಪ್ರಕಟಣೆ ಸರ್ಕಾರದ್ದು. ಆ ಸಿನಿಮಾವನ್ನು ಯಾರಾದರೂ ನೋಡಬಹುದು ಎನ್ನುವುದು ಸರ್ಕಾರದ ಪರವಾಗಿ ನಮ್ಮ ವಿನಂತಿ ಇರುತ್ತದೆ. ಆ ಸಿನಿಮಾವನ್ನು ನೋಡುವುದಕ್ಕೆ ಆಸಕ್ತಿ ಇರುವವರು ಅದನ್ನು ನೋಡಬಹುದು, ಇಲ್ಲದೇ ಇರುವವರು ಬಿಡಬಹುದು. ಈ ಸದನದಲ್ಲಿ ಈ ರೀತಿಯ ಗೊಂದಲಗಳನ್ನು ಬಿಟ್ಟು, ಬಜೆಟ್ ಮೇಲೆ ಅಧಿವೇಶನ ಮುಂದುವರೆಸುವುದಕ್ಕೆ ಮತ್ತು ಪ್ರಶ್ನೋತ್ತರ ನಡೆಸುವುದಕ್ಕೆ ಸಹಕಾರ ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ವಿನಂತಿ ಮಾಡುತ್ತೇನೆ.

**ಡಾ: ಕೆ. ಗೋವಿಂದರಾಜು(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಸರ್ಕಾರ ಈ ಬಗ್ಗೆ ಸರ್ಕಾರಿ ಆದೇಶ ಮಾಡಿರುವುದಿಲ್ಲ.

**ಶ್ರೀ ಎನ್. ರವಿಕುಮಾರ್(ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಆದರೆ, ಈ ಪ್ರಕಟಣೆಯನ್ನು ನಾವಂತೂ ಸ್ವಾಗತಿಸುತ್ತೇವೆ.

**(ಗೊಂದಲ)**

**ಶ್ರೀ ಸಲೀಂ ಅಹಮದ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನೋಡಿ ಮತ್ತೆ ಶುರುವಾಯಿತು. ನಾವು ತಮ್ಮ ಕಛೇರಿಯಲ್ಲಿ ಮಾತನಾಡಿಕೊಂಡು ಸದನ ನಡೆಸಬೇಕೆಂದು ಬಂದರೆ, ಈ ರೀತಿ ಮಾತನಾಡಿದರೆ ಹೇಗೆ?

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ಪ್ರಕಟಣೆಯನ್ನು ಆಡಳಿತ ಪಕ್ಷದವರಾದ ನಾವೆಲ್ಲರೂ ಸಹ ಸ್ವಾಗತ ಮಾಡುತ್ತೇವೆ.

**(ಗೊಂದಲ)**

**ಸಭಾಪತಿಯವರು:–** ದಯಮಾಡಿ ಎಲ್ಲಾ ಸದಸ್ಯರು ಒಂದು ನಿಮಿಷ ಕುಳಿತುಕೊಳ್ಳಿ.

**(ಗೊಂದಲ)**

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದೊಂದು ಐತಿಹಾಸಿಕ ಚಿತ್ರ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಆ ಚಿತ್ರದಲ್ಲಿ ಬರೀ ಸುಳ್ಳು ಮಾಹಿತಿ ಇರುತ್ತದೆ. ಅದಕ್ಕಾಗಿ ನಾವು ಆ ಚಿತ್ರವನ್ನು ವಿರೋಧ ಮಾಡುತ್ತಿದ್ದೇವೆ. ಆ ಸುಳ್ಳು ಮಾಹಿತಿಯನ್ನು ತಾವು ಜನಸಾಮಾನ್ಯರಿಗೆ ತಲುಪಿಸುವುದಕ್ಕೆ ಆಗುವುದಿಲ್ಲ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಆ ಮಾಹಿತಿಯನ್ನು ನನಗೆ ಕಳುಹಿಸಿಕೊಡಿ.

**(ಗೊಂದ್)**

**ಶ್ರೀ ಪಿ.ಆರ್. ರಮೇಶ್(ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಕೇವಲ ಮನರಂಜನೆಗಾಗಿ ಇರುವಂತಹ ಸಿನಿಮಾವನ್ನು ನೋಡಬೇಕು, ನೋಡಬೇಕು ಎಂದು ಏತಕ್ಕೆ ಹೇಳುತ್ತಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ರಮೇಶ್‌ರವರೇ, ಒಂದು ನಿಮಿಷ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಅಲ್ಲಿ ಕೇವಲ ೮೯ ಜನ ಸತ್ತಿದ್ದು, ಸಾವಿರಾರು ಜನ ಸತ್ತಿದ್ದಾರೆಂದು ತಪ್ಪಾಗಿ ಆ ಚಿತ್ರದಲ್ಲಿ ತೋರಿಸಿರುತ್ತಾರೆ.

**(ಗೊಂದಲ)**

**ಶ್ರೀಮತಿ ಭಾರತಿಶೆಟ್ಟಿ(ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ... ಅದನ್ನು ಅನುಭವಿಸಿದರೆ ಗೊತ್ತಾಗುತ್ತದೆ.

**(ಗೊಂದಲ)**

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಆ ಆರ್.ಟಿ.ಐ. ಪತ್ರದ ಮೇಲೆ ಚರ್ಚೆ ಮಾಡುವುದು ಬೇಡ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ನಾರಾಯಣಸ್ವಾಮಿಯವರೇ, ಏತಕ್ಕೆ ಇಷ್ಟೊಂದು ಮಾತನಾಡುತ್ತೀರಿ. ದಯಮಾಡಿ ಕುಳಿತುಕೊಳ್ಳಿ. ಈ ವಿಚಾರದ ಬಗ್ಗೆ ಮಾನ್ಯ ಸಭಾನಾಯಕರು ತಮ್ಮ ಹೇಳಿಕೆ ನೀಡಿದ್ದಾರೆ. ಹಾಗಾಗಿ, ಈ ವಿಚಾರ ಮುಗಿದಿದೆ. ಈಗ ನಾನು ಪ್ರಶ್ನೋತ್ತರ ಅವಧಿಯನ್ನು ಪ್ರಾರಂಭ ಮಾಡಿರುತ್ತೇನೆ. ಆದುದರಿಂದ, ಸದನ ನಡೆಸುವುದಕ್ಕೆ ತಾವೆಲ್ಲರೂ ದಯಮಾಡಿ ಸಹಕಾರ ನೀಡಬೇಕೆಂದು ಕೋರುತ್ತೇನೆ.

**೦2. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು**

**ಪ್ರಶ್ನೆ ಸಂಖ್ಯೆ:1892**

**ಸಭಾಪತಿಯವರು:-** ಮಾನ್ಯ ಯು.ಬಿ. ವೆಂಕಟೇಶ್‌ರವರೇ, ತಮ್ಮ ಪ್ರಶ್ನೆಗೆ ಮಾನ್ಯ ಸಚಿವರು 15 ದಿವಸ ಕಾಲಾವಕಾಶ ಕೇಳಿರುತ್ತಾರೆ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಈ ರೀತಿ ಕಾಲಾವಕಾಶ ಕೇಳಿದರೆ ಹೇಗೆ?

**(ಗೊಂದಲ)**

**ಸಭಾಪತಿಯವರು:-** ಮುಂದಿನ ಪ್ರಶ್ನೆ ಶ್ರೀ ನಿರಾಣಿ ಹಣಮಂತ್ ರುದ್ರಪ್ಪನವರದ್ದು.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ...

**(ಗೊಂದಲ)**

**ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ, ತಾವು ದಯಮಾಡಿ ಕುಳಿತುಕೊಳ್ಳಿ.

**ಡಾ: ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಒಂದೇ ನಿಮಿಷ...

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಒಂದೇ ನಿಮಿಷ...

**(ಗೊಂದಲ)**

**ಸಭಾಪತಿಯವರು:-** ತಾವು ನನಗೆ ಸದನ ನಡೆಸಬೇಕೆಂದು ಹೇಳುತ್ತೀರೋ ಅಥವಾ ಬೇಡವೆಂದೋ ಹೇಳುತ್ತೀರೋ? ಪ್ರಶ್ನೋತ್ತರ ಅವಧಿಯಲ್ಲಿ ಏತಕ್ಕೆ ಈ ರೀತಿ ಮಧ್ಯೆ ಮಾತನಾಡುತ್ತೀರಿ?

**(ಗೊಂದಲ)**

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಒಂದೇ ನಿಮಿಷ...ಇವೊತ್ತಿನ ದಿವಸ ಮಾನ್ಯ ಉಚ್ಛ ನ್ಯಾಯಾಲಯದ ಅಂತಿಮ ತೀರ್ಪು ಬಂದಿರುತ್ತದೆ. ಸಮವಸ್ತ್ರವನ್ನು...

**(ಗೊಂದಲ)**

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ...ಹಿಜಾಬ್ ಬಗ್ಗೆ ದೊಡ್ಡದಾಗಿ ಮಾತನಾಡುತ್ತಿದ್ದರು.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಏನು ಇದು? ಮಾನ್ಯ ರವಿಕುಮಾರ್‌ರವರೇ, ತಾವು ದಯಮಾಡಿ ಕುಳಿತುಕೊಳ್ಳಿ. ತಾವು ನನ್ನನ್ನು ಸದನ ನಡೆಸಬೇಕೋ ಎಂದು ಹೇಳುತ್ತೀರೋ ಅಥವಾ ಬೇಡವೆಂದು ಹೇಳುತ್ತೀರೋ. ತಾವು ಇದೇ ರೀತಿ ಮಧ್ಯೆ ಮಾತನಾಡಿದರೆ ನಾನು ಸದನದ ಕಲಾಪವನ್ನು ಮುಂದೂಡುತ್ತೇನೆ. ದಯಮಾಡಿ, ಎಲ್ಲರೂ ಕುಳಿತುಕೊಳ್ಳಿ. ತಮಗೆ ಎಷ್ಟು ಬಾರಿ ಹೇಳಬೇಕು. ಒಂದು ಬಾರಿ ಹೇಳಿದರೆ ತಾವು ತಿಳಿದುಕೊಳ್ಳಬೇಕು. ಮಾನ್ಯ ಯು.ಬಿ. ವೆಂಕಟೇಶ್‌ರವರ ಪ್ರಶ್ನೆಗೆ ಕಾಲಾವಕಾಶ ಕೇಳಿದ್ದಾರೆ.

**ಶ್ರೀ ಯು.ಬಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಚುನಾವಣೆ ನಡೆದು ಎರಡು ವರ್ಷಗಳು ಕಳೆದಿರುತ್ತದೆ. ಇದುವರೆವಿಗೂ ಮೀಸಲಾತಿ ಕೊಡುವುದಕ್ಕೆ ಆಗುವುದಿಲ್ಲವೆಂದರೆ ಹೇಗೆ? ನಾವು 5 ರಾಜ್ಯ ಗೆದ್ದಿದ್ದೀವಿ, 20 ರಾಜ್ಯ ಗೆದ್ದಿದ್ದೀವಿ ಎಂದು ಹೇಳುತ್ತಿದ್ದಾರೆ. ಆದರೆ, ಗೆದ್ದಂತಹವರಿಗೆ ಅಧಿಕಾರ ಕೊಡುವುದಿಲ್ಲವೆಂದರೆ ಇದು ಯಾವ ಸರ್ಕಾರ? ನನ್ನ ಒಂದು ಪ್ರಶ್ನೆಗೆ ಉತ್ತರ ನೀಡಿಲ್ಲವೆಂದರೆ ಹೇಗೆ?

**ಶ್ರೀ ಎನ್. ನಾಗರಾಜು(ಎಂ.ಟಿ.ಬಿ.):–** ಮಾನ್ಯ ಸಭಾಪತಿಯವರೇ, ಮೀಸಲಾತಿ ವಿಚಾರದಲ್ಲಿ ಏನಾಗಿದೆಯೆಂದರೆ,..

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಇನ್ನು 15 ದಿವಸಗಳಲ್ಲಿ ಅಧಿವೇಶನ ಮುಕ್ತಾಯವಾಗುತ್ತದೆ. ಕಳೆದ ಬಾರಿಯ ಅಧಿವೇಶನದಲ್ಲಿ ತಕ್ಷಣ ಮಾಡುತ್ತೇವೆಂದು ಹೇಳಿದ್ದರು. ಆದರೆ, ಇದುವರೆವಿಗೂ ಮಾಡಿರುವುದಿಲ್ಲ. ಹಾಗಾಗಿ, 15 ದಿನಗಳ ಕಾಲಾವಕಾಶ ಆಗುವುದಿಲ್ಲ. ನಾನು ಧರಣಿ ಮಾಡಲು ಸದನದ ಬಾವಿಗೆ ಬರುತ್ತೇನೆ. ಚುನಾವಣೆಯಲ್ಲಿ ಗೆದ್ದಿರುವವರು ಮನೆಯಲ್ಲಿಯೇ ಸಾಯಬೇಕಾ? ಈಗಾಗಲೇ ಎರಡು ವರ್ಷಗಳು ಕಳೆದಿದೆ.

**ಶ್ರೀ ಸಲೀಂ ಅಹಮದ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಸರ್ಕಾರಕ್ಕೆ ಬದ್ಧತೆ ಇದೆಯೇ? ಇಚ್ಛಾಶಕ್ತಿ ಇದೆಯೇ? ಏತಕ್ಕೆ ಈ ರೀತಿ ಮಾಡುತ್ತಾರೆ?

**(ಗೊಂದಲ)**

**ಸಭಾಪತಿಯವರು:-** ಇಷ್ಟು ಸದಸ್ಯರು ಒಟ್ಟಿಗೆ ಎದ್ದು ನಿಂತು ಏನು ಮಾತನಾಡುತ್ತೀರಿ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇವರ ಅವಧಿಯಲ್ಲಿ ಒಂದು ವರ್ಷದ ಅವಧಿಯವರೆಗೂ ಸಹ ಮಾಡಿರುವುದಿಲ್ಲ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಭಾರತಿಶೆಟ್ಟಿಯವರೇ, ತಾವು ಏತಕ್ಕೆ ಈ ರೀತಿ ಮಾತನಾಡುತ್ತಿದ್ದೀರಿ? ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲವೇ? ದಯಮಾಡಿ, ನಾನು ಹೇಳುವುದನ್ನು ತಾವು ಕೇಳಿ. ಮಾನ್ಯ ಯು.ಬಿ. ವೆಂಕಟೇಶ್‌ರವರೇ, ನಾನು ಈ ಬಗ್ಗೆ ಮಾನ್ಯ ಸಭಾನಾಯಕರಿಗೆ ಈಗಾಗಲೇ ಪತ್ರವನ್ನು ಬರೆದಿರುತ್ತೇನೆ. ಅದರ ಪ್ರತಿಯನ್ನು ತಮಗೂ ಸಹ ನೀಡುತ್ತೇನೆ. ಇದರಲ್ಲಿ, ತಮ್ಮ ಪ್ರಶ್ನೆಗೆ ಉತ್ತರ ಬಂದಿಲ್ಲವೆಂದರೆ, ಅದನ್ನು ತಮಗೆ ಹೇಳುವುದಷ್ಟೇ ನನ್ನ ಕೆಲಸ.

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ಎರಡು ವರ್ಷಗಳು ಕಳೆದಿರುತ್ತದೆ. ನಾವು ಏನು ಮಾಡಬೇಕು?

**(ಗೊಂದಲ)**

**ಸಭಾಪತಿಯವರು:-** ಮಾನ್ಯ ವೆಂಕಟೇಶ್‌ರವರೇ, ತಾವು ದಯಮಾಡಿ ಒಂದು ನಿಮಿಷ ಕುಳಿತುಕೊಳ್ಳಿ. ತಮ್ಮ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ನೀಡುತ್ತಿದ್ದಾರೆ. ತಮಗೆ ಒಂದು ನಿಮಿಷ ತಾಳ್ಮೆ ಇರುವುದಿಲ್ಲವೇ? ಅವರು ತಮ್ಮ ಉತ್ತರ ನೀಡಲಿ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ. ರಾಥೋಡ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ಅವಧಿಯಲ್ಲಿ ನಾವು ಕೇಳದಂತಹ ಎಷ್ಟು ಪ್ರಶ್ನೆಗಳನ್ನು ತಡೆಹಿಡಿಯಲಾಗಿದೆ ಮತ್ತು ಎಷ್ಟು ಪ್ರಶ್ನೆಗಳಿಗೆ ಸರ್ಕಾರ ಉತ್ತರ ಕೊಟ್ಟಿರುವುದಿಲ್ಲ. ದಯಮಾಡಿ ಆ ಮಾಹಿತಿಯನ್ನು ಓದಿ ಹೇಳಿ. ಏಕೆಂದರೆ, ನಮ್ಮ ಬಹುಪಾಲು ಪ್ರಶ್ನೆಗಳಿಗೆ ಉತ್ತರ ಬಂದಿರುವುದಿಲ್ಲ. ಆ ಪ್ರಶ್ನೆಗಳಿಗೆ ಸದನ ಮುಗಿಯುವುದರೊಳಗೆ ಉತ್ತರ ಕೊಡುವುದಕ್ಕೆ ತಿಳಿಸಿ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರೇ, ನಾನು ಆ ಮಾಹಿತಿಯನ್ನು ತಯಾರು ಮಾಡಿದ್ದು, ಅದನ್ನು ತಮಗೆ ಕೊಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ.

**ಡಾ: ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರ ಕಾಲದಲ್ಲಿಯೂ ಸಹ ಇದೇ ರೀತಿ ಮಾಡಿರುತ್ತಾರೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಇವೊತ್ತಿನವರೆಗೆ ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗಳಿಗೆ ಸುಮಾರು 29 ಜನ ಮಂತ್ರಿಗಳು 1 ವಾರ ಅಥವಾ 2 ವಾರ ಎಂದು

ಕಾಲಾವಕಾಶ ಕೇಳಿರುತ್ತಾರೆ. ಈ ಬಗ್ಗೆ ನಾನು ತಮಗೆ ಪತ್ರ ಸಹ ಬರೆದಿರುತ್ತೇನೆ. ದಯಮಾಡಿ, ಆ ಉತ್ತರಗಳನ್ನು ಆದಷ್ಟು ಬೇಗ ತರಿಸಿಕೊಡಿ. ಏಕೆಂದರೆ, ಮಾನ್ಯ ಸದಸ್ಯರು ಸಹ ಬಹಳ ಕಷ್ಟಪಟ್ಟು ಪ್ರಶ್ನೆ ಕೇಳಿರುತ್ತಾರೆ. ಹಾಗಾಗಿ, ಅವರ ಪ್ರಶ್ನೆಗಳಿಗೆ ಆದಷ್ಟು ಬೇಗ ಉತ್ತರ ಕೊಡಿಸಿಕೊಡಿ

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಈ ಸದನ ಮುಗಿಯುವದರೊಳಗೆ ಉತ್ತರ ನೀಡಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಆಯಿತು. ಮಾನ್ಯ ವೆಂಕಟೇಶ್‌ರವರು ಕೇಳಿದಂತಹ ಪ್ರಶ್ನೆಗಳಿಗೆ ಮಾನ್ಯ ಸಚಿವರು ಈಗ ಸಾಂದರ್ಭಿಕವಾದ ಉತ್ತರ ನೀಡುತ್ತಾರೆ.

**ಶ್ರೀ ಎನ್. ನಾಗರಾಜು(ಎಂ.ಟಿ.ಬಿ.):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆ ಸರಿಯಾಗಿದೆ. ಈ ಹಿಂದೆ ಇದೇ ಪ್ರಶ್ನೆಯನ್ನು ಕೇಳಿದಾಗ, ಇಡೀ ರಾಜ್ಯದಲ್ಲಿರುವ ಎಲ್ಲಾ ನಗರಸಭೆ, ಪುರಸಭೆಗಳ ಮಾಹಿತಿ ಕೇಳಿರುತ್ತಾರೆ.

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಅವರು ಹೇಳಿದ ರೀತಿಯಲ್ಲಿ ಪ್ರಶ್ನೆ ಕೇಳುವುದಕ್ಕೆ ನಾವು ಇಲ್ಲ ಬಂದಿದ್ದೇವೆಯೇ?

**(ಗೊಂದಲ)**

**ಸಭಾಪತಿಯವರು:–** ಮಾನ್ಯ ವೆಂಕಟೇಶ್‌ರವರೇ, ಮಾನ್ಯ ಮಂತ್ರಿಗಳು ತಮ್ಮ ಪ್ರಶ್ನೆಗೆ ಉತ್ತರ ಹೇಳುವುದಕ್ಕೆ ಅವಕಾಶ ನೀಡಿ. ಅದಕ್ಕೆ ತಾವು ಏತಕ್ಕೆ ಅಡ್ಡಿಪಡಿಸುತ್ತೀರಿ?

**(ಗೊಂದಲ)**

**ಶ್ರೀ ಎನ್. ನಾಗರಾಜು(ಎಂ.ಟಿ.ಬಿ.):–** ಮಾನ್ಯ ವೆಂಕಟೇಶ್‌ರವರೇ, ತಾವು ಹಿರಿಯ ಸದಸ್ಯರಿದ್ದೀರಿ. ತಾವು ಏತಕ್ಕೆ ಇಷ್ಟೊಂದು ಆತುರಪಡುತ್ತೀರಿ ಎಂದು ನನಗೆ ಗೊತ್ತಾಗಲಿಲ್ಲ. ತಾವು ಆತುರ ಪಡಬೇಡಿ, ತಮ್ಮ ಪ್ರಶ್ನೆಗೆ ಉತ್ತರ ಸಿಗುತ್ತದೆ.

**ಶ್ರೀ ಯು.ಬಿ. ವೆಂಕಟೇಶ್:–** ಆಯಿತು, ಉತ್ತರ ಹೇಳಿ.

**ಶ್ರೀ ಎನ್. ನಾಗರಾಜು(ಎಂ.ಟಿ.ಬಿ.):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಪ್ರಶ್ನೆಗೆ 15 ದಿವಸ ಕಾಲಾವಕಾಶ ಕೇಳಿದ್ದು, 1 ವಾರದಲ್ಲಿಯೇ ಉತ್ತರ ನೀಡುತ್ತೇವೆ. ಆದರೆ, ಇದರಲ್ಲಿ ಏನಾಗಿದೆ ಎಂಬುದನ್ನು ಅವರು ತಿಳಿದುಕೊಳ್ಳಬೇಕು. ಈ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ದಾಖಲಾಗಿರುವ ಎಸ್.ಎಲ್.ಪಿ. ಸಂಖ್ಯೆ...

**ಸಭಾಪತಿಯವರು:–** ಮಾನ್ಯ ಸಚಿವರೇ, ನಾನು ಏನು ಹೇಳುತ್ತೇನೆಂದರೆ, ಮಾನ್ಯ ವೆಂಕಟೇಶ್‌ರವರ ಪ್ರಶ್ನೆಗೆ ಈಗ ಉತ್ತರ ನೀಡುತ್ತೀರೋ, ನಾಳೆ ಉತ್ತರ ನೀಡುತ್ತೀರೋ ಅಥವಾ ಯಾವಾಗ ನೀಡುತ್ತೀರಿ ಎನ್ನುವ ಬಗ್ಗೆ ಮಾತ್ರ ಉತ್ತರ ನೀಡಿ.

**ಶ್ರೀ ಎನ್. ನಾಗರಾಜು(ಎಂ.ಟಿ.ಬಿ.):–** ಮಾನ್ಯ ಸಭಾಪತಿಯವರೇ, ಸದರಿ ಪ್ರಶ್ನೆಗೆ ಸ್ವಲ್ಪ ಮಾಹಿತಿ ನೀಡುವುದಿದೆ. ಪೂರ್ಣ ಉತ್ತರವನ್ನು ನಂತರ ಕೊಡುತ್ತೇನೆ.

**ಸಭಾಪತಿಯವರು:–** ಹಾಗಾದರೆ, ಉತ್ತರ ಯಾವಾಗ ಕೊಡುತ್ತೀರಿ ಎನ್ನುವುದನ್ನು ಮಾತ್ರ ಹೇಳಿ. ಈಗ ಚರ್ಚೆ ಮಾಡುವುದು ಬೇಡ.

**ಶ್ರೀ ಎನ್. ನಾಗರಾಜು(ಎಂ.ಟಿ.ಬಿ.):–** ಮಾನ್ಯ ಸಭಾಪತಿಯವರೇ, ಈ ವಿಷಯದಲ್ಲಿ ಮೀಸಲಾತಿ ಏತಕ್ಕೆ ಆಗಿರುವುದಿಲ್ಲವೆಂದು...

**ಶ್ರೀ ಬಿ.ಎ. ಬಸವರಾಜು(ಭೈರತಿ)(ನಗರಾಭಿವೃದ್ಧಿ ಸಚಿವರು):–** ಮಾನ್ಯ ಸಭಾಪತಿಯವರೇ, ಇದರಲ್ಲಿ ಮೀಸಲಾತಿ ಏತಕ್ಕೆ ಆಗಿರುವುದಿಲ್ಲವೆಂದರೆ, ಮಾನ್ಯ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುವುದಿಲ್ಲವೆಂದು ಅದು ಆಗಿರುವುದಿಲ್ಲ.

**ಶ್ರೀ ಎನ್. ನಾಗರಾಜು(ಎಂ.ಟಿ.ಬಿ.):–** ಮಾನ್ಯ ಸಭಾಪತಿಯವರೇ, 57 ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳಿಗೆ ಈಗಾಗಲೇ ಚುನಾವಣೆ ಆಗಿರುತ್ತದೆ. ರಾಜ್ಯದಲ್ಲಿ 57 ಪಟ್ಟಣ ಪಂಚಾಯಿತಿಗಳು, ನಗರಸಭೆಗಳಿಗೆ ಚುನಾವಣೆ ಮುಗಿದಿರುತ್ತದೆ. ಇನ್ನು ಕೆಲವು 30 ತಿಂಗಳು ಅವಧಿ ಮುಗಿದಿರುವಂತಹ ಕ್ಷೇತ್ರಗಳು ಇರುತ್ತವೆ. ಎಲ್ಲಾ ಕ್ಷೇತ್ರಗಳನ್ನು ಸೇರಿಸಿ, ಮೀಸಲಾತಿ ಪ್ರಕಾರ ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನು ನೇಮಕ ಮಾಡುವುದಕ್ಕೆ ಕಡತವನ್ನು ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸಿಕೊಟ್ಟಿರುತ್ತೇವೆ. ಅಲ್ಲದೇ, ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ 2(ಎ) ಮೀಸಲಾತಿಗೆ ಸಂಬಂಧಪಟ್ಟಂತೆ, ಸಿ.ಎಲ್.ಪಿ. ಇರುತ್ತದೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಈಗಾಗಲೇ ಸಭೆ ಮಾಡಲಾಗಿರುತ್ತದೆ. ಈ ವಿಷಯದಲ್ಲಿ ಅಂತಿಮ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಅದಕ್ಕೆ ಸ್ವಲ್ಪ ಸಮಯಾವಕಾಶ ಕೇಳಿದ್ದು ಏತಕ್ಕೆಂದರೆ, ಮಾನ್ಯ ಸದಸ್ಯರ ಪ್ರಶ್ನೆಗೆ ಸರಿಯಾದ ಉತ್ತರ ನೀಡುವುದಕ್ಕೆ 15 ಕಾಲಾವಕಾಶ ಕೇಳಿದ್ದು, ಆದಷ್ಟು ಬೇಗ ಉತ್ತರ ನೀಡುತ್ತೇವೆ. ಏಕೆಂದರೆ, ಇದು ನ್ಯಾಯಾಲಯದಲ್ಲಿರುವ ವಿಚಾರವಾಗಿರುವುದರಿಂದ ಈಗ ಉತ್ತರ ನೀಡುವುದಕ್ಕೆ ಆಗುತ್ತದೆಯೇ? ಆದಾಗ್ಯೂ, ನಾವು ಈ ದಿನವೇ ಉತ್ತರ ನೀಡುತ್ತೇವೆ, ನಾಳೆ ಉತ್ತರ ನೀಡುತ್ತೇವೆಂದು ಹೇಳುವುದಕ್ಕೆ ಆಗುತ್ತದೆಯೇ?

**ಸಭಾಪತಿಯವರು:–** ಈ ವಿಷಯ ಮಾನ್ಯ ನ್ಯಾಯಾಲದಯಲ್ಲಿ ವಿಚಾರಣೆಗೆ ಬಾಕಿ ಇದೆಯೇ ಅಥವಾ ಅಂತಿಮ ತೀರ್ಪು ಬಂದಿರುತ್ತದೆಯೇ?

**ಶ್ರೀ ಎನ್. ನಾಗರಾಜು(ಎಂ.ಟಿ.ಬಿ.):–** ಮಾನ್ಯ ಸಭಾಪತಿಯವರೇ, ಸದರಿ ವಿಷಯ ಪ್ರಸ್ತುತ ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇರುತ್ತದೆ.

**ಸಭಾಪತಿಯವರು:–** ವಿಷಯ ಪ್ರಸ್ತುತ ನ್ಯಾಯಾಲಯದಲ್ಲಿರುವುದರಿಂದ, when the matter is pending before the Court, we cannot discuss here. **1 ವಾರ ಕಾಲಾವಕಾಶ ನೀಡುತ್ತೇನೆ. ನಂತರ ಉತ್ತರ ಒದಗಿಸಿ.**

“ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಪ್ರಶ್ನೆ ಸಂಖ್ಯೆ: 1878**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಸುದೀರ್ಘವಾದಂತಹ ಉತ್ತರವನ್ನು ಒದಗಿಸಲಾಗಿರುತ್ತದೆ. ನಾನು, "ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳನ್ನು ಸ್ಥಾಪಿಸಲು ಇರುವ ಮಾನದಂಡಗಳೇನು" ಎಂದು ಪ್ರಶ್ನೆ ಕೇಳಿದ್ದು, ನನ್ನ ಪ್ರಶ್ನೆಗೆ ಸುದೀರ್ಘವಾದಂತಹ ಉತ್ತರವನ್ನು ಒದಗಿಸಿದ್ದಾರೆ. ಇದರಲ್ಲಿ ನನ್ನ ಆತಂಕ ಏನೆಂದರೆ, ಪ್ರತಿ ಗ್ರಾಮ ಪಂಚಾಯಿತಿಗೆ ಒಂದು ಕೃಷಿ ಪತ್ತಿನ ಸಹಕಾರ ಸಂಘ(ಪಿ.ಕೆ.ಪಿ.ಎಸ್.) ಆಗಬೇಕೆಂದು ದಿನಾಂಕ:24.06.2020ರಂದು ಸುತ್ತೋಲೆ ಹೊರಡಿಸಿರುತ್ತಾರೆ. ಪ್ರತಿ ಗ್ರಾಮ ಪಂಚಾಯಿತಿಗೆ ಒಂದು ಪಿ.ಕೆ.ಪಿ.ಎಸ್. ಅನ್ನು ಮಾಡುವುದರ ಜೊತೆಗೆ, ಎಲ್ಲಿ ಅವಶ್ಯಕತೆ ಇದೆ ಅಲ್ಲಿಯೂ ಕೂಡ ಹೆಚ್ಚಿನ ಪಿ.ಕೆ.ಪಿ.ಎಸ್.ಗಳನ್ನು ಕೊಡಬೇಕೆಂಬ ಮನವಿಯನ್ನು ಮಾನ್ಯ ಸಚಿವರಲ್ಲಿ ಮಾಡುತ್ತಿದ್ದೇನೆ. ಅದರ ಜೊತೆಗೆ, ಪ್ರತಿ ಸಂಘವು ಕನಿಷ್ಠ 4000 ಎಕರೆ ಸಾಗುವಳಿ ಭೂಮಿಯನ್ನು ಹೊಂದಿರಬೇಕು, ಕನಿಷ್ಠ 05 ಕಿಲೋಮೀಟರ್ ಅಂತರ ಇರಬೇಕು, ಪ್ರತಿ ಪಿ.ಕೆ.ಪಿ.ಎಸ್. 600 ರೈತ ಕುಟುಂಬಗಳು ಇರಬೇಕೆಂಬ ನಿಯಮಗಳನ್ನು ಹಾಕಿದ್ದಾರೆ. ಇದರಲ್ಲಿ ಸ್ವಲ್ಪ ಸಡಿಲಿಕೆಯನ್ನು ಮಾಡಿ, ಅವಶ್ಯಕತೆಗೆ ಅನುಗುಣವಾಗಿ ಗ್ರಾಮ ಪಂಚಾಯಿತಿಯಲ್ಲಿ ಮತ್ತೊಂದು ಪಿ.ಕೆ.ಪಿ.ಎಸ್. ಬೇಕಾದಂತಹ ಸಂದರ್ಭದಲ್ಲಿ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ನಾನು ಮನವಿಯನ್ನು ಮಾಡುತ್ತಿದ್ದೇನೆ.

(ಮುಂದು)

(330) 15.03.2022 11.20 ವೈಎಲ್-ವಿಕೆ(ಆರ್.ಎನ್) (ಸಭಾಪತಿಯವರ ಉಪಸ್ಥಿತಿ)

**ಶ್ರೀ ನಿರಾಣಿ ಹಣಮಂತ ರುದ್ರಪ್ಪ (ಮುಂದು):-**

ಅದರ ಜೊತೆಗೆ ಕೆಲವು ಮುಳುಗಡೆ ಪ್ರದೇಶದ ಪುನರ್ ವಸತಿ ಕೇಂದ್ರಗಳಲ್ಲಿ ಕೆಲವು ಮಂದಿ ವಾಸಿಸುತ್ತಿದ್ದಾರೆ ಹಾಗೂ ಹಳೆ ಗ್ರಾಮದಲ್ಲಿ ಸಹ ಕೆಲವು ಮಂದಿ ವಾಸಿಸುತ್ತಿದ್ದಾರೆ. ಆ ಪುನರ್ ವಸತಿ

ಕೇಂದ್ರದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳನ್ನು ಮಾಡಬೇಕೆಂಬುದು ಆ ಭಾಗದ ರೈತರ ಬೇಡಿಕೆಯಾಗಿದೆ.

**ಸಭಾಪತಿಯವರು:-** ಮಾನ್ಯ ಸದಸ್ಯರೆ, ಪ್ರಶ್ನೆ ಏನು ಇದೆ ಅದರ ಬಗ್ಗೆ ಪ್ರಸ್ತಾಪಿಸಿ, ಭಾಷಣ ಮಾಡುವುದಕ್ಕೆ ಹೋಗಬೇಡಿ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೇ, ಇದೊಂದು ವಿಶೇಷ ಪ್ರಕರಣವೆಂದು ಭಾವಿಸಿ, ಆ ಭಾಗಗಳಗೂ ಸಹ ಹೆಚ್ಚಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳನ್ನು ತೆರೆಯಲು ಮಾನ್ಯ ಸಚಿವರು ಅವಕಾಶ ಕಲ್ಪಿಸುತ್ತಾರೆಯೇ ಎಂಬುದನ್ನು ತಮ್ಮ ಮೂಲಕ ಕೇಳಬಯಸುತ್ತೇನೆ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಈ ಮೊದಲು ಒಂದು ಸಂಘವನ್ನು ತೆರೆಯಬೇಕೆಂದರೆ 5 ಸಾವಿರ ಎಕರೆ ಸಾಗುವಳಿ ಭೂಮಿಯನ್ನು ಹೊಂದಿರಬೇಕು ಹಾಗೂ ಕನಿಷ್ಟ 08 ಕಿ.ಮೀ. ಅಂತರ ಇರಬೇಕೆಂದು ಮಾಡಲಾಗಿತ್ತು. ಆದರೆ, ಈಗ ಅದನ್ನು ಬದಲಾವಣೆ ಮಾಡಿ 4 ಸಾವಿರ ಎಕರೆ ಸಾಗುವಳಿ ಭೂಮಿಯನ್ನು ಹೊಂದಿರಬೇಕು ಹಾಗೂ ಕನಿಷ್ಟ 05 ಕಿ.ಮೀ. ಅಂತರ ಇರಬೇಕೆಂದು ಮಾಡಲಾಗಿದೆ. ರಾಜ್ಯದಲ್ಲಿ 5783 ಕೃಷಿ ಪತ್ತಿನ ಸಹಕಾರ ಸಂಘಗಳು ಜಾರಿಯಲ್ಲಿವೆ. ಅದರಲ್ಲಿ 4783 ಕೃಷಿ ಪತ್ತಿನ ಸಹಕಾರ ಸಂಘಗಳು ಲಾಭದಲ್ಲಿದ್ದು, 1003 ಕೃಷಿ ಪತ್ತಿನ ಸಹಕಾರ ಸಂಘಗಳು ನಷ್ಟದಲ್ಲಿವೆ. ಪ್ರತಿ ಪಂಚಾಯಿತಿಗೆ ಒಂದು ಕೃಷಿ ಪತ್ತಿನ ಸಹಕಾರ ಸಂಘ ತೆರೆಯಬೇಕೆಂದು ಸರ್ಕಾರದಿಂದ ನಿರ್ದೇಶನ ನೀಡಲಾಗಿದೆ. ಎಲ್ಲಿ feasibility ಇದೆ, ಅಲ್ಲೆಲ್ಲಾ ಸಹ ಕೃಷಿ ಪತ್ತಿನ ಸಹಕಾರ ಸಂಘ ತೆರೆಯಲು ಅವಕಾಶ ನೀಡಲಾಗುತ್ತಿದೆ. ಕೆಲವು ಪಂಚಾಯಿತಿಗಳಲ್ಲಿ ಸುಮಾರು 10 ಸಾವಿರ, 15 ಸಾವಿರ ಜನಸಂಖ್ಯೆಯಿಂದ ಕೂಡಿದ್ದರೆ ಅಂತಹ ಕಡೆಗಳಲ್ಲಿ ಒಂದರ ಜೊತೆಗೆ ಮತ್ತೊಂದು ಕೃಷಿ ಪತ್ತಿನ ಸಹಕಾರ ಸಂಘ ತೆರೆಯಲು ನಿಬಂಧಕರಿಗೆ ಅಧಿಕಾರ ನೀಡಲಾಗಿದೆ. ಒಂದು ವೇಳೆ ಒಂದಕ್ಕಿಂತ ಹೆಚ್ಚು ಕೃಷಿ ಪತ್ತಿನ ಸಹಕಾರ ಸಂಘವನ್ನು ತೆರೆದರೆ, ಎರಡೂ ಸಂಘವನ್ನು ಅಭಿವೃದ್ಧಿ ಮಾಡಲು ಸಾಧ್ಯವಾಗುವುದಿಲ್ಲ. ಆ ಸಹಕಾರ ಸಂಘದಿಂದ ಸಾಲ ನೀಡುವುದಾಗಿರಬಹುದು,

ಸಾಲವನ್ನು ನಿರ್ವಹಣೆ ಮಾಡುವುದಾಗಿರಬಹುದು, ನೌಕರರ ಸಂಬಳ ನೀಡುವುದಾಗಿರಬಹುದು. ಎಲ್ಲೆಲ್ಲಿ feasibility ಇರುತ್ತದೆ ಅದನ್ನು ನೋಡಿಕೊಂಡು ಒಂದರ ಜೊತೆಗೆ ಮತ್ತೊಂದು ಕೃಷಿ ಪತ್ತಿನ ಸಹಕಾರ ಸಂಘ ತೆರೆಯಲು ಪಂಚಾಯಿತಿಗಳಲ್ಲಿ ನಿಬಂಧಕರಿಗೆ ಅಧಿಕಾರ ನೀಡಲಾಗಿದೆ. ಆದರೆ, ಮಾನ್ಯ ಸದಸ್ಯರು ಕೇಳುತ್ತಿರುವುದೇನೆಂದರೆ, ಪಂಚಾಯಿತಿಗೆ ಒಂದು ಕೃಷಿ ಪತ್ತಿನ ಸಹಕಾರ ಸಂಘ ತೆರೆಯಲು ಅವಕಾಶ ನೀಡಿ ಎಂಬುದಾಗಿದೆ. ಈಗಾಗಲೇ ಅವಕಾಶ ನೀಡಿದ್ದು, ಯಾವುದೇ ಪಂಚಾಯಿತಿಯನ್ನು ಅಲ್ಲಗಳೆದಿರುವುದಿಲ್ಲ. ಜೊತೆಗೆ ಕೃಷಿ ಪತ್ತಿನ ಸಹಕಾರ ಸಂಘ ತೆರೆಯಲು ಆ ಪಂಚಾಯಿತಿಯಲ್ಲಿ ಎಲ್ಲಾ feasibility ಇದೆಯೇ ಹಾಗೂ ಸಾಲಸೌಲಭ್ಯ ಒದಗಿಸಲು ಅವಕಾಶ ಇದೆಯೇ ಎಂಬುದನ್ನೆಲ್ಲಾ ಕೂಲಂಕಷವಾಗಿ ನೋಡಿ, ಮತ್ತೊಂದು ಕೃಷಿ ಪತ್ತಿನ ಸಹಕಾರ ಸಂಘ ತೆರೆಯಲು ಸರ್ಕಾರ ತೀರ್ಮಾನ ಮಾಡುತ್ತಿದೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೇ, ಕೆಲವೊಂದು ವಿಶೇಷ ಪ್ರಕರಣಗಳು ಇರುವ ಕಡೆ, ಅದರಲ್ಲಿಯು ಸಂತ್ರಸ್ತರ ಮುಳುಗಡೆ ಪ್ರದೇಶದಲ್ಲಿ ಕೃಷಿ ಪತ್ತಿನ ಸಹಕಾರ ಸಂಘವು ಬಹಳ ಅನಿವಾರ್ಯವಾಗಿದೆ. ದಯವಿಟ್ಟು ಅಂತಹ ಪ್ರಕರಣಗಳಿಗೆ ಅವಕಾಶ ಕಲ್ಪಿಸಬೇಕೆಂದು ಸರ್ಕಾರಕ್ಕೆ ವಿನಂತಿಸುತ್ತೇನೆ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಅಂತಹ ಪ್ರಕರಣಗಳು ಕಂಡು ಬಂದರೆ, ಅದರ ಕಡೆ ಸಹ ಗಮನಹರಿಸಲಾಗುವುದು.

## ಪ್ರಶ್ನೆ ಸಂಖ್ಯೆ 1800

## (ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಂದ ಉತ್ತರ ಬಂದಿದ್ದು, ರಾಜ್ಯದಲ್ಲಿ ನಗರ/ಪಟ್ಟಣ ಪಂಚಾಯಿತಿಗಳಲ್ಲಿ ಒಳಚರಂಡಿ ನಿರ್ವಹಣೆ ಮತ್ತು ಮಾಲಿನ್ಯ ನೀರನ್ನು ಶುದ್ಧೀಕರಣ ಮಾಡುವುದು ದೊಡ್ಡ ಸಮಸ್ಯೆಯಾಗಿದೆ. ಅದರಲ್ಲಿ ಸಹ ತ್ಯಾಜ್ಯ ವಸ್ತುವನ್ನು ನಿರ್ವಹಣೆ ಮಾಡಲಾಗುತ್ತಿದ್ದು, ಕುಡಿಯುವ ನೀರಿಗೆ ಯಾವ ರೀತಿ ಆದ್ಯತೆ ನೀಡಲಾಗುತ್ತದೆಯೋ, ಅದೇ ರೀತಿ ಮಾಲಿನ್ಯ ನೀರಿನ ಶುದ್ಧೀಕರಣಕ್ಕೂ ಆದ್ಯತೆ ನೀಡಬೇಕಾಗುತ್ತದೆ. ಮಾನ್ಯ ಸಚಿವರು "ರಾಜ್ಯದಲ್ಲಿ ಪ್ರಸ್ತುತ 314 ನಗರ ಸ್ಥಳೀಯ ಸಂಸ್ಥೆಗಳಿರುತ್ತವೆ. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಪ್ರಸ್ತುತ ಈ 314 ಸ್ಥಳೀಯ ಸಂಸ್ಥೆಗಳ ಪೈಕಿ ಇದುವರೆವಿಗೂ 78 ಸ್ಥಳೀಯ ಸಂಸ್ಥೆಗಳಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ" ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಇವತ್ತಿನವರೆಗೂ 236 ಸ್ಥಳೀಯ ಸಂಸ್ಥೆಗಳಲ್ಲಿ ಒಳಚರಂಡಿ ವ್ಯವಸ್ಥೆ ಮಾಡಿಲ್ಲ. ಹಾಗಾದರೆ, ಕಳೆದ 30, 40 ವರ್ಷಗಳಿಂದ IDSMT (Integrated Development of Small & Medium Towns), JNNURM (Jawaharalal Nehru National Urban Renewal Mission), *AMRUT (Atal Mission for Rejuvenation and Urban Transformation)* ಗಳೆಲ್ಲವೂ ಅಸ್ತಿತ್ವದಲ್ಲಿದ್ದು, ಅದರ ಬಗ್ಗೆ ಯಾವ ರೀತಿ ಕ್ರಮ ಕೈಗೊಳ್ಳಲಾಗಿದೆ. ಏತಕ್ಕಾಗಿ ಇನ್ನೂ ಆ ಕೆಲಸವಾಗಿಲ್ಲವೆಂದು ಸಹ ಮಾನ್ಯ ಸಚಿವರು ತಿಳಿಸಬೇಕು ಹಾಗೂ ನಗರ ಸ್ಥಳೀಯ ಸಂಸ್ಥೆಗಳು ಆರ್ಥಿಕವಾಗಿ ಬಲವಾಗಿಲ್ಲ. 15ನೇ ಹಣಕಾಸು ಆಯೋಗ, ULBs ನಿಂದ ಅಥವಾ ರಾಜ್ಯದ 5 ಅಥವಾ 6ನೇ ಹಣಕಾಸು ಆಯೋಗದಿಂದ ಆರ್ಥಿಕ ನೆರವು ಬರುತ್ತಿದ್ದು, ಅದರಿಂದ ಸ್ಥಳೀಯ ಸಂಸ್ಥೆಗಳನ್ನು ನಿರ್ವಹಣೆ ಮಾಡಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಏನಾದರೂ ಒಂದು ವಿಶೇಷ ಯೋಜನೆಯನ್ನು ಮಾಡಿ, ಮಾಲಿನ್ಯ ನೀರನ್ನು ಶುದ್ಧೀಕರಿಸಲು ಬೇರೆ ಏನಾದರೂ ವಿಶೇಷ ಯೋಜನೆಯನ್ನು ಮಾಡಬೇಕು. ಅದು ಆಗಲಿಲ್ಲವೆಂದರೆ, ಸರ್ಕಾರವು ಏನಾದರೂ ಅನುದಾನ ಅಥವಾ ಗ್ರ್ಯಾಂಟ್ ನೀಡಲು ವ್ಯವಸ್ಥೆ ಮಾಡುತ್ತಿದೆಯೇ ಎಂಬುದನ್ನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

**ಶ್ರೀ ಬಿ.ಎ.ಬಸವರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸ್ಥಳೀಯ ಸಂಸ್ಥೆಗಳಲ್ಲಿರುವ ಒಳಚರಂಡಿ ವ್ಯವಸ್ಥೆ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. ರಾಜ್ಯದಲ್ಲಿ ಪ್ರಸ್ತುತ 314 ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಣೆ ಮಾಡಲಾಗುತ್ತಿದೆ. ಅದರಲ್ಲಿ 78 ಸ್ಥಳೀಯ ಸಂಸ್ಥೆಗಳಿಗೆ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲಾಗಿದ್ದು, ಗುಲ್ಬರ್ಗಾ ಸ್ಥಳೀಯ ಸಂಸ್ಥೆಯನ್ನು ಮಾತ್ರ ಮಂಡಳಿ ಮೂಲಕ ನಿರ್ವಹಣೆ ಮಾಡಲಾಗುತ್ತಿದೆ. ಉಳಿಕೆ ಸ್ಥಳೀಯ ಸಂಸ್ಥೆಗಳಲ್ಲಿ ಅಲ್ಲಿಯ ಪುರಸಭೆ ತೆರಿಗೆ ಸಂಗ್ರಹಣೆ ಏನಿದೆ, ಅದರ ಆಧಾರದ ಮೇಲೆ ಆ ಸ್ಥಳೀಯ ಸಂಸ್ಥೆಗಳೇ ನಿರ್ವಹಣೆ ಮಾಡುವಂಥ ಕೆಲಸ ಮಾಡುತ್ತಿದೆ. ಹಾಗಾಗಿ ಎಲ್ಲಿಯೂ ಸಹ ಅಂತಹ ಸಮಸ್ಯೆ ಕಂಡುಬಂದಿಲ್ಲ. ನಾನು ಸಹ ಹಲವಾರು ಜಿಲ್ಲೆಗಳಿಗೆ/ತಾಲ್ಲೂಕುಗಳಿಗೆ ಭೇಟಿ ನೀಡಿದ್ದು, ಬೇಕಾದಷ್ಟು ಕಡೆ ಪರಿಶೀಲನೆಯನ್ನು ಸಹ ಮಾಡಿದ್ದೇನೆ. ಒಳಚರಂಡಿ ವ್ಯವಸ್ಥೆ ಎಲ್ಲೆಲ್ಲಿ ಅಸಂಘಟಿತವಾಗಿದೆ, ಅಲ್ಲಿ ಸರಿಪಡಿಸುವಂಥ ಕೆಲಸವನ್ನು ಅಲ್ಲಿಯ ಸ್ಥಳೀಯ ಸಂಸ್ಥೆಗಳು ಮಾಡುತ್ತವೆ. ಹೆಚ್ಚುವರಿಯಾಗಿ ನಮ್ಮ ಗಮನಕ್ಕೆ ಬಂದರೆ, ಅಧಿಕಾರಿಗಳಿಗೆ ಸೂಚನೆ ನೀಡಿ ಅದನ್ನು ಸರಿಪಡಿಸುವಂಥ ಕೆಲಸ ಮಾಡಿಸುತ್ತೇನೆ. ಹಾಗೆಯೇ ಮಾನ್ಯ ಸದಸ್ಯರು ಉಳಿಕೆ ಸ್ಥಳೀಯ ಸಂಸ್ಥೆಗಳ ಒಳಚರಂಡಿ ವ್ಯವಸ್ಥೆಯನ್ನು ಯಾವ ರೀತಿ ಮಾಡುತ್ತೀರಿ ಎಂಬುದನ್ನು ಸಹ ಕೇಳಿದ್ದಾರೆ. ಆರ್ಥಿಕ ಇಲಾಖೆಯವರ ಅನುಮತಿ ಆಧಾರದ ಮೇಲೆ ಉಳಿದ ಒಳಚರಂಡಿಯ ಸ್ಥಿತಿಗತಿಯನ್ನು ನೋಡಿ ಕೈಗೆತ್ತಿಕೊಳ್ಳಲಾಗುವುದು. ಈ ವರ್ಷದಿಂದ ಕೇಂದ್ರ ಸರ್ಕಾರವು ಸಹ "ಅಮೃತ್ ಯೋಜನೆ" ಅಡಿ ಅನುದಾನವನ್ನು ನೀಡುತ್ತಿದ್ದು, ಇದನ್ನು ಇನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಬೇಕೆಂಬ ದೃಷ್ಟಿಯಿಂದ ಹಂತ-ಹಂತವಾಗಿ ಎಲ್ಲೆಲ್ಲಿ ಪಟ್ಟಣಗಳು ಹೆಚ್ಚು ಬೆಳೆಯುತ್ತಿವೆ, ಅಂತಹ ಕಡೆಗಳಲ್ಲಿ ಸುಮಾರು 25-30 ವರ್ಷವರೆಗೆ ಮಿತಿಯಲ್ಲಿಟ್ಟುಕೊಂಡು ಅಲ್ಲಿನ ಜನಸಂಖ್ಯೆಗೆ ಅನುಗುಣವಾಗಿ ಕೈಗೆತ್ತಿಕೊಳ್ಳಲು ಸರ್ಕಾರ ಕ್ರಮವಹಿಸುತ್ತದೆ. ಜೊತೆಗೆ ಅನುಬಂಧ-2 ರಲ್ಲಿ ಮಾನ್ಯ ಸದಸ್ಯರಿಗೆ ವಿವರವಾಗಿ ಉತ್ತರವನ್ನು ಸಹ ಒದಗಿಸಲಾಗಿದೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, 78 ಸ್ಥಳೀಯ ಸಂಸ್ಥೆಗಳಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಿದ್ದಾರೆ, ಅದರಲ್ಲಿ ಸಹ ಸಾಕಷ್ಟು ರೀತಿ ಕಾರ್ಯನಿರ್ವಹಣೆ ಆಗುತ್ತಿಲ್ಲ. Wet well , ಸಂಪು, ಪಂಪ್‌ಗಳು ಸರಿಯಾಗಿ ಕಾರ್ಯನಿರ್ವಹಣೆ ಆಗದೇ ಆ ನೀರು ತುಂಬಿ ರಸ್ತೆಯ

ಮೇಲೆ ಹರಿಯುತ್ತಿದ್ದು, ಕೆಳ ಮಟ್ಟದ ಪ್ರದೇಶಗಳಲ್ಲಿ ರೋಗರುಜಿನಗಳು ಸಂಭವಿಸಿವೆ. ಶುದ್ಧೀಕರಣ ಯೋಜನೆ ಅಥವಾ ಘನ ತ್ಯಾಜ್ಯ ಯೋಜನೆಗಾಗಿ ಏನಾದರೂ ಒಂದು ವಿಶೇಷ ಯೋಜನೆ ನೀಡಬೇಕೆಂದು ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ಕೆಲವು ಭಾಗಗಳಲ್ಲಿ ಈಗಾಗಲೇ ಒಳಚರಂಡಿ ವ್ಯವಸ್ಥೆಯನ್ನು ಮಾಡಲಾಗಿದೆ. ಆ ಯೋಜನೆಯನ್ನು ಸಹ ಸುಮಾರು 25-30 ವರ್ಷಗಳವರೆಗೂ ಆಧಾರವಾಗಿಟ್ಟುಕೊಂಡು ಮಾಡಿದ್ದೇವೆ. ಅದಕ್ಕೆ ಸಂಬಂಧಿಸಿದಂತೆ ಸಾಕಷ್ಟು ಉದಾಹರಣೆಗಳನ್ನು ಮಾನ್ಯ ಸದಸ್ಯರಿಗೆ ಉತ್ತರದಲ್ಲಿ ಒದಗಿಸಿದ್ದೇನೆ. ಉದಾಹರಣೆಗೆ ಹೇಳುವುದಾದರೆ, ರಾಮನಗರ ಮತ್ತು ಚಿತ್ರದುರ್ಗ ಜಿಲ್ಲೆಗೆ ಸಂಬಂಧಿಸಿದಂತೆ ಉತ್ತರವನ್ನು ನೀಡಲಾಗಿದೆ. ರಾಮನಗರ ಜಿಲ್ಲೆಯಲ್ಲಿ 7.57 ಎಂ.ಎಲ್.ಡಿ ಮಾಡಲಾಗಿದ್ದು, ಇನ್ನು ಎರಡು ವರ್ಷಗಳವರೆಗೂ ಕೈಗೆತ್ತಿಕೊಳ್ಳುವ ಅವಶ್ಯಕತೆ ಬರುವುದಿಲ್ಲ. ಆ ರೀತಿಯಾಗಿ ಎಲ್ಲೆಲ್ಲಿ ಸಾಧ್ಯವಾಗುತ್ತದೆ, ಅಲ್ಲೆಲ್ಲಾ ಹೆಚ್ಚುವರಿಯಾಗಿಯೇ ಮಾಡಲಾಗಿದೆ. ಒಂದು ವೇಳೆ ಸಮಸ್ಯೆ ಕಂಡುಬಂದರೆ, ಸ್ಥಳೀಯ ಸಂಸ್ಥೆಯವರಿಗೆ ಸೂಚಿಸಿ, ನಿರ್ವಹಣೆ ಮಾಡುವಂಥ ಕೆಲಸ ಮಾಡುತ್ತೇವೆ. ಹಾಗೆಯೇ ಉಳಿಕೆ ಇರುವ ಒಳಚರಂಡಿ ವ್ಯವಸ್ಥೆ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪಿಸಿದ್ದು, ಅದನ್ನು ಕೈಗೆತ್ತಿಕೊಳ್ಳಲು ಸುಮಾರು 18.00 ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಅದಕ್ಕೆ ಸಂಬಂಧಿಸಿದಂತೆ ವಿವರವಾಗಿ ವರದಿಯನ್ನು ಸಹ ತಯಾರಿಸಲಾಗುತ್ತಿದ್ದು, ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಬಸವರಾಜ ಬೊಮ್ಮಾಯಿಯವರ ಗಮನಕ್ಕೂ ಸಹ ತರಲಾಗಿದೆ. ನಾನು ಸಹ ಕೇಂದ್ರ ಸರ್ಕಾರವು ಹೆಚ್ಚು ಅನುದಾನ ಒದಗಿಸಬೇಕೆಂದು ಪ್ರಸ್ತಾವನೆ ಸಲ್ಲಿಸಿ, ಈಗಾಗಲೇ ಕೇಂದ್ರ ಸಚಿವರಲ್ಲಿ ಮನವಿ ಸಹ ಮಾಡಿದ್ದೇನೆ. ಮುಂದಿನ ದಿನಗಳಲ್ಲಿ ಲಭ್ಯತೆಗನುಗುಣವಾಗಿ ಪರಿಗಣಿಸಲಾಗುವುದು.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಏನಾದರೂ ಒಂದು ವಿಶೇಷ ಯೋಜನೆಯನ್ನು ಸರ್ಕಾರ ಮಾಡಬೇಕು. ಸುಮಾರು 18.00 ಸಾವಿರ ಕೋಟಿ ರೂಪಾಯಿಗಳಾಗುತ್ತದೆ ಎಂದು ಸುಮಾರು 10 ವರ್ಷ, 20 ವರ್ಷಗಳವರೆಗೂ ಕಾಯುವುದಕ್ಕೆ ಆಗುವುದಿಲ್ಲ. ಪಟ್ಟಣಗಳು/ನಗರ ಪ್ರದೇಶಗಳು ಬೆಳೆಯುತ್ತಿವೆ. 10 ವರ್ಷಗಳಲ್ಲಿ ಶೇಕಡ 30 ರಷ್ಟು

ಜನಸಂಖ್ಯೆ ಬೆಳೆಯುತ್ತಿವೆ.  ಅದಕ್ಕಾಗಿ ಏನಾದರೂ ಒಂದು ವಿಶೇಷ ಯೋಜನೆಯನ್ನು ಮಾಡಬೇಕು. ಎಲ್.ಐ.ಸಿ. ಲೋನ್ ತೆಗೆದುಕೊಳ್ಳುವುದು, ಕೆ.ಡಬ್ಲ್ಯೂ.ಎಸ್.ಎಸ್.ಬಿ. ಅಥವಾ ಅಮೃತ್ ಯೋಜನೆ ಮೂಲಕ ಹಣವನ್ನು ತೆಗೆದುಕೊಂಡು, ಯೋಜನೆಯನ್ನು ಹಂತ–ಹಂತವಾಗಿ ಕೈಗೆತ್ತಿಕೊಳ್ಳಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ತುಂಬಾ ಕಷ್ಟವಾಗುತ್ತದೆ.

**ಶ್ರೀ ಬಿ.ಎ.ಬಸವರಾಜ:–** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಂಖ್ಯೆ 1802**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಸಲ್ಲಿಸಿದ್ದಾರೆ. ಆದರೆ, ಪ್ರಯೋಗಿಕವಾಗಿ ಉತ್ತರವನ್ನು ನೀಡಿಲ್ಲವೆಂದು ನನಗೆ ಅನಿಸುತ್ತಿದೆ. ಬೀದರ್ ನಗರದಲ್ಲಿರುವ ಒಟ್ಟು ಜನಸಂಖ್ಯೆ ಸುಮಾರು 2,16,020 ಇದ್ದು, ಪ್ರತಿ ನಗರಕ್ಕೆ standard ಆಗಿ ಕುಡಿಯುವ ನೀರನ್ನು ಒದಗಿಸಬೇಕೆಂದರೆ, ಪ್ರತಿ ನಗರಕ್ಕೆ 132 ರಿಂದ 135 ಎಂ.ಎಲ್.ಡಿ. ನೀರು ಬೇಕಾಗುತ್ತದೆ. ಈಗ 90 ಎಂ.ಎಲ್.ಡಿ. ನೀರನ್ನು ಹಿಡಿದಿಟ್ಟುಕೊಳ್ಳಲಾಗುತ್ತಿದೆ. ಬೀದರ್ ಹಳೆ ನಗರದ ಭಾಗಕ್ಕೆ ಹಳೆಯ ವಿದ್ಯುತ್ ವ್ಯವಸ್ಥೆಯನ್ನು ರದ್ದು ಮಾಡಿ, ಹೊಸದಾಗಿ ಕಾರಾಂಜ ಜಲಾಶಯದಿಂದ ನೀರು ಹರಿದು ಬರುವಂತೆ ಮಾಡಲಾಗಿದೆ. ಆದರೆ, ಆ ಕಾರಾಂಜ ಜಲಾಶಯದಿಂದ 28 ಎಂಎಲ್‌ಡಿ ನೀರು ಬರಬೇಕಾಗಿದ್ದು, ಸದ್ಯಕ್ಕೆ 22 ಎಂಎಲ್‌ಡಿ ನೀರು ಮಾತ್ರ ಬರುತ್ತಿದೆ. 19 ಎಂ.ಎಲ್.ಡಿ. ನೀರಿನ ಸಾಮರ್ಥ್ಯವನ್ನು ನಮ್ಮ ನಗರ ಹೊಂದಿದ್ದು, ಇದರಿಂದ ಸರಿಯಾಗಿ ಜನರಿಗೆ ನೀರು ಸಿಗುತ್ತಿಲ್ಲ.

(ಮುಂದು)

(331) 15.03.2022/11.30/ಎಸ್‌ಕೆ-ಬಿಎನ್‌ಎಸ್

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಅರವಿಂದ ಕುಮಾರ್ ಅರಳಿ (ಮುಂದು):-**

ಹಳೇ ನಗರದಲ್ಲಿರುವ ಜನರಿಗೆ ಬಹಳ ತೊಂದರೆಯಾಗುತ್ತಿದೆ. ಹಳೇ ಸಿಸ್ಟಂ ಬಂದ್ ಮಾಡಿದ್ದರಿಂದ ಕುಡಿಯುವ ನೀರು ಸಿಗುತ್ತಿಲ್ಲ. ಅದನ್ನು ಕೂಡ ಸರಿ ಮಾಡುವ ವ್ಯವಸ್ಥೆಯನ್ನು ಮಾಡಬೇಕೆಂಬ ಪ್ರಶ್ನೆಯನ್ನು ಕೇಳಿದ್ದೆ. ಹೊಸ ಕಾಮಗಾರಿ ಮಾಡಿದ್ದರಿಂದ, ಅದನ್ನು ಬಂದ್ ಮಾಡಿದ್ದೇವೆಂದು ಮಾನ್ಯ ಸಚಿವರು ಉತ್ತರದಲ್ಲಿ ಹೇಳಿದ್ದಾರೆ. ಅದನ್ನು ವಾಪಸ್ಸು ಮಾಡಿದರೆ ಮಾತ್ರ ಬೀದರ್ ಜಿಲ್ಲೆಯ ಜನರಿಗೆ ನೀರು ಸಿಗುವಂತಾಗುತ್ತದೆ. ಅದು 90 lpcd ನೀರನ್ನು ಎರಡು ದಿನಗಳಿಗೊಮ್ಮೆ ಬಿಡುತ್ತಾರೆ, ದಿನ ನೀರು ಬಿಡುವಂತಹ ವ್ಯವಸ್ಥೆ ಮಾಡಬೇಕು.

**ಶ್ರೀ ಬಿ.ಎ. ಬಸವರಾಜ:–** ಮಾನ್ಯ ಸಭಾಪತಿಯವರೇ, ಬೀದರ್ ನಗರಕ್ಕೆ ಪ್ರತಿ ನಿತ್ಯ 44 ಎಂಎಲ್‌ಡಿ ನೀರು ಅವಶ್ಯಕತೆ ಇದೆ. ಅದರಲ್ಲಿ ಏನಾಗಿದೆ ಎಂದರೆ, ಎರಡು ನದಿಗಳಾದ ಕಾರಾಂಜ ಮತ್ತು ಮಾಂಜ್ರಾ ಮೂಲಕ ನೀರನ್ನು ತೆಗೆದುಕೊಳ್ಳುತ್ತಿದ್ದೇವೆ. ಅದರಲ್ಲಿ ಒಂದು ನದಿ ಬತ್ತಿ ಹೋಗಿದ್ದರಿಂದ, ಅಲ್ಲಿ ನೀರಿನ ಲಭ್ಯತೆ ಇಲ್ಲ. ಹಾಗಾಗಿ, ಕಾರಾಂಜ ಜಲಾಶಯದಿಂದ 22–23 ಎಂಎಲ್‌ಡಿ ನೀರನ್ನು ಬೀದರ್ ನಗರಕ್ಕೆ ಸರಬರಾಜು ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳಿರುವಂತೆ ನೀರಿನ ಕೊರತೆ ಇದೆ ಎಂದು ನನ್ನ ಗಮನಕ್ಕೆ ಬಂದಿದೆ. ನಾನು ಬೀದರ್ ಜಿಲ್ಲೆಗೆ ಭೇಟಿ ಕೊಟ್ಟಂತಹ ಸಂದರ್ಭದಲ್ಲಿ ಅಲ್ಲಿನ ಸ್ಥಳೀಯ ಶಾಸಕರು ಮತ್ತು ವಿಧಾನ ಪರಿಷತ್ತಿನ ಶಾಸಕರು ನನ್ನ ಗಮನಕ್ಕೆ ತಂದಿದ್ದಾರೆ. ಅದಕ್ಕೆ ಹೊಸ ವ್ಯವಸ್ಥೆಯನ್ನು ಕಲ್ಪಿಸಬೇಕು ಎನ್ನುವ ದೃಷ್ಟಿಯಿಂದ ಅದಕ್ಕೆ action plan ಅನ್ನು ತಯಾರು ಮಾಡಿದ್ದೇವೆ. ಸುಮಾರು 15 ರಿಂದ 16 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕಾರಾಂಜ ನದಿಯಿಂದ ನೀರನ್ನು ಸರಬರಾಜ ಮಾಡುವುದಕ್ಕಾಗಿ ಪೂರಕವಾದ ವ್ಯವಸ್ಥೆಗಳನ್ನು ಮಾಡಿಕೊಳ್ಳುತ್ತಿದ್ದೇವೆ. ಮುಂದಿನ ದಿನಗಳಲ್ಲಿ ಇದನ್ನು ಪೂರ್ಣಗೊಳಿಸಿ, ಬೀದರ್ ಜಿಲ್ಲೆಯ ಜನತೆಗೆ ನೀರು ಒದಗಿಸುವಂತಹ ಕೆಲಸವನ್ನು ಖಂಡಿತವಾಗಿ ಮಾಡುತ್ತೇನೆಂದು ನಾನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಆ ಫಿಲ್ಟರ್ ಯೋಜನೆ ಎಲ್ಲೋ ಒಂದು ಕಡೆ ಕಾರ್ಯಗತವಾಗುತ್ತಿಲ್ಲ. ಇವೆಲ್ಲವೂ ಕೂಡ 2002 ರಲ್ಲಿ ಯೋಜನೆಯಾಗಿರುವಂತಹದ್ದು. 2002 ರಲ್ಲಿ ಆಗಿರುವಂತಹ ಯೋಜನೆಗಳು ಇವತ್ತು ಇಪ್ಪತ್ತು ವರ್ಷಗಳು ಕಳೆದಿವೆ. ಇಪ್ಪತ್ತು ವರ್ಷಗಳಾಗಿರುವುದರಿಂದ, ಅವುಗಳು ಹಾಳಾಗಿವೆ. ನದಿ ಮೂಲ ಯಾವುದು ಇದೆ ಎಂದರೆ, ಕಾರಾಂಜ ನದಿಯಿಂದ ನೀರು ತರಲು ಮಾತ್ರ ಸಾಧ್ಯವಾಗುತ್ತದೆ. ಅದನ್ನು ತರಿಸುವಂತಹ ಕೆಲಸದ ಬಗ್ಗೆ ಈಗಾಗಲೇ ಡಿ.ಪಿ.ಆರ್. ಅನ್ನು ಕೂಡ ತಯಾರು ಮಾಡಿದ್ದೇವೆ. ಸುಮಾರು 16–17 ಕೋಟಿ ರೂಪಾಯಿಗಳಾಗುತ್ತದೆ. ಅದನ್ನು ಮುಂದಿನ ದಿನಗಳಲ್ಲಿ ಟೆಂಡರ್ ಕರೆದು, ಬೀದರ್ ನಗರದ ಜನತೆಗೆ ಕುಡಿಯುವ ನೀರು ಒದಗಿಸುವಂತಹ ಕೆಲಸವನ್ನು ಖಂಡಿತವಾಗಿಯೂ ಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ಮಾಂಜ್ರಾ ನದಿಯ ಫಿಲ್ಟರ್ ಹಾಳಾಗಿದೆ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಆದರೆ ಅದು ಹಾಳಾಗಿಲ್ಲ. ಈ ಹಿಂದೆ ಇದರ ಪೈಪ್‌ಲೈನ್ ಮತ್ತು filter bed ರಿಪೇರಿಗಾಗಿ, ಸುಮಾರು 40 ಕೋಟಿ ರೂಪಾಯಿಗಳ ಹಣವನ್ನು ಇಟ್ಟಿದ್ದೀರಿ. ಆ ನಲವತ್ತು ಕೋಟಿ ರೂಪಾಯಿಗಳನ್ನು divert ಮಾಡಿ zone-3 ನಲ್ಲಿ ತೆಗೆದುಕೊಂಡಿದ್ದೀರಿ.

**ಶ್ರೀ ಬಿ.ಎ. ಬಸವರಾಜ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುರುವಂತಹದ್ದು ನಿಜ. ಅದನ್ನು ರಿಪೇರಿ ಮಾಡಿಸುವುದಕ್ಕಾಗಿ ಸುಮಾರು 44 ಕೋಟಿ ರೂಪಾಯಿಗಳನ್ನು ಇಟ್ಟಿರುವಂತಹದ್ದು ನಿಜ. ಆದರೆ ಅಲ್ಲಿನ ಜನಪ್ರತಿನಿಧಿಗಳು ಆ ಯೋಜನೆಗಳನ್ನು ಕೈಬಿಟ್ಟು, ಇಡೀ ಬೀದರ್ ನಗರಕ್ಕೆ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಆ ಹಣವನ್ನು ಅಲ್ಲಿಗೆ ಉಪಯೋಗಿಸಿಕೊಂಡಿದ್ದರಿಂದ ಆ ಯೋಜನೆ ಅಲ್ಲಿಗೆ ನಿಂತು ಹೋಗಿದೆ. ಅಲ್ಲಿ ನೀರಿನ ಲಭ್ಯತೆ ಕೂಡ ಇಲ್ಲ. ಬರೀ ಕಾರಾಂಜ ನದಿಯ ಮೂಲದಿಂದ ಮಾತ್ರ ನೀರಿನ ಲಭ್ಯತೆ ಇರುವಂತಹದ್ದು. ಹಾಗಾಗಿ ಕಾರಾಂಜ ನದಿಯಿಂದ ನೀರನ್ನು ತೆಗೆದುಕೊಳ್ಳುವುದಕ್ಕೆ ಏನೆಲ್ಲಾ ಪ್ರಯತ್ನಗಳನ್ನು ಮಾಡಬೇಕೋ, ಸರ್ಕಾರ ಅದೆಲ್ಲಾ, ಕೆಲಸಗಳನ್ನು ಮಾಡುತ್ತದೆ. ಈಗಿರುವ ಸುಮಾರು 44 ಕೋಟಿ ರೂಪಾಯಿಗಳೇನಿದೆ ಅದರಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಿದೆ. ನಾನು ಎರಡು ಬಾರಿ ಬೀದರ್ ಜಿಲ್ಲೆಗೆ ಭೇಟಿ ಕೊಟ್ಟು, ಅದರ ಬಗ್ಗೆ ಪರಿಶೀಲನೆಯನ್ನು ಮಾಡಿದ್ದೇನೆ. STP ಗಳು ಕೂಡ ಏನೊಂದು ಅವ್ಯವಸ್ಥೆ ಇತ್ತು, ಅದನ್ನು ಕೂಡ ಸರಿಪಡಿಸುವಂತಹ ವ್ಯವಸ್ಥೆಯನ್ನು ಖಂಡಿತವಾಗಿ ಮಾಡಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಪ್ರಶ್ನೆ ಸಂಖ್ಯೆ 1863**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಶಶೀಲ್ ಜಿ. ನಮೋಶಿ:–** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದ ಮಹತ್ತರ ಯೋಜನೆಯಾದ Bulk Drug Parks ಯೋಜನೆಯಡಿಯಲ್ಲಿ ಇತ್ತೀಚೆಗೆ ಕಲ್ಯಾಣ ಕರ್ನಾಟಕದ ಯಾದಗಿರಿ ಜಿಲ್ಲೆಯು ಆಯ್ಕೆಯಾಗಿದ್ದು, ಒಟ್ಟು, ಎಷ್ಟು ಎಕರೆ ಜಮೀನುಗಳನ್ನು ವಶಪಡಿಸಿಕೊಂಡಿದ್ದೀರಿ ಎಂಬ ಪ್ರಶ್ನೆಯನ್ನು ಕೇಳಿದ್ದೆ. ಆದಕ್ಕೆ ಮಾನ್ಯ ಸಚಿವರು ನೀಡಿರುವ ಉತ್ತರದಲ್ಲಿ ಒಟ್ಟಾರೆಯಾಗಿ 3232 ಎಕರೆ ಜಮೀನನನ್ನು ವಶಪಡಿಸಿಕೊಳ್ಳುವಂತಹ ಒಂದು ಕಾರ್ಯಕ್ರಮದ ಯೋಜನೆಯನ್ನು ಹಾಕಿಕೊಂಡು, ಸುಮಾರು 1500 ಎಕರೆ ಜಾಗವನ್ನು Bulk Drug Park ಗೆ ಮೀಸಲಿರಿಸಿದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಇಲ್ಲಿ ದುಃಖದ ಸಂಗತಿ ಏನೆಂದರೆ, ಪ್ರಸ್ತುತ ಬಲ್ಕ್ ಡ್ರಗ್ ಪಾರ್ಕ್ ಪ್ರಸ್ತಾವನೆಯು ಭಾರತ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ ಎಂದು ಹೇಳುತ್ತಾರೆ. ದಯವಿಟ್ಟು, ಮಾನ್ಯ ಸಚಿವರಿಗೆ ಕೈಗಾರಿಕೆ ಬಗ್ಗೆ ಸಾಕಷ್ಟು ಅನುಭವ ಇದೆ. ಅವರು ಸ್ವಂತ ಕೈಗಾರಿಕೆಯನ್ನು ಕೂಡ ಮಾಡಿದ್ದಾರೆ. ಈ ಹಿಂದೆ ಅವರು ಕೈಗಾರಿಕಾ ಸಚಿವರಾಗಿದ್ದಾಗ, ಅನೇಕ ಈ ತರಹದ ಯೋಜನೆಗಳನ್ನು ಕರ್ನಾಟಕ ರಾಜ್ಯಕ್ಕೆ ತಂದು ಕೊಟ್ಟಿದ್ದಾರೆ. ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ವಿನಂತಿ ಮಾಡುವುದೇನೆಂದರೆ, ಯಾವುದೇ ಕಾರಣಕ್ಕೂ ಇದನ್ನು ಕೈಬಿಡಬಾರದು. ತಾವು ಸರ್ಕಾರದಿಂದ ಎಲ್ಲಾ ರೀತಿಯ ಒತ್ತಡವನ್ನು ಹಾಕಿ, ಹಿಂದುಳಿದ ಭಾಗವಾದ ಯಾದಗಿರಿ ಜಿಲ್ಲೆಗೆ ದೊರಕಿಸಿಕೊಡಬೇಕೆಂದು ನನ್ನ ಮೊದಲನೇ ವಿನಂತಿಯಾಗಿದೆ.

ಮಾನ್ಯ ಸಭಾಪತಿಯವರೇ, ಭೂ ಸ್ವಾಧೀನ ಪಡಿಸಿಕೊಳ್ಳುವುದಕ್ಕೆ ಸುಮಾರು ಎರಡು ನೂರು ಕೋಟಿ ರೂಪಾಯಿಗಳನ್ನು ಸರ್ಕಾರ ಈಗಾಗಲೇ ಹೂಡಿಕೆ ಮಾಡಿದ್ದಾರೆ. ಭೂ ಸ್ವಾಧೀನ ಪಡಿಸಿಕೊಂಡಿರುವ ರೈತರಿಗೆ ಈ ಹಣವನ್ನು ಕೊಟ್ಟಿದ್ದಾರೆ. ಈ ತರಹ ಜಮೀನುಗಳನ್ನು ಸ್ವಾಧೀನ ಪಡಿಸಿಕೊಂಡಾಗ, ಬಹಳ ವರ್ಷಗಳ ನಂತರವು ಸಹ ರೈತರು ಬೆಳೆ ಬೆಳೆಯುತ್ತಿದ್ದಾರೆ. ಅದು ಇನ್ನೂ ರೈತರ ವಶದಲ್ಲಿಯೇ ಇದೆ. ದಯವಿಟ್ಟು, ಅದನ್ನು ವಶಪಡಿಸಿಕೊಳ್ಳುವಂತಹ ಕೆಲಸ ಏನಿದೆಯೋ, ಅದನ್ನು ಸರ್ಕಾರ ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ವಿನಂತಿ ಮಾಡುತ್ತೇನೆ.

ಮಾನ್ಯ ಸಭಾಪತಿಯವರೇ, ಬಲ್ಕ್ ಡ್ರಗ್ ಪಾರ್ಕ್‌ನ ಒಟ್ಟು ಯೋಜನಾ ವೆಚ್ಚ ರೂ. 1478 ಕೋಟಿ ರೂಪಾಯಿಗಳಾಗಿರುತ್ತದೆ. ಇದರಲ್ಲಿ ಕೇಂದ್ರ ಸರ್ಕಾರದ ಪಾಲಿನ ಮೊತ್ತ ರೂ. 1000 ಕೋಟಿ ಮತ್ತು ರಾಜ್ಯ ಸರ್ಕಾರದ ಪಾಲಿನ ಮೊತ್ತ ರೂ. 478 ಕೋಟಿಗಳಾಗಿದೆ ಎಂಬ ಮಾಹಿತಿಯನ್ನು ಕೊಟ್ಟಿದ್ದಾರೆ. ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಹೇಳುವುದೇನೆಂದರೆ, ಈ ಹಿಂದೆ ಹೈದರಬಾದ್ ಸರ್ಕಾರ ಡ್ರಗ್ಸ್‌ಗಳ ಕೈಗಾರಿಕೆಗಳು ಆ ಭಾಗದಲ್ಲಿ ಬಹಳ ಆಗಿತ್ತು. ಅದಕ್ಕೆ ಒಂದು ರೀತಿ ಬ್ಯಾನ್ ಕೂಡ impose ಮಾಡಿದರು. ಒಟ್ಟಾರೆ ಅದರ ಲಾಭವನ್ನು ನಾವು ಪಡೆಯಬೇಕು. ಯಾದಗಿರಿ ಜಿಲ್ಲೆ ಹೈದರಬಾದ್ ಹತ್ತಿರ ಇರುವುದರಿಂದ ಅಲ್ಲಿ ಬರುವಂತಹ ಡ್ರಗ್ ಪಾರ್ಕ್‌ಗಳು ನಮ್ಮ ಭಾಗದಲ್ಲಿ ಬರಬಹುದು. ಅದಕ್ಕೆ ಎಲ್ಲಾ ರೀತಿಯ ಸಿದ್ಧತೆಗಳನ್ನು ಸರ್ಕಾರ ಮಾಡಬೇಕು. ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಒತ್ತಡ ತಂದು, ನಮ್ಮ ಭಾಗಕ್ಕೆ ಕೊಡಬೇಕು ಎನ್ನುವ ರೀತಿಯಲ್ಲಿ ಸರ್ಕಾರ ಕಾರ್ಯ ಪ್ರವೃತ್ತರಾಗಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿಯನ್ನು ಮಾಡುತ್ತೇನೆ.

**ಡಾ. ಮುರುಗೇಶ ಆರ್. ನಿರಾಣಿ:-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಸಮೇತ 'one district one product' ಎನ್ನುವಂತಹದ್ದನ್ನು ಜಾರಿಗೆ ತಂದಿದ್ದೇವೆ. ಯಾದಗಿರಿ ಜಿಲ್ಲೆಗೆ "ಬಲ್ಕ್ ಡ್ರಗ್ ಪಾರ್ಕ್" ಅನ್ನು ಕೊಟ್ಟಿದ್ದೇವೆ. ಕೇಂದ್ರ ಸರ್ಕಾರವು ಉತ್ತರ ಭಾರತ, ದಕ್ಷಿಣ ಭಾರತ ಮತ್ತೊಂದು ಮಧ್ಯ ಭಾರತದಲ್ಲಿ ಮೂರು ಬಲ್ಕ್ ಡ್ರಗ್ ಪಾರ್ಕ್‌ಗಳಿಗೆ ಅನುಮತಿಯನ್ನು ಕೊಟ್ಟಿದೆ. ದಕ್ಷಿಣ ಭಾರತದಲ್ಲಿ ಕೊಡುವಂತಹದ್ದನ್ನು ಕರ್ನಾಟಕ ರಾಜ್ಯದ ಯಾದಗಿರಿ ಜಿಲ್ಲೆಗೆ ಕೊಡುತ್ತೇವೆಂಬ ಬಗ್ಗೆ ಮೌಖಿಕವಾಗಿ ಹೇಳಿದ್ದಾರೆ. ಅದರಲ್ಲಿ ಕೆಲವೊಂದು ಮಾನದಂಡಗಳನ್ನು ಮಾಡಿದ್ದಾರೆ. ಆ eligibility criteria ಏನೇನು ಇರಬೇಕು ಎನ್ನುವ ಸಲುವಾಗಿ ಯಾದಗಿರಿ ಜಿಲ್ಲೆ suitable ಇದೆ. ಅದರಲ್ಲಿ ಹದಿನಾಲ್ಕು ಎಕರೆ ನೀರು ಇರಬೇಕು ಹಾಗೂ ಅಕ್ಕಪಕ್ಕದಲ್ಲಿರುವ ಊರಿನ ಜನರಿಗೆ ಉದ್ಯೋಗ ಸಿಗಬೇಕು. ಆ criteria fulfill ಆಗಿರುವುದರಿಂದ ಒಂದೊಂದು ಕೈಗಾರಿಕೆಗಳಿಗೆ ಒಂದೊಂದು ಸಾವಿರ ಕೋಟಿ ರೂಪಾಯಿಗಳ grant ಅನ್ನು, ಅದಕ್ಕೆ ಉಚಿತವಾಗಿ ಕೊಡುತ್ತಿರುವಂತಹದ್ದು. ಈಗಾಗಲೇ, ಮಾನ್ಯ ಮುಖ್ಯಮಂತ್ರಿಗಳು, ಹಿರಿಯ ಅಧಿಕಾರಿಗಳು ಕೇಂದ್ರ ಸಚಿವರಾಗಿರುವಂತಹ ಶ್ರೀ ಮನ್ಸುಖ್ ಮಾಂಡವಿಯಾ ಮತ್ತು ನಮ್ಮ ಕರ್ನಾಟಕ ರಾಜ್ಯದಿಂದ

ಆಯ್ಕೆಯಾಗಿರುವ Minister of State ಆಗಿರುವಂತಹ ಶ್ರೀ ಭಗವಂತ ಖೂಬಾರವರು ಇದೇ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವುದರಿಂದ, ನಿಶ್ಚಿತವಾಗಿ ಯಾದಗಿರಿ ಜಿಲ್ಲೆಗೆ ಕೊಡುತ್ತೇವೆಂದು ಹೇಳಿದ್ದಾರೆ. ಕೇಂದ್ರ ಸರ್ಕಾರದ ಪಾಲಿನ ಮೊತ್ತ ರೂ. 1000 ಕೋಟಿ ಮತ್ತು ರಾಜ್ಯ ಸರ್ಕಾರದ ಪಾಲಿನ ಮೊತ್ತ ರೂ. 478 ಕೋಟಿಗಳನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಹೂಡಿಕೆ ಮಾಡಿ, ಅದನ್ನು ಅಭಿವೃದ್ಧಿ ಮಾಡುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಕೆಲವೊಂದು ಕೈಗಾರಿಕೆಗಳಿಗಾಗಿ ಭೂ ಸ್ವಾಧೀನ ಪಡಿಸಿಕೊಂಡ ಜಾಗದಲ್ಲಿ ರೈತರು ಬಿತ್ತನೆ ಮಾಡುತ್ತಿದ್ದಾರೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಉದಾಹರಣೆಗಾಗಿ ಹೇಳುವುದಾದರೆ, ನಾವು ಒಂದು ಸಾವಿರ ಎಕರೆ ಭೂ ಸ್ವಾಧೀನ ಪಡಿಸಿಕೊಂಡರೆ, ಅದರಲ್ಲಿ 200-300 ಎಕರೆಯಲ್ಲಿ ಯಾವುದಾದರೊಂದು legal dispute ಬಂದು, ಅದು ಹಾಗೇ ಉಳಿದಿದ್ದಲ್ಲಿ ನಾವು ಅದನ್ನು ಅಭಿವೃದ್ಧಿ ಮಾಡುವುದಕ್ಕೆ ಬರುವುದಿಲ್ಲ. ಅದು ಮಧ್ಯೆ ಮಧ್ಯೆದಲ್ಲಿ ಬಂದಿರುತ್ತದೆ. ಅಲ್ಲಿಯವರೆಗಾದರೂ ರೈತರು ಉಳುಮೆ ಮಾಡುವುದಕ್ಕೆ ಬಿಟ್ಟಿರುತ್ತೇವೆ. ಶೇಕಡ 100 ರಷ್ಟು ಭೂಸ್ವಾಧೀನವಾದರೆ, ಅದನ್ನು ಅಭಿವೃದ್ಧಿ ಪಡಿಸಿ ಹಂಚಿಕೆ ಮಾಡುವುದಕ್ಕೆ ತಯಾರು ಮಾಡುತ್ತಿದ್ದೇವೆ.

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ, ಈ ಹಿಂದೆ ಗುಲ್ಬರ್ಗಾದ ಹತ್ತಿರ Special Economic Zone ಅನ್ನು ಸ್ಥಾಪನೆ ಮಾಡುವುದಕ್ಕೆ ಎರಡು ಸಾವಿರ ಎಕರೆ ಭೂಮಿಯನ್ನು ವಶಪಡಿಸಿಕೊಂಡು, ಮಾಡುತ್ತೇವೆಂದು ಕಾಂಗ್ರೆಸ್ ಸರ್ಕಾರ ಸಾಕಷ್ಟು ಪ್ರಯತ್ನವನ್ನು ಮಾಡಿತ್ತು. ಆದರೆ ಅದು ಕಾರ್ಯರೂಪಕ್ಕೆ ಬರಲಿಲ್ಲ. ಹಾಗಾಗಿ ಇದೂ ಸಹ ಅದೇ ರೀತಿ ಆಗಬಾರದು. ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ವಿನಂತಿ ಮಾಡುವುದೇನೆಂದರೆ, ದಯವಿಟ್ಟು, 478 ಕೋಟಿ ರೂಪಾಯಿಗಳನ್ನು ಈ ಬಜೆಟ್‌ನಲ್ಲಿಯೇ ಪ್ರಾವಿಷನ್ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

**ಡಾ. ಮುರುಗೇಶ ಆರ್. ನಿರಾಣಿ:-** ಮಾನ್ಯ ಸಭಾಪತಿಯವರೇ, ಇದಕ್ಕೆ ಬಜೆಟ್‌ನಲ್ಲಿ ಪ್ರಾವಿಷನ್ ಇರುವುದಿಲ್ಲ. KIADB ಯಿಂದ provision ಮಾಡಿಕೊಂಡಿರುತ್ತೇವೆ. ಸರ್ಕಾರದಿಂದ ನಮಗೆ ಯಾವುದೇ ಹೆಚ್ಚುವರಿ ಅನುದಾನವನ್ನು ಕೊಟ್ಟಿರುವುದಿಲ್ಲ. ನಮ್ಮಲ್ಲಿ ಒಂದು ಪ್ರಾವಿಷನ್‌ನ

ಮಾಡಿ, ಅದನ್ನು ಹಂಚಿಕೆ ಮಾಡುವುದಕ್ಕೆ ಏನೊಂದು ಹಣ ಬಂದಿರುತ್ತದೆ, ಆ ಹಣದಿಂದ ಬಳಕೆ ಮಾಡಿಕೊಳ್ಳುತ್ತೇವೆ.

**"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು**

---

**ಪ್ರಶ್ನೆ ಸಂಖ್ಯೆ 1868**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಡಾ. ಕೆ. ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಇದರಲ್ಲಿ ರಾಜ್ಯ ಸರ್ಕಾರಕ್ಕೆ exchequer ಗೆ ಎಷ್ಟು ನಷ್ಟವಾಗುತ್ತಿದೆ ಎಂಬ ಬಗ್ಗೆ ಮಾನ್ಯ ಸಚಿವರ ಗಮನಕ್ಕೆ ಬಂದಿಲ್ಲ ಎಂಬುದು ನನ್ನ ಅನಿಸಿಕೆಯಾಗಿದೆ.

(ಮುಂದು)

**(332) 15-03-2022 11.40 ಟಿಸಿಹೆಚ್-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)**

**ಡಾ.ಕೆ.ಗೋವಿಂದರಾಜ್ (ಮುಂದು):-**

ಸಾವಿರಾರು ಕೋಟಿ ರೂಪಾಯಿಗಳು ಪಟ್ಟಣ ಪಂಚಾಯಿತಿ, ನಗರ ಸಭೆಗಳು ಮತ್ತು ಪುರಸಭೆಗಳಲ್ಲಿ ಏನು ಟ್ಯಾಕ್ಸ್ collect ಮಾಡುತ್ತಾರೆ, ಅದರಲ್ಲಿ ಎಷ್ಟು ಸೋರಿಕೆ ಆಗಿದೆಯೆಂದು ಮಾನ್ಯ ಸಚಿವರು ಇವತ್ತಿನವರೆಗೂ ರಿವ್ಯೂ ಮೀಟಿಂಗ್ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಅವರು ಕೊಟ್ಟಿರಕ್ಕಂಥ ಉತ್ತರದಲ್ಲಿ "ವಾಣಿಜ್ಯ ಕಟ್ಟಡಗಳ ಆಸ್ತಿ ತೆರಿಗೆ ದರಗಳು ಕನಿಷ್ಠ 0.5%, ಗರಿಷ್ಠ 3 %, ವಸತಿ ಮತ್ತು ವಾಣಿಜ್ಯೇತರ ಕನಿಷ್ಠ 0.2% ಗರಿಷ್ಠ 1.5%, ಖಾಲಿ ನಿವೇಶನಗಳು ಕನಿಷ್ಠ 0.2% ಗರಿಷ್ಠ 0.5% ಕೈಗಾರಿಕೆಗಳು ವಾಣಿಜ್ಯೇತರ ಕಟ್ಟಡಗಳಿಗೆ ನಿಗದಿಪಡಿಸುವ ಆಸ್ತಿ ತೆರಿಗೆ ದರದ ಶೇ.70ರಷ್ಟಕ್ಕೆ ಕಡಿಮೆಯಿಲ್ಲದಂತೆ ನಿಗದಿಪಡಿಸುವುದು" ಎಂದು ಹೇಳಿದ್ದಾರೆ. ಈ percentage ನ್ನು ಯಾರು ನಿರ್ಧಾರ ಮಾಡುವುದು? ಅಲ್ಲಿ ಇರತಕ್ಕಂಥ ಲೋಕಲ್ ಅಧಿಕಾರಿಗಳೇ percentage ನ್ನು ನಿರ್ಧಾರ ಮಾಡುತ್ತಾರೆಯೇ ಅಥವಾ ಅವರಿಗೆ ಏನಾದರೂ ಸರ್ಕಾರ ನಿರ್ದೇಶನ ಕೊಟ್ಟಿದೆಯೇ? ಏಕೆಂದರೆ ಇಲಾಖೆಯ ಕಮೀಷನರ್ ಇರಬಹುದು, ಇಂಜಿನಿಯರ್ಸ್ ಇರಬಹುದು ಅವರಿಗೆ ಇಷ್ಟ ಬಂದಂತೆ percentage fix ಮಾಡಿ ಹಣವನ್ನು ಲೂಟಿ ಮಾಡುತ್ತಾರೆಂದು ಕಂಪ್ಲೇಂಟ್ ಇದೆ. ಸರ್ಕಾರ ಇದಕ್ಕೆ ಏನಾದರೂ ಮಾನದಂಡಗಳನ್ನು ಮಾಡಿದೆಯೇ? ಆ percentage fix ಮಾಡುವುದಕ್ಕೆ ಸರ್ಕಾರ ಏನಾದರೂ ನಿರ್ದೇಶನ ಕೊಟ್ಟಿದೆಯೇ ಅಥವಾ ಅಧಿಕಾರಿಗಳೇ ಸ್ವತಃ ಮಾಡುತ್ತಿದ್ದಾರೆಯೇ ಎಂಬುದನ್ನು ಹೇಳಬೇಕು. ಇದರ ಜೊತೆಗೆ ನಾನು ಏನು ಹೇಳುತ್ತೇನೆಂದರೆ, ಮಾನ್ಯ ಸಭಾಪತಿಯವರೇ, ಮಾನ್ಯ

ಸಚಿವರು confusion ಆಗಿ ಆ ಕಡೆ, ಈ ಕಡೆ ನೋಡುತ್ತಿದ್ದಾರೆ. ಅದಕ್ಕಾಗಿ ಅವರು ಸ್ವಲ್ಪ ದಯಮಾಡಿ ಕೇಳಿಸಿಕೊಳ್ಳಬೇಕು. ಇದಕ್ಕೆ ಒಂದು Property Identification (PID) Number ಮಾಡುವುದಕ್ಕೆ ನಿಮಗೆ ಏನು ತೊಂದರೆ? ಇದರಿಂದ ಹಣ ಎಲ್ಲಿಗೆ ಹೋಗುವುದಿಲ್ಲ, ಇಂತಿಂಥ ಪ್ರಾಪರ್ಟಿಗೆ ಇಷ್ಟಿಷ್ಟು ಹಣ ಬಂದೇ ಬರುತ್ತದೆ. ಇಲ್ಲಿ ಒಂದು ದೊಡ್ಡ ಮಾಫಿಯಾ ಇದೆ. ಆ ಮಾಫಿಯಾ PID Number ಮಾಡುವುದಕ್ಕೆ ಬಿಡುತ್ತಿಲ್ಲವಂತೆ. ಎರಡನೆಯದಾಗಿ, ಆನ್‌ಲೈನ್ ವ್ಯವಸ್ಥೆ ಮಾಡಬಹುದಲ್ಲವೇ? ಈಗ ಬೆಂಗಳೂರು ನಗರದಲ್ಲಿ ಆನ್‌ಲೈನ್ ಮುಖಾಂತರ ಟ್ಯಾಕ್ಸ್ ಕಲೆಕ್ಷನ್ ಮಾಡುವುದನ್ನು ಮಾಡಿದ್ದಾರೆ. ಬೇರೆ ಬೇರೆ ಜಿಲ್ಲೆಗಳಲ್ಲೂ ಆನ್‌ಲೈನ್ ಮುಖಾಂತರ ಟ್ಯಾಕ್ಸ್ ಕಲೆಕ್ಷನ್ ಮಾಡಲಿ. ಮಾನ್ಯ ಸಚಿವರು ಕೊಟ್ಟಿರತಕ್ಕಂಥ ಉತ್ತರದಲ್ಲಿ ಮೈಸೂರಿನಲ್ಲಿ 2020-21ನೇ ಸಾಲಿನಲ್ಲಿ ಆಸ್ತಿ ತೆರಿಗೆ ರೂ. 13351.26 ಲಕ್ಷಗಳು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೂ. 7570.36 ಲಕ್ಷಗಳು ಆಸ್ತಿ ತೆರಿಗೆ ಸಂಗ್ರಹ ಮಾಡಿ ಎರಡನೆಯ ಸ್ಥಾನದಲ್ಲಿದೆ. ಧಾರವಾಡ ಜಿಲ್ಲೆಯಲ್ಲಿ ರೂ. 6577.52 ಲಕ್ಷಗಳು ಆಸ್ತಿ ತೆರಿಗೆ ಸಂಗ್ರಹವಾಗಿದೆ. ಬೆಂಗಳೂರು ನಗರದಲ್ಲಿ ರೂ.3546.04 ಲಕ್ಷಗಳು ಆಸ್ತಿ ತೆರಿಗೆ ಸಂಗ್ರಹವಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ರೂ. 1664.87 ಲಕ್ಷಗಳು ಆಸ್ತಿ ತೆರಿಗೆ ಸಂಗ್ರಹವಾಗಿದೆ. ಅಂದರೆ ಇಲ್ಲಿ ಆಸ್ತಿಯೇ ಇಲ್ಲವೇನೋ ಅನಿಸುತ್ತದೆ. ಬೆಂಗಳೂರು ನಗರದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಆಸ್ತಿಗಳು ಇಲ್ಲವೇ?

**ಸಭಾಪತಿಯವರು:-** ಮಾನ್ಯ ಎನ್.ನಾಗರಾಜ (ಎಂಟಿಬಿ)ಯವರೇ ತಾವು ಉತ್ತರ ಹೇಳಿ.

**ಡಾ.ಕೆ.ಗೋವಿಂದರಾಜು:-** ಮಾನ್ಯ ಸಭಾಪತಿಯವರೇ, ನಾನು ಇನ್ನೂ ಪ್ರಶ್ನೆ ಕೇಳುತ್ತಿದ್ದೇನೆ. ಆನ್‌ಲೈನ್‌ನಲ್ಲಿ ಪಿ.ಐ.ಡಿ. ನಂಬರ್ ಮಾಡುವುದು. ಮತ್ತೆ ಈ percentage fix ಮಾಡುವುದಕ್ಕೆ ಅಧಿಕಾರಿಗಳಿಗೆ ಯಾರು ಅಧಿಕಾರ ಕೊಟ್ಟಿದ್ದಾರೆ? ಇದರಿಂದ ಸಾಕಷ್ಟು ಹಣ ಲೂಟಿ ಮಾಡುತ್ತಿದ್ದಾರೆಂದು ದೂರು ದಾಖಲಾಗಿದೆ. Self assessment of property tax ಮಾಡುತ್ತಿಲ್ಲವೆಂದು ನನ್ನ ಗಮನಕ್ಕೆ ಬಂದಿದೆ. ಆಸ್ತಿ ವರ್ಗಾವಣೆ, ನೋಂದಣಿ ಮತ್ತು ಅಡಮಾನ ಇಡುವುದು ಒಂದು ಕಡೆಯಾದರೆ, ಆಮೇಲೆ ದುಡ್ಡು ಕಟ್ಟಿದ್ದಕ್ಕೆ ರಸೀದಿ ಕೊಡುತ್ತಾರೆಯೇ ಹೊರತು, ಆ ಫಾರಂ ನಂಬರ್-2 ಕೊಡುವುದಿಲ್ಲ. ಇನ್ನೊಂದು ಜೆರಾಕ್ಸ್ ಕಾಪಿಯನ್ನು ಅವರು ಕೊಡುವುದೇ ಇಲ್ಲ. ಅದನ್ನು ಕೊಡದೇ

ಇರುವುದರಿಂದ ಆ ಕಟ್ಟಿದಂಥ ದುಡ್ಡು ಎಲ್ಲಿಗೆ ಹೋಗುತ್ತದೆಂದು ಯಾರಿಗೂ ಗೊತ್ತಾಗುವುದಿಲ್ಲ. ಅದು ಅಧಿಕಾರಿಗಳಿಗೆ ಹೋಗುತ್ತಿದೆಯೋ ಅಥವಾ ಸರ್ಕಾರದ ಬೊಕ್ಕಸಕ್ಕೆ ಹಣ ಬರುತ್ತಿದೆಯೋ ಇದು ಒಂದು question ಆಗಿಯೇ ಉಳಿದಿದೆ. ಹಾಗಾಗಿ, ಇದಕ್ಕೆ ಮಾನ್ಯ ಸಚಿವರು ಉತ್ತರ ಕೊಡಬೇಕು.

**ಎನ್.ನಾಗರಾಜ (ಎಂಟಿಬಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರು ಕೇಳಿರತಕ್ಕಂಥ ಪ್ರಶ್ನೆಗೆ ಬಹಳ ವಿವರವಾಗಿ ನಾವು ಉತ್ತರಗಳನ್ನು ಕೊಟ್ಟಿದ್ದೇವೆ. 2018-19 ರಿಂದ 2020-21ನೇ ಸಾಲಿನವರೆಗೆ ಮೂರು ವರ್ಷಗಳಲ್ಲಿ ಪೌರಾಡಳಿತ ಇಲಾಖೆಯಲ್ಲಿ ಇಡೀ ರಾಜ್ಯದಲ್ಲಿ ಬಂದಿರತಕ್ಕಂಥ ಆಸ್ತಿ ತೆರಿಗೆ ಪ್ರಮಾಣ ಎಷ್ಟೆಂಬುದು ಅವರ ಮೂಲ ಪ್ರಶ್ನೆ. ಈಗಾಗಲೇ ಅವರಿಗೆ ವಿವರವಾದ ಉತ್ತರವನ್ನು ಕೊಟ್ಟಿದ್ದೇವೆ. 2018-19ನೇ ಸಾಲಿನಲ್ಲಿ ಒಟ್ಟು ರೂ.71118.82 ಲಕ್ಷಗಳು, 2019-20ನೇ ಸಾಲಿನಲ್ಲಿ ಒಟ್ಟು ರೂ.73677.47 ಲಕ್ಷಗಳು ಹಾಗೂ 2020-21ರಲ್ಲಿ ರೂ.84172.95 ಲಕ್ಷಗಳು ಆಸ್ತಿತೆರಿಗೆ ಸಂಗ್ರಹವಾಗಿದೆ ಎಂದು ಉತ್ತರ ಕೊಟ್ಟಿದ್ದೇವೆ. ಮೂಲದಲ್ಲಿ ಮೊದಲನೆಯ ಪ್ರಶ್ನೆಯನ್ನು ಕೇಳಿದ್ದಾರೆ. ಮಾನ್ಯ ಶಾಸಕರ ಪ್ರಶ್ನೆ ಇರುವುದೇನೆಂದರೆ, ಕಳೆದ 3 ವರ್ಷಗಳ ಅವಧಿಯಲ್ಲಿ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಸಂಗ್ರಹವಾದ ಆಸ್ತಿ ತೆರಿಗೆ ಪ್ರಮಾಣ ಎಷ್ಟು; (ವರ್ಷವಾರು, ಜಿಲ್ಲಾವಾರು ಪ್ರತ್ಯೇಕ ಮಾಹಿತಿ ಒದಗಿಸುವುದು) ಪ್ರಶ್ನೆ ಕೇಳಿದ್ದಾರೆ. ನಾವು ಅವರಿಗೆ ಉತ್ತರದಲ್ಲಿ ಜಿಲ್ಲಾವಾರು ಮಾಹಿತಿಯನ್ನು ಕೊಟ್ಟಿದ್ದೇವೆ. ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ಮತ್ತು ಕರ್ನಾಟಕ ಪೌರನಿಗಮಗಳ 1976ರ ಕಾಯ್ದೆಯಡಿ ನಗರ ಸ್ಥಳೀಯ ಸಂಸ್ಥೆಗಳು ಆಸ್ತಿ ತೆರಿಗೆಯನ್ನು ನಿರ್ಧರಿಸಿ ವಿಧಿಸುತ್ತಿರುವುದರ ಬಗ್ಗೆ ಮಾನ್ಯ ಶಾಸಕರಿಗೆ ಉತ್ತರದಲ್ಲಿ ಬಹಳ ಸಮರ್ಪಕವಾದ ಮಾಹಿತಿಯನ್ನು ಕೊಟ್ಟಿದ್ದೇವೆ. ವಾಣಿಜ್ಯ ಕಟ್ಟಡಗಳು, ವಸತಿ ಮತ್ತು ವಾಣಿಜ್ಯಯೇತರ ಕಟ್ಟಗಳಿಗೆ ವಿಧಿಸಿರತಕ್ಕಂಥ ತೆರಿಗೆ ಬಗ್ಗೆ ಕೂಡ ಪ್ರಶ್ನೆ ಕೇಳಿದ್ದಾರೆ. ಅದರ ಬಗ್ಗೆ ಕೂಡ ಮಾಹಿತಿ ಕೊಟ್ಟಿದ್ದೇವೆ. ವಾಣಿಜ್ಯ ಕಟ್ಟಡಗಳ ಆಸ್ತಿ ತೆರಿಗೆ ದರಗಳು ಕನಿಷ್ಠ 0.5%, ಗರಿಷ್ಠ 3 %, ವಸತಿ ಮತ್ತು ವಾಣಿಜ್ಯೇತರ ಕನಿಷ್ಠ 0.2% ಗರಿಷ್ಠ 1.5%, ಖಾಲಿ ನಿವೇಶನಗಳು ಕನಿಷ್ಠ 0.2% ಗರಿಷ್ಠ 0.5%, ಕೈಗಾರಿಕೆಗಳು ವಾಣಿಜ್ಯೇತರ ಕಟ್ಟಡಗಳಿಗೆ ನಿಗದಿಪಡಿಸುವ ಆಸ್ತಿ ತೆರಿಗೆದರದ ಶೇ.70ರಷ್ಟಕ್ಕೆ ಕಡಿಮೆಯಿಲ್ಲದಂತೆ ನಿಗದಿಪಡಿಸುವುದು ಎಂದು ಸಮರ್ಪಕವಾದ ಮಾಹಿತಿಯನ್ನು ನೀಡಿದ್ದೇವೆ.

**ಡಾ.ಕೆ.ಗೋವಿಂದರಾಜು:–** ಮಾನ್ಯ ಸಭಾಪತಿಯವರೇ, ಆ percentage ನ್ನು ನೀವು ತೀರ್ಮಾನ ಮಾಡುತ್ತೀರೋ ಅಥವಾ ಸ್ಥಳೀಯ ಅಧಿಕಾರಿಗಳು ತೀರ್ಮಾನ ಮಾಡುತ್ತಾರೋ ಎಂಬುದು ನನ್ನ ಪ್ರಶ್ನೆ.

**ಶ್ರೀ ಎನ್.ನಾಗರಾಜ (ಎಂಟಿಬಿ):–** ಮಾನ್ಯ ಸಭಾಪತಿಯವರೇ, ಆ percentage ನ್ನು ಅಧಿಕಾರಿಗಳು ತೀರ್ಮಾನ ಮಾಡುವುದಿಲ್ಲ. ಅದನ್ನು ಸರ್ಕಾರ ತೀರ್ಮಾನ ಮಾಡುತ್ತದೆ. ಆದರೆ ಅದರಲ್ಲಿ voluntarily ನಾವು ಅವರಿಗೆ ಅಧಿಕಾರ ಕೊಟ್ಟಿದ್ದೇವೆ.

**ಡಾ.ಕೆ.ಗೋವಿಂದರಾಜು:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ, ಆ discrimination ಏಕೆ ಎಂದು ಕೇಳುತ್ತಿದ್ದೇನೆ.

**ಶ್ರೀ ಎನ್.ನಾಗರಾಜ (ಎಂಟಿಬಿ):–** ಮಾನ್ಯ ಸಭಾಪತಿಯವರೇ, voluntarily ನಾವು ಅವರಿಗೆ ಕೊಟ್ಟಿದ್ದೇವೆ. ಸರ್ಕಾರ ನಿಗದಿಪಡಿಸತಕ್ಕಂಥ ತೆರಿಗೆ. ಯಾವುದೇ ಒಂದು ಸ್ವತ್ತಿಗೆ ಆಸ್ತಿ ತೆರಿಗೆ ನಿಗಧಿಪಡಿಸತಕ್ಕಂಥ ಸಂದರ್ಭದಲ್ಲಿ ಕರ್ನಾಟಕ ಸ್ಟಾಂಪ್ ಅಧಿನಿಯಮ 1957ರ ಕಲಂ 45 ಬಿ ರಡಿ ಪ್ರಕಟಿಸಲಾಗುವ ಚಾಲ್ತಿ ಸಾಲಿನ ಮಾರುಕಟ್ಟೆ ಮಾರ್ಗಸೂಚಿ ಬೆಲೆಗಳ ಅನ್ವಯವಾಗಿ ಆ ನಗರ ಸಭೆಗಳ ವ್ಯಾಪ್ತಿಯಲ್ಲಿರತಕ್ಕಂಥ ಗೈಡೆನ್ಸ್ ವ್ಯಾಲ್ಯೂ ಏನಿದೆ, ಅದರ ಪ್ರಕಾರವಾಗಿ ಶೇ.25 ರಷ್ಟರ ಜೊತೆಗೆ ವಾಣಿಜ್ಯ ಕಟ್ಟಡಗಳಿಗೆ ಕನಿಷ್ಠ 0.5%, ಗರಿಷ್ಠ 3 %, ವಸತಿ ಮತ್ತು ವಾಣಿಜ್ಯೇತರಕ್ಕೆ ಕನಿಷ್ಠ 0.2% ಗರಿಷ್ಠ 1.5%, ಖಾಲಿ ನಿವೇಶನಗಳಿಗೆ ಕನಿಷ್ಠ 0.2% ಗರಿಷ್ಠ 0.5%, ಕೈಗಾರಿಕೆಗಳು– ವಾಣಿಜ್ಯೇತರ ಕಟ್ಟಡಗಳಿಗೆ ನಿಗದಿಪಡಿಸುವ ಆಸ್ತಿ ತೆರಿಗೆದರದ ಶೇ.70ರಷ್ಟಕ್ಕೆ ಕಡಿಮೆಯಿಲ್ಲದಂತೆ ನಿಗದಿಪಡಿಸಲಾಗಿದೆ. ಈ ಆಸ್ತಿ ತೆರಿಗೆಯನ್ನು ಕಟ್ಟಲು ಸರ್ಕಾರದಿಂದಲೇ ಸುತ್ತೋಲೆಯನ್ನು ಹೊರಡಿಸಲಾಗಿದೆ.

**ಡಾ.ಕೆ.ಗೋವಿಂದರಾಜು:–** ಮಾನ್ಯ ಸಭಾಪತಿಯವರೇ, ನಾನು ಬಹಳ simple question ಕೇಳಿದ್ದೇನೆ. ನಾನು ಆ ಸ್ವತ್ತುಗಳಿಗೆ ಪಿಐಡಿ ನಂಬರ್ ಕೊಡುತ್ತಿಲ್ಲವೆಂದು ಹೇಳಿದೆನು. ನಾನು ಕೇಳಿದಂತಹ 4ನೇ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಹೇಳಲಿಲ್ಲ. ಈಗ ಆ ಸ್ವತ್ತುಗಳಿಗೆ ಪಿಐಡಿ ನಂಬರ್ ಗಳನ್ನು ಕೊಡುವುದಕ್ಕೆ ಏನು ತೊಂದರೆ ಇದೆ? ಸರ್ಕಾರ ಅದನ್ನೇಕೆ ಮಾಡುತ್ತಿಲ್ಲ?

ಪೌರಾಡಳಿತ ಇಲಾಖೆಯ ನಿರ್ದೇಶನಾಲಯದಲ್ಲಿ ಪಿಐಡಿ ನಂಬರ್ ಮಾಡುವುದಕ್ಕೆ ಬೇರೆಯ ಒಂದು ಮಾಫಿಯಾ ಇದೆ. ಅವರು ಅದನ್ನು ಮಾಡುವುದಕ್ಕೆ ಬಿಡುತ್ತಿಲ್ಲವೆಂದು ನನಗೆ ಮಾಹಿತಿ ಇದೆ. ಇದನ್ನು ಮಾನ್ಯ ಸಚಿವರ ಗಮನಕ್ಕೆ ತಂದಿದ್ದೇನೆ. ಅದನ್ನು ಯಾವ ರೀತಿ ಸರಿಪಡಿಸುತ್ತೀರೆಂದು ಹೇಳಿ. ಇನ್ನು ಎರಡನೆಯ ವಿಚಾರವೇನೆಂದರೆ, ಆಸ್ತಿ ತೆರಿಗೆ ಕಟ್ಟಲು ಆನ್‌ಲೈನ್ ವ್ಯವಸ್ಥೆ ಮಾಡುವುದಕ್ಕೆ ಏನು ತೊಂದರೆ ಇದೆ? ದುಡ್ಡು ಕಟ್ಟಿದ್ದಕ್ಕೆ ರಸೀದಿ ಮಾತ್ರ ಕೊಡತ್ತಿದ್ದಾರೆ, ನಮೂನೆ ನಂಬರ್-2 ಕೊಡುತ್ತಿಲ್ಲ. ಈ ವಿಚಾರ ಮಾನ್ಯ ಸಚಿವರ ಗಮನಕ್ಕೆ ಬಂದಿದೆಯೇ ಎಂದು ಕೇಳುತ್ತಿದ್ದೇನೆ.

**ಶ್ರೀ ಎನ್.ನಾಗರಾಜ (ಎಂಟಿಬಿ):-** ಮಾನ್ಯ ಸಭಾಪತಿಯವರೇ, ಇ-ಆಸ್ತಿ ತಂತ್ರಾಂಶದ ಅಡಿಯಲ್ಲಿ ಪ್ರತ್ಯೇಕ ಆಸ್ತಿಗಳನ್ನು ಗುರುತಿಸಲಾಗಿದ್ದ ಪಿಐಡಿ ನಂಬರ್ ಆಧಾರದ ಮೇಲೆ ಆಸ್ತಿ ಮಾಲೀಕರು ಸ್ವಯಂ ಘೋಷಣೆ ಯೋಜನೆಯಲ್ಲಿ ಆಸ್ತಿ ತೆರಿಗೆಗಳ ಲೆಕ್ಕಾಚಾರದ ತಂತ್ರಾಂಶದ ಮುಖಾಂತರ ಸ್ವಯಂ ನಿರ್ಧರಿಸಲು ಅವಕಾಶವಿದೆ. ಅವರೆ voluntarily ಆಸ್ತಿ ತೆರಿಗೆಗಳನ್ನು ಕಟ್ಟುವುದಕ್ಕೆ, ಕಟ್ಟಿದಂಥ ಮನೆಗಳು ಅವರಿಗೆ ಆಗಿರತಕ್ಕಂಥ estimate cost ನಲ್ಲಿ, ಅವರೇನು granite ಹಾಕಿದ್ದಾರೆಯೇ, marble ಹಾಕಿದ್ದಾರೆಯೇ ಅಥವಾ concrete flooring ಏನಾದರೂ ಹಾಕಿದ್ದಾರೆಯೇ ಎಂದು ನೋಡಬೇಕಾಗುತ್ತದೆ. ಆ ಮನೆಗೆ ಉಪಯೋಗ ಮಾಡಿರತಕ್ಕಂಥ estimate cost ಮೇಲೆ ತೆರಿಗೆ ಕಟ್ಟುವುದಕ್ಕೆ ಅವರೇ voluntary ಯಾಗಿ declare ಮಾಡುವುದಕ್ಕೆ ಸರ್ಕಾರದಲ್ಲಿ ಅವಕಾಶವನ್ನು ಕೊಟ್ಟಿದ್ದೇವೆ. ತಂತ್ರಾಂಶದ ಮೂಲಕ ಸ್ವಯಂ ನಿರ್ಧರಿಸಲು ಅವಕಾಶವಿದ್ದು, ನಗರ ಸ್ಥಳೀಯ ಸಂಸ್ಥೆಗಳಿಂದ ಯಾವುದೇ ವಿಳಂಬ ಸಂಭವಿಸಿದಲ್ಲಿ ಮುಂದುವರೆದ ಸಾರ್ವಜನಿಕರ ಆಸ್ತಿ ತೆರಿಗೆಯನ್ನು ಇ-ಸ್ವೀಕೃತಿ ತಂತ್ರಾಂಶದ ಮೂಲಕ ಹಣ ಕಟ್ಟಲು ಅವಕಾಶ ಮಾಡಿಕೊಡಲಾಗಿದೆ. ಒಂದು ವೇಳೆ ಅವರು ಯಾವುದೇ ದೇಶದಲ್ಲಿದ್ದರೂ ಕೂಡ ಅವರು ಇ-ಸ್ವೀಕೃತಿ ತಂತ್ರಾಂಶದ ಮೂಲಕ ಆಸ್ತಿ ತೆರಿಗೆಯನ್ನು ಕಟ್ಟುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ.

**ಡಾ.ಕೆ.ಗೋವಿಂದರಾಜು:-** ಮಾನ್ಯ ಸಭಾಪತಿಯವರೇ, ಇದಕ್ಕೆ ಒಂದು high level ನಲ್ಲಿ High Power Committee ಮಾಡಿ ಸಾರ್ವಜನಿಕರ ತೆರಿಗೆ ಹಣ ಪೋಲಾಗುವುದನ್ನು ತಪ್ಪಿಸಲು ಇದಕ್ಕೆ ಒಂದು ಸಮಿತಿ ಮಾಡಿದರೆ ಅವರ ಇಲಾಖೆಗೆ ಹಣ ಜಾಸ್ತಿ ಸಂಗ್ರಹವಾಗುತ್ತದೆಂದು ನಾನು

ಸರ್ಕಾರಕ್ಕೆ ಸಲಹೆ ನೀಡುತ್ತಿದ್ದೇನೆ. ಇನ್ನು ಇದರ ಬಗ್ಗೆ ಮಾನ್ಯ ಸಚಿವರು ಏನು ಮಾಡುತ್ತಾರೋ ಮಾಡಲಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. . .

**ಸಭಾಪತಿಯವರು:–** ಮಾನ್ಯ ಎನ್.ನಾಗರಾಜ (ಎಂಟಿಬಿ)ಯವರೇ, ತಾವು ಉತ್ತರ ಹೇಳಿ.

**ಶ್ರೀ ಎನ್.ನಾಗರಾಜ (ಎಂಟಿಬಿ):–** ಮಾನ್ಯ ಸಭಾಪತಿಯವರೇ, ಸ್ಥಳೀಯ ನಗರ ಸಭೆಗಳಲ್ಲಿ ಪ್ರತಿ ವರ್ಷ ಎಷ್ಟು ಆಸ್ತಿ ತೆರಿಗೆಗಳು ಬರುತ್ತದೆ. ಆ ಬರತಕ್ಕಂಥ ಆಸ್ತಿ ತೆರಿಗೆಗಳಿಗೆ ಕೌನ್ಸಿಲ್ ಇದೆ. ಆ ಕೌನ್ಸಿಲ್ ಬಾಡಿಯಲ್ಲಿ ಸಭೆ ನಡೆದು, ಪ್ರೊಸೀಡಿಂಗ್ಸ್ ಆಗುತ್ತದೆ. ಬಂದಂಥ ಆಸ್ತಿ ತೆರಿಗೆ ಹಣವನ್ನು ಕೌನ್ಸಿಲ್ ಬಾಡಿಯು ಇಲಾಖೆಗೆ ಅವಶ್ಯಕತೆಯಿರತಕ್ಕಂಥ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ.

**ಡಾ.ಕೆ.ಗೋವಿಂದರಾಜು:–** ಮಾನ್ಯ ಸಭಾಪತಿಯವರೇ, ನಾನು ಸರ್ಕಾರಕ್ಕೆ ಕೇಳುವುದೇನೆಂದರೆ, ಆಸ್ತಿ ತೆರಿಗೆಯಿಂದ ಇಲಾಖೆಯ ಖಜಾನೆಗೆ ಬಂದಿರತಕ್ಕಂಥ ಹಣಕ್ಕೆ ಏನಾದರೂ ಒಂದು ವ್ಯವಸ್ಥೆ ಮಾಡಬೇಕು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಪ್ರಶ್ನೆ ಸಂಖ್ಯೆ. 1840**

**(ಉತ್ತರ ಲಗತ್ತಿಸಿದೆ)**

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ನಾನು ಕೇಳಿರತಕ್ಕಂಥ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾನು ಬೆಂಗಳೂರು ನಗರದ ಹೊರವಲಯದಲ್ಲಿರುವ ದಾಸನಪುರ ಉಪ ಮಾರುಕಟ್ಟೆಯನ್ನು ಯಾವಾಗ ಸ್ಥಾಪನೆ ಮಾಡಲಾಯಿತು; ಉಪ ಮಾರುಕಟ್ಟೆ ನಿರ್ಮಾಣದ ಉದ್ದೇಶಗಳೇನು; ಇದರ ವಿಸ್ತೀರ್ಣವೆಷ್ಟು; ಈ ಮಾರುಕಟ್ಟೆಯಲ್ಲಿ ವ್ಯಾಪಾರ ವಹಿವಾಟುಗಳು ನಡೆಯುತ್ತಿವೆಯೇ; (ಸಂಪೂರ್ಣ ವಿವರ ನೀಡುವುದು) ಎಂದು ನಾಲ್ಕು ಪ್ರಶ್ನೆಗಳನ್ನು ಕೇಳಿದ್ದೇನೆ. ನಾನು ಕೇಳಿರತಕ್ಕಂಥ ಪ್ರಶ್ನೆಗಳಿಗೆ ಮಾನ್ಯ ಸಚಿವರು ಉದ್ದೇಶವೊಂದನ್ನು ಹೊರತುಪಡಿಸಿ ಸವಿವರವಾದ ಉತ್ತರವನ್ನು ಕೊಟ್ಟಿದ್ದಾರೆ. ಅಂದರೆ ಸರ್ಕಾರ ನನಗೆ ಸಮಾಧಾನಕರ ಉತ್ತರ ಕೊಟ್ಟಿಲ್ಲ. ಮೊದಲನೆಯದಾಗಿ, ಬೆಂಗಳೂರು ನಗರದ ಹೊರವಲಯದಲ್ಲಿರುವ ದಾಸನಪುರ ಉಪ ಮಾರುಕಟ್ಟೆಯನ್ನು ಮಾಡಿರತಕ್ಕಂಥ ಉದ್ದೇಶವೇನೆಂದರೆ, ಯಶವಂತಪುರ ಮಾರುಕಟ್ಟೆಯಲ್ಲಿ ಇರತಕ್ಕಂಥ ಒತ್ತಡವನ್ನು ಕಡಿಮೆ ಮಾಡಬೇಕು. ಯಶವಂತಪುರ ಮಾರುಕಟ್ಟೆ ಬೆಂಗಳೂರಿನ ಮಧ್ಯಭಾಗದಲ್ಲಿದೆ.

**(ಮುಂದು)**

(333)15.3.2022/11.50/ಎಂ.ಎಂ-ಕೆ.ಎಸ್

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ರವಿ (ಮುಂದು):-**

ಅಲ್ಲಿ ಮಾರುಕಟ್ಟೆ ಇರುವುದರಿಂದ ಮಾರಾಟ ಮಾಡತಕ್ಕಂಥ ರೈತರದ್ದು ಹಾಗೂ ಕೊಂಡುಕೊಳ್ಳತಕ್ಕಂತಹ ವರ್ತಕರ ಸುಮಾರು 4000-5000 ವಾಹನಗಳ ಒತ್ತಡ ದಿನನಿತ್ಯ ಅದರ ಮೇಲೆ ಇರುವುದರಿಂದ ವಾಹನ ದಟ್ಟಣೆಯ ಕಿರಿಕಿರಿಯಾಗುತ್ತದೆ ಎನ್ನುವ ದೃಷ್ಟಿಯಿಂದ ದಾಸನಪುರದಲ್ಲಿ ಒಂದು ಸುಸಜ್ಜಿತವಾದ ಮಾರುಕಟ್ಟೆಯನ್ನು ನಿರ್ಮಾಣ ಮಾಡಬೇಕೆಂಬ

ಉದ್ದೇಶದಿಂದ ದಿನಾಂಕ 07.10.2009ರಲ್ಲಿ ದಾಸನಪುರ ಮಾರುಕಟ್ಟೆಯನ್ನು ಸ್ಥಾಪಿಸಲಾಗಿದೆಯೆಂದು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಅಲ್ಲಿ ಎ, ಬಿ, ಸಿ & ಡಿ ವಲಯಗಳಲ್ಲಿ ಒಟ್ಟು 500 ಸುಸಜ್ಜಿತ ಮಳಿಗೆಗಳವೆ. ಇವರ ಮಾತನ್ನು ನಂಬಿ ಮುಖ್ಯವಾಗಿ ಈರುಳ್ಳಿ, ಬೆಳ್ಳುಳ್ಳಿ, ಶುಂಠಿ ಮತ್ತು ಆಲೂಗೆಡ್ಡೆ ವರ್ತಕರುಗಳು ಎಲ್ಲರನ್ನೂ ಯಶವಂತಪುರದಿಂದ ದಾಸನಪುರಕ್ಕೆ ಸಂಪೂರ್ಣವಾಗಿ ಸ್ಥಳಾಂತರ ಮಾಡುತ್ತೇವೆಂದು ಸರ್ಕಾರ ಹೇಳಿದ ಹಿನ್ನೆಲೆಯಲ್ಲಿ ಯಶವಂತಪುರದಲ್ಲಿ ವ್ಯಾಪಾರ ಮಾಡುತ್ತಿದ್ದಂತಹ ವರ್ತಕರು ದಾಸನಪುರಕ್ಕೆ ಬಂದು ವ್ಯಾಪಾರ ವಹಿವಾಟನ್ನು ಪ್ರಾರಂಭ ಮಾಡಿದ್ದಾರೆ. ಆದರೆ ಸರ್ಕಾರ ಸಂಪೂರ್ಣವಾಗಿ ಸ್ಥಳಾಂತರ ಮಾಡಲಿಲ್ಲ. ಪುನಃ ಕೆಲವರ ಒತ್ತಡಕ್ಕೆ ಒಳಗಾಗಿ 2018ರಲ್ಲಿ ಮತ್ತೆ ಯಶವಂತಪುರದಲ್ಲಿಯೇ ಕೆಲವರು ಮುಂದುವರಿಯುವುದಕ್ಕೆ ಬಿಟ್ಟಿದ್ದಾರೆ. ಅದರಿಂದ ದಾಸನಪುರ ಮಾರುಕಟ್ಟೆಯ ಉದ್ದೇಶವೇನಿತ್ತು ಆ ಉದ್ದೇಶ ಈಡೇರಲಿಲ್ಲ. ಆ ಹಿನ್ನೆಲೆಯಲ್ಲಿ ಪುನಃ ಇವತ್ತು ಎರಡು ಕಡೆಯೂ ಅಂದರೆ ದಾಸನಪುರದಲ್ಲಿ ಮತ್ತು ಯಶವಂತಪುರದಲ್ಲಿ ವ್ಯಾಪಾರ ನಡೆಯುತ್ತಿದೆ. ದಾಸನಪುರ ಮಾರುಕಟ್ಟೆಯ ಉದ್ದೇಶ ಸಂಪೂರ್ಣವಾಗಿ ವಿಫಲವಾಗಿದೆ. ಸುಸಜ್ಜಿತ ಮಾರುಕಟ್ಟೆ ಇದ್ದರೂ ಕೂಡ ಅಲ್ಲಿ ಕೋವಿಡ್ ಸಂದರ್ಭದಲ್ಲಿ ಸ್ಥಳಾವಕಾಶ ಮಾಡಬೇಕೆಂದು ದಾಸನಪುರಕ್ಕೆ ಸಂಪೂರ್ಣವಾಗಿ ಸ್ಥಳಾಂತರಿಸಲಾಯಿತು. 2020ರಲ್ಲಿ ಸಂಪೂರ್ಣವಾಗಿ ಸ್ಥಳಾಂತರವಾದ ಸಂದರ್ಭದಲ್ಲಿ ಉದ್ದೇಶ ಸಫಲವಾಗಿದೆ. ಆದರೆ ಸ್ಥಳಾಂತರಗೊಂಡಿರುವ ವರ್ತಕರಿಗೆ ವ್ಯಾಪಾರವೇ ಆಗುತ್ತಿಲ್ಲ. ಅವರಿಗೆ ಬಾಡಿಗೆ ಕೊಡಿ ಎಂದು ನೋಟಿಸ್ ಕೊಡುತ್ತಿದ್ದಾರೆ. ದಯಮಾಡಿ ಅವರ ಎರಡು ವರ್ಷದ ಬಾಡಿಗೆಯನ್ನು ಮನ್ನ ಮಾಡಬೇಕು ಇಲ್ಲವೇ ಯಾವಾಗ ಸಂಪೂರ್ಣವಾಗಿ ಸ್ಥಳಾಂತರ ಮಾಡುತ್ತಾರೆ ಎಂಬ ಇವೆರಡು ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಕೊಡಲಿ ಆಮೇಲೆ ಪುನಃ ಬೇರೆ ಉಪ ಪ್ರಶ್ನೆ ಕೇಳುತ್ತೇನೆ.

**ಶ್ರೀ ಎಸ್.ಟಿ. ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಕಲಾಸಿಪಾಳ್ಯ ಮಾರುಕಟ್ಟೆಯಲ್ಲಿ ಒತ್ತಡವೆಂದು ಯಶವಂತಪುರ ಮಾರುಕಟ್ಟೆಯನ್ನು ಪ್ರಾರಂಭ ಮಾಡಿದರು. ಅಲ್ಲಿಗೆ ದಿನನಿತ್ಯ ಸುಮಾರು 400-500 ಲಾರಿಗಳು ಬರುತ್ತವೆ. ಅದು ಇಕ್ಕಟ್ಟಾಗಿದ್ದು, ವಾಹನ ದಟ್ಟಣೆಯಾಗುತ್ತದೆಂದು ದಾಸನಪುರದಲ್ಲಿ ಒಂದು ಜಮೀನನ್ನು ಖರೀದಿ ಮಾಡಿ ಅಲ್ಲಿ ಸ್ವಲ್ಪ ಭಾಗ ಬಿಟ್ಟು ಉಳಿದ ಭಾಗದಲ್ಲಿ

ಭವ್ಯವಾದ ಕಟ್ಟಡವನ್ನು ಕಟ್ಟಿ ಅಲ್ಲಿಗೆ ಮಾರುಕಟ್ಟೆಯನ್ನು ಶಿಫ್ಟ್ ಮಾಡಲಾಗಿದೆ. ಕೋವಿಡ್ ಸಂದರ್ಭದಲ್ಲಿ ಒಂದು ಷರತ್ತನ್ನು ಹಾಕಿದ್ದೆವು. ಯಾವಾಗ ಜನರ ಒತ್ತಡ ಜಾಸ್ತಿಯಾಯಿತು ಅದನ್ನು ದಾಸನಪುರ ಮಾರುಕಟ್ಟೆಗೆ ಶಿಫ್ಟ್ ಮಾಡಬೇಕು, ಕೋವಿಡ್ ಕಡಿಮೆಯಾದ ಮೇಲೆ ಮತ್ತೆ ಅಲ್ಲಿಗೆ ಶಿಫ್ಟ್ ಆಗಬೇಕೆಂದು. ಎ, ಬಿ, ಸಿ & ಡಿ ಎಂಬ ನಾಲ್ಕು ಕಟ್ಟಡಗಳನ್ನು ನಿರ್ಮಾಣ ಮಾಡಿದ್ದೇವೆ. ಯಾವ ಕಟ್ಟಡ ಪೂರ್ಣಗೊಂಡಿದೆ ಅವರೆಲ್ಲರನ್ನೂ ಅಲ್ಲಿಗೆ ಶಿಫ್ಟ್ ಮಾಡಿದ್ದೇವೆ. ಎ, ಬಿ, ಸಿ & ಡಿ ಬ್ಲಾಕ್‌ಗಳಲ್ಲಿ ಈರುಳ್ಳಿ, ಆಲೂಗಡ್ಡೆ, ಶುಂಠಿ ಮತ್ತು ಬೆಳ್ಳುಳ್ಳಿ ಈ ನಾಲ್ಕು ವ್ಯಾಪಾರಗಳನ್ನು ಮಾಡುವುದಕ್ಕೆ ಮಾತ್ರ ಅಲ್ಲಿ ಅವಕಾಶವನ್ನು ಕೊಟ್ಟಿದ್ದೇವೆ. ಮಾರ್ಚ್ ಮತ್ತು ಏಪ್ರಿಲ್ ತಿಂಗಳಿಗೆ ಉಳಿದ ಅಂಗಡಿಗಳನ್ನು ಪೂರ್ಣಗೊಳಿಸುವುದಕ್ಕೆ ತೀರ್ಮಾನ ತೆಗೆದುಕೊಂಡಿದ್ದೇವೆ. ಏಪ್ರಿಲ್ ತಿಂಗಳಿಗೆ ಕಂಪ್ಲೀಟ್ ಆದರೆ ಯಶವಂತಪುರದಲ್ಲಿರುವ ಬಹುತೇಕ ಎಲ್ಲಾ ಅಂಗಡಿಗಳನ್ನು ಅಲ್ಲಿಗೆ ಶಿಫ್ಟ್ ಮಾಡುತ್ತೇವೆ. ಹೈಕೋರ್ಟ್‌ನಲ್ಲಿ ಏನಾಗಿದೆ ಎಂದರೆ, ಇಲ್ಲಿನ ಕಾಮಗಾರಿ ಮುಗಿಯುವ ತನಕ ಯಶವಂತಪುರದಲ್ಲಿ ಇಷ್ಟು ದಿವಸ ಮಾಡಿ, ದಾಸನಪುರದಲ್ಲಿ ಇಷ್ಟು ದಿವಸ ಮಾಡಿ ಎಂದು ಆದೇಶವಾಗಿದೆ. ಅಲ್ಲಿ ಅಂಗಡಿಗಳು ಕಡಿಮೆ ಇವೆ. ಪಾಲಿಸಿ ಏನಿತ್ತು ಎಂದರೆ, ಯಶವಂತಪುರದಲ್ಲಿ ಅಂಗಡಿ ಇರುವಂತಹವರಿಗೆ ದಾಸನಪುರದಲ್ಲಿ ಮತ್ತೊಂದು ಅಂಗಡಿಯನ್ನು ಕೊಡಬಾರದು ಎಂದು ಇತ್ತು. ಈಗ ಕೆಲವು ನಿಯಮಗಳನ್ನು ಬದಲಾವಣೆ ಮಾಡುವುದಕ್ಕೆ ಚಾಲನೆ ಮಾಡಿದ್ದೇವೆ. ಇನ್ನೆರಡು ತಿಂಗಳನಲ್ಲಿ ಕಟ್ಟಡ ನಿರ್ಮಾಣ ಕಂಪ್ಲೀಟ್ ಆಗುತ್ತದೆ. ಯಶವಂತಪುರದಲ್ಲಿ ಯಾರಿಗೆಲ್ಲಾ ಅಂಗಡಿಗಳನ್ನು ಕೊಡಬೇಕೊ ಅದನ್ನು ದಾಸನಪುರದಲ್ಲಿ ಕೊಡುವಂತಹ ಕೆಲಸ ಮಾಡುತ್ತೇವೆ. ಆಗ ಇಡೀ ಯಶವಂತಪುರವನ್ನು ಅಲ್ಲಿಗೆ ಶಿಫ್ಟ್ ಮಾಡುತ್ತೇವೆ. ಆದರೆ ಮಾನ್ಯ ಸದಸ್ಯರಾದ ರವಿಯವರು ಬಾಡಿಗೆಯನ್ನು ಕಡಿಮೆ ಮಾಡಬೇಕೆಂದು ಕೇಳುತ್ತಿದ್ದಾರೆ. ನಮ್ಮ ನಿಯಮಾವಳಿಯಲ್ಲಿ ಬಾಡಿಗೆಯನ್ನು ಕಡಿಮೆ ಮಾಡುವುದಕ್ಕೆ ಅವಕಾಶ ಇಲ್ಲ. ಈಗ ಏನೇನು ತೊಂದರೆಗಳಿವೆ, ಈ ಬಜೆಟ್‌ನಲ್ಲಿಯೇ ನಿಯಮಾವಳಿಯನ್ನು ತರುವುದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ನಿಯಮಾವಳಿಯನ್ನು ಬದಲಾವಣೆ ಮಾಡಿದರೆ ಅವರಿಗೆ ಬಾಡಿಗೆ ಜಾಸ್ತಿ ಎಂದು ಅನಿಸಿದರೆ ಅದನ್ನು ಕಡಿಮೆ ಮಾಡುವುದಕ್ಕೆ ಅವಕಾಶವಾಗುತ್ತದೆ.

**ಶ್ರೀ ಎಸ್. ರವಿ:-** ಮಾನ್ಯ ಸಭಾಪತಿಯವರೇ, ಸರ್ಕಾರದ ಮಾತಿಗೆ ಮನ್ನಣೆ ಹಾಗೂ ಗೌರವ ಕೊಟ್ಟು ದಾಸನಪುರ ಮಾರುಕಟ್ಟೆಗೆ ಸ್ಥಳಾಂತರವಾಗಿರುವುದಾಗಿದೆ. ಅಲ್ಲಿಗೆ ಸಂಪೂರ್ಣವಾಗಿ ಸ್ಥಳಾಂತರ ಮಾಡಲಿಲ್ಲ, ಯಶವಂತಪುರದಲ್ಲೂ ಮಾರಾಟ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರು. ಸರ್ಕಾರ ಮಾತು ತಪ್ಪಿದೆ. ಆದ್ದರಿಂದ ಬಾಡಿಗೆಯನ್ನು ಮನ್ನ ಮಾಡಲೇಬೇಕು. ಮಾತು ತಪ್ಪಿರುವುದು ವರ್ತಕರಲ್ಲ, ವರ್ತಕರು ಅಲ್ಲಿಯೇ ಇದ್ದಾರೆ. ಯಶವಂತಪುರ ಮತ್ತು ದಾಸನಪುರ ಮಾರುಕಟ್ಟೆ ಎರಡು ಕಡೆಯೂ dual ಮಾರಾಟ ಮಾಡಿದ್ದಕ್ಕೆ 2018-19ರಲ್ಲಿ ವರ್ತಕರಿಗೆ ನಷ್ಟವಾಗಿದೆ. ಆದ್ದರಿಂದ ಬಾಡಿಗೆಯನ್ನು ಮನ್ನ ಮಾಡಲೇಬೇಕೆಂದು ನಾನು ಆಗ್ರಹಿಸುತ್ತೇನೆ. ಇದರ ಬಗ್ಗೆ ಮಾನ್ಯ ಸಚಿವರು ಒಂದು ನಿಲುವನ್ನು ತೆಗೆದುಕೊಳ್ಳಬೇಕು. ದಾಸನಪುರ ಉಪಮಾರುಕಟ್ಟೆಯನ್ನು ನೀವು ದೇಶದಲ್ಲಿಯೇ ಮಾದರಿ ಮಾರುಕಟ್ಟೆಯನ್ನಾಗಿ ಮಾಡಬಹುದು. ಅದು 68 ಎಕರೆ ಪ್ರದೇಶದಲ್ಲಿ ನಿರ್ಮಾಣವಾಗಿದೆ. ಸರ್ಕಾರದ ಹಣ 1-2 ಕೋಟಿ ಅಲ್ಲ, ಸುಮಾರು 400 ಕೋಟಿಗೂ ಅಧಿಕವಾದಂತಹ ಹಣವದು. 80 ಎಕರೆ ಜಾಗ, 400 ಕೋಟಿ ಹಣವನ್ನು ಅಲ್ಲಿ ವಿನಿಯೋಗ ಮಾಡಲಾಗಿದೆ. ಆಮೇಲೆ ಅಲ್ಲಿ ರಾಷ್ಟ್ರೀಯ ಹೆದ್ದಾರಿ ಇದೆ. ಹಿರಿಯೂರು, ಚಳ್ಳಕೆರೆ, ಹಾಸನ, ಹಾವೇರಿ ಯಾವ ಯಾವ ಭಾಗದಿಂದ ಈರುಳ್ಳಿ, ಬೆಳ್ಳುಳ್ಳಿ, ಆಲೂಗೆಡ್ಡೆ, ಶುಂಠಿ ದಾಸ್ತಾನುಗಳು ಉತ್ತರ ಭಾರತದಿಂದ ಬರುವುದಕ್ಕೆ ಅದು ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿದೆ. ಜೊತೆಗೆ ತೆಗೆದುಕೊಳ್ಳುವಂತಹ ವರ್ತಕರು ಬೇರೆ ಕಡೆಗೆ ವಿತರಣೆ ಮಾಡುವುದಕ್ಕು ಕೂಡ ಸಗಟು ವ್ಯಾಪಾರದಾರರಿಗೆ ಬಹಳ ಸಲೀಸಾಗಿರುತ್ತದೆ. ಮಂತ್ರಿಗಳು ಬದ್ಧತೆಯನ್ನು ಪ್ರದರ್ಶನ ಮಾಡಬೇಕು. ನಿಗದಿತ ಸಮಯದ ಒಳಗಡೆ ಯಶವಂತಪುರ ಮಾರುಕಟ್ಟೆಯನ್ನು ದಾಸನಪುರಕ್ಕೆ ಶಿಫ್ಟ್ ಮಾಡುತ್ತೇವೆ, ನಮ್ಮ ಮಾತಿಗೆ ಗೌರವ ಕೊಟ್ಟು ಅಂಗಡಿಗಳನ್ನು ಸ್ಥಳಾಂತರ ಮಾಡಿ ನಷ್ಟಕ್ಕೊಳಗಾಗಿರುವಂತಹ ವರ್ತಕರಿಗೆ ಬಾಡಿಗೆಯನ್ನು ಮನ್ನ ಮಾಡುತ್ತೇವೆಂದು ಸ್ಪಷ್ಟವಾಗಿ ಮಂತ್ರಿಗಳು ಉತ್ತರ ಕೊಟ್ಟರೆ ಸಾಕು. ಅಲ್ಲಿಗೆ ನಮ್ಮ ಉದ್ದೇಶ ಈಡೇರಿದಂತಾಗುತ್ತದೆ, ಮಾನ್ಯ ಮಂತ್ರಿಗಳಿಗೆ ಚಪ್ಪಾಳೆಯನ್ನೂ ಹೊಡೆಯುತ್ತೇವೆ.

**ಶ್ರೀ ಎಸ್.ಟಿ. ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ದಾಸನಪುರದಲ್ಲಿ ಎಪಿಎಂಸಿ ಪ್ರಾರಂಭ ಆಗುವುದಕ್ಕಿಂತ ಮುಂಚೆ ಅಲ್ಲಿಗೆ ಸರಿಯಾದ ರಸ್ತೆ ವ್ಯವಸ್ಥೆ ಇರಲಿಲ್ಲ. ಈಗ ರಸ್ತೆಯನ್ನು

ಅಗಲೀಕರಣ ಮಾಡುವುದಕ್ಕೆ ಚಾಲನೆ ಮಾಡಿದ್ದೇವೆ. ವಾಹನಗಳು ಸುಲಲಿತವಾಗಿ ಎಪಿಎಂಸಿಯನ್ನು ತಲುಪುವುದಕ್ಕೆ ಬಹಳ ವ್ಯವಸ್ಥಿತವಾಗಿ ಆಗಿದೆ. ದಾಸನಪುರ ಎಪಿಎಂಸಿ ಗೆ ಏನೆಲ್ಲಾ ಸೌಲಭ್ಯಗಳನ್ನು ಕೊಡಬೇಕಾಗುತ್ತದೆ. ಏಕೆಂದರೆ ಈಗಲೂ ರಾತ್ರಿ 12 ಗಂಟೆ ಸಮಯದಲ್ಲಿ 400-500 ಗಾಡಿಗಳು ಬರುತ್ತವೆ. ಸೀಸನ್‌ನಲ್ಲಿ 1,000 ಲಾರಿಗಳು ಲೋಡಿಂಗ್‌ಗೆ ಬರುತ್ತವೆ. Unload ಆಗುವತನಕ ಏನೆಲ್ಲಾ ಸೌಲಭ್ಯಗಳು ಬೇಕು ಅದೆಲ್ಲವನ್ನೂ ಶೇ.100ರಷ್ಟು ಮಾಡಿದ್ದೇವೆ. ಇದರಲ್ಲಿ ಕೆಲವರ ಲಾಬಿ ಇರುತ್ತದೆ. ಯಶವಂತಪುರದಲ್ಲಿಯೇ ಇರಬೇಕು, ಅಲ್ಲಿಯೇ ವ್ಯಾಪಾರ ಮಾಡಬೇಕು, ಯಶವಂತಪುರ ಬಿಟ್ಟು ಹೋಗಬಾರದೆಂದು ಒಂದು ರೀತಿಯ ಮಾಫಿಯಾ ಆಗಿದೆ. ಅದಕ್ಕೆ ಇನ್ನೆರಡು ತಿಂಗಳುಗಳಲ್ಲಿ ಮಳಿಗೆಗಳ ಕಾಮಗಾರಿಗಳು ಕಂಪ್ಲೀಟ್ ಆಗುತ್ತವೆ. ಮಳಿಗೆಗಳು ಕಂಪ್ಲೀಟ್ ಆದಮೇಲೆ ಯಾರಿಗೆ ಅಂಗಡಿಗಳನ್ನು ಹಂಚಿಕೆ ಮಾಡಬೇಕು ಅವರಿಗೆ ಕಂಪ್ಲೀಟ್ ಮಾಡುತ್ತೇವೆ. ಸಂಪೂರ್ಣವಾಗಿ ಯಶವಂತಪುರದ ಅಂಗಡಿಗಳೆಲ್ಲವನ್ನೂ ಕೂಡ ದಾಸನಪುರಕ್ಕೆ ವರ್ಗಾವಣೆ ಮಾಡುತ್ತೇವೆ. ಎಪಿಎಂಸಿ ಯಲ್ಲಿ ಏನೆಲ್ಲಾ ಸೌಲಭ್ಯಗಳಿರಬೇಕು ಅದನ್ನು ಶೇ.100ರಷ್ಟು ದಾಸನಪುರದಲ್ಲಿಯೂ ಮಾಡಿದ್ದೇವೆ. ಬಾಡಿಗೆ ಮನ್ನ ಮಾಡುವುದಕ್ಕೆ ನಿಯಮಾವಳಿಗಳಲ್ಲಿ ಅವಕಾಶವಿಲ್ಲ. ಅದರಲ್ಲಿ ಕೆಲವೊಂದು ಬದಲಾವಣೆ ಮಾಡಬೇಕೆಂಬ ಬಗ್ಗೆ ಸಹಕಾರ ಇಲಾಖೆ ಚಿಂತನೆ ಮಾಡುತ್ತಿದೆ. ತದನಂತರ ಅವರ ಮನವಿಯನ್ನು ಸಹಕಾರ ಇಲಾಖೆಯ ಜೊತೆಯಲ್ಲಿ ಪ್ರಸ್ತಾಪ ಮಾಡುತ್ತೇವೆ.

**ಸಭಾಪತಿಯವರು:-** ಈಗ ಮಾನ್ಯ ಸದಸ್ಯರಾದ ಸೂರಜ್ ರೇವಣ್ಣನವರ ಪ್ರಶ್ನೆ. ಅವರು ಗೈರು ಹಾಜರಾಗಿದ್ದಾರೆ.

**ಚುಕ್ಕೆ ಪ್ರಶ್ನೆ ಸಂಖ್ಯೆ: 1884**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಉತ್ತರದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ಮಹಾನಗರಪಾಲಿಕೆಗಳಿಗೆ ವರ್ಗಾವಣೆ ಮಾಡುವ ಅಧಿಕಾರ ಸರ್ಕಾರಕ್ಕಿದೆ ಎಂದು ಹೇಳಿದ್ದಾರೆ, ಆದರೆ ಪ್ರಾಧಿಕಾರದಲ್ಲಿ C & R (Cadre and Recruitment) Rules ರಚನೆಯಾಗಿಲ್ಲ. ರಚನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಏತಕ್ಕೆ ಸರ್ಕಾರದ ಗಮನ ಸೆಳೆಯುತ್ತಿದ್ದೇನೆಂದರೆ, ಇಲ್ಲಿರುವಂತಹವರು ಒಂದು ಸಲ ನೇಮಕಾತಿ ಹೊಂದಿದರೆ ನಿವೃತ್ತಿಯಾಗುವವರೆಗೂ ಅಲ್ಲಿಯೇ ಇರುತ್ತಾರೆ. ಯಾರೇ ಕಮೀಷನರ್ ಬರಲಿ, ಮೇಯರ್ ಬರಲಿ ಏನೇ ಬಂದರೂ ಕೂಡ ಅವರೆಲ್ಲರನ್ನೂ ಆಟ ಆಡಿಸುವವರು ಇವರೇ.  ಹಾಗಾಗಿ ಬೇರೆ ಇಲಾಖೆಗಳ ಅಧಿಕಾರಿಗಳ, ಸಿಬ್ಬಂದಿಗಳ ತರಹ ಇವರನ್ನೂ ಕೂಡ ವರ್ಗಾವಣೆ ಮಾಡದಿದ್ದರೆ ಸ್ಥಳೀಯ ಆಡಳಿತ ಸಂಸ್ಥೆಗಳು ರೋಗಗ್ರಸ್ಥವಾಗುತ್ತವೆ. ಆ ಕಾರಣಕ್ಕಾಗಿ ಸಚಿವರು ಕೂಡಲೇ ಇದರ ಬಗ್ಗೆ ಕ್ರಮವನ್ನು ತೆಗೆದುಕೊಂಡು ಅವರೆಲ್ಲರನ್ನೂ ವರ್ಗಾಯಿಸಬೇಕು.  ದೀರ್ಘಕಾಲ ಯಾರು ಐದು ವರ್ಷ ಮೇಲ್ಪಟ್ಟು ಅಲ್ಲಿರುತ್ತಾರೆ ಅಂತಹವರೆಲ್ಲರನ್ನೂ ವರ್ಗಾಯಿಸಬೇಕೆಂದು ಒತ್ತಾಯ ಮಾಡುವ ಸಲುವಾಗಿ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

**ಶ್ರೀ ಬಿ.ಎ. ಬಸವರಾಜ:-** ಮಾನ್ಯ ಸಭಾಪತಿಯವರೇ, ಮಾನ್ಯ ಹಿರಿಯ ಸದಸ್ಯರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ ಅದನ್ನು ಒಪ್ಪಿಕೊಳ್ಳುತ್ತೇವೆ.  ಮಾನ್ಯ ಸದಸ್ಯರು ಏನು C & R Rules ಗೆ ಬದಲಾವಣೆ ತರಬೇಕೆಂದು ಹೇಳಿದ್ದಾರೆ ಇದಕ್ಕೆ ಒಂದು ವಿಶೇಷವಾದಂತಹ ಸಮಿತಿಯನ್ನು ರಚಿಸಿ ಆರು ತಿಂಗಳೊಳಗಾಗಿ ಸರ್ಕಾರ ಇದನ್ನು ಮಾಡುತ್ತದೆ. ಖಂಡಿತವಾಗಿಯೂ C & R Rules ಅನ್ನು ಬದಲಾವಣೆ ಮಾಡಬೇಕು, ಬಹಳ ವರ್ಷಗಳಿಂದ ಯಾರು ನೇಮಕಾತಿ ಹೊಂದಿದಾಗಿನಿಂದ ಹಿಡಿದು ನಿವೃತ್ತಿಯಾಗುವವರೆಗೂ ಅಲ್ಲಿಯೇ ಇರುತ್ತಾರೆ; ಆ ರೀತಿಯ ಪರಿಸ್ಥಿತಿ ಇದ್ದರೆ, ಅದನ್ನು ಬದಲಾವಣೆ ಮಾಡಬೇಕು. C & R Rules ಮಾಡಿ ಒಂದು ಸಮಿತಿಯನ್ನು ರಚನೆ ಮಾಡಿ ಸಮಿತಿಯ ವರದಿಯ

ಆಧಾರದನ್ವಯ ಆರು ತಿಂಗಳೊಳಗಾಗಿ ಸರ್ಕಾರದಿಂದ ಅನುಮೋದನೆ ಪಡೆದುಕೊಂಡು ಆದೇಶ ಮಾಡುವ ಕೆಲಸ ಮಾಡುತ್ತೇವೆ.

**ಶ್ರೀಮತಿ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಇದನ್ನು ಸಾಧ್ಯವಾದಷ್ಟು ಶೀಘ್ರವಾಗಿ ಮಾಡಲಿ ಎಂದು ಮಾನ್ಯ ಸಚಿವರನ್ನು ಒತ್ತಾಯ ಮಾಡುತ್ತೇನೆ.

(ಮುಂದು)

**"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು**

(334) 15-03-2022 KH/KS 12-00 **(ಸಭಾಪತಿಯವರ ಉಪಸ್ಥಿತಿ)**

**ಪ್ರಶ್ನೆ ಸಂಖ್ಯೆ.1886**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಇದರಲ್ಲಿ ನನಗೆ ಒಂದು ಸ್ಪಷ್ಟೀಕರಣ ಬೇಕಾಗಿದೆ. "ಸೋಮವಾರಪೇಟೆ ಮತ್ತು ವಿರಾಜಪೇಟೆ ಪಟ್ಟಣ ಪಂಚಾಯತಿಗಳಲ್ಲಿ ಯುಜಿಡಿ ಮಂಡಳವತಿಯಿಂದ ಕೈಗೊಳ್ಳಲಾಗಿರುವುದಿಲ್ಲ. ಆದರೆ, ಪ್ರಸ್ತುತ ಸೋಮವಾರಪೇಟೆ ಮತ್ತು ವಿರಾಜಪೇಟೆ ಪಟ್ಟಣದಲ್ಲಿ ಉತ್ಪತ್ತಿಯಾಗುವ ಮಲಿನ ನೀರನ್ನು FSSM ಮಾದರಿಯಲ್ಲಿ ಶುದ್ಧೀಕರಿಸಲು ಡಿ.ಪಿ.ಆರ್ ಅನ್ನು ತಯಾರಿಸಲು ಸೋಮವಾರಪೇಟೆ ಮತ್ತು ವಿರಾಜಪೇಟೆ ಪಟ್ಟಣ ಪಂಚಾಯಿತಿಗೆ ಪೌರಾಡಳಿತ ನಿರ್ದೇಶನಾಲಯದಿಂದ ನಿರ್ದೇಶನ ನೀಡಲಾಗಿರುತ್ತದೆ" ಎಂದು ಹೇಳಿದ್ದಾರೆ. ಇದು ಏನೆಂದು ನನಗೆ ಅರ್ಥವಾಗಿಲ್ಲ. ಇದಕ್ಕೆ ಮಾನ್ಯ ಸಚಿವರು ವಿವರಣೆ ಕೊಡಬೇಕು. FSSM ಮಾದರಿ ಏನೆಂಬುದು ನನಗೆ ಗೊತ್ತಿಲ್ಲ. ಇದರ ಜೊತೆಗೆ ಮಡಿಕೇರಿ ಮತ್ತು ಕುಶಾಲನಗರ ಪಟ್ಟಣ ಪಂಚಾಯತಿಯಲ್ಲಿ ಜಮೀನನ್ನು ಹಸ್ತಾಂತರ ಮಾಡಿಲ್ಲ ಎಂದು ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಇನ್ನೆರಡು ತಿಂಗಳಿನಲ್ಲಿ ಕೊಡಗು ಜಿಲ್ಲೆಯಲ್ಲಿ ಮಳೆಗಾಲ ಪ್ರಾರಂಭವಾಗುತ್ತದೆ. ಹಾಗಾಗಿ, ಇನ್ನೆರಡು ತಿಂಗಳಿನಲ್ಲಿ ಆದಷ್ಟು ಶೀಘ್ರವಾಗಿ ಕೆಲಸ ಪೂರ್ಣಗೊಳಿಸಿದರೆ ಒಳ್ಳೆಯದು. ಇಲ್ಲದಿದ್ದರೆ, ಮಳೆಗಾಲ ಮುಗಿದ ಮೇಲೆ ಈ ಕೆಲಸವನ್ನು ಪ್ರಾರಂಭ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸಚಿವರೇ, FSSM ಮಾದರಿ ಎಂದರೆ ಏನೆಂಬುದನ್ನು ಹೇಳಿ.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ನಾನು ಮಂತ್ರಿಯಾದ ಮೇಲೆ ಕೊಡಗು ಜಿಲ್ಲೆಗೆ ಎರಡು ಬಾರಿ ಭೇಟಿ ಕೊಟ್ಟಿದ್ದೇನೆ. ಮಾನ್ಯ ಸದಸ್ಯರ ಜೊತೆಗೂ ಸಂವೇದನೆ ಕೂಡ ಮಾಡಿದ್ದೇನೆ. ಮಡಿಕೇರಿ ಜಿಲ್ಲೆಯಲ್ಲಿ 49.56 ಕೋಟಿ ರೂಪಾಯಿಗಳ ಯುಜಿಡಿ ಕಾಮಗಾರಿ ಚಾಲನೆಯಲ್ಲಿದೆ. ಅಲ್ಲಿನ ಗೌರವಾನ್ವಿತ ಶಾಸಕರು ಮತ್ತು ಇಂದಿನ ವಿಧಾನ ಪರಿಷತ್ತಿನ ಸದಸ್ಯರ ಜೊತೆಗೂ ಹೋಗಿ ಸ್ಥಳ ಪರಿವೀಕ್ಷಣೆ ಮಾಡಿದ್ದೇನೆ. ಕೊಡಗು ಜಿಲ್ಲೆಯಲ್ಲಿ ಬೆಟ್ಟ-ಗುಡ್ಡಗಳು ಇರುವಂತಹ

ಪ್ರದೇಶವಿದೆ. ಅಲ್ಲಿ ನಮಗೆ ಭೂಮಿ ಲಭ್ಯತೆ ಇಲ್ಲದೆ ಸ್ವಲ್ಪ ತೊಂದರೆಯಾಗಿದೆ ಎಂದು ನನ್ನ ಗಮನಕ್ಕೆ ಬಂದಿದೆ. ಇದನ್ನು ಸರಿಪಡಿಸುವಂತಹ ಕೆಲಸವನ್ನು ಕೂಡ ಮಾಡುತ್ತಿದ್ದಾರೆ. ಈಗಾಗಲೇ ಮಡಿಕೇರಿ ಜಿಲ್ಲೆಯಲ್ಲಿ 27.34 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಅದೇ ರೀತಿ ಕುಶಾಲನಗರ ಪಟ್ಟಣದಲ್ಲಿ ಸುಮಾರು 71.60 ಕೋಟಿ ರೂಪಾಯಿಗಳನ್ನು ಯುಜಿಡಿ ಕಾಮಗಾರಿ ಕೈಗೆತ್ತಿಕೊಂಡಿದ್ದು, ಈಗ ಮುಗಿಯುವ ಹಂತಕ್ಕೆ ಬಂದಿದೆ. ಇದಕ್ಕೆ ಸುಮಾರು 44.85 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇನ್ನು ಎರಡು ಪಟ್ಟಣಗಳಲ್ಲಿ ಯುಜಿಡಿ ಕಾಮಗಾರಿಗಳನ್ನು ಮಾಡಬೇಕೆನ್ನುವ ಪ್ರಸ್ತಾವನೆಯನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಇದನ್ನು ಪರಿಗಣನೆಗೆ ತೆಗೆದುಕೊಂಡು, ಎಸ್ಟಿಮೆಂಟ್ ಮತ್ತು ಡಿಪಿಆರ್ ಗಳನ್ನು ತಯಾರು ಮಾಡಿ, ಇದನ್ನು ಬೇಗ ಮಾಡುವಂತಹ ಕೆಲಸವನ್ನು ಮಾಡುತ್ತೇವೆ. ಈಗ ತಾತ್ಕಾಲಿಕವಾಗಿ ಸೋಮವಾರಪೇಟೆ ಮತ್ತು ವಿರಾಜಪೇಟೆ ಪಟ್ಟಣದಲ್ಲಿ ಉತ್ಪತ್ತಿಯಾಗುವ ಮಲಿನ ನೀರನ್ನು FSSM ಮಾದರಿಯಲ್ಲಿ ಶುದ್ಧೀಕರಿಸಲು ಡಿಪಿಆರ್ ಅನ್ನು ತಯಾರು ಮಾಡುತ್ತಿದ್ದೇವೆ. ಈ ಎರಡು ಸಮಸ್ಯೆಗಳಲ್ಲಿ ಈಗಾಗಲೇ ನಿರ್ದೇಶನ ನೀಡಲಾಗಿದೆ. ಈ ಎರಡು ಕಾಮಗಾರಿಗಳನ್ನು ಆದಷ್ಟು ಬೇಗ ಕೈಗೆತ್ತಿಕೊಂಡು ಅದನ್ನು ಕೂಡ ಮಾಡುವಂತಹ ಕೆಲಸವನ್ನು ಖಂಡಿತವಾಗಿಯೂ ಮಾಡುತ್ತೇವೆ. ಮಾನ್ಯ ಸದಸ್ಯರ ಕಾಳಜಿ ಏನೆಂಬುದು ಗೊತ್ತಾಗಿದೆ. ಕಾಮಗಾರಿ ಏಕೆ ಎರಡು ಕಡೆ ಆಗಿದೆ, ಇನ್ನೆರಡು ಕಡೆ ಏಕೆ ಆಗಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಖಂಡಿತವಾಗಿಯೂ ಆ ಕೆಲಸವನ್ನು ಮಾಡುತ್ತೇನೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲಿಚ್ಛಿಸುತ್ತೇನೆ.

**ಶ್ರೀ ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಯವರೇ, ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಹೇಳುವುದಿಷ್ಟೆ. ದಯವಿಟ್ಟು ಮಳೆಗಾಲದಲ್ಲಿ ನಮ್ಮ ಕಡೆ ಕೆಲಸ ಪ್ರಾರಂಭ ಮಾಡಬೇಡಿ. ಅಲ್ಲಿ 4 ತಿಂಗಳುಗಳ ಕಾಲ ಮಳೆ ಬರುತ್ತದೆ. ಮಳೆ ಬೀಳುತ್ತಲೆ ಇರುತ್ತದೆ. ಇದ್ದರಿಂದ ಜನರಿಗೂ ಕಿರಿಕಿರಿಯಾಗುತ್ತದೆ. ನಮಗೂ ಕೂಡ ಓಡಾಡುವುದಕ್ಕೆ ಆಗುವುದಿಲ್ಲ. ತಾವು FSSM ಮಾದರಿಯ ಬಗ್ಗೆ ಹೇಳಿದ್ದು ನನಗೆ ಏನು ಎಂದು ಅರ್ಥವಾಗಲಿಲ್ಲ.

**ಶ್ರೀ ಬಿ.ಎ.ಬಸವರಾಜ:–** ಮಾನ್ಯ ಸಭಾಪತಿಯವರೇ, ನಾವು ಆ ಪಟ್ಟಣ ವ್ಯಾಪ್ತಿಯಲ್ಲಿ ಸೆಪ್ಟಿ ಟ್ಯಾಂಕ್ ಅನ್ನು ಮಾಡಿ, Faecal Sludge & Septage Management (FSSM) ಮಾದರಿಯಲ್ಲಿ ಅಳವಡಿಸಿಕೊಂಡು ಅಲ್ಲಿಂದ ಅದನ್ನು ಗಾಡಿ ಮುಖೇನ ಆ ಟ್ಯಾಂಕ್ ತುಂಬಿದಾಗ ಪ್ರತಿನಿತ್ಯ ಆ ನೀರನ್ನು ತೆಗೆದುಕೊಂಡು ಫಿಲ್ಟರ್‌ಗೆ ಹಾಕಿ, ಆ ನೀರನ್ನು ಫಿಲ್ಟರ್ ಮಾಡುವಂತಹ ಸಿಸ್ಟಂ ಆಗಿದೆ. ಮಾನ್ಯ ಸದಸ್ಯರು FSSM ಎಂದು ಏನು ಹೇಳಿದ್ದಾರೆ. ಇದು ಸಣ್ಣ ಸಣ್ಣ ಘಟಕಗಳಾಗಿದ್ದು, ಈ ಘಟಕಗಳಲ್ಲಿ ಏನು ಮಾಡುತ್ತೇವೆಂದು ಮಲಿನವಾದಂತಹ ನೀರನ್ನು ತೆಗೆದುಕೊಂಡು ಹೋಗಿ . . .

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಆ ರೀತಿ ಏನು ಮಾಡುವುದಿಲ್ಲ. ಗುಡ್ಡಗಾಡು ಪ್ರದೇಶ, ಮಲೆನಾಡು ಪ್ರದೇಶ . . .

**ಶ್ರೀ ಬಿ.ಎ.ಬಸವರಾಜ:–** ಮಾನ್ಯ ಸಭಾಪತಿಯವರೇ, ಅಲ್ಲಿ ಸ್ಥಳದ ಕೊರತೆಯಿರುವುದರಿಂದ, ಇದನ್ನು ಅಳವಡಿಸಿಕೊಂಡಿದ್ದೇವೆ. ಹಾಗಾಗಿ ಮತ್ತೊಂದು ಬಾರಿ ಎರಡು ಪಟ್ಟಣಕ್ಕೆ ಭೇಟಿ ಕೊಡುತ್ತೇನೆ. ಅಲ್ಲಿನ ವಸ್ತುಸ್ಥಿತಿಯನ್ನು ಅರಿತುಕೊಂಡು ಮಾಡುತ್ತೇವೆ. ಏಕೆಂದರೆ, ಮಳೆಗಾಲದಲ್ಲಿ ವಿಶೇಷವಾಗಿ ಕೊಡಗು ಜಿಲ್ಲೆಗೆ ಅವಶ್ಯಕತೆ ಇದೆ. ಹಾಗಾಗಿ, ಎರಡು ಯೋಜನೆಗಳನ್ನು ನಾನು ಬಂದ ಮೇಲೆ ಕೈಗೆತ್ತಿಕೊಂಡಿದ್ದೇನೆ. ಮಾನ್ಯ ಸದಸ್ಯರು ಕೂಡ ನನ್ನ ಸಭೆಯಲ್ಲಿ ಇದ್ದಾರೆ. ಹಾಗಾಗಿ, ಎರಡು ಯೋಜನೆಗಳು ಯಾವ ರೀತಿ ಇದೆ. ಏನೇನು ಇದೆ ಎಂಬುದನ್ನು ಪರಿಶೀಲನೆ ಮಾಡಿ, ಖಂಡಿತವಾಗಿಯೂ ಅಗತ್ಯ ಕ್ರಮ ಕೈಗೊಳ್ಳುತ್ತೇನೆ.

## ಪ್ರಶ್ನೆ ಸಂಖ್ಯೆ.1874

## (ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಕುಶಾಲಪ್ಪ ಎಂ.ಪಿ (ಸುಜಾ):–** ಮಾನ್ಯ ಸಭಾಪತಿಯವರೇ, ನನ್ನ ಉಪ ಪ್ರಶ್ನೆಯೇನೆಂದರೆ, ಮಲೆನಾಡು ಭಾಗದ ಕೊಡಗು ಮತ್ತು ಚಿಕ್ಕಮಂಗಳೂರು ಜಿಲ್ಲೆಗಳಲ್ಲಿ ಕೃಷಿ ಹಾಗೂ ತೋಟಗಾರಿಕೆಗೆ ಅವಶ್ಯಕ ಇರುವ Cultivator, tiller ಹಾಗೂ ಇನ್ನಿತರ ಯಂತ್ರೋಪಕರಣಗಳನ್ನು ಬೇರೆ ಬೇರೆ ಭಾಗಗಳಿಂದ ತರುತ್ತಿದ್ದು, ಸದರಿ ಯಂತ್ರೋಪಕರಣಗಳಿಗೆ ಸಂಬಂಧಿಸಿದಂತೆ, ಒಂದು ಸಣ್ಣ ಕೈಗಾರಿಕೆಯನ್ನು ಕೊಡಗು ಜಿಲ್ಲೆಯಲ್ಲಿ ಪ್ರಾರಂಭಿಸಲು ಅವಕಾಶ ಕಲ್ಪಿಸಿಕೊಟ್ಟಲ್ಲಿ ಆ ಭಾಗದ ಮತ್ತು ಮಲೆನಾಡು ಪ್ರದೇಶದ ಯುವಕರಿಗೆ ಮತ್ತು ವಿಶೇಷವಾಗಿ ಬಿ.ಟೆಕ್., ಮತ್ತು ಎಂ.ಟೆಕ್., ವಿದ್ಯಾಭ್ಯಾಸ ಮುಗಿಸಿದ ಲಕ್ಷಾಂತರ ಯುವಕರಿಗೆ ಅನುಕೂಲವಾಗುತ್ತದೆ. ಮಲೆನಾಡು ಭಾಗದ ಕೃಷಿಕರಿಗೆ ವಿಶೇಷವಾಗಿ ತೋಟಗಾರಿಕೆ ಬೆಳೆಗಳನ್ನು ಬೆಳೆಯುವ ರೈತರಿಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಆದಕಾರಣ, ಸರ್ಕಾರವು ಕೊಡಗು ಜಿಲ್ಲೆಯಲ್ಲಿ ಕೃಷಿಗೆ ಸಂಬಂಧಿಸಿದ ಸಣ್ಣ ಕೈಗಾರಿಕಾ ಘಟಕಗಳನ್ನು ಸ್ಥಾಪಿಸುವ ಕುರಿತು ಮಾನ್ಯ ಸಚಿವರು ತಮ್ಮ ನಿಲುವನ್ನು ಸ್ಪಷ್ಟಪಡಿಸಬೇಕೆಂದು ಕೋರುತ್ತೇನೆ.

**ಶ್ರೀ ಎನ್.ನಾಗರಾಜು (ಎಂ.ಟಿ.ಬಿ.):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಯೇ ಬೇರೆ. ಇಲ್ಲಿ ಅವರು ಕೇಳುತ್ತಿರುವಂತಹ ಉತ್ತರವೇ ಬೇರೆ. "ಕೊಡಗು ಜಿಲ್ಲೆಯ ಮಡಿಕೇರಿ ಮತ್ತು ವಿರಾಜಪೇಟೆ ಮತಕ್ಷೇತ್ರಕ್ಕೆ ಸಣ್ಣ ಕೈಗಾರಿಕೆಗೆ ಒಳಪಟ್ಟಿರುವ ಕಾರ್ಖಾನೆಗಳನ್ನು ಪ್ರಾರಂಭಿಸಲು ಎಷ್ಟು ಅರ್ಜಿಗಳು ಬಂದಿವೆ" ಎಂದು ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ್ದು, ಇದು ಅವರ ಮೂಲ ಪ್ರಶ್ನೆ. ಇದಕ್ಕೆ ನಾವು ಉತ್ತರವನ್ನು ಕೊಟ್ಟಿದ್ದೇವೆ. ಈಗಾಗಲೇ ಮಡಿಕೇರಿ ಜಿಲ್ಲೆಯಿಂದ 3 ಅರ್ಜಿಗಳು ಸ್ವೀಕಾರವಾಗಿದೆ. ವಿರಾಜಪೇಟೆಯಿಂದ 2 ಅರ್ಜಿಗಳು ಸ್ವೀಕಾರವಾಗಿದೆ. ಇದರ ಜೊತೆಗೆ "ಸಣ್ಣ ಕೈಗಾರಿಕೆ ಪ್ರಾರಂಭಿಸಲು ಸರ್ಕಾರವು ಯಾವ ಯಾವ ವರ್ಗದವರಿಗೆ ಅನುಕೂಲವಾಗುವಂತೆ ಯೋಜನೆ/ಸೌಲಭ್ಯಗಳನ್ನು ನೀಡುತ್ತಿದೆ? (ವಿವರ ನೀಡುವುದು) ಎಂದು ಮಾನ್ಯ ಸದಸ್ಯರು ಉಪ ಪ್ರಶ್ನೆಯನ್ನು ಕೇಳಿದ್ದಾರೆ. ಅನುಬಂಧ–2 ರಲ್ಲಿ ಸಂಪೂರ್ಣವಾದ ಉತ್ತರವನ್ನು ಕೊಟ್ಟಿದ್ದೇವೆ. ಯಾವ ಯಾವ ಯೋಜನೆಯಡಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ

ಎಲ್ಲಾ ಜಾತಿಯವರಿಗೂ ಕೂಡ; ನಿಮ್ಮ ವ್ಯಾಪ್ತಿಯಲ್ಲಿ ಏಕಗವಾಕ್ಷಿ ಸಮಿತಿಯ ದಿನಾಂಕ:03-09-2021 ರಲ್ಲಿ ಸ್ವೀಕೃತವಾದ ಸಣ್ಣ ಕೈಗಾರಿಕೆಗಳನ್ನು ಪ್ರಾರಂಭಿಸಲು ಅನುಬಂಧ-1 ರಲ್ಲಿ ತಮಗೆ ಉತ್ತರವನ್ನು ಒದಗಿಸಿದ್ದೇವೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದವರಿಗೆ ಕೈಗಾರಿಕಾ ನಿವೇಶನ/ಪ್ಲಾಟ್/ಶೆಡ್‌ಗಳನ್ನು ಶೇಕಡಾ 75 ರಷ್ಟು ರಿಯಾಯಿತಿ ದರವನ್ನು ಸರ್ಕಾರದಿಂದ ಕೊಟ್ಟಿದ್ದೇವೆ. ಗುಡಿ ಮತ್ತು ಸೂಕ್ಷ್ಮ ಕೈಗಾರಿಕೆ ಕಟ್ಟಡಗಳು/ಕುಶಲಕರ್ಮಿಗಳಿಗೆ ಬ್ಯಾಂಕಿನ ಸಾಲದ ಮೇಲೆ ಶೇಕಡಾ 60 ರಷ್ಟು ಸಹಾಯಧನ ಮತ್ತು ಸಣ್ಣ/ಅತಿ ಸಣ್ಣ ಘಟಕದ ಕೈಗಾರಿಕೆಗಳಿಗೆ 5 ಕೋಟಿ ರೂಪಾಯಿಗಳಷ್ಟು ಯೋಜನೆ ಮತ್ತು ಗರಿಷ್ಠ ರೂ.75.00 ಲಕ್ಷಗಳವರೆಗೆ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ನೀಡಲಾಗಿದೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆಗಳನ್ನು ಪ್ರಾರಂಭಿಸಲು ಅತಿ ಸಣ್ಣ ಕೈಗಾರಿಕಾ ಘಟಕಗಳಿಗೆ ಮೊದಲ 5 ವರ್ಗಗಳ ಅವಧಿಗೆ ಪ್ರತಿ ಯುನಿಟ್‌ಗೆ 2 ರೂಪಾಯಿಗಳಷ್ಟು ವಿದ್ಯುಚ್ಛಕ್ತಿ ಸಹಾಯಧನ ನೀಡಲಾಗಿದೆ.

**ಶ್ರೀ ಕುಶಾಲಪ್ಪ ಎಂ.ಪಿ (ಸುಜಾ):-** ಮಾನ್ಯ ಸಭಾಪತಿಯವರೇ, ಧನ್ಯವಾದಗಳು.

**ಪ್ರಶ್ನೆ ಸಂಖ್ಯೆ: 1837**

**ಸಭಾಪತಿಯವರು:-** ಮಾನ್ಯ ಹೆಚ್.ಎಂ.ರಮೇಶ್‌ಗೌಡರವರೇ, ತಾವು ಕೇಳಿರುವಂತಹ ಪ್ರಶ್ನೆಗೆ ಮಾನ್ಯ ಸಚಿವರಾದ ಬಿ.ಎ.ಬಸವರಾಜುರವರು 2 ವಾರಗಳ ಕಾಲ ಸಮಯವನ್ನು ಕೇಳಿದ್ದಾರೆ. ಮುಂದಿನ ವಾರ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕು.

**ಶ್ರೀ ಬಿ.ಎ.ಬಸವರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಹೆಚ್.ಎಂ.ರಮೇಶ್‌ಗೌಡರವರು ಇಡೀ ರಾಜ್ಯದಲ್ಲಿ ರಾಜ ಕಾಲುವೆಗಳು ಎಷ್ಟೆಷ್ಟು ಇವೆ? ಎಷ್ಟು ಖರ್ಚಾಗಿದೆ ಎನ್ನುವ ಬಗ್ಗೆ ಮಾಹಿತಿಯನ್ನು ಕೇಳಿದ್ದಾರೆ. ಹಾಗಾಗಿ, ನಾನು ಮಾಹಿತಿಯನ್ನು ತರಿಸಬೇಕಾಗುತ್ತದೆ.

**ಶ್ರೀ ಹೆಚ್.ಎಂ.ರಮೇಶ್‌ಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇಡೀ ರಾಜ್ಯದಲ್ಲಿರುವಂತಹ ರಾಜಕಾಲುವೆಗಳ ಬಗ್ಗೆ ಮಾಹಿತಿ ಬೇಡ. ತಮ್ಮ ಮನೆ ಹತ್ತಿರ ಇರುವಂತಹ ರಾಜ ಕಾಲುವೆ ಬಗ್ಗೆ ಮಾಹಿತಿ ಕೊಟ್ಟರೆ ಸಾಕು.

**ಸಭಾಪತಿಯವರು:-** ಮಾನ್ಯ ಸಚಿವರೇ, ದಯಮಾಡಿ ಕುಳಿತುಕೊಳ್ಳಿ.

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಪ್ರಶ್ನೆ ಸಂಖ್ಯೆ.1858**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ. ಹರೀಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ರಾಜ್ಯದಲ್ಲಿ ಸುಮಾರು 60 ಸಾರ್ವಜನಿಕ ಉದ್ದಿಮೆಗಳ ಪೈಕಿ 34 ಸಾರ್ವಜನಿಕ ಉದ್ದಿಮೆಗಳು ಲಾಭದಲ್ಲಿದೆ. 21 ಸಾರ್ವಜನಿಕ ಉದ್ದಿಮೆಗಳು ನಷ್ಟದಲ್ಲಿದೆ. 5 ಸಾರ್ವಜನಿಕ ಉದ್ದಿಮೆಗಳು ಸೇವಾ ವಲಯದಲ್ಲಿದೆ ಎನ್ನುವಂತಹ ಉತ್ತರವನ್ನು ಕೊಟ್ಟಿದ್ದಾರೆ. ಬಹುಶಃ ಮಾನ್ಯ ಸಚಿವರ ಹತ್ತಿರ ವಿನಂತಿ ಮಾಡುವುದೇನೆಂದರೆ, ಬಹುಶಃ ಕೆಲವು ಸಚಿವಾಲಯದಲ್ಲಿ 3-4 ನಿಗಮ ಮಂಡಳಿಗಳು ಕಾರ್ಯನಿರ್ವಹಿಸುತ್ತಿವೆ. ಎಲ್ಲಾ ಕಡೆ ಕೂಡ ಸಿಬ್ಬಂದಿ ಕೊರತೆ ಇದೆ.

(ಮುಂದು)

(335) ಎಸ್‌ಪಿಆರ್/ಜಿಆರ್/12:10/15/03/2022

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಹರೀಶ್ ಕುಮಾರ್(ಮುಂದು):-**

ಎಲ್ಲಾ ಕಡೆಗಳಲ್ಲಿ ಸಿಬ್ಬಂದಿಗಳ ಕೊರತೆ ಇದೆ; ಅನೇಕ ಮಂಡಳಿಗಳು ನಷ್ಟದಲ್ಲಿವೆ. ನಾನು ಉದಾಹರಣೆಯೊಂದನ್ನು ಉಲ್ಲೇಖಿಸಬಯಸುತ್ತೇನೆ. ಅರಣ್ಯ ಇಲಾಖೆಯಲ್ಲಿ ಮೂರು, ಕೃಷಿ ಇಲಾಖೆಯಲ್ಲಿ ಎರಡು ಹಾಗೂ ಸಾರಿಗೆ ಇಲಾಖೆಯಲ್ಲಿ ನಾಲ್ಕೈದು ಮಂಡಳಿಗಳಿವೆ. ಒಂದೇ ಸಚಿವಾಲಯದಡಿ ಬರುವ ಹಲವಾರು ನಿಗಮ ಮಂಡಳಿಗಳನ್ನು ಒಂದೇ ನಿಗಮ ಮಂಡಳಿಯನ್ನಾಗಿ ಮಾಡಿದಾಗ, ಅಲ್ಲಿನ ಸಿಬ್ಬಂದಿ ವರ್ಗದವರ ಸೇವೆಗಳನ್ನು ಬಳಸಿಕೊಂಡು ನಷ್ಟದಲ್ಲಿರುವ ನಿಗಮ ಮಂಡಳಿಗಳನ್ನು ಲಾಭದಾಯಕವಾಗಿ ಮಾಡಬಹುದು. ಇದರಿಂದ ಸರ್ಕಾರದ ಖರ್ಚೂ ಸಹ ಕಡಿಮೆಯಾಗುತ್ತದೆ. ಸಿಬ್ಬಂದಿಗಳ ಕೊರತೆ ಇರುವ ಸಂದರ್ಭದಲ್ಲಿ ನಿಗಮಗಳಲ್ಲಿನ ಕೆಲಸಗಳು ಆಗದೇ, ನಿಮಗಕ್ಕೆ ನಷ್ಟವುಂಟಾಗುತ್ತದೆ. ಹೀಗೆ ಒಂದೇ ನಿಗಮ ಮಂಡಳಿಯನ್ನು ಮಾಡಿದಾಗ ಈಗ ಆಗುತ್ತಿರುವ ನಷ್ಟವನ್ನು ಕಡಿಮೆ ಮಾಡಲು ಅವಕಾಶವಿದೆ. ಕೆಲವು ನಿಗಮ ಮಂಡಳಿಗಳು ಮುಚ್ಚಿಹೋಗುವ ಪರಿಸ್ಥಿತಿಯಲ್ಲಿಯೂ ಸಹ ಇವೆ. ಅನೇಕ ನಿಗಮ ಮಂಡಳಿಗಳಲ್ಲಿ ಅಲ್ಲಿನ ಸಿಬ್ಬಂದಿಗಳಿಗೆ ವೇತನ ನೀಡದೇ ಇರುವ ವ್ಯವಸ್ಥೆಯೂ ಸಹ ಇದೆ. ಇದರಿಂದಾಗಿ ಸರ್ಕಾರಕ್ಕೆ ಬೊಕ್ಕಸಕ್ಕೆ ನಷ್ಟವುಂಟು ಮಾಡುವ ಬದಲು, ಕೆಲವು ನಿಗಮ ಮಂಡಳಿಗಳನ್ನು ಒಟ್ಟುಗೂಡಿಸಬೇಕು.

ಒಂದೇ ಸಚಿವಾಲಯದಡಿ ಬರುವ ಎಲ್ಲಾ ನಿಗಮ ಮಂಡಳಿಗಳನ್ನು ಒಂದೇ ನಿಗಮ ಮಂಡಳಿಯನ್ನಾಗಿ ಮಾಡಿದ್ದಲ್ಲಿ ಸರ್ಕಾರಕ್ಕಾಗುವ ನಷ್ಟವನ್ನು ಉಳಿಸಬಹುದು ಎಂದು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

**ಶ್ರೀ ಎನ್.ನಾಗರಾಜು(ಎಂ.ಟಿ.ಬಿ.):–** ಮಾನ್ಯ ಸಭಾಪತಿಯವರೇ, ಸದಸ್ಯರು ಕೋರಿರುವ ಪ್ರಶ್ನೆಗೆ ವಿವರವಾದ ಉತ್ತರವನ್ನು ಈಗಾಗಲೇ ನೀಡಲಾಗಿದೆ. ರಾಜ್ಯದಲ್ಲಿ ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ವ್ಯಾಪ್ತಿಯಲ್ಲಿ ಪ್ರಸ್ತುತ ಒಟ್ಟು 60 ಸಾರ್ವಜನಿಕ ವಲಯದ ಉದ್ದಿಮೆಗಳು ನಿಗಮ / ಮಂಡಳಿಗಳು ಕಾರ್ಯನಿರ್ವಹಿಸುತ್ತಿವೆ. ಇದರ ವಿವರಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಲಾಗಿದೆ. ನಿಗಮ ಮಂಡಳಿಗಳಲ್ಲಿ ಲಾಭ, ನಷ್ಟ ಮತ್ತು ಸೇವಾ ವಲಯದಲ್ಲಿರುವ ನಿಗಮ ಮಂಡಳಿಗಳ ವಿವರಗಳನ್ನು ಅನುಬಂಧ–2 ರಲ್ಲಿ ನೀಡಲಾಗಿದೆ.

ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ಹಾಗೂ ಕಾವೇರಿ ಹ್ಯಾಂಡ್‌ಲೂಮ್ಸ್ ಈ ಮೂರು ನಿಗಮಗಳನ್ನು ವಿಲೀನಗೊಳಿಸಲು ನಮಗೆ ಈಗಾಗಲೇ ಪ್ರಸ್ತಾವನೆಯು ಸ್ವೀಕೃತವಾಗಿದೆ. ಜವಳಿ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ದಿನಾಂಕ 07/01/2022 ರಂದು ಸಮಿತಿ ರಚಿಸಲಾಗಿದೆ. ಸದರಿ ಸಮಿತಿಯು ನೀಡುವ ವರದಿಯ ಆಧಾರದ ಮೇರೆಗೆ, ನಿಯಮಾನುಸಾರ ಮುಂದಿನ ಕ್ರಮ ಜರುಗಿಸಲಾಗುವುದು. ಮೂರು ನಿಗಮಗಳನ್ನು ಒಂದು ನಿಗಮವನ್ನಾಗಿ ಮಾಡುವ ವಿಚಾರದಲ್ಲಿ ಈ ವಿಲೀನ ಕ್ರಮವನ್ನು ನಾವು ಮೊದಲು ಮಾಡುತ್ತೇನೆ. ಇದರಿಂದ ಬರುವ ಫಲಿತಾಂಶವನ್ನಾಧರಿಸಿ, ಮುಂದಿನ ದಿನಗಳಲ್ಲಿ ಇದೇ ರೀತಿಯ ವಿಲೀನ ಕ್ರಮಗಳನ್ನು ಹಂತ ಹಂತವಾಗಿ ತೆಗೆದುಕೊಳ್ಳಲು ಬಂದಿರುವ ಪ್ರಸ್ತಾವನೆಗಳನ್ನು ಸರ್ಕಾರವು ಪರಿಶೀಲಿಸುತ್ತದೆ.

**ಶ್ರೀ ಕೆ.ಹರೀಶ್ ಕುಮಾರ್:–** ಮಾನ್ಯ ಸಭಾಪತಿಯವರೇ, ಸರ್ಕಾರವು ಈಗಾಗಲೇ ಈ ನಿಗಮ ಮಂಡಳಿಗಳಲ್ಲಿ ಸುಮಾರು 63 ಸಾವಿರ ಕೋಟಿ ರೂಪಾಯಿಗಳನ್ನು ಹೂಡಿಕೆ ಮಾಡಿದೆ. ಇವುಗಳಲ್ಲಿ ಕೇವಲ 0.1 ರಷ್ಟು ಮಾತ್ರವೇ ಲಾಭ ಬಂದಿದೆ. ಸರ್ಕಾರವು ಈಗಾಗಲೇ ಮೂರು ನಿಗಮ ಮಂಡಳಿಗಳನ್ನು ವಿಲೀನಗೊಳಿಸಲು ಆಲೋಚಿಸುತ್ತಿದೆ. ಅದೇ ರೀತಿಯಾಗಿ ಇನ್ನುಳಿದ ಎಲ್ಲಾ ನಿಗಮ

ಮಂಡಳಿಗಳನ್ನು ಶೀಘ್ರವಾಗಿ ವಿಲೀನಗೊಳಿಸಿದರೆ ಉತ್ತಮವಾಗುತ್ತದೆ ಎಂದು ನಾನು ಹೇಳಬಯಸುತ್ತೇನೆ.

**ಶ್ರೀ ಎನ್.ನಾಗರಾಜು(ಎಂ.ಟಿ.ಬಿ.):-** ಮಾನ್ಯ ಸಭಾಪತಿಯವರೇ, 60 ನಿಗಮ/ಮಂಡಳಿಗಳ ಪೈಕಿ 34 ನಿಗಮ/ಮಂಡಳಿಗಳು ಲಾಭದಾಯಕವಾಗಿವೆ. 21 ನಿಗಮ/ಮಂಡಳಿಗಳು ಹಾಗೂ 5 ಸೇವಾ ವಲಯದಲ್ಲಿರುವ ನಿಗಮ/ಮಂಡಳಿಗಳು ನಷ್ಟದಲ್ಲಿವೆ. ಇದರ ಬಗ್ಗೆಯೂ ಸಹ ಅನುಬಂಧ-2 ರಲ್ಲಿ ಬಹಳ ವಿಸ್ತೃತವಾಗಿ ಉತ್ತರಿಸಲಾಗಿದೆ. ಮುಂದಿನ ದಿನಗಳಲ್ಲಿ ಇನ್ನುಳಿದವುಗಳನ್ನು ಪರಿಶೀಲಿಸಿ, ಕ್ರಮ ಕೈಗೊಳ್ಳಲು ಪ್ರಯತ್ನಿಸಲಾಗುವುದು.

**ಪ್ರಶ್ನೆ ಸಂಖ್ಯೆ: 1846**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಒದಗಿಸಿರುವ ಉತ್ತರವನ್ನು ಸಚಿವರು ದಯಮಾಡಿ ನೋಡಬೇಕು. ಲಿಖಿತ ಉತ್ತರದಲ್ಲಿ ಯಾವುದನ್ನೂ ಮಾಡಿದ್ದೇವೆ ಎಂದು ಸರ್ಕಾರವು ತಿಳಿಸಿಲ್ಲ. ಯಾವುದನ್ನೂ ಮಾಡುತ್ತಿಲ್ಲ ಎನ್ನುವ ರೀತಿಯಲ್ಲಿಯೇ ಉತ್ತರವನ್ನು ಒದಗಿಸಲಾಗಿದೆ. ನಾನು ಕೇಳಿದ್ದ ಪೈಕಿ ಯಾವುದನ್ನೂ ಸಹ ಸರ್ಕಾರವು ಮಾಡಿಲ್ಲ. ನಗರಗಳು ಅಥವಾ ನಗರದಲ್ಲಿರುವ ಸುತ್ತಮುತ್ತಲಿನ ಪ್ರದೇಶಗಳು ಯಾವುದೇ ಇರಬಹುದು, ಯಾವುದೇ ರೀತಿಯಾದ ಯೋಜನೆಗಳು ಇಲ್ಲದೇ ಅಭಿವೃದ್ಧಿ ಮಾಡಲಾಗುತ್ತದೆ ಎಂದರೆ ಅದು ತಪ್ಪಿನ ಸಂದೇಶ ನೀಡಿದಂತಾಗುತ್ತದೆ. ಕೇಂದ್ರ ಸರ್ಕಾರ ಮತ್ತು ಬಹಳಷ್ಟು ರಾಜ್ಯ ಸರ್ಕಾರಗಳ ಯೋಜನೆಗಳು ಸ್ಥಳೀಯ ಸಂಸ್ಥೆಗಳಿಗೆ ನೀಡಲಾಗುತ್ತದೆ. ಆಗ ಮಾಡಬೇಕಾದ ಯೋಜನಾ ಬದ್ಧವಾದ ಅಭಿವೃದ್ಧಿ ಅಥವಾ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕಾದರೆ, ನಮಗೆ ದೃಷ್ಟಿ ದಾಖಲೆಯ (vision document) ಅವಶ್ಯಕತೆ ಇದೆ. ಇಂತಹದ್ದು ಎಲ್ಲಿಯೂ ಸಹ ಇಲ್ಲವೆಂಬುದಾಗಿ ಸರ್ಕಾರವು ತಿಳಿಸಿದೆ. ಮುಂದುವರೆದು, ಇಂತಹ ಪ್ರಸ್ತಾವನೆ ಸರ್ಕಾರದಲ್ಲಿ ಬಾಕಿ ಇರುವುದಿಲ್ಲ ಎಂದು ತಿಳಿಸಿದೆ. ದೃಷ್ಟಿ ದಾಖಲೆಯ ಯಾವುದೇ ರೀತಿಯಾದ ಪ್ರಸ್ತಾವನೆಯು ಸರ್ಕಾರದ ಬಳಿ ಇಲ್ಲ. ನಮ್ಮ ರಾಜ್ಯದಲ್ಲಿ ಸುಮಾರು 200 ಕ್ಕೂ ಹೆಚ್ಚು ನಗರ ಸ್ಥಳೀಯ ಸಂಸ್ಥೆಗಳಿವೆ. ಈ ಸ್ಥಳೀಯ ಸಂಸ್ಥೆಗಳಿಗೆ ಯಾವುದೇ ಪ್ರಾಧಿಕಾರದ ರಚನೆಯೇ ಇಲ್ಲ. ಸದನಕ್ಕೆ ತಿಳಿಯಪಡಿಸುವ ಉದ್ದೇಶದಿಂದ ನಾನು ಒಂದೊಂದಾಗಿ ಓದುತ್ತೇನೆ.

**ಸಭಾಪತಿಯವರು:-** ನೀವು ಓದಬೇಡಿ ; ಅದರ ಬದಲಾಗಿ ಏನು ಮಾಡುಬೇಕು ಎನ್ನುವುದನ್ನು ಹೇಳಿ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ನಮ್ಮ ದೇಶದ ಸಂವಿಧಾನದ ಅನುಚ್ಛೇದ 243-ZD ಪ್ರಕಾರ ಜಿಲ್ಲಾ ಮಟ್ಟದ ಯೋಜನೆಗಳ ಸಮಿತಿಗಳನ್ನು ಸರ್ಕಾರವು ಕಡ್ಡಾಯವಾಗಿ ಮಾಡಬೇಕು. 1995 ನೇ ಸಾಲಿನಲ್ಲಿ ಸಂವಿಧಾನದ ಮೇಲ್ಕಂಡ ಅನುಚ್ಛೇದವು ಜಾರಿಗೆ ಬಂದಿದ್ದು, ನಮ್ಮ ರಾಜ್ಯದಲ್ಲಿಯೂ ಸಹ 1995 ನೇ ಸಾಲಿನಲ್ಲಿಯೇ ಅನುಷ್ಠಾನಕ್ಕೆ ಬಂದಿತು. ಅವತ್ತಿನಿಂದ ಇವತ್ತಿನವರೆಗೆ ಸರ್ಕಾರವು ಈ ರೀತಿಯ ಜಿಲ್ಲಾ ಮಟ್ಟದ ಯೋಜನೆಗಳ ಸಮಿತಿಗಳನ್ನು

ಮಾಡಿಲ್ಲವೆಂದು ತಿಳಿಸಿದರೆ, ಸರ್ಕಾರವು ಇಲ್ಲಿಯವರೆಗೆ ಮಾಡುವ ಕೆಲಸಗಳಾದರೂ ಏನು ಎಂದು ನಾನು ಪ್ರಶ್ನಿಸುತ್ತೇನೆ. ಯಾವ ಸ್ಥಳೀಯ ಸಂಸ್ಥೆಗಳಲ್ಲಿ ಸರ್ಕಾರವು ಯೋಜನಾ ಬದ್ಧವಾದ ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆ? ಯಾವ ರೀತಿಯ ಯೋಜನೆಗಳನ್ನು ಅನುಷ್ಠಾನಗೊಳಿಸಿ, ಅಭಿವೃದ್ಧಿ ಪಡಿಸಲಾಗುತ್ತಿದೆ? ಕೇಂದ್ರ ಸರ್ಕಾರದಿಂದ ಜಾರಿಗೊಳಿಸಲಾಗುವ ಹಲವಾರು ಯೋಜನೆಗಳನ್ನು ರಾಜ್ಯ ಸರ್ಕಾರವು ಯಾವ ರೀತಿಯಾಗಿ ಅನುಷ್ಠಾನಗೊಳಿಸುತ್ತಿದೆ ಎನ್ನುವುದರ ಬಗ್ಗೆ ಇವತ್ತಿನ ದಿವಸ ಸಂಶಯವಾಗುತ್ತಿದೆ. ಸರ್ಕಾರವು ನೀಡಿರುವ ಲಿಖಿತ ಉತ್ತರದ ಒಂದೊಂದು ಅಂಶವನ್ನು ನಾನು ಓದುತ್ತೇನೆ.

**ಸಭಾಪತಿಯವರು:-** ಶ್ರೀ ಪಿ.ಆರ್.ರಮೇಶ್‌ರವರೇ, ಈಗ ಓದಬೇಡಿ; ಸಚಿವರು ಉತ್ತರಿಸಲಿ. ಅನುಬಂಧ-3 ರಲ್ಲಿ ಮಹಾಯೋಜನೆಯನ್ನು ಸಿದ್ಧಪಡಿಸಬೇಕಾಗಿರುವ ನಗರ / ಪಟ್ಟಣಗಳ ಪಟ್ಟಿಯನ್ನು ನೀಡಲಾಗಿದೆ. ಸರ್ಕಾರವು ಯಾವುದೇ ರೀತಿಯ ಕ್ರಮಗಳನ್ನು ತೆಗೆದುಕೊಂಡಿಲ್ಲ. ಕೆಲವೊಂದು ಮಹಾನಗರಗಳಲ್ಲಿ ಜಿಲ್ಲಾ ಮಟ್ಟದ ಯೋಜನೆಗಳ ಸಮಿತಿಯು ಅಸ್ತಿತ್ವದಲ್ಲಿರುವುಲ್ಲ ಎಂದು ಸರ್ಕಾರವು ಲಿಖಿತ ಉತ್ತರದಲ್ಲಿ ತಿಳಿಸಿದೆ. ಈ ಉತ್ತರವನ್ನು ಶೈಕ್ಷಣಿಕ ಆಸಕ್ತಿಗಾಗಿ ಚರ್ಚೆಗೆ ತೆಗೆದುಕೊಳ್ಳಬೇಕು. ನಮ್ಮ ರಾಜ್ಯದಲ್ಲಿ ಯಾವುದೇ ಯೋಜನೆಗಳಿಲ್ಲದೇ ಅಭಿವೃದ್ಧಿ ಕೆಲಸಗಳಾಗುತ್ತಿವೆ ಎನ್ನುವುದೇ ಸಂಶಯ ಮೂಡುವ ಸಂಗತಿಯಾಗಿದೆ. ಸರ್ಕಾರದಿಂದ ಈ ರೀತಿಯ ಉತ್ತರವನ್ನು ನಿರೀಕ್ಷಿಸಿರಲಿಲ್ಲ. ದಯಮಾಡಿ ಸಚಿವರು ಇದರ ಬಗ್ಗೆ ಉತ್ತರಿಸಬೇಕು.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರ ಹೊರತುಪಡಿಸಿ, ರಾಜ್ಯದಲ್ಲಿರುವ ಎಲ್ಲಾ ಪಾಲಿಕೆ ಮತ್ತು ಮಹಾನಗರ ಪಾಲಿಕೆಗಳ ಒಟ್ಟು ಸಂಖ್ಯೆಯ ಬಗ್ಗೆ ಸದಸ್ಯರು ಪ್ರಶ್ನಿಸಿದ್ದು, ಇದಕ್ಕೆ ಉತ್ತರಿಸಲಾಗಿದೆ. ನೀಡಿರುವ ಉತ್ತರವು ಸರಿಯಿಲ್ಲ ಎಂದು ಸದಸ್ಯರು ಹೇಳಿದರೆ, ನಾನು ಇನ್ನು ಯಾವ ರೀತಿಯಾಗಿ ಉತ್ತರಿಸಬೇಕು? ಭಾರತ ದೇಶದ ಸಂವಿಧಾನ ಅನುಚ್ಛೇದ 243ZD ರ ಪ್ರಕಾರ ಜಿಲ್ಲಾ ಮಟ್ಟದ ಯೋಜನೆಗಳ ಸಮಿತಿ ಕುರಿತಾಗಿ ಪ್ರಶ್ನೆಯನ್ನು ಕೇಳಿದ್ದಾರೆ. ನಾವು ಈಗಾಗಲೇ ರಾಜ್ಯದ ಎರಡು ಜಿಲ್ಲೆಗಳಲ್ಲಿ ಸಮಿತಿಗಳನ್ನು ಮಾಡಿದ್ದೇವೆ; ಇನ್ನುಳಿದ ಜಿಲ್ಲೆಗಳಲ್ಲಿ ಈ ಸಮಿತಿಗಳನ್ನು ಮಾಡಬೇಕಾಗಿದೆ, ಇದನ್ನು ನಾವು ಒಪ್ಪಿಕೊಳ್ಳುತ್ತಿದ್ದು, ಅದನ್ನು ಅಲ್ಲಗಳೆಯುತ್ತಿಲ್ಲ. ಈ ವಿಚಾರದಲ್ಲಿ ಕೆಲವು ನ್ಯೂನ್ಯತೆಗಳಿದ್ದು, ಇವುಗಳನ್ನು ಸರಿಪಡಿಸಿ ಸಮಿತಿಗಳನ್ನು ರಚಿಸಬೇಕಾಗಿದೆ. ನಾವು ಏಕಾಏಕಿ ಜಿಲ್ಲೆಗಳಲ್ಲಿ ಸದರಿ ಸಮಿತಿಗಳನ್ನು ರಚಿಸುವುದಕ್ಕೆ ಸಾಧ್ಯವಾಗಿಲ್ಲ. ಭಾರತ ಸಂವಿಧಾನ

ಶೆಡ್ಯೂಲ್ 12 ರಲ್ಲಿ ವಿವರಿಸಿರುವ ಪ್ರಕಾರ್ಯಗಳು ರಾಜ್ಯ ಸರ್ಕಾರ ಕೆ.ಎಂ.ಸಿ. ಕಾಯ್ದೆ 1976 ರಲ್ಲಿ ಅಳವಡಿಸಿಕೊಳ್ಳಲಾಗಿದೆಯೇ ಎಂಬ ಪ್ರಶ್ನೆಯನ್ನು ಕೇಳಿದ್ದು, ಇದರನ್ವಯ ಅಳವಡಿಸಿಕೊಳ್ಳಲಾಗಿದೆ ಹಾಗೂ ಇದಕ್ಕೆ ಸಂಬಂಧಿತ ವಿವರಗಳನ್ನು ಅನುಬಂಧ – 02 ರಲ್ಲಿ ನೀಡಲಾಗಿದೆ. ಭಾರತ ದೇಶದ ಸಂವಿಧಾನದ 74 ನೇ ತಿದ್ದುಪಡಿಯನ್ವಯ ಎಲ್ಲಾ ನಿಯಮಗಳನ್ನು ಅಳವಡಿಸಿಕೊಳ್ಳಲಾಗಿದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ–1961 ರ ಅವಕಾಶದಂತೆ ಪ್ರತಿ 10 ವರ್ಷಗಳಿಗೊಮ್ಮೆ ಮಹಾಯೋಜನೆ ಪರಿಷ್ಕರಿಸಬೇಕಾಗಿರುತ್ತದೆ. ಈಗ ಪ್ರತಿ 10 ವರ್ಷಗಳಿಗೊಮ್ಮೆ ನಗರ ಮತ್ತು ಗ್ರಾಮಾಂತರ ಯೋಜನೆಯನ್ನು ಪರಿಷ್ಕರಿಸಿ, ಅದರ ಸಿ.ಡಿ.ಪಿ., ಯನ್ನು ತಯಾರಿಸಿ, ಜನರ ಮುಂದೆ ಇಟ್ಟು, ಅದರ ಸಾಧಕ–ಬಾಧಕಗಳನ್ನು ಚರ್ಚಿಸಿ, ಆ ನಂತರದಲ್ಲಿ ಅದಕ್ಕೆ ಅನುಮೋದನೆಯನ್ನು ನೀಡುವ ಕೆಲಸಗಳಾಗುತ್ತಿವೆ. ಇದು ಆಗದೇ ಇದ್ದ ಪಕ್ಷದಲ್ಲಿ ಅದನ್ನು ಆಧಾರವಾಗಿಟ್ಟುಕೊಂಡು ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಕೆಲಸಗಳನ್ನು ಮಾಡುತ್ತಿದ್ದೇವೆ. ನಮ್ಮ ಇಲಾಖಾ ವ್ಯಾಪ್ತಿಗೆ ಬರುವ ಎಲ್ಲಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತದೆ ಎನ್ನುವ ಮಾತನ್ನು ಸದಸ್ಯರು ಹೇಳಿದ್ದಾರೆ. ಇಲ್ಲಿನ ಕೆಲವು ವಿಚಾರಗಳು ಯೋಜನಾ ಸಚಿವಾಲಯದ ವ್ಯಾಪ್ತಿಗೊಳಪಡುತ್ತವೆ. ಹೀಗಾಗಿ ಇವುಗಳನ್ನು ಯೋಜನಾ ಸಚಿವಾಲಯವೇ ಮಾಡಬೇಕಾಗುತ್ತದೆ. ಒಂದು ವೇಳೆ ಇವುಗಳು ನನ್ನ ವ್ಯಾಪ್ತಿಗೆ ಒಳಪಡುವಂತಾಗಿದ್ದರೆ, ಅದನ್ನು ನಾನೇ ಮಾಡುತ್ತಿದ್ದೆನು. ಇದು ನನ್ನ ಇಲಾಖಾ ವ್ಯಾಪ್ತಿಗೆ ಒಳಪಡದೇ ಇರುವುದರಿಂದ ಇದನ್ನು ನಾನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೆ ಈ ವಿಚಾರವನ್ನು ಸದಸ್ಯರು ಪ್ರಸ್ತಾಪಿಸಿದ್ದಾರೆ. ದೃಷ್ಟಿ ದಾಖಲೆಯು ಇಡೀ ಜಿಲ್ಲೆಗೆ ಅನ್ವಯಿಸುವುದಿಲ್ಲ. ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಯು ಯೋಜನಾ ಸಚಿವಾಲಯಕ್ಕೆ ಬರುತ್ತದೆ. ಹೀಗಾಗಿ ಸದಸ್ಯರು ಬಯಸಿದ್ದಲ್ಲಿ, ಈ ಬಗ್ಗೆ ಯೋಜನಾ ಇಲಾಖೆಯಿಂದ ಹೆಚ್ಚಿನ ಮಾಹಿತಿಯನ್ನು ಒದಗಿಸಿ ಕೊಡಲಾಗುವುದು.

**ಸಭಾಪತಿಯವರು:–** ಈ ವಿಚಾರದಲ್ಲಿ ಸದಸ್ಯರೊಂದಿಗೆ ಕೂಡಿ ಚರ್ಚಿಸಿ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಇದು ಚರ್ಚೆ ಮಾಡುವುದಲ್ಲ ; ಬಹಳ ಮುಖ್ಯವಾದ ವಿಷಯವಾಗಿದೆ. ಈ ವಿಷಯವು ಯೋಜನಾ ಸಚಿವಾಲಯದ ವ್ಯಾಪ್ತಿಗೆ ಬರುತ್ತದೆ ಎಂದು ಈಗಷ್ಟೇ ಸಚಿವರು ತಿಳಿಸಿದರು. ನಗರ ಪಾಲಿಕೆಗಳು ಕೈಗೊಳ್ಳುವ ಕೆಲಸಗಳಿಗೆ ಸಂವಿಧಾನದ ರೀತ್ಯಾ ನಿಮಗೆ ಅಧಿಕಾರ ನೀಡಲಾಗಿದೆ. ಪಂಚಾಯತ್ ರಾಜ್ ಕಾಯ್ದೆಯಡಿ ಜಿಲ್ಲಾ ಮಟ್ಟದ

ಯೋಜನೆಗಳನ್ನು ಅವರು ಮಾಡುತ್ತಾರೆ. ಆದರೆ ಇವತ್ತಿನ ದಿವಸ ನಿಮ್ಮ ಇಲಾಖೆಗೆ ಹಾಗೂ ಪಂಚಾಯತ್ ರಾಜ್ ಇಲಾಖೆಗೆ ಇರುವ ಸಂಬಂಧ ಏನು ಎಂದು ಗೊತ್ತಿಲ್ಲ.

(ಮುಂದು)

**(336) 15.03.2022 12.20 ಎಲ್‌ಎಂ (ಎಸ್‌ವಿ)-ಜಿಆರ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಪಿ.ಆರ್.ರಮೇಶ್ (ಮುಂದು):-**

ನೀವು ಏಕ್‌ದಂ "ಯೋಜನಾ" ಎಂದು ಹೇಳಬಿಟ್ಟಿರಿ. ಸಂವಿಧಾನ ನಿಮಗೆ ಪಂಚಾಯತ್ ರಾಜ್ ಆಕ್ಟ್‌ನಲ್ಲಿರುವಂತಹ ಸಮಿತಿಗಳನ್ನು ರಚನೆ ಮಾಡುವುದಕ್ಕೆ ಅಧಿಕಾರ ಕೊಟ್ಟಿದೆ. 73rd and 74th Constitutional Amendment ಆಧಾರದಲ್ಲಿ ನೀವು ಮಾಡಬೇಕಾಗಿತ್ತು. ಆದರೆ ಇಂದಿನವರೆವಿಗೂ ನೀವು ಮಾಡದೆ ಕೇವಲ ನಿಮ್ಮ ಕೆಲಸ ಕಾರ್ಯಗಳು, ಅಭಿವೃದ್ಧಿಗಳು ಯಾವುದೇ ಗುರಿ ಇಲ್ಲದೆ ನಡೆಯುತ್ತಿದೆ. ಸುಮ್ಮನೆ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ. ಆದರೆ ಅದರ ಪ್ರಯೋಜನ ಜನರಿಗೆ ತಲುಪುತ್ತಿಲ್ಲ. ನಗರಗಳಲ್ಲಿ ಸರಿಯಾದ ರೀತಿಯಲ್ಲಿ ಅಭಿವೃದ್ಧಿಯಾಗುತ್ತಿಲ್ಲ. ಹೀಗಾಗಿ ಜನರಿಗೆ ಒಂದು ದಿಕ್ಸೂಚಿಯಿಲ್ಲದೆ ಸರ್ಕಾರ ಈ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುತ್ತದೆಯೇ ಎನ್ನುವಂತಹ ಸಂಶಯ ವ್ಯಕ್ತವಾಗುತ್ತಿದೆ.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳದಂತೆ ಇದು 1995ರಲ್ಲಿ ಜಾರಿಗೆ ಬಂದಿದೆ. ನಾನು ಈ ಇಲಾಖೆಗೆ ಬಂದು ಎರಡು ವರ್ಷಗಳಾಗಿವೆ. ಎರಡು ವರ್ಷಗಳಲ್ಲಿ ನಾನು ಬೇಕಾದಷ್ಟು ನಗರಗಳನ್ನು ಸುತ್ತಿದ್ದೇನೆ. ಒಂದೊಂದು ನಗರಕ್ಕೆ ಹತ್ತು ಬಾರಿ ಹೋಗಿದ್ದೇನೆ. ಉದಾಹರಣೆಗೆ ಹುಬ್ಬಳ್ಳಿ-ಧಾರವಾಡ ಮಹಾನಗರಗಳಿಗೆ ಎಷ್ಟು ಬಾರಿ ಭೇಟಿ ಕೊಟ್ಟಿದ್ದೇನೆಂಬುದನ್ನು ತಾವೂ ಸಹ ಸಭೆಗಳಲ್ಲಿ ನೋಡಿದ್ದೀರಿ. ನಾವು ಮಾಡುವ ಅಭಿವೃದ್ಧಿಯ ಚಿಂತನೆಯನ್ನು ಯಾವುದೇ ದಿಕ್ಕು ದೆಸೆಯಿಲ್ಲದೆ ಮಾಡುವುದಿಲ್ಲ. ಮಾನ್ಯ ಸದಸ್ಯರು ನೀಡಿರುವ

ಸಲಹೆಯನ್ನು ಖಂಡಿತವಾಗಿಯೂ ನಾನು ಸ್ವೀಕಾರ ಮಾಡುತ್ತೇನೆ. ನಮ್ಮ ಅಧಿಕಾರಿಗಳೊಂದಿಗೆ ಚರ್ಚಿಸಿ ಯಾವ ರೀತಿಯ ಮಾರ್ಗೋಪಾಯಗಳನ್ನು ಕಂಡುಹಿಡಿಯಬಹುದೆಂದು ಯೋಚಿಸುತ್ತೇನೆ.

## ಪ್ರಶ್ನೆ ಸಂಖ್ಯೆ 1880

## (ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಮುನಿರಾಜು ಗೌಡ ಪಿ.ಎಂ.:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನೇನೋ ಒದಗಿಸಿದ್ದಾರೆ. ಇಂದು ಕೆ.ಐ.ಎ.ಡಿ.ಬಿ., ವ್ಯಾಪ್ತಿಯನ್ನು ಹೊರತುಪಡಿಸಿ ಇಡೀ ರಾಜ್ಯದಲ್ಲಿ ಕೈಗಾರಿಕೆಗಳು ನಡೆಯುತ್ತಿರುವುದು ಗುಡಿ ಕೈಗಾರಿಕೆಗಳಿಂದ. ಈ ಗುಡಿ ಕೈಗಾರಿಕೆಗಳನ್ನು ನಡೆಸುವವರು ಮಹಿಳೆಯರು ಮತ್ತು ಅಂಗವಿಕಲರು. ಆದರೆ ಈ ಗುಡಿ ಕೈಗಾರಿಕೆಗಳಿಗೆ ತೆರಿಗೆಯನ್ನು ಹಾಕುವ ಸಂದರ್ಭದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರವನ್ನು ಕೊಡಲಾಗಿದೆ ಎಂದು ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಸ್ಥಳೀಯ ಸಂಸ್ಥೆಗಳಲ್ಲಿ ಇರುವ ಟ್ಯಾಕ್ಸ್ ಇನ್ಸ್‌ಪೆಕ್ಟರ್‌ಗಳು ಯಾರೂ ಸಹ ಕೈಗಾರಿಕೋದ್ಯಮಿಗಳ ಪರವಾಗಿ ಇರುವುದಿಲ್ಲ. ತೆರಿಗೆ ಮುಖಾಂತರ ಹೆಚ್ಚಿನ ಹಣ ಬರಬೇಕೆಂದು ಕೆಲವು ಅಧಿಕಾರಿಗಳು ಅಲ್ಲಿರುವ ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ತೆರಿಗೆಯನ್ನು ಹಾಕುತ್ತಾರೆ; ಕೆಲವರು ಮಾಲೀಕರ ಸಹಮತವನ್ನು ಪಡೆದುಕೊಂಡು ಕಡಿಮೆ ತೆರಿಗೆಯನ್ನು ಹಾಕುವಂತಹ ಕೆಲಸವನ್ನು ಮಾಡುತ್ತಾರೆ. ಎಲ್ಲರಿಗೂ ಸರಿಸಮಾನವಾಗಿ ನಿಗದಿತ ತೆರಿಗೆಯನ್ನು ನಿಗದಿ ಪಡಿಸಿ, ಕೈಗಾರಿಕೋದ್ಯಮಿಗಳಿಗೂ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ತೆರಿಗೆಯನ್ನು ಹಾಕಬೇಕೆಂದು ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಎನ್.ನಾಗರಾಜು (ಎಂ.ಟಿ.ಬಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಈಗಾಗಲೇ ಸಂಪೂರ್ಣವಾದ ಉತ್ತರವನ್ನು ಒದಗಿಸಿದ್ದೇನೆ. ಈಗಾಗಲೇ ವಾಣಿಜ್ಯ ಕಟ್ಟಡಗಳು, ವಸತಿ ಕಟ್ಟಡಗಳು ಮತ್ತು ಖಾಲಿ ನಿವೇಶನಗಳ ಕುರಿತು ಸರ್ಕಾರ ಸುತ್ತೋಲೆಯನ್ನು ಹೊರಡಿಸಿದೆ. ವಾಣಿಜ್ಯ ಕಟ್ಟಡಗಳಿಗೆ ಶೇ.0.5, ವಸತಿ ಕಟ್ಟಡಗಳಿಗೆ ಶೇ.0.2 ಮತ್ತು ಖಾಲಿ ನಿವೇಶನಗಳಿಗೆ ಶೇ.2 ಎಂದು ಹೇಳಿದೆ. ನಗರಸಭೆ ವ್ಯಾಪ್ತಿಯಲ್ಲಿ ಬರುವ ಕೈಗಾರಿಕೆಗಳಿಗೂ ಕೂಡ ಶೇ.70ಕ್ಕಿಂತ ಕಡಿಮೆಯಾಗಬಾರದು. ರೂ.1 ಲಕ್ಷ ಗೈಡ್‌ಲೈನ್ಸ್ ವ್ಯಾಲ್ಯೂ ಇದ್ದರೆ ಅದರಲ್ಲಿ ರೂ.25,000ಕ್ಕೆ 0.5% ತೆರಿಗೆ ವಿಧಿಸಬೇಕೆಂದು ಹೇಳಿ ಕಾನೂನಿನಲ್ಲಿ ಅಳವಡಿಸಿದ್ದೇವೆ. ಆ ರೀತಿ ಯಾವುದಾದರೂ ನಗರ ಸಭೆಗಳಲ್ಲಿ ಪಟ್ಟಣ ಪಂಚಾಯ್ತಿಗಳಲ್ಲಿ ಆಸ್ತಿ ತೆರಿಗೆ ವಂಚನೆಯಾಗುತ್ತಿದೆ

ಎಂದರೆ ನಿರ್ದಿಷ್ಟವಾಗಿ ಯಾವ ನಗರಸಭೆ, ಯಾವ ಪುರಸಭೆ, ಯಾವ ಪಟ್ಟಣ ಪಂಚಾಯಿತಿ, ಯಾವ ಗ್ರೇಡ್–1 ನಗರ ಸಭೆಗಳಲ್ಲಿ ಆ ರೀತಿ ತೆರಿಗೆ ವಂಚನೆಗಳಾಗುತ್ತಿವೆ ಎನ್ನುವ ಮಾಹಿತಿಯನ್ನು ಕೊಡಿ. ಅದರ ಮೇಲೆ ಸೂಕ್ತ ಶಿಸ್ತಿನ ಕ್ರಮವನ್ನು ಜರುಗಿಸುತ್ತೇವೆ.

**ಶ್ರೀ ಮುನಿರಾಜುಗೌಡ ಪಿ.ಎಂ.:–** ಆಗಲಿ ಮಾನ್ಯ ಸಭಾಪತಿಯವರೇ, ನಾನು ವಿವರಗಳನ್ನು ಒದಗಿಸುತ್ತೇನೆ. ಅದರ ಜೊತೆಯಲ್ಲಿ ಖಾಲಿ ನಿವೇಶನ ಇರಬಹುದು, ಉದ್ಯಾನವನ ಇರಬಹುದು, ಪಾರ್ಕಿಂಗ್ ಇರಬಹುದು. ಇದಕ್ಕೂ ಸಹ ಸಮಾನವಾದಂತಹ ತೆರಿಗೆಯನ್ನು ಹಾಕುತ್ತಿದ್ದಾರೆ. ಇಂದು ಎಲ್ಲಿ ಕೆಲಸ ನಡೆಯುತ್ತದೆಯೋ ಅಲ್ಲಿಗೆ ಮಾತ್ರ ತೆರಿಗೆಯನ್ನು ವಿಧಿಸಿ ಮಿಕ್ಕ ಸ್ಥಳಕ್ಕೂ ಸಹ ಅಷ್ಟೇ ತೆರಿಗೆಯನ್ನು ವಿಧಿಸುವುದರಿಂದ ಆ ಕೈಗಾರಿಕೋದ್ಯಮಿಗಳಿಗೆ ತೊಂದರೆಯಾಗುತ್ತದೆ. ಆದ್ದರಿಂದ ಅದನ್ನೂ ಸಹ ಪಾರ್ಟೀಷನ್ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ.

**ಶ್ರೀ ಎನ್.ನಾಗರಾಜು (ಎಂ.ಟಿ.ಬಿ):–** ಮಾನ್ಯ ಸಭಾಪತಿಯವರೇ, ಅದನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುತ್ತೇವೆ.

**ತಡೆ ಹಿಡಿಯಲಾದ ಪ್ರಶ್ನೆ ಸಂಖ್ಯೆ 1319**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಪ್ರತಾಪ್ ಸಿಂಹ ನಾಯಕ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಈ ಉತ್ತರವನ್ನು ಕಂಡುಕೊಳ್ಳುವ ದೃಷ್ಟಿಯಲ್ಲಿ ಮಾನ್ಯ ಸಚಿವರು ಮೂರ್ನಾಲ್ಕು ಬಾರಿ ಮಂಗಳೂರು ಮಹಾನಗರ ಪಾಲಿಕೆಗೆ ಭೇಟಿಯನ್ನು ನೀಡಿದ್ದಾರೆ ಮತ್ತು ಕಾಮಗಾರಿಗಳ ಅನುಷ್ಠಾನವನ್ನು ಅವರು ಪರಿಶೀಲಿಸಿದ್ದಾರೆ. ಮಾನ್ಯ ಪ್ರಧಾನ ಮಂತ್ರಿಗಳ ಸ್ಮಾರ್ಟ್ ಸಿಟಿ ಒಳಗೊಂಡಂತೆ ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಬೇರೆ ಬೇರೆ ರೀತಿಯ ಕಾಮಗಾರಿಗಳು ಬಹಳ ವೇಗವಾಗಿ ನಡೆಯುತ್ತಿವೆ. ಆದರೆ ನನ್ನನ್ನು ಪ್ರಶ್ನೆ ಕೇಳಿರುವ ಉದ್ದೇಶವೇನೆಂದು ಕೇಳಿದರೆ ತುಂಬಾ ಭರದಿಂದ ಸಾಗುತ್ತಿರುವ ಕಾಮಗಾರಿಗಳಲ್ಲಿ ಬೇರೆ ಬೇರೆ ಇಲಾಖೆಗಳು ಕೆಲಸ ಮಾಡುತ್ತಿರುವ ಹಿನ್ನೆಲೆಯಲ್ಲಿ ಒಳಚರಂಡಿ ವ್ಯವಸ್ಥೆಯ ದೃಷ್ಟಿಯಿಂದ ಹೊಸದಾಗಿ ಆದಂತಹ ರಸ್ತೆಯಲ್ಲಿಯೂ ಕೂಡ ಪುನಃ ಒಳಚರಂಡಿ ವ್ಯವಸ್ಥೆಗಾಗಿ ಅಗೆಯುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಹಾಗಾಗಿ ಈ ಇಲಾಖೆಗಳ ನಡುವೆ ಸಮನ್ವಯ ತರಬೇಕು ಎಂದು ಹೇಳುವುದರ ಜೊತೆಗೆ ಈ ರೀತಿ ಅಗೆಯುವುದರ ಜೊತೆಗೆ ಅದನ್ನು ಸರಿಪಡಿಸುವ ಕೆಲಸವನ್ನು ಗುತ್ತಿಗೆದಾರರು ಮಾಡುತ್ತಾರೆಯೋ ಅಥವಾ ಮಹಾನಗರ ಪಾಲಿಕೆಯವರು ಹಣವನ್ನು ಕಟ್ಟಿಸಿಕೊಂಡು ಅವರು ಮಾಡುತ್ತಿದ್ದಾರೆಯೋ ಎನ್ನುವುದಕ್ಕೆ ಮಾನ್ಯ ಸಚಿವರಿಂದ ಉತ್ತರವನ್ನು ಬಯಸುತ್ತೇನೆ.

ಎರಡನೆಯದಾಗಿ ನಾನು ಮೂರು ವರ್ಷದ ಬಗ್ಗೆ ಕೇಳಿದ್ದೇನೆ. ಅದರಲ್ಲಿ ನನಗೆ ಸಿಕ್ಕಿದ ಮಾಹಿತಿಯ ಪ್ರಕಾರ ಮಂಗಳೂರು ಮಹಾನಗರ ಪಾಲಿಕೆಯ ಸುರತ್ಕಲ್ ಭಾಗದಲ್ಲಿ ಈ ಸರ್ಕಾರ ಬರುವ ಮೊದಲು ಅಂದರೆ ಹಿಂದಿನ ಸರ್ಕಾರ ಚುನಾವಣೆಪೂರ್ವದಲ್ಲಿ ಅಲ್ಲಿ ವಿಸ್ತೃತವಾದಂತಹ ಒಳಚರಂಡಿ ಯೋಜನೆಯನ್ನು ಅನುಷ್ಠಾನಗೊಳಿಸಿಯಾಗಿತ್ತು. ಕೆಲವು ಮಿಸ್ಸಿಂಗ್ ಲಿಂಕ್‌ಗಳು ಮುಂತಾದ ಕಾಮಗಾರಿಗಳು ಪೂರ್ತಿಯಾಗುವುದರ ಮೊದಲೇ ತರಾತುರಿಯಲ್ಲಿ ಆ ಇಡೀ ಯೋಜನೆಯನ್ನು commission ಮಾಡಲಾಯಿತು. ಅದರ ಪರಿಣಾಮವಾಗಿ ತುಂಬಾ ತೊಂದರೆಗಳು ಉಂಟಾಗಿ, ಅದನ್ನು ಸರಿಮಾಡುವ ಸಲುವಾಗಿ ಸರ್ಕಾರ ಇಂದು ರೂ.28

ಕೋಟಿಗಳನ್ನು ಖರ್ಚು ಮಾಡುತ್ತಿದೆ. ಈ ಹಿಂದೆ ಆದಂತಹ ತಪ್ಪಿಗೆ ಯಾರನ್ನು ನಾವು ಜವಾಬ್ದಾರಿ ಮಾಡುತ್ತಿದ್ದೇವೆ? ರೂ.28 ಕೋಟಿಗಳನ್ನು ಇಂದು ಪುನಃ ಖರ್ಚು ಮಾಡಬೇಕಾದಂತಹ ಅನಿವಾರ್ಯ ಪರಿಸ್ಥಿತಿ ನಿರ್ಮಾಣ ಮಾಡಿದ್ದು, ಅದರ ಬಗ್ಗೆ ಒಂದು ತನಿಖೆಯಾಗಬೇಕು. ಯಾರು ತಪ್ಪಿತಸ್ಥರಿದ್ದಾರೆಯೋ ಅವರ ಮೇಲೆ ಕ್ರಮ ಜರುಗಿಸಬೇಕೆಂದು ನಾನು ಮಾನ್ಯ ಸಚಿವರಲ್ಲಿ ಆಗ್ರಹಿಸುತ್ತೇನೆ.

ಕೊನೆಯದಾಗಿ ನನ್ನ ಪ್ರಶ್ನೆಗೆ ವಿವರಣೆಯನ್ನು ಮಾತ್ರ ಸಚಿವರಿಂದ ಕೇಳಬಯಸುತ್ತೇನೆ. ರಾಷ್ಟ್ರೀಯ ಜಲಜೀವನ ಯೋಜನೆಯನ್ವಯ ಯಾವುದೇ ಮನೆಗಳಿಗೆ ನಲ್ಲಿ ನೀರಿನ ಸಂಪರ್ಕವನ್ನು ಒದಗಿಸಿರುವುದಿಲ್ಲ ಎಂದು ಹೇಳಿದ್ದಾರೆ. ಜಲಜೀವನ್ ಯೋಜನೆ ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಬರುವುದಿಲ್ಲ ಎನ್ನುವುದು ಇದರ ಅರ್ಥವೋ ಅಥವಾ "ಇದೆ, ನಾವು ಅಲ್ಲಿಗೆ ಅನ್ವಯಿಸುವುದಿಲ್ಲ" ಎಂದು ಹೇಳುವುದು ತಮ್ಮ ಉತ್ತರವೋ ಎಂದು ಮಾನ್ಯ ಸಚಿವರಿಂದ ತಿಳಿಯಬಯಸುತ್ತೇನೆ.

**ಶ್ರೀ ಬಿ.ಎ.ಬಸವರಾಜ:-** ಮಾನ್ಯ ಸಭಾಪತಿಯವರೇ, ನಾನು ಮಂಗಳೂರು ಮಹಾನಗರ ಪಾಲಿಕೆಗೆ ಮೂರು ಬಾರಿ ಭೇಟಿ ಕೊಟ್ಟಿದ್ದೇನೆ. ಪ್ರತಿಯೊಂದು ರಸ್ತೆಯಲ್ಲಿಯೂ ಕೂಡ ನಾನು ಓಡಾಟ ಮಾಡಿದ್ದೇನೆ. ಏಷ್ಯನ್ ಬ್ಯಾಂಕ್ ನೆರವಿನಿಂದ ಈ ಅಭಿವೃದ್ಧಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಒಳಚರಂಡಿ ಮತ್ತು ಕುಡಿಯುವ ನೀರಿನ ಸೌಲಭ್ಯವನ್ನು ನೀಡಬೇಕೆನ್ನುವ ದಿಸೆಯಲ್ಲಿ ರೂ.368.17 ಕೋಟಿಗಳ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಕೆಲವು ಗುತ್ತಿಗೆದಾರರ ವಿಳಂಬದಿಂದಾಗಿ ಈ ಕಾಮಗಾರಿಯು ವಿಳಂಬವಾಗಿದೆ. ನಾನು ಹಲವಾರು ಬಾರಿ ಸಭೆಗಳನ್ನು ಮಾಡಿ ಕಟ್ಟುನಿಟ್ಟಾಗಿ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ಈಗಾಗಲೇ ಕಾಮಗಾರಿಯು ವಿಳಂಬವಾಗಿದ್ದು, ಬೇಗನೆ ಪೂರ್ಣಗೊಳಿಸಬೇಕು ಎನ್ನುವ ಸೂಚನೆಯನ್ನು ಕೊಟ್ಟಿದ್ದೇನೆ. ಕೋವಿಡ್ ಸಂದರ್ಭದಲ್ಲಿ ಕಾಮಗಾರಿಯನ್ನು ಯಾರೂ ಕೂಡ ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ಮಂಗಳೂರು ಭಾಗದಲ್ಲಿ ಮಳೆ ಹೆಚ್ಚಾಗಿರುವುದರಿಂದ ಕೆಲವೇ ತಿಂಗಳು ನಮಗೆ ಕಾಮಗಾರಿ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಈಗ 15 ದಿನಗಳ ಹಿಂದೆ ಮಾನ್ಯ ಬಿ.ಎಂ.ಫಾರೂಖ್ ಅವರು ನನ್ನನ್ನು ಸಭೆಗೆ ಕರೆದಿದ್ದಂತಹ ಸಂದರ್ಭದಲ್ಲಿ ನಾನು ಉಲ್ಲಾಳಕ್ಕೂ ಹೋಗಿದ್ದೆನು. ಮಾನ್ಯ

ಸದಸ್ಯರು ಹೇಳಿದಂತೆ ಸುರತ್ಕಲ್‌ಗೂ ಸಹ ಹೋಗಿದ್ದು, ಅಲ್ಲಿ ಕೂಡ ಪರಿಶೀಲನೆಯನ್ನು ನಡೆಸಿದ್ದೇನೆ. ಈ ಕಾಮಗಾರಿಯನ್ನು ಅತ್ಯಂತ ತ್ವರಿತ ಗತಿಯಲ್ಲಿ ಮಾಡಬೇಕು. ಅಲ್ಲಿ ಮಣ್ಣು ಸರಿಯಿಲ್ಲ. ಅದು loose soil ಆಗಿದ್ದು, ಅದು set right ಆಗುವುದಕ್ಕೆ ಸಾಕಷ್ಟು ಕಾಲಾವಕಾಶ ಬೇಕು. ಅಲ್ಲಿ ನಾವು ಕಾಂಕ್ರೀಟ್ ಹಾಕುವುದಕ್ಕೆ ಆಗುವುದಿಲ್ಲ, ಡಾಂಬರೀಕರಣ ಮಾಡುವುದಕ್ಕಾಗುವುದಿಲ್ಲ.

**(...ಮುಂದು)**

(337)15-03-2022(12-30)bsd-md

**ಶ್ರೀ ಬಿ.ಎ. ಬಸವರಾಜ (ಮುಂದು):**

ಅಲ್ಲಿ ಕಲ್ಲು ಅಥವಾ walking slabs ಹಾಕುವುದಕ್ಕೆ ಆಗುವುದಿಲ್ಲ, ಅಲ್ಲದೇ interlocking ಮಾಡುವುದಕ್ಕೂ ಸಾಧ್ಯವಾಗುವುದಿಲ್ಲ. ಹಾಗಾಗಿ ಮಾನ್ಯ ಸದಸ್ಯರು ಹೇಳಿದ್ದು, ಸತ್ಯ ಇದೆ. ಮಂಗಳೂರು ಮಹಾನಗರ ಪಾಲಿಕೆಯ ವತಿಯ 'Smart City' ಕಾಮಗಾರಿಗಳು ಇರಬಹುದು, ಕುಡಿಯುವ ನೀರಿನ ಯೋಜನೆ ಅಥವಾ ಒಳಚರಂಡಿ ವ್ಯವಸ್ಥೆಗಳನ್ನು ಬೇಗ ಮುಗಿಸಲು ಹೇಳಿದ್ದೇನೆ. ಈಗ ಮೂರ್ನಾಲ್ಕು ತಿಂಗಳು ಕಾಲಾವಕಾಶ ಇದ್ದು, ತ್ವರಿತ ಗತಿಯಲ್ಲಿ ಮುಗಿಸಲು ಹೇಳಿದ್ದೇನೆ. ಇವತ್ತು ಬೆಳಗ್ಗೆ ವಿಶೇಷವಾಗಿ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ಇದಕ್ಕಾಗಿ ನೋಡಲು ಒಬ್ಬ ಮುಖ್ಯ ಅಭಿಯಂತರರನ್ನು ಬಿಟ್ಟಿದ್ದೇನೆ. Exclusive ಆಗಿ Chief Engineer ಒಬ್ಬರನ್ನು depute ಮಾಡಿದ್ದೇನೆ. ಬೇರೆ ರಾಜ್ಯಗಳಿಂದ ಇಲ್ಲಿಗೆ ಬಂದು tender ಹಾಕುತ್ತಿದ್ದು, ಅವರು ಯಾರು ಏನು ಎಂದೂ ಗೊತ್ತಾಗುವುದಿಲ್ಲ. Tender ಹಾಕಿ ಎಲ್ಲೋ ಇದ್ದು, ಮೂರನೆಯವರಿಗೆ ಗುತ್ತಿಗೆ ಕೊಡುತ್ತಾರೆ. ನಾವು ಅವರ ಮೂಲಕ ಕೆಲಸ ಮಾಡಲು ಆಗುವುದಿಲ್ಲ. ಈ ರೀತಿ ಆಗಿದೆ. ಇದಲ್ಲದೇ ಆ company ಗಳು corruptive ಆಗಿವೆ. ವಿವೇಕ್‌ನಗರದಲ್ಲಿ ಒಬ್ಬ flyover bridge ಕಟ್ಟಲು ತೆಗೆದುಕೊಂಡಿದ್ದು, ಆ company corruptive ಆಗಿದೆ. ಅದೇ company ಯವನು ಇಲ್ಲಿನ ಮೂರು ಕಾಮಗಾರಿ ಗುತ್ತಿಗೆಗೆ tender ಹಾಕಿದ್ದಾನೆ. ಇದು ನಮಗೂ ಗೊತ್ತಿಲ್ಲ. ಇದು ನಾನು ಬಂದಾಗ ಆಗಿಲ್ಲ. ಇದು 2019 ರಲ್ಲಿ ಆಗಿದ್ದು, ನಾನು ವಿಶೇಷ ಮುತುರ್ವಜಿ ವಹಿಸಿ, ಎಲ್ಲಾ ಕೆಲಸಗಳು ಆಗಬೇಕು ಎನ್ನುವ

ದೃಷ್ಟಿಯಿಂದ ಸಾಕಷ್ಟು ಚರ್ಚೆ ಮಾಡಿದ್ದೇನೆ. ಸಂಬಂಧಪಟ್ಟವರನ್ನು ಕರೆಸಿ ಅನುಷ್ಠಾನ ಮಾಡಲು ಪ್ರಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ.

ಇನ್ನು ಜಲ ಜೀವನ್ ಮಿಷನ್ ಯೋಜನೆಯು ಗ್ರಾಮೀಣ ಭಾಗದಲ್ಲಿ ಬರುತ್ತದೆಯೇ ವಿನಃ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂಬುದನ್ನು ಸ್ಪಷ್ಟಪಡಿಸಬೇಕಾಗಿದೆ. ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನದಿ ಮೂಲದಿಂದ ಸಾಕಷ್ಟು ನೀರನ್ನು ತೆಗೆದುಕೊಂಡಿದ್ದೇವೆ. ಸಮರ್ಪಕವಾಗಿ ನೀರು ಬರುತ್ತಿದ್ದು, ಮಹಾನಗರದಲ್ಲಿ ಯಾವುದೇ ನೀರಿನ ಸಮಸ್ಯೆ ಇಲ್ಲ ಎಂದು ನನ್ನ ಗಮನಕ್ಕೆ ಬಂದಿದೆ. ಈ ಬಗ್ಗೆ ಮಾನ್ಯ ಸದಸ್ಯರ ಜೊತೆ ಚರ್ಚೆ ಮಾಡುತ್ತೇನೆ ಮತ್ತು ಅವರಿಗೆ ಮನವರಿಕೆ ಮಾಡಿಕೊಡುತ್ತೇನೆ. ಇದಕ್ಕೆ ಸಂಬಂಧಪಟ್ಟಂತೆ ಅಧಿಕಾರಿಗಳ ಸಭೆ ಕರೆಯುತ್ತೇನೆ. ಅಧಿವೇಶನ ಸಮಯದಲ್ಲಿ ಅಥವಾ ಅಧಿವೇಶನ ಮುಕ್ತಾಯಗೊಂಡ ನಂತರ ಇಲಾಖಾಧಿಕಾರಿಗಳು ಹಾಗೂ ಸಂಬಂಧಪಟ್ಟವರ ಜೊತೆ ಸಭೆ ಮಾಡುತ್ತೇನೆ.

**ಶ್ರೀ ಪ್ರತಾಪ ಸಿಂಹ ನಾಯಕ್:-** ಮಾನ್ಯ ಸಚಿವರು ಸಮರ್ಥರಿದ್ದು, ಅವರಿಗೆ ಬಹಳ ಕಳಕಳಿ ಇದೆ ಮತ್ತು ಪ್ರಾಮಾಣಿಕವಾಗಿ ಪ್ರಯತ್ನ ಪಡುತ್ತಿದ್ದಾರೆ. ಮೂರ್ನಾಲ್ಕು ಬಾರಿ ಮಂಗಳೂರಿಗೆ ಭೇಟಿ ನೀಡಿದ್ದಾರೆ. ಮಾನ್ಯ ಸಚಿವರ ಉತ್ತರದಿಂದ ನಾನು ಸಂತೃಪ್ತನಾಗಿದ್ದೇನೆ. ಧನ್ಯವಾದಗಳು.

**ಪ್ರಶ್ನೆ 1316**

**ಉತ್ತರದ ಪ್ರತಿ ಲಗತ್ತಿಸಿದೆ**

**ಶ್ರೀ ಆರ್. ರಾಜೇಂದ್ರ ರಾಜಣ್ಣ:-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಿದ್ದು, ಆಶಾ ಕಾರ್ಯಕರ್ತರ ಹುದ್ದೆಗಳು ಖಾಲಿ ಇದ್ದಲ್ಲಿ ಸರ್ಕಾರ ಕೈಗೊಳ್ಳುವ ಕ್ರಮಗಳ ಬಗ್ಗೆ ಪ್ರಶ್ನೆ ಕೇಳಿದ್ದೇನೆ. ಇದಕ್ಕೆ ಉತ್ತರವಾಗಿ ಪ್ರಚಾರ ಮಾಡಲಾಗಿದೆ, ಕ್ರಮ ವಹಿಸಲು ಸೂಚಿಸಲಾಗಿದೆ, ನಗರ ಪ್ರದೇಶಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಲು ಸೂಚಿಸಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ನಮ್ಮ ತುಮಕೂರು ಜಿಲ್ಲೆಯಲ್ಲಿ 84 ಅಂಗನವಾಡಿ ಕಾರ್ಯಕರ್ತರ ಹುದ್ದೆಗಳು ಹಾಗೂ 145 ಅಂಗನವಾಡಿ ಸಹಾಯಕ ಕಾರ್ಯಕರ್ತರ ಹುದ್ದೆಗಳು ಖಾಲಿ ಇವೆ. ಅವರೆಲ್ಲರೂ ಪ್ರತಿಭಟನೆ ಮಾಡಿದ ಸಂದರ್ಭದಲ್ಲಿ ಮಾನ್ಯ ಸಚಿವರು ಅಧಿಕಾರಿಗಳ ಜೊತೆ ಸಭೆ ಮಾಡಿ ಆಶ್ವಾಸನೆ ಕೊಟ್ಟಿದ್ದರು. ಅದರ paper cutting ಸಹ ನನ್ನ ಬಳಿ ಇದ್ದು, ಅಂಗನವಾಡಿ ಕಾರ್ಯಕರ್ತರ ಬೇಡಿಕೆಗಳಿಗೆ ಸ್ಪಂದನೆ- ಸಚಿವ ಆಚಾರ ಎಂದು ಪತ್ರಿಕೆಗಳಲ್ಲಿ ಬಂದಿದೆ. ಖಾಲಿ ಹುದ್ದೆಗಳನ್ನು ಎಷ್ಟು ಬೇಗ ಭರ್ತಿ ಮಾಡುತ್ತಾರೆ. ರಾಜ್ಯ ಸರ್ಕಾರದ ನಿಯಮಾವಳಿ ಪ್ರಕಾರ ಗೌರವ ಧನ ಕನಿಷ್ಟ ರೂ.18,000 ಕೊಡಬೇಕು ಎಂದು ಇದ್ದು, ಆಶಾ ಕಾರ್ಯಕರ್ತರಿಗೆ ರೂ.10,000 ಮತ್ತು ಸಹಾಯಕರಿಗೆ ರೂ.5,000 ಕೊಡುತ್ತಿದ್ದಾರೆ. ಮೊನ್ನೆ ಬಜೆಟ್‌ನಲ್ಲಿ ಅವರು ಮಾಡಿರುವ ಸೇವೆಯ ಆಧಾರದ ಮೇಲೆ ಗೌರವ ಧನವನ್ನು ಹೆಚ್ಚಿಸಲು ನಿರ್ಧರಿಸಲಾಗಿದೆ. 20 ವರ್ಷಕ್ಕಿಂತ ಹೆಚ್ಚು ಸೇವೆ ಸಲ್ಲಿಸಿದವರಿಗೆ ರೂ.1,500 ಮತ್ತು 10-20 ವರ್ಷ ಸೇವೆ ಸಲ್ಲಿಸಿದವರಿಗೆ ರೂ.1,250 ಮತ್ತು 10 ಕ್ಕಿಂತ ಕಡಿಮೆ ವರ್ಷ ಸೇವೆ ಸಲ್ಲಿಸಿದವರಿಗೆ ರೂ.1,000 ಹೆಚ್ಚಿಸಿರುವುದು ಒಳ್ಳೆಯದು. ಆದರೆ ಆದಷ್ಟು ಬೇಗ ಅವರಿಗೆ ಇನ್ನೂ ಹೆಚ್ಚು ಗೌರವ ಧನ ಕೊಡುವ ಕೆಲಸ ಆಗಬೇಕು ಹಾಗೂ ಸುಮ್ಮನೆ ಸೂಚಿಸಲಾಗಿದೆ ಎಂದು ಉತ್ತರಿಸದೇ ಆದಷ್ಟು ಬೇಗ ಖಾಲಿ ಇರುವ ಹುದ್ದೆಗಳನ್ನು time bound ನಲ್ಲಿ ಭರ್ತಿ ಮಾಡಬೇಕು.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅಂಗನವಾಡಿ ಕೇಂದ್ರಗಳು ಎಷ್ಟಿವೆ ಎಂಬ ಪ್ರಶ್ನೆಯು ನನ್ನ ಇಲಾಖೆಗೆ ಸಂಬಂಧಪಡುತ್ತದೆ. ಇನ್ನುಳಿದಂತೆ ಆಶಾ ಕಾರ್ಯಕರ್ತರ ಹುದ್ದೆಗಳು ಖಾಲಿ ಇದ್ದಲ್ಲಿ ಹುದ್ದೆಗಳನ್ನು ತುಂಬಲು ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತದೆ ಎಂಬ ಪ್ರಶ್ನೆಯು ನನ್ನ ಇಲಾಖಾ ವ್ಯಾಪ್ತಿಗೆ ಬರುತ್ತದೆ. ತುಮಕೂರು ಜಿಲ್ಲೆಯಲ್ಲಿ ಒಟ್ಟು

4,109 ಅಂಗನವಾಡಿ ಕಾರ್ಯಕರ್ತರಿದ್ದಾರೆ. ಇನ್ನು 2,116 ಆಶಾ ಕಾರ್ಯಕರ್ತರಿದ್ದಾರೆ. ಆಶಾ ಕಾರ್ಯಕರ್ತರ ಹುದ್ದೆಗಳನ್ನು ತುಂಬಲು ಪ್ರಶ್ನೆ ಕೇಳಿದ್ದು, ಇದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಗೆ ಬರುತ್ತಿದ್ದು, ನಾನು ಉತ್ತರವನ್ನು ತರಿಸಿಕೊಂಡಿದ್ದೇನೆ. ಸಮುದಾಯ ಮತ್ತು ಆರೋಗ್ಯ ವ್ಯವಸ್ಥೆಯ ನಡುವೆ ಕೆಲಸ ಮಾಡುತ್ತಿರುವವರಿಗೆ ಆಶಾ ಕಾರ್ಯಕರ್ತರು ಎಂದು ನಿಯುಕ್ತಿ ಮಾಡಿರುತ್ತೇವೆ. ಅಲ್ಲಿನ ಆರೋಗ್ಯವನ್ನು ನೋಡಿಕೊಳ್ಳುವಲ್ಲಿ ಸಂಘಟನಾತ್ಮಕವಾಗಿ ಕೆಲಸ ಮಾಡುತ್ತಾರೆ. ಗ್ರಾಮ ಪಂಚಾಯ ಆಯ್ಕೆ ಮೂಲಕ ಪ್ರಾರಂಬ ಮಾಡುತ್ತಾರೆ. ಗ್ರಾಮ ಪಂಚಾಯಿತಿಯಲ್ಲಿ ಆರೋಗ್ಯ ಇಲಾಖಾಧಾರಿಗಳು ಮತ್ತು ಮುಖ್ಯವಾಗಿ ಕಿರಿಯ ಪ್ರಾಥಮಿಕ ಆರೋಗ್ಯ ಸುರಕ್ಷಾ ಅಧಿಕಾರಿಗಳು ಅಂದರೆ ಹಿಂದೆ ಏನು ANM (Auxiliary Nurse Midwife) ಎನ್ನುವವರು ಒಂದು ಸಾವಿರ ಜನಸಂಖ್ಯೆಯಿಂದ 1,200 ಜನಸಂಖ್ಯೆಗನುಗುಣವಾಗಿ ಒಬ್ಬರನ್ನು ಹಾಗೂ ಪಟ್ಟಣಗಳಲ್ಲಿ 2,500 ದಿಂದ 3,000 ಜನಸಂಖ್ಯೆಗೆ ಒಬ್ಬರಂತೆ ಆಯ್ಕೆ ಮಾಡುತ್ತಾರೆ. ಮಾನ್ಯ ಸದಸ್ಯರು ಹೇಳಿದಂತೆ ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತರಿಗೆ ರೂ.1,000 ಗೌರವ ಧನವನ್ನು ಹೆಚ್ಚು ಮಾಡಿದ್ದೇವೆ. ಆಯ್ಕೆಯ ಬಗ್ಗೆ ಅನುಬಂಧದಲ್ಲಿ ಉತ್ತರವನ್ನು ಕೊಟ್ಟಿದ್ದು, ಜಿಲ್ಲಾ RCH (Reproductive and Child Health) ಅಧಿಕಾರಿಗಳು ಈ ಬಗ್ಗೆ ಕ್ರಮ ತೆಗೆದುಕೊಂಡಿದ್ದಾರೆ. ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕೊರತೆ ಇರುವವರನ್ನು ತುಂಬಿಸಲು ಏನೇನು ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಅನುಬಂಧದಲ್ಲಿ ನೀಡಲಾಗಿದೆ. ಆಗಾಗ್ಗೆ ಅವುಗಳನ್ನು ತುಂಬುತ್ತಿದ್ದು, ಜಿಲ್ಲಾ CEO ಗಳು ವಿಶೇಷ ಜವಾಬ್ದಾರಿ ವಹಿಸಿ ಭರ್ತಿ ಮಾಡುತ್ತಾರೆ. ಅಂಗನವಾಡಿ ಕಾರ್ಯಕರ್ತರನ್ನು ತುಂಬಲು ಸಂಬಂಧಪಟ್ಟ ಸಮಿತಿಗೆ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುತ್ತಾರೆ. ಅಲ್ಲಿ ಖಾಲಿ ಇರುವ ಹುದ್ದೆಗಳಿಗೆ 3 ತಿಂಗಳಲ್ಲಿ notification ಮಾಡಿ, ಬಂದಿರುವ ಅರ್ಜಿಗಳನ್ನು ಪರಿಶೀಲಿಸಿ, ಸೂಕ್ತ ನಿಯಮಗಳನ್ವಯ ಆಯ್ಕೆ ಮಾಡುತ್ತೇವೆ, ಈ ಪ್ರಕ್ರಿಯೆ ನಿರಂತರವಾಗಿರುತ್ತದೆ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಆರ್. ರಾಜೇಂದ್ರ ರಾಜಣ್ಣ:-** ಮಾನ್ಯ ಸಚಿವರು ಆದಷ್ಟು ಬೇಗ ಭರ್ತಿ ಮಾಡಿದರೆ ಆಯಿತು.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:-** ಆಯಿತು.

**ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ 15ನೇ ಮಾರ್ಚ್ 2022 ರ ಸಮೂಹ–2 ರ ಲಿಖಿತ ಮೂಲಕ ಉತ್ತರಿಸುವ ಒಟ್ಟು ಪ್ರಶ್ನೆಗಳ ಪೈಕಿ 30 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

**(ಉತ್ತರಗಳನ್ನು ಲಗತ್ತಿಸಬೇಕು)**

## ೦೩. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

### ಅ) ವಿಷಯ:– ಪುರಭವನ ಶಿಥಿಲಾವಸ್ಥೆ ಬಗ್ಗೆ

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮೈಸೂರು ಸಂಸ್ಥಾನದಲ್ಲಿ ಅರಸರಾಗಿ ಆಳ್ವಿಕೆ ನಡೆಸಿದ ಚಾಮರಾಜ ಒಡೆಯರ್ ರವರ ಅಧಿಕಾರವಧಿಯಲ್ಲಿ ಮೊದಲ ದಿವಾನರಾಗಿ ಉತ್ತಮ ಸೇವೆ ಸಲ್ಲಿಸಿದ್ದ ಶ್ರೀ ಸಿ.ವಿ. ರಂಗಾಚಾರ್ಲು ರವರ ಸ್ಮರಣಾರ್ಥವಾಗಿ 1884 ರಲ್ಲಿ ನಿರ್ಮಾಣಗೊಂಡ 138 ವರ್ಷ ಕಳೆದಿರುವ ಪುರಭವನದ ಕಟ್ಟಡ ಶಿಥಿಲಾವಸ್ಥೆ ತಲುಪಿದ್ದು, ಇದರಿಂದ ಮೈಸೂರು ನಗರದ ಪಾರಂಪರಿಕತೆಗೆ ದೊಡ್ಡ ಮಟ್ಟದ ನಷ್ಟ ಉಂಟಾಗಿದೆ. ನಿರ್ವಹಣೆಯ ಕೊರತೆ ಮತ್ತು ನ್ಯಾಯಾಲಯದಲ್ಲಿ ಪ್ರಕರಣದ ಅಡ್ಡಿಯಿಂದಾಗಿ ಮೈಸೂರು ಮಹಾನಗರ ಪಾಲಿಕೆ ದುರಸ್ತಿ ಮಾಡಲಾಗದೇ ಕೈಕಟ್ಟಿ ಕೂರಬೇಕಾಗಿದೆ.

ಈ ಹಿಂದೆ ಪುರಭವನ ಕಟ್ಟಡ ಹಾಗೂ ಆವರಣದಲ್ಲಿ ಮಲ್ಟಿಲೆವಲ್ ಪಾರ್ಕಿಂಗ್ ಕಟ್ಟಡ ನಿರ್ಮಾಣಕ್ಕಾಗಿ ಗುತ್ತಿಗೆ ಪಡೆದಿದ್ದ ಹೈದ್ರಾಬಾದ್ ಮೂಲದ ಛಾಬ್ರಿಯಾ ಅಸೋಸಿಯೇಟ್ ಮಾಡಿದ ಯಡವಟ್ಟಿನಿಂದ ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥಗೊಳಿಸಲು ಅಧಿಕಾರಿಗಳು ಹಾಗು ಜನಪ್ರತಿನಿಧಿಗಳಲ್ಲಿ ಇಚ್ಛಾಶಕ್ತಿ ಇಲ್ಲದ ಕಾರಣ ಮೈಸೂರಿನ ಪಾರಂಪರಿಕ ಕಟ್ಟಡದಲ್ಲಿ ಒಂದಾಗಿರುವ ಸಂಗೀತ ಕಲೆ ನಾಟಕ ವೈಭವಕ್ಕೆ ಮೆರಗು ನೀಡುತ್ತಿದ್ದು, ಪುರಭವನ ಕಟ್ಟಡ ಶಿಥಿಲಾವಸ್ಥೆಗೆ ತಲುಪಿದೆ. ಈ ಕಟ್ಟಡ ಹಂತಹಂತವಾಗಿ ಕುಸಿಯುವ ಹಂತಕ್ಕೆ ತಲುಪಿದೆ. ಆದ್ದರಿಂದ ಸರ್ಕಾರ ಈ ಬಗ್ಗೆ ಗಮನಹರಿಸಿ ಆದಷ್ಟು ಬೇಗ ಸದರಿ ಪುರಭವನದ ಕಟ್ಟಡವನ್ನು ದುರಸ್ತಿ ಮಾಡುವ ಮೂಲಕ ರಾಜ್ಯದ ಐತಿಹಾಸಿಕ ಕಟ್ಟಡವನ್ನು ಉಳಿಸಿಕೊಳ್ಳಲು ಕ್ರಮ ವಹಿಸಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

(ಮುಂದು)

(338) 15.03.2022 12.40 ಹೆಚ್‌ವಿ:ಎಂ.ಡಿ

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಮುಂದು):-**

ಸರ್ಕಾರ ಈ ಬಗ್ಗೆ ಗಮನಹರಿಸಿ ಸದರಿ ಪುರಭವನದ ಕಟ್ಟಡವನ್ನು ದುರಸ್ತಿ ಮಾಡುವ ಮೂಲಕ ರಾಜ್ಯದ ಐತಿಹಾಸಿಕ ಕಟ್ಟಡವನ್ನು ಉಳಿಸಿಕೊಳ್ಳಲು ಕ್ರಮವಹಿಸಬೇಕೆಂದು ವಿಶೇಷವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನು ಮತ್ತು ಸರ್ಕಾರವನ್ನು ಈ ಮೂಲಕ ಒತ್ತಾಯಿಸುತ್ತಿದ್ದೇನೆ.

ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):- ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ವಿಚಾರಕ್ಕೆ ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಿಂದ ಉತ್ತರವನ್ನು ಒದಗಿಸಲಾಗುತ್ತದೆ.

**ಆ)ವಿಷಯ: ಸರ್ಕಾರಿ ಇಲಾಖೆಗಳಲ್ಲಿ ನೇಮಕಗೊಂಡ ಪರಿಶಿಷ್ಟ ಪಂಗಡದ ಗೊಂಡ, ಟೋಕರೆ, ಕೋಳಿ ಜಾತಿಗಳ ಸಿಂಧುತ್ವ ಪ್ರಮಾಣ ಪತ್ರ ನೀಡಿಕೆ ಕುರಿತು**

-----

**ಡಾ॥ ತಳವಾರ್ ಸಾಬಣ್ಣ(ನಾಮನಿರ್ದೇಶಿತರು):-** ಸನ್ಮಾನ್ಯ ಸಭಾಪತಿಯವರೇ, ಪರಿಶಿಷ್ಟ ಪಂಗಡದ ಗೊಂಡ, ಟೋಕರೆ, ಕೋಳಿ ಹಾಗೂ ಇನ್ನಿತರ ಕೆಲ ಜಾತಿಗಳ ಅಭ್ಯರ್ಥಿಗಳು ಸರ್ಕಾರಿ ನೇಮಕಾತಿಗೆ ಆಯ್ಕೆಯಾದರೂ ಸಿಂಧುತ್ವ ಪ್ರಮಾಣ ಪತ್ರ ಪಡೆಯಲು ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ವರದಿ ಕಡ್ಡಾಯಗೊಳಿಸಿರುವುದರಿಂದ ಅತಂತ್ರ ಸ್ಥಿತಿಗೆ ಸಿಲುಕಿದ್ದಾರೆ. ಕಲ್ಯಾಣ ಕರ್ನಾಟಕದ ಸಾವಿರಾರು ಅಭ್ಯರ್ಥಿಗಳು ಪೊಲೀಸ್, ಆರೋಗ್ಯ, ಕೆ.ಎಸ್.ಆರ್.ಟಿ.ಸಿ. ಹಾಗೂ ಇನ್ನಿತರ ಇಲಾಖೆಗಳಲ್ಲಿ ವಿವಿಧ ಸ್ತರದ ನೌಕರಿ ಸಿಕ್ಕರೂ ಸಕಾಲಕ್ಕೆ ಸಿಂಧುತ್ವ ಪ್ರಮಾಣ ಪತ್ರ ದೊರೆಯದ ಹಿನ್ನೆಲೆಯಲ್ಲಿ ನೌಕರಿಗೆ ಹಾಜರಾಗಲು ಸಾಧ್ಯವಾಗುತ್ತಿಲ್ಲ. ಕೆಲಸ ಸಿಕ್ಕಿ ವರ್ಷವಾದರೂ, ಎಷ್ಟೇ ಅಲೆದಾಡಿದರೂ ಸಿಂಧುತ್ವ ಪ್ರಮಾಣ ಪತ್ರ ಸಿಗುತ್ತಿಲ್ಲ. ಭಾರತ ಸಂವಿಧಾನದ ಪರಿಚ್ಛೇದ 15ರಲ್ಲಿ ಜಾತಿ, ಧರ್ಮ, ಹುಟ್ಟಿದ ಸ್ಥಳ ಹಾಗೂ ಲಿಂಗ ಇವುಗಳಲ್ಲಿ ಯಾವುದೇ ತಾರತಮ್ಯ ಮಾಡಲು ಅವಕಾಶವಿಲ್ಲ. ಆದರೆ, 51 ಜಾತಿಗಳ ಪೈಕಿ ಕೇವಲ 12 ಜಾತಿಗಳಿಗೆ ಮಾತ್ರ ಸೀಮಿತಗೊಳಿಸಿ ಸಿಂಧುತ್ವ ಪ್ರಮಾಣ

ಪತ್ರಕ್ಕಾಗಿ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ವರದಿ ಕಡ್ಡಾಯಗೊಳಿಸಿರುವುದು ಸಂವಿಧಾನದ ಆಶಯಗಳಿಗೆ ಧಕ್ಕೆಯುಂಟು ಮಾಡಿದೆ. 1993ರಲ್ಲಿಯೇ ಆಯಾ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಜಾತಿ ಪರಿಶೀಲನಾ ಸಮಿತಿಯನ್ನು ಸರ್ಕಾರ ರಚಿಸಿ ಸಿಂಧುತ್ವ ಪ್ರಮಾಣ ಪತ್ರ ನೀಡಲು ಅವಕಾಶ ಕಲ್ಪಿಸಲಾಗಿದೆ. ಎಸ್.ಬಿ.ಎಚ್. ನೌಕರರ ಪ್ರಕರಣವೊಂದರಲ್ಲಿ ಕರ್ನಾಟಕ ಹೈಕೋರ್ಟ್ 1997ರ ಜುಲೈ 7ರಂದು ಸಿಂಧುತ್ವ ಪ್ರಮಾಣ ಪತ್ರಗಳನ್ನು ಸಂಬಂಧಿಸಿದ ಜಿಲ್ಲೆಯ ಜಾತಿ ಪರಿಶೀಲನಾ ಸಮಿತಿಗಳೇ ಪರಿಶೀಲಿಸಬೇಕೆಂದಿದೆ. ಮುಂದುವರೆದು, ಸುಪ್ರೀಂ ಕೋರ್ಟ್ ಆದೇಶದನ್ವಯ ಯಾರಾದರು ಸುಳ್ಳು ಜಾತಿ ಪ್ರಮಾಣ ಪತ್ರ ತೆಗೆದುಕೊಂಡರೆ, ಸಿ.ಆರ್.ಸಿ. ಸೆಲ್‌ಗೆ ಪರಿಶೀಲನೆಗೆ ಒಳಪಡಿಸಬೇಕೆಂದಿದೆ. ಆದರೆ, ಸುಪ್ರೀಂ ಕೋರ್ಟ್ ಆದೇಶವನ್ನು ದುರುಪಯೋಗಪಡಿಸಿಕೊಂಡು ಎಲ್ಲರೂ ಜಾತಿ ಸಿಂಧುತ್ವ ಪ್ರಮಾಣ ಪತ್ರ ಜಾರಿ ನಿರ್ದೇಶನಾಲಯದಿಂದಲೇ ಪಡೆಯಬೇಕೆಂದು ದಿನಾಂಕ:16.01.2021ರಂದು ಆದೇಶ ಜಾರಿಗೊಳಿಸಿರುವುದು ಇಷ್ಟೆಲ್ಲಾ ಸಮಸ್ಯೆಗಳಿಗೆ ಕಾರಣವಾಗಿದೆ. ಮುಂದುವರೆದು ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಯಲ್ಲಿ ಚಾಲಕನಾಗಿ ಸೇವೆ ಸಲ್ಲಿಸುತ್ತಿದ್ದ ಹುಮ್ನಾಬಾದ್ ತಾಲ್ಲೂಕಿನ ಕುಮಾರ ಚಿಂಚೋಳಿ ಗ್ರಾಮದ ಶ್ರೀ ಓಂಕಾರಪ್ಪ ರೇವಣಪ್ಪ ಅವರು ಸಕಾಲದಲ್ಲಿ ಸಿಂಧುತ್ವ ಪ್ರಮಾಣ ಪತ್ರ ಸಿಗದ ಕಾರಣ ಭಾನುವಾರ ಆತ್ಮಹತ್ಯೆಗೆ ಶರಣಾಗಿರುವುದು ಸಮಸ್ಯೆಯ ಗಂಭೀರತೆಯನ್ನು ಎತ್ತಿ ತೋರಿಸುತ್ತದೆ. ಅವರ ಸಾವಿಗೆ ಯಾರನ್ನು ಹೊಣೆಗಾರರನ್ನಾಗಿ ಮಾಡಬೇಕು? ಕಲ್ಯಾಣ ಕರ್ನಾಟಕದಲ್ಲಿನ ಸಿಂಧುತ್ವ ಸಮಸ್ಯೆಯನ್ನು ಬಗೆಹರಿಸಲು ತಕ್ಷಣವೇ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ವರದಿ ಕಡ್ಡಾಯ ಎಂಬ ಆದೇಶವನ್ನು ಹಿಂದಕ್ಕೆ ಪಡೆದು ಮೊದಲಿನಂತೆ ಜಿಲ್ಲಾ ಜಾತಿ ಪರಿಶೀಲನೆ ಸಮಿತಿಯಿಂದ ಜಾತಿ ಸಿಂಧುತ್ವ ಪ್ರಮಾಣ ಪತ್ರ ನೀಡಲು ಆದೇಶ ನೀಡಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಈ ಮೂಲಕ ಕೋರುತ್ತೇನೆ.

ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):- ಸನ್ಮಾನ್ಯ ಸಭಾಪತಿಯವರೇ, ಮಾನ್ಯ ತಳವಾರ್ ಸಾಬಣ್ಣನವರು ಪ್ರಸ್ತಾಪ ಮಾಡಿರುವ ವಿಚಾರವನ್ನು ನಿನ್ನೆಯ ದಿನ ಮಾನ್ಯ ಶಶೀಲ್ ಜಿ.ನಮೋಶಿಯವರು ಸಹ ಪ್ರಸ್ತಾಪ ಮಾಡಿದ್ದರು. ಇದು ಅತ್ಯಂತ ಗಂಭೀರವಾಗಿದ್ದು, ಹುಮ್ನಾಬಾದ್ ತಾಲ್ಲೂಕಿನ ಕುಮಾರ ಚಿಂಚೋಳಿ ಗ್ರಾಮದ ಶ್ರೀ ಓಂಕಾರಪ್ಪ ರೇವಣಪ್ಪನವರ ಆತ್ಮಹತ್ಯೆಯ

ಪ್ರಕರಣವೂ ಸಹ ಈ ವಿಚಾರದ ಅಡಿಯಲ್ಲಿಯೇ ಬರುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಈ ವಿಚಾರದ ಬಗ್ಗೆ ನಿನ್ನೆ ಕೆಳಮನೆಯಲ್ಲಿ ಸ್ಪಷ್ಟನೆ ಕೊಟ್ಟಿದದಾರೆ. ಅದರ ಸಾರಾಂಶವೇನೆಂದರೆ, ಜಿಲ್ಲಾ ಜಾತಿ ಪರಿಶೀಲನಾ ಸಮಿತಿಯು ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದಿಂದ ವರದಿಯನ್ನು ಪಡೆದು ಜಾತಿ ಸಿಂಧುತ್ವ ಪ್ರಮಾಣ ಪತ್ರವನ್ನು ಪಡೆಯುವ ಬಗ್ಗೆ ಅಡ್ವೋಕೇಟ್ ಜನರಲ್ ಅವರನ್ನು ಮತ್ತು ಕಾನೂನು ಇಲಾಖೆಯ ಅಭಿಪ್ರಾಯವನ್ನು ಪಡೆದು ಸುತ್ತೋಲೆಯನ್ನು ಹಿಂಪಡೆಯುವ ಬಗ್ಗೆ ಕ್ರಮ ವಹಿಸಲಾಗುವುದು ಎನ್ನುವ ಉತ್ತರವನ್ನು ನೀಡಿದ್ದಾರೆ. ಮಾನ್ಯ ಸದಸ್ಯರು ಶ್ರೀ ಓಂಕಾರಪ್ಪ ರೇವಣಪ್ಪನವರ ಆತ್ಮಹತ್ಯೆಯ ಬಗ್ಗೆ ಉಲ್ಲೇಖಿಸುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಮಾನವೀಯತೆಯ ಹಿನ್ನೆಲೆಯಲ್ಲಿ ಏನು ಪರಿಹಾರವನ್ನು ಕೊಡಬಹುದು ಅದನ್ನು ಸಹ ನೀಡುತ್ತಾರೆ. ಮೃತರ ಸಂಬಂಧಿಕರಿಗೆ ನೌಕರಿಯನ್ನು ನೀಡಲಾಗುವುದೆಂದು ಮಾನ್ಯ ಮುಖ್ಯಮಂತ್ರಿಗಳು ಭರವಸೆಯನ್ನು ನೀಡಿದ್ದಾರೆ ಎನ್ನುವ ಅಂಶಗಳನ್ನು ಸದನದ ಗಮನಕ್ಕೆ ತರಲು ಬಯಸುತ್ತಿದ್ದೇನೆ.

**ಇ)ವಿಷಯ: ರಾಜ್ಯದಲ್ಲಿ ವಿವಾಹಿತ ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯ ಮತ್ತು ಯುವತಿಯರ ಮೇಲಿನ ಲೈಂಗಿಕ ದೌರ್ಜನ್ಯಕ್ಕೆ ಕಡಿವಾಣ ಹಾಕುವ ಕುರಿತು**

-----

**ಶ್ರೀ ಸಲೀಂ ಅಹಮದ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ವಿವಾಹಿತ ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯ ಮತ್ತು ಯುವತಿಯರ ಮೇಲಿನ ಲೈಂಗಿಕ ದೌರ್ಜನ್ಯವು ಕಳೆದ ಸಾಲಿಗಿಂತ ದುಪ್ಪಟ್ಟಾಗಿರುವ ವಿಷಯವು ಆತಂಕಕಾರಿ ವಿಷಯವಾಗಿರುವುದರಿಂದ ಸದನದಲ್ಲಿ ಪ್ರಸ್ತಾಪಿಸಲು ಅನುಮತಿ ಕೋರುತ್ತಿದ್ದೇನೆ.

ಕರ್ನಾಟಕ ರಾಜ್ಯದಲ್ಲಿ 2020ರಲ್ಲಿ ರಾಷ್ಟ್ರೀಯ ಕುಟುಂಬ ಆರೋಗ್ಯ ಘಟಕವು ನಡೆಸಿದ ಸಮೀಕ್ಷೆಯಲ್ಲಿ 11 ರಿಂದ 49 ವರ್ಷ ವಯಸ್ಸಿನ ಹೆಣ್ಣು ಮಕ್ಕಳು ಹಾಗೂ ವೈವಾಹಿಕ ಮಹಿಳೆಯರ ಮೇಲೆ ಶೇಕಡಾ 20.6ರಷ್ಟಿದೆ. ದೌರ್ಜನ್ಯ ಪ್ರಕರಣಗಳು ಈ ಬಾರಿ ಶೇಕಡಾ 44.4ರಷ್ಟಕ್ಕೆ ಏರಿಕೆಯಾಗಿದೆ. 18 ವರ್ಷ ವಯಸ್ಸಿನೊಳಗಿನ ಹೆಣ್ಣು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಗಳು ಶೇಕಡಾ 10.3ರಿಂದ ಶೇಕಡಾ 11ಕ್ಕೆ ಏರಿಕೆಯಾಗಿರುವುದು ವರದಿಯಲ್ಲಿ ಪ್ರಕಟವಾಗಿದೆ.

ಹೆಣ್ಣು ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳು ನಗರ ಪ್ರದೇಶಗಳಲ್ಲಿ ಶೇಕಡಾ 48ರಷ್ಟು ಗ್ರಾಮೀಣ ಪ್ರದೇಶಗಳಲ್ಲಿ ಶೇಕಡಾ 49ರಷ್ಟು ಹೆಚ್ಚಾಗಿರುವುದು ಕಂಡು ಬಂದಿದೆ. ಕರೋನಾ ಸೋಂಕು ಹರಡಲು ಆರಂಭವಾದ ನಂತರ ಜಗತ್ತಿನಾದ್ಯಂತ ಕೌಟುಂಬಿಕ ದೌರ್ಜನ್ಯ ಹಾಗೂ ವಿಚ್ಛೇಧನಗಳ ಸಂಖ್ಯೆ ಹೆಚ್ಚಳವಾದ ಬಗ್ಗೆ ವರದಿಯಾಗಿತ್ತು. ರಾಜ್ಯದಲ್ಲಿ ಹೆಣ್ಣು ಮಕ್ಕಳ ಮೇಲಿನ ದೌರ್ಜನ್ಯದ ಕುರಿತು ರಾಜ್ಯ ಮಹಿಳಾ ಆಯೋಗದಲ್ಲಿ 1230 ಅರ್ಜಿಗಳು ಸ್ವೀಕೃತವಾಗಿದ್ದು, ಅದರಲ್ಲಿ ಕೇವಲ 515 ಪ್ರಕರಣಗಳು ಇತ್ಯರ್ಥವಾಗಿದ್ದು, ಇನ್ನೂ 715 ಪ್ರಕರಣಗಳು ಬಾಕಿ ಇವೆ.

ಆದ್ದರಿಂದ ಸರ್ಕಾರವು ತಕ್ಷಣವೇ ಈ ಬಾಕಿ ಉಳಿದಿರುವ ಪ್ರಕರಣಗಳನ್ನು ಶೀಘ್ರಗತಿಯಲ್ಲಿ ವಿಲೇವಾರಿ ಮಾಡಲು ವಿಶೇಷ ಅದಾಲತ್‌ಗಳನ್ನು ನಡೆಸಿ, ವಿವಾಹಿತ ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯ ಮತ್ತು ಯುವತಿಯರ ಮೇಲಿನ ಲೈಂಗಿಕ ದೌರ್ಜನ್ಯ ಹಾಗೂ ಇನ್ನಿತರೆ ಪ್ರಕರಣಗಳಿಗೆ ಕಡಿವಾಣ ಹಾಕುವ ಸಂಬಂಧ ಕಠಿಣ ನಿಯಮಗಳನ್ನು ಜಾರಿಗೊಳಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ಈ ಸದನದ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಗೃಹ ಸಚಿವರಿಂದ ಉತ್ತರವನ್ನು ಒದಗಿಸಲಾಗುತ್ತದೆ.

**ಶ್ರೀಮತಿ ಭಾರತಿ ಶೆಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಈ ಪ್ರಕರಣಗಳನ್ನು ತಡೆಗಟ್ಟುವುದಕ್ಕೆ ಕಠಿಣ ಕಾನೂನುಗಳನ್ನು ಜಾರಿಗೊಳಿಸುವುದಾಗಿ ಸರ್ಕಾರ ಭರವಸೆಯನ್ನು ನೀಡಿತ್ತು. ಆದರೆ, ಇಲ್ಲಿಯವರೆವಿಗೂ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಮಹಿಳೆಯರ ಮೇಲಿನ ದೌರ್ಜನ್ಯ ನಿರಂತರವಾಗಿ ನಡೆಯುತ್ತಲೇ ಇದೆ.

**ಸಭಾಪತಿಯವರು:–** ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯದ ಮೇಲೆ ಚರ್ಚೆಗೆ ಅವಕಾಶವಿರುವುದಿಲ್ಲ.

**ಈ) ವಿಷಯ: ಕರೋನಾ ಸೋಂಕು ಸಂದರ್ಭದಲ್ಲಿ ನೇಮಕ ಮಾಡಿಕೊಂಡ 4000 ಸಿಬ್ಬಂದಿಗಳನ್ನು ಬಿಡುಗಡೆಗೊಳಿಸುತ್ತಿರುವ ಕುರಿತು**

**-----**

**ಡಾ॥ ಡಿ.ತಿಮ್ಮಯ್ಯ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಕಳೆದ 2019-2020, 2020-21ನೇ ಸಾಲಿನಲ್ಲಿ ಜಗತ್ತಿನಾದ್ಯಂತ ಕರೋನಾ ಸೋಂಕು ವ್ಯಾಪಕವಾಗಿ ಹರಡಿ ಲಕ್ಷಾಂತರ ಸಾವುಗಳು ಸಂಭವಿಸಿರುವುದು ಸತ್ಯ. ಹಾಗೆಯೇ ಭಾರತ ಮತ್ತು ಕರ್ನಾಟಕ ರಾಜ್ಯದಲ್ಲೂ ಕೂಡ ತೀವ್ರ ಸ್ವರೂಪದ ಸೋಂಕಿನಿಂದ ಸಾವಿರಾರು ಜನರು ಸಾವನ್ನಪ್ಪಿರುವುದು ಸಹ ನಿಜ. ಇಂತಹ ಅನಿರೀಕ್ಷಿತ ಸಾಂಕ್ರಾಮಿಕ ರೋಗವನ್ನು ಸಮರೋಪಾದಿಯಲ್ಲಿ ಆರೋಗ್ಯ ಇಲಾಖೆಯ ವೈದ್ಯರು, ಶುಶ್ರೂಷಕರು, ಅಂಗನವಾಡಿ ಕಾರ್ಯಕರ್ತೆಯರು, ಇತರೆ ಆರೋಗ್ಯ ಇಲಾಖೆಯ ಸಿಬ್ಬಂದಿಗಳು ಇದನ್ನು ಸವಾಲಾಗಿ ಸ್ವೀಕರಿಸಿ ಸೇವೆ ಸಲ್ಲಿಸಿರುವುದು ಕೂಡ ಮೆಚ್ಚಬೇಕಾದ ವಿಷಯ.

ಅಂತಹ ಪರಿಸ್ಥಿತಿಯಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿದ್ದ ಆರೋಗ್ಯ ಇಲಾಖೆಯ ವಿವಿಧ ವರ್ಗಗಳ ಸಿಬ್ಬಂದಿ ಕರೋನಾ ರೋಗ ನಿಯಂತ್ರಿಸಲು ಸಿಬ್ಬಂದಿ ಪ್ರಮಾಣ ಕಡಿಮೆ ಇದ್ದುದರಿಂದ ರೋಗ ನಿಯಂತ್ರಿಸಲು ಮತ್ತು ರೋಗಿಗಳಿಗೆ ಸಕಾಲದಲ್ಲಿ ಚಿಕಿತ್ಸೆ ನೀಡಲು ಆ ವರ್ಷದಲ್ಲಿ ಹಂಗಾಮಿಯಾಗಿ ಕೆಲವು ವೈದ್ಯರು, ಶುಶ್ರೂಷಕರು, ಟೆಕ್ನೀಷಿಯನ್ಸ್, ವಾಹನ ಚಾಲಕರು, ಡಿ-ಗ್ರೂಪ್ ನೌಕರರು ಹಾಗೂ ಶೌಚಾಲಯ ಸ್ವಚ್ಛಗೊಳಿಸುವ ಕಾರ್ಮಿಕರು ಹೀಗೆ ರಾಜ್ಯಾದ್ಯಂತ ಸುಮಾರು 4000 ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳಲಾಗಿತ್ತು. ಇವರುಗಳು ಕರೋನಾ ರೋಗ ನಿಯಂತ್ರಿಸಲು ಹಗಲಿರುಳು ರೋಗಿಗಳಿಗೆ ಸೇವೆ ಮಾಡಿ ಸೋಂಕಿನಿಂದ ಉಂಟಾಗುವ ಸಾವುನೋವುಗಳಿಗೆ ಹೆದರದೆ ಸೇವೆ ಸಲ್ಲಿಸಿರುವುದು ಶ್ಲಾಘನೀಯ. ಇಂತಹ ಪರಿಸ್ಥಿತಿಯಲ್ಲಿ ಪ್ರಾಣದ ಹಂಗನ್ನು ತೊರೆದು ಸಾರ್ವಜನಿಕರ ಪ್ರಾಣ ರಕ್ಷಣೆಗೆ ತಮ್ಮನ್ನು ತೊಡಗಿಸಿಕೊಂಡ ಈ 4000 ಸಿಬ್ಬಂದಿಗಳನ್ನು ಕರ್ತವ್ಯದಿಂದ ವಿಮುಕ್ತಿಗೊಳಿಸುವ ಪ್ರಯತ್ನ ನಡೆಯುತ್ತಿದೆ ಎಂದು ತಿಳಿದು ಬಂದಿದೆ. ಇದು ನಿಜಕ್ಕೂ ಶೋಚನೀಯ ಹಾಗೂ ಅಮಾನವೀಯ ಕ್ರಮ ಎಂದು ಭಾವಿಸಬೇಕಾಗುತ್ತದೆ. ದಯಮಾಡಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಸಾರ್ವಜನಿಕ ಹಿತದೃಷ್ಟಿಯಿಂದ ಸೋಂಕು ನಿಯಂತ್ರಿಸಿ ಸಾವಿರಾರು ಜನರ ಪ್ರಾಣ ಉಳಿಸಿದ ಈ 4000 ಸಿಬ್ಬಂದಿಗಳ ಸೇವೆಯನ್ನು

ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳಲ್ಲಿ ಮುಂದುವರೆಸಿ ಸಾಮಾಜಿಕ ನ್ಯಾಯ ದೊರಕಿಸಿಕೊಡಬೇಕಾಗಿ ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಚಾರಕ್ಕೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಂದ ಉತ್ತರವನ್ನು ಒದಗಿಸಲಾಗುತ್ತದೆ.

**ಉ) ವಿಷಯ: ಚೆನ್ನೈ ಎಕ್ಸ್‌ಪ್ರೆಸ್ ಕಾರಿಡಾರ್ ಕಾಮಗಾರಿಗೆ ಕೋಲಾರ ಜಿಲ್ಲಾಧಿಕಾರಿಯವರು ಕೆರೆಗಳಲ್ಲಿ ಮಣ್ಣು ತೆಗೆಯಲು ನೀಡಿರುವ ಅನುಮತಿಯನ್ನು ರದ್ದುಪಡಿಸಿ ಧೂಳಿನಿಂದ ಹಾಳಾಗಿರುವ ಬೆಳೆಗೆ ಪರಿಹಾರ ಮಂಜೂರು ಮಾಡುವ ಕುರಿತು**

-----

**ಶ್ರೀ ಗೋವಿಂದರಾಜು(ವಿಧಾನಸಭೆಯಿಂದ ಚುನಾಯಿತರಾದವರು);-** ಸನ್ಮಾನ್ಯ ಸಭಾಪತಿಯವರೇ, ಬೆಂಗಳೂರು-ಚೆನ್ನೈ ಎಕ್ಸ್‌ಪ್ರೆಸ್ ಕಾರಿಡಾರ್ ಕಾಮಗಾರಿಗೆ ಕೋಲಾರ ಜಿಲ್ಲಾಧಿಕಾರಿಯ ಆದೇಶ ಉಲ್ಲಂಘಿಸಿ ಕೆರೆಗಳಲ್ಲಿ ಮನಸ್ಸೋ ಇಚ್ಛೆ ಮಣ್ಣು ತೆಗೆಯುತ್ತಿರುವ ಗುತ್ತಿಗೆದಾರರ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಒತ್ತಾಯಿಸಿ ರೈತ ಸಂಘದ ಸದಸ್ಯರು ಕೋಲಾರದಲ್ಲಿ ಧರಣಿ ನಡೆಸುತ್ತಿದ್ದಾರೆ.

ಗಣಿ ಮತ್ತು ಭೂವಿಜ್ಞಾನ ಇಲಾಖೆ ಹಾಗೂ ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳು ಕೆಲ ಷರತ್ತು ವಿಧಿಸಿ ಎಕ್ಸ್‌ಪ್ರೆಸ್ ಕಾರಿಡಾರ್ ಕಾಮಗಾರಿಗೆ ಕೆರೆಗಳಲ್ಲಿ ಮಣ್ಣು ತೆಗೆಯಲು ಅನುಮತಿ ಕೊಟ್ಟಿದ್ದಾರೆ. ಆದರೆ, ಗುತ್ತಿಗೆದಾರರು ಈ ಷರತ್ತುಗಳನ್ನು ಉಲ್ಲಂಘಿಸಿ ತುಂಬಾ ಆಳಕ್ಕೆ ಮಣ್ಣು ತೆಗೆದು ಸಾಗಿಸುತ್ತಿದ್ದಾರೆ. ಇದರಿಂದ ಕೆರೆಗಳ ಸ್ವರೂಪವೇ ಬದಲಾಗಿರುತ್ತದೆ. ರೈತರು ಕೃಷಿ ಉದ್ದೇಶಕ್ಕೆ ಕೆರೆಗಳಲ್ಲಿ ಮಣ್ಣು ತೆಗೆಯಲು ಅವಕಾಶ ಕೇಳಿದರೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಹಾಗೂ ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳು ಹಲವಾರು ಕಾನೂನುಗಳನ್ನು ಹೇಳಿ ಅನುಮತಿ ನಿರಾಕರಿಸಿರುವ ಉದಾಹರಣೆಗಳಿವೆ. ಜಿಲ್ಲೆಯ ಜಲ ಮೂಲಗಳ ಜೀವನಾಡಿಯಾದ ಕೆರೆಗಳು ಎಕ್ಸ್‌ಪ್ರೆಸ್ ಕಾರಿಡಾರ್

---

ಕಾಮಗಾರಿಯಿಂದ ಹಾಳಾಗುತ್ತಿವೆ. ತುಂಬಾ ಆಳಕ್ಕೆ ಮಣ್ಣು ತೆಗೆದಿರುವುದರಿಂದ ದೊಡ್ಡ ಗುಂಡಿಗಳು ಸೃಷ್ಟಿಯಾಗಿವೆ. ಆ ಗುಂಡಿಗಳಲ್ಲಿ ಮಳೆ ನೀರು ತುಂಬಿಕೊಂಡು ಜನ ಹಾಗೂ ಜಾನುವಾರುಗಳ ಪ್ರಾಣಕ್ಕೆ ಅಪಾಯ ಎದುರಾಗಿದೆ. ಇದಲ್ಲದೇ ಎಕ್ಸ್‌ಪ್ರೆಸ್ ಕಾರಿಡಾರ್ ಕಾಮಗಾರಿಗೆ ಮಣ್ಣು ಸಾಗಿಸುತ್ತಿರುವ ಮಾರ್ಗದಲ್ಲಿ ಧೂಳಿನ ಸಮಸ್ಯೆ ಸೃಷ್ಟಿಯಾಗಿದ್ದು, ಧೂಳಿನಿಂದ ಅಕ್ಕಪಕ್ಕದ ಕೃಷಿ ಜಮೀನುಗಳಲ್ಲಿ ಬೆಳೆಗಳು ಹಾಳಾಗುತ್ತಿರುವುದರಿಂದ ರೈತರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ, ಇದರೊಂದಿಗೆ ನಿಗದಿತ ಭಾರ ಮಿತಿ ಮಣ್ಣು ಸಾಗಿಸುತ್ತಿರುವುದರಿಂದ ರಸ್ತೆಗಳು ಸಹ ಹಾಳಾಗುತ್ತಿದೆ.

ಆದಕಾರಣ ಸರ್ಕಾರ ಈ ಕೂಡಲೇ ಇದರ ಬಗ್ಗೆ ಗಮನಹರಿಸಿ ಕೆರೆಗಳಲ್ಲಿ ಮಣ್ಣು ತೆಗೆಯಲು ನೀಡಿರುವ ಅನುಮತಿಯನ್ನು ರದ್ದುಪಡಿಸಿ ಗುತ್ತಿಗೆದಾರರ ವಿರುದ್ಧ ಕ್ರಮಕೈಗೊಂಡು ಧೂಳಿನಿಂದ ಹಾಳಾಗಿರುವ ಬೆಳೆಗೆ ಪರಿಹಾರ ನೀಡಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

(ಮುಂದುವರಿದಿದೆ)

(339) 15.3.2022 12.50 ಪಿಕೆ:ಎಕೆ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ(ಗಣಿ ಮತ್ತು ಭೂ ವಿಜ್ಞಾನ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು, ಬೆಂಗಳೂರು-ಚೆನ್ನೈ ಎಕ್ಸ್‌ಪ್ರೆಸ್ ಕಾರಿಡಾರ್ ಕಾಮಗಾರಿಗೆ ಸಂಬಂಧಪಟ್ಟಂತೆ ಹೂಳನ್ನು ತೆಗೆದ ಹಿನ್ನೆಲೆಯಲ್ಲಿ ಗುಂಡಿಗಳು ಬಿದ್ದಿವೆ, ರಸ್ತೆಗಳೂ ಹಾಳಾಗಿವೆ, ರೈತರು ಕೃಷಿ ಉದ್ದೇಶಕ್ಕೆ ಕೆರೆಗಳಲ್ಲಿ ಮಣ್ಣು ತೆಗೆಯಲು ಅವಕಾಶ ಕೇಳಿದರೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಹಾಗೂ ಸಣ್ಣ ನೀರಾವರಿ ಇಲಾಖೆಯವರು ಅವಕಾಶ ಕೊಡುತ್ತಿಲ್ಲ ಎನ್ನುವ ಮಾತನ್ನು ಹೇಳಿದರು. ಆದರೆ ಸದರಿ ಇಲಾಖೆಗಳ ಅನುಮತಿಯನ್ನು ಪಡೆದುಕೊಂಡು ಈ ಕಾರಿಡರ್ ಕಾಮಗಾರಿಗಳನ್ನು ಮಾಡಲಾಗುತ್ತಿದೆ. ಇದನ್ನು ವೈಜ್ಞಾನಿಕವಾಗಿ ಮಾಡುತ್ತಿಲ್ಲ ಎಂದು ಹೇಳಿದರು. ಈ ನಿಟ್ಟಿನಲ್ಲಿ ನಮ್ಮ ಅಧಿಕಾರಿಗಳಿಂದ ಮತ್ತೊಮ್ಮೆ ಸಮೀಕ್ಷೆ ಮಾಡಿಸುತ್ತೇನೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ, ಈ ಕುರಿತು ನಿಮಗೆ ಬೇಕಾದ ಪೂರ್ಣ ಪ್ರಮಾಣದ ವಿವರಣೆಗಳನ್ನು ಕೊಡುತ್ತೇನೆ.

**ಊ)ವಿಷಯ:** ರಾಜ್ಯದಲ್ಲಿರುವ ಸಾರಿಗೆ ಕಚೇರಿಗಳಲ್ಲಿ ದಲ್ಲಾಳಿಗಳು ಲಂಚದ ಆಮಿಷ ನೀಡುತ್ತಿರುವ ಬಗ್ಗೆ.

**ಶ್ರೀ ಮುನಿರಾಜು ಗೌಡ ಪಿ.ಎಂ. (ತುಳಸಿ)(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಗಳೆ, ಸಾರಿಗೆ ಇಲಾಖೆಯ ಆರ್.ಟಿಓ ಕಚೇರಿಗಳಲ್ಲಿ ದಲ್ಲಾಳಿಗಳು, ಅಧಿಕಾರಿಗಳು ಬ್ರೋಕರ್‌ಗಳ ಜೊತೆ ಸೇರಿ ಸಾರ್ವಜನಿಕರನ್ನು ಲೂಟಿ ಮಾಡುತ್ತಿರುವ ಕುರಿತು ಪತ್ರಿಕೆಗಳಲ್ಲಿ ವರದಿಯಾಗಿದೆ. ದಲ್ಲಾಳಿಗಳು ಅಥವಾ ಮಧ್ಯವರ್ತಿಗಳಿಲ್ಲದೆ ಯಾವುದೇ ಕೆಲಸ ಆರ್.ಟಿ.ಓ. ಕಚೇರಿಗಳಲ್ಲಿ ಆಗುವುದಿಲ್ಲ ಎಂಬ ಭಾವನೆ ಸಾರ್ವಜನಿಕರಲ್ಲಿ ಮನೆ ಮಾಡಿದೆ. ಲಂಚ ನೀಡದೆ ಒಂದು ಸಣ್ಣ ಕೆಲಸವೂ ಆಗುವುದಿಲ್ಲ ಎಂದು ಪತ್ರಿಕೆಗಳು ವರದಿ ಮಾಡಿದೆ. ಅಧಿಕಾರಿಗಳು ಸಹ ತಾವು ಲಂಚ ನೀಡಿ ಈ ಸ್ಥಾನಗಳಿಗೆ ಬಂದಿದ್ದೇವೆ ಎಂದು ಹೇಳಿಕೊಳ್ಳುವ ಸನ್ನಿವೇಶ ಉಂಟಾಗಿದೆ. ಈ ರೀತಿಯ ಆರ್.ಟಿ.ಓ ಕಚೇರಿಯ ಸಿಬ್ಬಂದಿಗಳು ಮತ್ತು ಅಧಿಕಾರಿಗಳು ಸಾಮಾನ್ಯ ನಾಗರಿಕರಾದ ಬಡ ಡ್ರೈವರ್‌ಗಳು, ಆಟೋ ಚಾಲಕರು, ಕಾರ್ಮಿಕ ವರ್ಗದವರ ಬಳಿಯೂ ಲಂಚಕ್ಕೆ ಬೇಡಿಕೆ ಇಡುತ್ತಾರೆ. ಹಣ ಕೊಡಲಿಲ್ಲ ಎಂದರೆ ಕೆಲಸ ಮಾಡಿ ಕೊಡದೆ ಸಬೂಬು ಹೇಳುತ್ತಾರೆ ಎನ್ನುವುದು ಎಲ್ಲಾ ಕಡೆ ಇರುವ ಸಾಮಾನ್ಯ ಅಭಿಪ್ರಾಯ. ಆದ್ದರಿಂದ ದಲ್ಲಾಳಿಗಳು ಮತ್ತು ಬ್ರೋಕರ್‌ಗಳಿಂದ ಆರ್.ಟಿ.ಓ ಕಚೇರಿ ಮುಕ್ತಗೊಳಿಲು ಮತ್ತು ಲಂಚ ನೀಡುವ ವ್ಯವಸ್ಥೆ ಕೊನೆಗೊಳ್ಳಬೇಕು, ಅದಕ್ಕೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸರ್ಕಾರವನ್ನು ಕೇಳಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಸಾರಿಗೆ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೆ, ಶ್ರೀ ಯು.ಬಿ.ವೆಂಕಟೇಶ್ ಮತ್ತು ಶ್ರೀ ಪಿ.ಎಂ. ಮುನಿರಾಜುಗಾಡ ಅವರು ಶೂನ್ಯವೇಳೆಯಡಿ ಕೇಳಿದ್ದ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಾರಿಗೆ ಸಚಿವರು ಕೊಟ್ಟಿರುವ ಉತ್ತರವನ್ನು ಸದನದ ಮುಂದೆ ಮಂಡಿಸುತ್ತೇನೆ.

**(ಉತ್ತರ ಪ್ರತಿ ಲಗತ್ತಿಸಲಾಗಿದೆ)**

**ಖ)ವಿಷಯ:** 2021-22ನೇ ಸಾಲಿಗೆ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಸಿಬ್ಬಂದಿಗಳ ವೈದ್ಯಕೀಯ ವೆಚ್ಚ ಮರುಪಾವತಿ ಕುರಿತು.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, 2021-22ನೇ ಸಾಲಿಗೆ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಕಚೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯವರ ವೈದ್ಯಕೀಯ ವೆಚ್ಚದ ಮರುಪಾವತಿಗಾಗಿ ಕಾರ್ಯಕ್ರಮ ಜಿಲ್ಲಾ ಪಂಚಾಯತ್ ಲೆಕ್ಕ ಶೀರ್ಷಿಕೆ 2515-00-101-0-26 ಅಡಿ ರೂ. 112.49 ಲಕ್ಷಗಳು ಹಾಗೂ ತಾಲ್ಲೂಕು ಪಂಚಾಯತ್ ಲೆಕ್ಕ ಶೀರ್ಷಿಕೆ 2515-00-102-0-63 ಅಡಿ ರೂ.810.79 ಲಕ್ಷಗಳ ಅನುದಾನದ ಕೊರತೆಯುಂಟಾಗಿದ್ದು, ಹೆಚ್ಚುವರಿ ಅನುದಾನ ಕೋರಿ ಪ್ರಸ್ತಾವನೆಯನ್ನು ನಿಗದಿತ ನಮೂನೆ ಹಾಗೂ ಸೂಕ್ತ ದಾಖಲಾತಿಗಳೊಂದಿಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಮಂಡ್ಯ ಇವರು ಆರ್ಥಿಕ ಇಲಾಖೆಗೆ ದಿನಾಂಕ: 15.12.2021ರಂದು ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. ವೈದ್ಯಕೀಯ ವೆಚ್ಚ ಮರುಪಾವತಿಯಾಗದೆ ಸದರಿ ಸಿಬ್ಬಂದಿಗಳ ಆರ್ಥಿಕ ಪರಿಸ್ಥಿತಿಯು ಬಹಳ ಚಿಂತಾಜನಕವಾಗಿರುತ್ತದೆ. ಆದಕಾರಣ ಸದರಿ ವಿಷಯವನ್ನು ಅತಿ ಜರೂರು ಎಂದು ಪರಿಗಣಿಸಿ, ಕೂಡಲೇ ವೈದ್ಯಕೀಯ ವೆಚ್ಚದ ಸಂಬಂಧ ಅಗತ್ಯ ಅನುದಾನವನ್ನು ಬಿಡುಗಡೆಗೊಳಿಸುವಂತೆ ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಕೋರುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)**:- ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ಕೇಳಿದ ಈ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುತ್ತೇನೆ.

ಎ)**ವಿಷಯ:** ರಾಜ್ಯದ ಗ್ರಾಮ ಪಂಚಾಯಿತಿ ಕಚೇರಿಗಳು ಸಾರ್ವಜನಿಕ ಹಿತಾಸಕ್ತಿ ಅನುಸಾರವಾಗಿ ಕಾರ್ಯನಿರ್ವಹಿಸದೇ ಇರುವ ಬಗ್ಗೆ.

**ಶ್ರೀ ಪ್ರದೀಪ್ ಶೆಟ್ಟರ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ದಿನಾಂಕ 14.3.2022 ರಂದು ಕನ್ನಡ ದಿನ ಪತ್ರಿಕೆ (ಬಾಗಲಕೋಟೆ ಆವೃತ್ತಿ)ಯಲ್ಲಿ “ಪಿಡಿಓ ಸಾಹೆಬ್ರು ಮೀಟಿಂಗ್‌ಗೆ ಹೋಗ್ಯಾರ್ರಿ” ಎಂಬ ಶೀರ್ಷಿಕೆ ಅಡಿಯಲ್ಲಿ ಪ್ರಕಟವಾಗಿರುವ ವಿಷಯದ ಕುರಿತು ರಾಜ್ಯದ ಕೆಲವು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಅಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿದ್ದು, ಜನ ಸಾಮಾನ್ಯರು ತಮ್ಮ ಕೆಲಸ ಕಾರ್ಯಗಳಿಗೆ ಗ್ರಾಮ ಪಂಚಾಯಿತಿ ಕಚೇರಿಗೆ ಹೋದಂತಹ ಸಂದರ್ಭದಲ್ಲಿ ಸರಿಯಾದ ರೀತಿಯಲ್ಲಿ ಸ್ಪಂದನೆ ಮಾಡದೇ ಇರುವುದು ಕಂಡುಬಂದಿರುತ್ತದೆ. ಸಾಮಾನ್ಯ ಜನರು ಕಚೇರಿಗೆ ಹೋಗಿ ವಿಚಾರಿಸಿದಾಗ ಅಭಿವೃದ್ಧಿ ಅಧಿಕಾರಿಗಳು ಸಿ.ಇ.ಓ ಸಭೆಗೆ ಹೋಗಿದ್ದಾರೆ ಮತ್ತು ಇ.ಓ ರವರನ್ನು ಕಾಣಲು ಹೋಗಿದ್ದಾರೆ ಎಂದು ಕಚೇರಿ ಸಿಬ್ಬಂದಿಗಳು ಉತ್ತರವನ್ನು ನೀಡುತ್ತಿರುವುದು ಗಮನಕ್ಕೆ ಬಂದಿರುತ್ತದೆ ಮತ್ತು ಗ್ರಾಮ ಸಭೆಯನ್ನು ಸರಿಯಾದ ಸಮಯಕ್ಕೆ ಕರೆಯದೇ ಅಲಕ್ಷ್ಯ ಮಾಡುತ್ತಿದ್ದಾರೆ. ಕೆಲವೊಂದು ಅಭಿವೃದ್ಧಿ ಕಾಮಗಾರಿಗಳಲ್ಲಿ ಅವ್ಯವಹಾರ ನಡೆದಿರುವುದು ಕಂಡು ಬಂದಿರುತ್ತದೆ; ಶೇಕಡ 20 ರಷ್ಟು ಕಮಿಷನ್‌ಗೆ ಬೇಡಿಕೆ ಇಡುತ್ತಿದ್ದು ಕಂಡುಬರುತ್ತಿದೆ. ಸಾಮಾನ್ಯ ಜನರು ಇ-ಸ್ವತ್ತಿಗೆ ಅರ್ಜಿ ಸಲ್ಲಿಸಿ ಮೂರು-ನಾಲ್ಕು ತಿಂಗಳಾದರೂ ಯಾವುದೇ ಕ್ರಮ ಕೈಗೊಳ್ಳದೇ ಬೇಜವಾಬ್ದಾರಿಯಿಂದ ವರ್ತಿಸುತ್ತಿರುತ್ತಾರೆ. ಈ ಮೇಲ್ಕಂಡ ಸಮಸ್ಯೆಗಳ ಹಿನ್ನೆಲೆಯಲ್ಲಿ ಬಾಗಲಕೋಟೆ ಜಿಲ್ಲೆ ಗುಳೇಗುಡ್ಡ ತಾಲ್ಲೂಕಿನ ಕೋಟೆಕಲ್ಲ ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಸದಸ್ಯರು ಗ್ರಾಮ ಪಂಚಾಯಿತಿ ಕಚೇರಿಗೆ ಬೀಗ ಜಡಿದು ಪ್ರತಿಭಟನೆ ಮಾಡಿರುತ್ತಾರೆ. ಈ ರೀತಿಯ ಸಮಸ್ಯೆಯು ರಾಜ್ಯಾದ್ಯಂತ ಕೆಲವು ಗ್ರಾಮ ಪಂಚಾಯಿತಿಗಳಲ್ಲಿ ಕಂಡು ಬರುತ್ತಿದ್ದು, ಈ ಬಗ್ಗೆ ಸರ್ಕಾರ ಸೂಕ್ತ ಕ್ರಮವನ್ನು ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಶೂನ್ಯವೇಳೆ ಅಡಿ ಕೇಳಿದ ಪ್ರಶ್ನೆಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಿಂದ ಉತ್ತರ ಕೊಡಿಸುತ್ತೇನೆ.

**ಏ)ವಿಷಯ: ಆರ್ಥಿಕವಾಗಿ ಹಿಂದುಳಿದ ವರ್ಗಗಳ ಜನರಿಗೆ ಶಿಕ್ಷಣದಲ್ಲಿ ಶೇಕಡ 10ರಷ್ಟು ಮೀಸಲಾತಿ ಕಾಯ್ದೆ ತರುವ ಬಗ್ಗೆ.**

**ಶ್ರೀ ಎಸ್.ವ್ಹಿ.ಸಂಕನೂರ(ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಕೇಂದ್ರ ಸರ್ಕಾರ ಆರ್ಥಿಕವಾಗಿ ಹಿಂದುಳಿದ ವರ್ಗದ ಜನರಿಗೆ (Economically weaker section) ಶಿಕ್ಷಣದಲ್ಲಿ ಶೇಕಡ 10 ರಷ್ಟು ಮೀಸಲಾತಿ ನೀಡಬೇಕೆಂದು ಈ ಹಿಂದೆಯೇ ಘೋಷಣೆ ಮಾಡಿದೆ. ಈಗಾಗಲೇ ಕೇರಳ, ಮಹಾರಾಷ್ಟ್ರ, ಗುಜರಾತ್ ಸೇರಿದಂತೆ 11 ರಾಜ್ಯಗಳಲ್ಲಿ ಕಾರ್ಯರೂಪಕ್ಕೆ ತಂದಿವೆ. ಆದರೆ ಕರ್ನಾಟಕ ರಾಜ್ಯ ಸರ್ಕಾರ ಈ ಮೀಸಲಾತಿಯನ್ನು ಜಾರಿಗೊಳಿಸಿಲ್ಲವೆಂದು ಆರ್ಥಿಕವಾಗಿ ಹಿಂದುಳಿದ ವರ್ಗಗಳ ಮೀಸಲಾತಿ ಹೋರಾಟ ಸಮಿತಿ ಆರೋಪ ಮಾಡಿರುತ್ತದೆ.

ಸನ್ಮಾನ್ಯ ಶ್ರೀ ಬಿ.ಎಸ್ ಯಡಿಯೂರಪ್ಪನವರು ಮುಖ್ಯಮಂತ್ರಿ ಆಗಿದ್ದಾಗ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಶೇಕಡ 10 ರಷ್ಟು ಮೀಸಲಾತಿ ಜಾರಿ ಮಾಡಲು ಸಚಿವ ಸಂಪುಟದ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ. ಆದರೆ ಆ ನಿರ್ಣಯ ಇದುವರೆಗೆ ಕಾರ್ಯಗತ ಆಗದೇ ಇರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿ ಹೋರಾಟ ಮಾಡುವುದಾಗಿ ಹಿಂದುಳಿದ ವರ್ಗಗಳ ಮೀಸಲಾತಿ ಹೋರಾಟ ಸಮಿತಿ ಹೇಳಿಕೆ ನೀಡಿರುವರು.

ಉಕ್ರೇನ್‌ನಲ್ಲಿ ಭಾರತೀಯರು ಸುಮಾರು 20,000 ಮಂದಿ ವಿದಾಭ್ಯಾಸ ಪಡೆಯುತ್ತಿದ್ದು, ಅದರಲ್ಲಿ ಹೆಚ್ಚಿನವರು ಮೇಲ್ವರ್ಗಕ್ಕೆ ಸೇರಿದ ಹಾಗೂ ಆರ್ಥಿಕವಾಗಿ ಹಿಂದುಳಿದವರು ಇರುವುದಾಗಿ ಹೇಳಿಕೆ ನೀಡಿರುವರು. ಅವರಲ್ಲಿ ಪ್ರತಿಭೆ ಹಾಗೂ ಕಲಿಯುವ ಇಚ್ಛೆ ಇದ್ದರೂ ನಮ್ಮ ದೇಶದಲ್ಲಿ ಅಂತಹವರಿಗೆ ಸೀಟು ಸಿಗದೇ ವಲಸೆ ಹೋಗಿದ್ದಾರೆಂದು ಪ್ರಸ್ತಾಪಿಸಿರುವರು. ಈ ಹಿನ್ನೆಲೆಯಲ್ಲಿ ರಾಜ್ಯದ ಮುಖ್ಯಮಂತ್ರಿಗಳು ಈ ಕುರಿತು ಕಾನೂನಾತ್ಮಕ ಸಲಹೆ ಪಡೆದು ಅಗತ್ಯ ಮಾನದಂಡಗಳನ್ನು

ರೂಪಿಸಿ ಆರ್ಥಿಕವಾಗಿ ಹಿಂದುಳಿದ ವರ್ಗದ ಜನರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಶೇಕಡ 10 ರಷ್ಟು ಮೀಸಲಾತಿ ಕಾಯ್ದೆ ರೂಪಿಸಲು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಮಾನ್ಯ ಮುಖ್ಯಮಂತ್ರಿಗಳಿಂದ ಈ ಶೂನ್ಯವೇಳೆಯ ಪ್ರಶ್ನೆಗೆ ಉತ್ತರ ಕೊಡಿಸುತ್ತೇನೆ.

**ಐ)ವಿಷಯ: ಬಳ್ಳಾರಿ ಜಿಲ್ಲೆ ಸಂಡೂರು ತಾಲ್ಲೂಕು ಸುಲ್ತಾನಪುರ ಗ್ರಾಮವನ್ನು ಸ್ಥಳಾಂತರ ಮಾಡುವ ಬಗ್ಗೆ.**

**ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಬಳ್ಳಾರಿ ಜಿಲ್ಲೆ, ಸಂಡೂರು ತಾಲ್ಲೂಕು, ತೋರಣಗಲ್ಲು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸುಲ್ತಾನಪುರ (ಯರಬನಹಳ್ಳಿ) ಗ್ರಾಮದ ಸುತ್ತಮುತ್ತ 8 ರಿಂದ 10 ಕೆಂಪು ವಲಯಕ್ಕೆ ಸೇರಿದ ಕೈಗಾರಿಕೆಗಳು ನಿರ್ಮಾಣವಾಗಿ ಕಾರ್ಯಾಚರಣೆಯನ್ನು ಮಾಡುತ್ತಿರುತ್ತವೆ. ಈ ಕೈಗಾರಿಕೆಗಳಿಂದ ಹೊರಬರುವ ಎಲ್ಲಾ ಬಗೆಯ ಮಾಲಿನ್ಯದಿಂದ ಇಲ್ಲಿನ ಜನತೆಗೆ ಈ ಗ್ರಾಮದಲ್ಲಿ ವಾಸಿಸಲು ವಾಸಯೋಗ್ಯ ಸ್ಥಳವಾಗಿ ಉಳಿದಿರುವುದಿಲ್ಲ.

ಆದಕಾರಣ ಈ ಗ್ರಾಮದ ರೈತರು ಹಾಗೂ ಕೂಲಿ ಕಾರ್ಮಿಕರುಗಳಿಗೆ ಸೂಕ್ತ ಪರಿಹಾರವನ್ನು ನೀಡಿ ಸುಲ್ತಾನಪುರ(ಯರಬನಹಳ್ಳಿ) ಗ್ರಾಮವನ್ನು ಶೀಘ್ರ ಸ್ಥಳಾಂತರ ಮಾಡಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳುವಂತೆ ಈ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರ ಈ ಶೂನ್ಯವೇಳೆ ಪ್ರಶ್ನೆಗೆ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರಿಂದ ಉತ್ತರ ಕೊಡಿಸುತ್ತೇನೆ.

**೦4. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಂಬಂಧಪಟ್ಟ ಸಚಿವರ ಹೇಳಿಕೆಗಳು**

**ಅ) ವಿಷಯ:** ಮೀನುಗಾರರ ಮಹಿಳೆಯರ ಸಬಲೀಕರಣದ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:(ಸಭಾನಾಯಕರು)(ಮೀನುಗಾರಿಕೆ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಗಣಪತಿ ದುಮ್ಮಾ ಉಳ್ವೇಕರ್‌ರವರು ದಿನಾಂಕ: ೮.೩.೨೦೨೨ರಂದು ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಿದ ವಿಷಯಕ್ಕೆ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

(ಉತ್ತರ ಪ್ರತಿ ಲಗತ್ತಿಸಲಾಗಿದೆ)

**ಆ) ವಿಷಯ:** ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಪೋಲೀಸ್ ಇಲಾಖೆ ಮಾಫಿಯಾ ಜೊತೆ ಕೈಜೋಡಿಸಿರುವ ಬಗ್ಗೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:(ಸಭಾನಾಯಕರು)(ಗೃಹ ಸಚಿವರ ಪರವಾಗಿ):–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಶ್ರೀ ಮುನಿರಾಜುಗೌಡ ಹಾಗೂ ಶ್ರೀ ರಮೇಶ್ ಗೌಡ ಹೆಚ್.ಎಂ.ರವರುಗಳು ದಿನಾಂಕ: 8.3.2022ರಂದು ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಿದ ವಿಷಯಕ್ಕೆ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

(ಉತ್ತರ ಪ್ರತಿ ಲಗತ್ತಿಸಲಾಗಿದೆ)

ಇ) **ವಿಷಯ:** ಮುಧೋಳ ತಾಲ್ಲೂಕಿನ ಲೋಕಾಪುರದ ಹೆದ್ದಾರಿಯಲ್ಲಿ ಪ್ರತಿಮೆ ಸ್ಥಾಪನೆ ಕುರಿತು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:(ಸಭಾನಾಯಕರು)(ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಆರ್.ಬಿ.ತಿಮ್ಮಾಪೂರರವರು ದಿನಾಂಕ: ೯.೩.೨೦೨೨ರಂದು ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಿದ ವಿಷಯಕ್ಕೆ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

(ಉತ್ತರ ಪ್ರತಿ ಲಗತ್ತಿಸಲಾಗಿದೆ)

**ಈ) ವಿಷಯ:** ತೋಟಗಾರಿಕಾ ಇಲಾಖೆಯಲ್ಲಿ ಮಹಿಳಾ ಸಿಬ್ಬಂದಿಗಳಿಗೆ ಅನಗತ್ಯ ಕಿರುಕುಳ ನೀಡುತ್ತಿರುವ ಬಗ್ಗೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:(ಸಭಾನಾಯಕರು)(ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಪಿ.ಎಂ. ಮುನಿರಾಜು ಗೌಡರವರು ದಿನಾಂಕ: 9.3.2022ರಂದು ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಿದ ವಿಷಯಕ್ಕೆ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

(ಉತ್ತರ ಪ್ರತಿ ಲಗತ್ತಿಸಲಾಗಿದೆ)

ಉ) **ವಿಷಯ:** ಕಲಬುರ್ಗಿ ಜಿಲ್ಲೆ ಅಳಂದ ಪಟ್ಟಣದಲ್ಲಿ 1.3.2022ರಂದು ಸೆಕ್ಷನ್ 144ನ್ನು ಉಲ್ಲಂಘಿಸಿದ ಬಗ್ಗೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:(ಸಭಾನಾಯಕರು)(ಗೃಹ ಸಚಿವರ ಪರವಾಗಿ):–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಸಿ.ಎಂ. ಇಬ್ರಾಹಿಂರವರು ದಿನಾಂಕ: 9.3.2022ರಂದು ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಿದ ವಿಷಯಕ್ಕೆ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

(ಉತ್ತರ ಪ್ರತಿ ಲಗತ್ತಿಸಲಾಗಿದೆ)

ಊ) **ವಿಷಯ: ಬೆಂಗಳೂರು ನಗರದಲ್ಲಿ ಬೇಸಿಗೆ ಪ್ರಾರಂಭವಾಗುವ ಮುನ್ನವೇ ಕುಡಿಯುವ ನೀರಿಗೆ ತೊಂದರೆಯಾಗಿರುವ ಬಗ್ಗೆ.**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:(ಸಭಾನಾಯಕರು)(ಮುಖ್ಯ ಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಕೆ.ಹರೀಶ್ ಕುಮಾರ್‌ರವರು ದಿನಾಂಕ: 10.3.2022ರಂದು ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಿದ ವಿಷಯಕ್ಕೆ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

(ಉತ್ತರ ಪ್ರತಿ ಲಗತ್ತಿಸಲಾಗಿದೆ)

---

ಖ) **ವಿಷಯ:** ರಾಜ್ಯದಲ್ಲಿ ಕಳಪೆ ಗುಣ ಮಟ್ಟದ ಆಹಾರ ತಯಾರಿಕೆ ಮತ್ತು ಸೇವನೆಯಿಂದ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬಗ್ಗೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:(ಸಭಾನಾಯಕರು)(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಡಾ:ತಿಮ್ಮಯ್ಯರವರು ದಿನಾಂಕ: 10.3.2022ರಂದು ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಿದ ವಿಷಯಕ್ಕೆ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

(ಉತ್ತರ ಪ್ರತಿ ಲಗತ್ತಿಸಲಾಗಿದೆ)

ಎ) **ವಿಷಯ:** ಖಾಸಗಿ ಶಾಲೆಗಳ ನವೀಕರಣಕ್ಕೆ ಪ್ರತಿ ವರ್ಷ ಅರ್ಜಿ ಸಲ್ಲಿಸುವ ಕುರಿತು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:(ಸಭಾನಾಯಕರು)(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರ ಪರವಾಗಿ):–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಅರುಣ ಶಹಾಪೂರರವರು ದಿನಾಂಕ: 10.3.2022ರಂದು ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಿದ ವಿಷಯಕ್ಕೆ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

(ಉತ್ತರ ಪ್ರತಿ ಲಗತ್ತಿಸಲಾಗಿದೆ)

ಏ) **ವಿಷಯ:** ಧಾರವಾಡ ತಾಲ್ಲೂಕಿನ ಸೋಮನಪುರದ ಮಹಿಳೆಯೊಬ್ಬಳ ಮೇಲೆ ಟಿ.ವಿ.ಚಾನಲ್ ವರದಿಗಾರ ಅತ್ಯಾಚಾರ ಎಸಗಿರುವ ಬಗ್ಗೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:(ಸಭಾನಾಯಕರು)(ಗೃಹ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿರವರು ದಿನಾಂಕ: 10.3.2022ರಂದು ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಿದ ವಿಷಯಕ್ಕೆ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

(ಉತ್ತರ ಪ್ರತಿ ಲಗತ್ತಿಸಲಾಗಿದೆ)

**ಐ) ವಿಷಯ: ರಾಮನಗರ ಜಿಲ್ಲೆಯ ಕಾಡಂಚಿನ ಗ್ರಾಮಗಳಿಗೆ ಆನೆಗಳ ಹಾವಳಿಯಿಂದ ರೈತರಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ.**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:(ಸಭಾನಾಯಕರು)(ಕಂದಾಯ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಎಸ್.ರವಿರವರು ದಿನಾಂಕ: 10.3.2022ರಂದು ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಿದ ವಿಷಯಕ್ಕೆ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

(ಉತ್ತರ ಪ್ರತಿ ಲಗತ್ತಿಸಲಾಗಿದೆ)

---

ಒ) **ವಿಷಯ:** ರಾಜ್ಯದಲ್ಲಿ ಕೋ-ಆಪರೇಟಿವ್ ಸೊಸೈಟಿಗಳು ಅಧಿಕ ಬಡ್ಡಿ ಆಮಿಷ ಒಡ್ಡಿ ಠೇವಣಿ ಹಣ ನೀಡಲು ಸಾಧ್ಯವಾಗದಿರುವ ಬಗ್ಗೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:(ಸಭಾನಾಯಕರು)(ಸಹಕಾರ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಸಲೀಂ ಅಹಮದ್‌ರವರು ದಿನಾಂಕ: 10.3.2022ರಂದು ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಿದ ವಿಷಯಕ್ಕೆ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

(ಉತ್ತರ ಪ್ರತಿ ಲಗತ್ತಿಸಲಾಗಿದೆ)

ಓ) ವಿಷಯ: ಖಾಸಗಿ ಅನುದಾನಿತ ಐಟಿಐ ಶಿಕ್ಷಣ ಸಂಸ್ಥೆಗಳಲ್ಲಿನ ಸಿಬ್ಬಂದಿಗಳಿಗೆ ನವೆಂಬರ್ 2021ರಿಂದ ವೇತನ ಬಿಡುಗಡೆಯಾಗದಿರುವ ಬಗ್ಗೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:(ಸಭಾನಾಯಕರು)(ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಅರುಣ ಶಹಾಪೂರರವರು ದಿನಾಂಕ: 11.3.2022ರಂದು ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಿದ ವಿಷಯಕ್ಕೆ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

(ಉತ್ತರ ಪ್ರತಿ ಲಗತ್ತಿಸಲಾಗಿದೆ)

ಔ) ವಿಷಯ: ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನ ಅಮ್ಮನಘಟ್ಟ ಅರಣ್ಯ ಪ್ರದೇಶದಲ್ಲಿ ಜಮೀನು ಒತ್ತುವರಿ ಹೆಸರಿನಲ್ಲಿ ರೈತರು ಬೆಳೆದ ಬೆಳೆಗಳನ್ನು ಅರಣ್ಯ ಇಲಾಖೆ ನಾಶಪಡಿಸಿರುವ ಬಗ್ಗೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:(ಸಭಾನಾಯಕರು)(ಅರಣ್ಯ ಹಾಗೂ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ರಾಜೇಂದ್ರ ರಾಜಣ್ಣರವರು ದಿನಾಂಕ: 11.3.2022ರಂದು ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಿದ ವಿಷಯಕ್ಕೆ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

(ಉತ್ತರ ಪ್ರತಿ ಲಗತ್ತಿಸಲಾಗಿದೆ)

---

ಅಂ) **ವಿಷಯ:** ಕನಕಪುರ ತಾಲ್ಲೂಕಿನ ಹಾರೋಹಳ್ಳಿ ಹೋಬಳಿ ಕೊಟ್ಟಗಾಳು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸಿಂದ್ಯಾ ನಗರದಲ್ಲಿ ಸರ್ವೆ ಕಾರ್ಯದ ಬಗ್ಗೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:(ಸಭಾನಾಯಕರು)(ಕಂದಾಯ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಎಸ್.ರವಿರವರು ದಿನಾಂಕ: 11.3.2022ರಂದು ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಿದ ವಿಷಯಕ್ಕೆ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

(ಉತ್ತರ ಪ್ರತಿ ಲಗತ್ತಿಸಲಾಗಿದೆ)

**"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು**

---

ಅಃ) ವಿಷಯ: ಸರ್ಕಾರಿ ಇಲಾಖೆಗಳಲ್ಲಿ ನೇಮಕಗೊಂಡ ಪರಿಶಿಷ್ಟ ಪಂಗಡದ ಗೊಂಡ ಟೋಕರೆ, ಕೋಳಿ ಜಾತಿಗಳ ಸಿಂಧುತ್ವ ಪ್ರಮಾಣ ಪತ್ರ ನೀಡಿಕೆ ಕುರಿತು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:(ಸಭಾನಾಯಕರು)(ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖಾ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಶಶಿಲ್ ಜಿ.ನಮೋಶಿಯವರು ದಿನಾಂಕ: 14.3.2022ರಂದು ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಿದ ವಿಷಯಕ್ಕೆ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

(ಉತ್ತರ ಪ್ರತಿ ಲಗತ್ತಿಸಲಾಗಿದೆ)

(ಮುಂದು . . .)

340/15-3-2022/12-30/bkp-ak

(ಸಭಾಪತಿಯವರು ಪೀಠದಲ್ಲಿದ್ದರು)

**ಸಭಾಪತಿಯವರು:-** ಉತ್ತರಗಳನ್ನು ಮಂಡಿಸಲಾಯಿತು. ಈ ಉತ್ತರಗಳು ಅವರುಗಳಿಗೆ ಮುಟ್ಟುತ್ತದೆಯೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಹೌದು, ಮಾನ್ಯ ಸಭಾಪತಿಯವರೆ, ಎಲ್ಲರಿಗೂ ಉತ್ತರಗಳು ಮುಟ್ಟುತ್ತವೆ. ಈ ವಿಚಾರದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಸಮಾಧಾನವಾಗಿದೆ ಎಂದು ತಿಳಿದುಕೊಂಡಿದ್ದೇನೆ. ಏಕಂದರೆ, ನಿನ್ನೆ ಮತ್ತು ಇವತ್ತಿನದ್ದನ್ನು ನಾನು ಒಟ್ಟಿಗೆ ಕೊಟ್ಟಿದ್ದೇನೆ.

**೦೫. ಪ್ರಕಟಣೆ**

**ವಿಷಯ: ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಸಚಿವರು ಹಾಗೂ ಅಧಿಕಾರಿಗಳ ಬಗ್ಗೆ**

**ಸಭಾಪತಿಯವರು:-** ಶ್ರೀಯುತ ಕೆ.ಎಸ್.ಈಶ್ವರಪ್ಪನವರು, ಶ್ರೀಯುತ ಆರ್. ಅಶೋಕ್‌ರವರು, ಶ್ರೀಯುತ ಶ್ರೀರಾಮುಲುರವರು ಶ್ರೀಯುತ ನಾರಾಯಣಗೌಡ, ಶ್ರೀಯುತ ಮುನಿರತ್ನ,ಶ್ರೀಯುತ ಬಿ.ಸಿ. ಪಾಟೀಲ್ ರವರು ಇವರುಗಳು ಇಂದು ಸದನದಲ್ಲಿ ಹಾಜರಿರಬೇಕಾಗಿತ್ತು. ಹಾಜರಿರುವುದಿಲ್ಲ. ಶ್ರೀಯುತ ಬಿ.ಸಿ. ಪಾಟೀಲ್‌ರವರು ನನ್ನ ಅನುಮತಿಯನ್ನು ಪಡೆದಿದ್ದಾರೆ. ಸಭಾನಾಯಕರೆ, ನಾನು ಪ್ರತಿದಿನವು ಮಂತ್ರಿಗಳು ಇರಬೇಕೆಂದು ಹೇಳುತ್ತೇನೆ. ಆಗ ತಾವು ಸಹ ಹೌದು ಎಂದು ಹೇಳುತ್ತೀರಿ. ಯಾರು ಇರುವುದಿಲ್ಲ, ನೀವು ಹೇಳಲೇ ಬೇಡಿ, ಎಂದು ನನಗೆ ಹೇಳಿದರೆ, ನಾನು ನಾಳೆಯಿಂದ ಹೇಳುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, ಸ್ವಲ್ಪ ಹೆಚ್ಚು ಕಡಿಮೆಯಾಗಿದೆ, ಸರಿಪಡಿಸಿಕೊಳ್ಳುತ್ತೇವೆ.

**ಸಭಾಪತಿಯವರು:–** ನಾನು ಎಷ್ಟು ಸಾರಿ ಹೇಳಲಿಕ್ಕೆ ಆಗುತ್ತದೆ, ಸದನದಲ್ಲಿ ಕಡ್ಡಾಯವಾಗಿ ಇರಬೇಕೆಂದು ನೀವು ಅವರುಗಳಿಗೆ ಹೇಳಬೇಕಲ್ಲವೇ?

**ಶ್ರೀ ಪ್ರಕಾಶ್ ಕೆ. ರಾಠೋಡ್( ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೆ, ಪ್ರತಿದಿವಸವೂ ಸಹ ಇದೇ ರೀತಿಯಲ್ಲಿ ಆಗುತ್ತಿದೆ. ತಾವು ಹೇಳುತ್ತಲೇ ಇದ್ದೀರಿ. ಆದರೂ ಸಹ ಇದೇ ರೀತಿಯಲ್ಲಿ ಅಗುತ್ತಿದೆ. ತಾವು ಸರ್ಕಾರಕ್ಕೆ ಆದೇಶ ಮಾಡಬೇಕು.

**ಸಭಾಪತಿಯವರು:–** ಶ್ರೀಯುತ ಅಶೋಕ್‌ರವರೆ, ತಾವು ಹಿಂದುಗಡೆ ಏತಕ್ಕೆ ಕುಳಿತಿದ್ದೀರಿ. ಕಾಣಿಸುವುದಿಲ್ಲ. ಮುಂದೆ ಬಂದು ಕುಳಿತುಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ, ೯ ಜನ ಮಂತ್ರಿಗಳು ಹಾಜರಾಗಿರುತ್ತಾರೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ( ಪದವೀಧರರ ಕ್ಷೇತ್ರ) :–** ಮಾನ್ಯ ಸಭಾಪತಿಯವರೆ, ನಾನು ಯೋಜನಾ ಸಚಿವರಲ್ಲಿ ಮನವಿ ಮಾಡಿದ್ದೆ. ಅವರು ಪ್ರಸ್ತುತ ಮೊಗಸಾಲೆಯಲ್ಲಿರಬಹುದು. ದಯವಿಟ್ಟು ಅವರನ್ನು ಕರೆಸಿ. ಈಗ ಮಾನ್ಯ ಸಚಿವರು ಬಂದರು.

**ಸಭಾಪತಿಯವರು:–** ಸದನದಲ್ಲಿ ಇರಬೇಕಾದ ಅಧಿಕಾರಿಗಳು: ಶ್ರೀ ಶುಭಾಷ್‌ಚಂದ್ರ, ಶ್ರೀಮತಿ ಕೆ. ಜ್ಯೋತಿ, ಶ್ರೀಮತಿ ಶ್ಯಾಮಲ, ಶ್ರೀ ಇಕ್ಬಾಲ್, ಶ್ರೀಮತಿ ವಿನೋದ ಪ್ರಿಯಾ, ಶ್ರೀ ಪ್ರಭುಲಿಂಗಾ ಕಟ್ಟಿ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ :–** ಮಾನ್ಯ ಸಭಾಪತಿಯವರೆ,

**ಸಭಾಪತಿಯವರು:–** ಶ್ರೀಯುತ ಪ್ರಕಾಶ್ ಕೆ. ರಾಠೋಡ್ ರವರು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದಂದತೆ ನಾನು ಉತ್ತರವನ್ನು ಹೇಳುತ್ತಿದ್ದೇನೆ.. ಶ್ರೀಯುತ ರಾಠೋಡ್ ರವರೆ, ನನ್ನ ಕೆಲಸ, ನಾನು ಈ ವಿಚಾರವಾಗಿ ಪ್ರತಿದಿನವೂ ಹೇಳುತ್ತೇನೆ.

ಈ ವಿಚಾರ ಸಭಾನಾಯಕರಿಗೆ ಮತ್ತು ಸರ್ಕಾರಕ್ಕೆ ಬಿಟ್ಟ ವಿಚಾರ. ಮಂತ್ರಿಗಳು ಬಂದಿದ್ದಾರೋ ಇಲ್ಲವೋ ಎಂದು ಅವರು ಹೇಳಬೇಕು. ನಾನು ಏನು ಮಾಡಬೇಕು ಹೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ :-** ಮಾನ್ಯ ಸಭಾಪತಿಯವರೆ, ತಾವು ಏನು ಕೇಳಿದ್ದೀರಿ, ಅದಕ್ಕೆ ನಾನು ಉತ್ತರವನ್ನು ಹೇಳುತ್ತೇನೆ. ೨ ಜನ ಮಂತ್ರಿಗಳು ಬಂದಿದ್ದಾರೆ. ಅದರಲ್ಲಿ ಒಬ್ಬರೋ ಇಬ್ಬರೋ ಹೊರಗಡೆ ಇರಬಹುದು. ಅವರು ಬರುತ್ತಾರೆ. ಈ ರೀತಿ ಇರುವುದು ಮಾಮೂಲಿ. ನಿಮ್ಮ ಆದೇಶದ ಮೇರೆಗೆ ದಿವಸದಿಂದ ದಿವಸಕ್ಕೆ ಹೆಚ್ಚಿನದಾಗಿ ಮಂತ್ರಿಗಳು ಅಧಿಕಾರಿಗಳು ಬರುತ್ತಾರೆ.

**ಶ್ರೀ ಪ್ರಕಾಶ್ ಕೆ. ರಾಠೋಡ್:-** ಮಾನ್ಯ ಸಭಾಪತಿಯವರೆ, ಅಧಿಕಾರಿಗಳು ಇರುವುದಿಲ್ಲ.

**ಶ್ರೀ ಎಸ್,ರವಿ( ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಈ ನಿಟ್ಟಿನಲ್ಲಿ ಸೂಕ್ತ ವ್ಯವಸ್ಥೆ ಮಾಡಲು ಸರ್ಕಾರಿ ಮುಖ್ಯ ಸಚೇತಕರನ್ನು ನೇಮಕ ಮಾಡಬೇಕಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, ಇಷ್ಟರಲ್ಲಿಯೇ ಸರ್ಕಾರಿ ಮುಖ್ಯ ಸಚೇತಕರ ನೇಮಕವಾಗಲಿದ್ದು ಮಾನ್ಯ ಸದಸ್ಯರುಗಳ ಆಸೆಯನ್ನು ಪೂರೈಸುತ್ತಾರೆ.

**೦6. ಹಕ್ಕುಚ್ಯುತಿ ಪ್ರಸ್ತಾವ**

**- (ಚರ್ಚೆಗೆ ಅನುಮತಿ ಕೋರಿಕೆ)**

**ವಿಷಯ: ಶಾಸಕರ ಪ್ರದೇಶಾಭಿವೃದ್ಧಿ ನಿಧಿಯನ್ನು ಕರೋನಾ ನಿಮಿತ್ತ ಕಡಿತಗೊಳಿಸಿರುವುದು ಹಾಗೂ 2018-19ನೇ ಸಾಲಿನಲ್ಲಿ ಸಾರಾಸಗಟಾಗಿ ವಾಪಸ್ಸು ತೆಗೆದುಕೊಂಡಿರುವಂತಹ ದುರಂತದ ಬಗ್ಗೆ.**

--- -

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ವಿಧಾನ ಪರಿಷತ್ತಿನ ಎಲ್ಲಾ ಸದಸ್ಯರಿಗೆ ಹಕ್ಕುಚ್ಯುತಿಯಾಗಿರುವ ವಿಚಾರವನ್ನು ತಮ್ಮ ಮುಂದೆ ಪ್ರಸ್ತಾಪ ಮಾಡುತ್ತೇನೆ. ನಮಗೆಲ್ಲರಿಗೂ ಪ್ರದೇಶಾಭಿವೃದ್ಧಿ ಎಂದು ಹೇಳಿ, ಬಜೆಟ್ ಮೂಲಕ ಒಂದು ವರ್ಷಕ್ಕೆ 2 ಕೋಟಿ ರೂಪಾಯಿಗಳ ಹಣ ಕೊಡುವಂತಹ ಪದ್ಧತಿ ಇದೆ.

**ಸಭಾಪತಿಯವರು:-** ತಾವು ಈ ಬಗ್ಗೆ ಮಾತನಾಡಲು ನೋಟಿಸ್ ಕೊಡಬೇಕು.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ನೋಟಿಸ್ ಕೊಟ್ಟಿದ್ದೇನೆ. ಮತ್ತು ಇದು ವಿಶೇಷವಾದ ಹಕ್ಕುಚ್ಯುತಿ ವಿಷಯವಾದ್ದರಿಂದ ಇದನ್ನು ಪ್ರಸ್ತಾಪ ಮಾಡಲೇ ಬೇಕಾಗಿದೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಮೇಲೆ ಉತ್ತರ ಕೊಡುವವರಿದ್ದಾರೆ. ಮತ್ತು ಸಂಬಂಧಪಟ್ಟ ಸಚಿವರಿದ್ದಾರೆ. ನಮಗೆ 2 ಕೋಟಿ ರೂಪಾಯಿಗಳಲ್ಲಿ ಕರೋನಾ ವಿಚಾರದಲ್ಲಿ ಒಂದು ಸಲ ಒಂದು ಕೋಟಿ ರೂಪಾಯಿಗಳನ್ನು ಕಡಿತ ಮಾಡಿದರು. ಮತ್ತೊಂದು ಬಾರಿ 50-60 ಲಕ್ಷ ರೂಪಾಯಿಗಳನ್ನು ಕಡಿತ ಮಾಡಿದರು. ಈಗಾಗಲೇ ನಮಗೆ ಈ ರೀತಿಯಲ್ಲಿ ಎರಡೂವರೆ-ಮೂರು ಕೋಟಿ ರೂಪಾಯಿಗಳ ಹಣವನ್ನು ಕಡಿತ ಮಾಡಿದ್ದಾರೆ. ಈಗ ದುರಂತ ಎಂದರೆ, 2018-19ನೇ ಸಾಲಿನದ್ದು ಈಗಾಗಲೇ ಕಡಿತವಾಗಿ ಹೋಗಿದೆ. ಬಹುಪಾಲು ಎಲ್ಲಾ ಸದಸ್ಯರ ಅಂದರೆ ವಿಧಾನ ಸಭೆಯ ಮತ್ತು ವಿಧಾನ ಪರಿಷತ್ತಿನ ಎಲ್ಲಾ ಶಾಸಕರ ಪ್ರದೇಶಾಭಿವೃದ್ಧಿ ನಿಧಿಯನ್ನು ಇತಿಹಾಸದಲ್ಲಿ ಮೊಟ್ಟಮೊದಲಿಗೆ ಸಾರಾಸಗಟಾಗಿ ವಾಪಸ್ಸು ತೆಗೆದುಕೊಂಡಿರತಕ್ಕಂತಹ ದುರಂತ ಎದುರಾಗಿದೆ. ಇವತ್ತು

ಸರ್ಕಾರದ ವಿಚಾರದಲ್ಲಿ ತಪ್ಪು ತಿಳುವಳಿಕೆ ಇದೆ. ನಮಗೆ ಒಂದು ಬಾರಿ ನೋಡಲ್ ಆಫೀಸರ್ ಎಂದು ಹೇಳಿ, ಡಿ.ಸಿ.ಯಿಂದ ಕಿತ್ತು ಎ.ಸಿ.ಗೆ ಹಾಕಿದರು. ಮತ್ತೆ, ಎ.ಸಿ.ಯಿಂದ ಕಿತ್ತು ಡಿ.ಸಿ.ಗೆ ಹಾಕಿದರು. ಈ ಎಸ್ಟಿಮೇಟ್‌ಗಳು ಮತ್ತು O.M (Official Memorandum) ಗಳು ಆಗುವುದಕ್ಕೆ 6 ತಿಂಗಳುಗಳಿಂದ ಒಂದು ವರ್ಷ, ಎರಡು ವರ್ಷಗಳು ಬೇಕು. O.M ಆಗಲಿಕ್ಕೆ ಒಂಧು ವರ್ಷ, ಎರಡು ವರ್ಷ ಬೇಕು. ಅದು ಜಿಲ್ಲಾ ಕೇಂದ್ರದಲ್ಲಿಯೇ ಆಗಬೇಕು. ನಮಗೆ ನಾಲ್ಕು ಜಿಲ್ಲೆಗಳು ಬರುತ್ತವೆ. ಮೈಸೂರಿನಲ್ಲಿ , ಮಂಡ್ಯದಲ್ಲಿ, ಹಾಸನದಲ್ಲಿ ಮತ್ತು ಚಾಮರಾಜನಗರದಲ್ಲಿ ಆಗಬೇಕು. ಎಸ್ಟೀಮೇಟ್‌ಗಳು ವಿವಿಧ ಹಂತಗಳಲ್ಲಿ ಅನುಮೋದನೆಗೊಂಡು ಕಾಮಗಾರಿಗಳು ನಡೆಯುತ್ತಿವೆ, ಇವತ್ತು ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ. ಮಾನ್ಯ ಸಭಾಪತಿಯವರೆ, ತಮ್ಮದೇ 60 ಲಕ್ಷ ರೂಪಾಯಿಗಳು ವಾಪಸ್ಸು ಹೋಗಿದೆ. ಅದು ತಮಗೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ.

**ಸಭಾಪತಿಯವರು:-** 2 ಕೋಟಿ 60 ಲಕ್ಷ ರೂಪಾಯಿಗಳು ವಾಪಸ್ಸು ಹೋಗಿದೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** 2 ಕೋಟಿ 60 ಲಕ್ಷ ರೂಪಾಯಿಗಳು ವಾಪಸ್ಸು ಹೋಗಿದೆ. ಇದು ಇನ್ನು ಬಹಳ ಜನ ಶಾಸಕರ ಅರಿವಿಗೆ ಬಂದಿರುವುದಿಲ್ಲ. ವಿಧಾನ ಪರಿಷತ್ತಿನ ಮತ್ತು ವಿಧಾನ ಸಭೆಯ ಶಾಸಕರುಗಳ ಪ್ರದೇಶಾಭಿವೃದ್ಧಿ ಅನುದಾನದ ಕೋಟಿ ಕೋಟಿ ಹಣವನ್ನು ಸರ್ಕಾರ ಏಕಾಏಕಿ ವಾಪಸ್ಸು ತೆಗೆದುಕೊಂಡು ಕೆಟ್ಟ ಸಂಪ್ರದಾಯಕ್ಕೆ ನಾಂದಿ ಹಾಡಿರುವುದಕ್ಕೆ ನನ್ನ ಸಂಪೂರ್ಣ ವಿರೋಧವಿದೆ. ಇದು ನಮ್ಮೆಲ್ಲರ ಹಕ್ಕುಚ್ಯುತಿಯಾಗಿದೆ. ನಾವು ಅನುದಾನವನ್ನು ಹೆಚ್ಚು ಮಾಡಿ ಎಂದು ಕೇಳುತ್ತಿದ್ದೇವೆ, ಮತ್ತೆ ನಮಗೆ ಕೊಡಬೇಕಾದ ಬಾಕಿ ಹಣವನ್ನು ಕೊಡಿ ಎಂದು ಹೇಳಿ ತಮ್ಮ ಅಧ್ಯಕ್ಷತೆಯಲ್ಲಿ ಸಭೆ ಮಾಡಿದ್ದೇವೆ. ನಮ್ಮ ಕೊರತೆಯನ್ನು ನೀಗಿಸುವುದು ಇರಲಿ, ಕೊಟ್ಟಿರುವಂತಹ ಹಣವನ್ನೇ ಕಿತ್ತುಕೊಂಡರೆ, ವಿವಿಧ ಹಂತಹಗಳಲ್ಲಿರುವ ಕಾಮಗಾರಿಗಳ ಸ್ಥಿತಿ ಏನು? ಅಗತ್ಯ ಬಿದ್ದರೆ ಹೊಸ ಮಾರ್ಗಸೂಚಿಗಳನ್ನು ಕೊಡಿ, ಹೊಸ ಎಸ್ಟಿಮೇಟ್ ಮಾಡಬೇಕೆಂದು ಹೇಳಿ, ಇಲ್ಲವೇ ಬೇಗ ಮಾಡಬೇಕೆಂದು ಹೇಳಿ ನಮಗೆ ರಿಮೈಂಡ್ ಮಾಡಿ. ಅದನ್ನು ಬಿಟ್ಟು ನೆಗಡಿ ಆಯಿತು ಎಂದು ಹೇಳಿ, ಮೂಗನ್ನೇ

ಕೊಯ್ದರೆ ಹೇಗೆ? ಮತ್ತೆ, ಇನ್ನು ಏನೋ ಆಯಿತು ಎಂದು ಹೇಳಿ ಕತ್ತನ್ನೇ ಕೊಯ್ದರೆ ಹೇಗೆ? ಆದ್ದರಿಂದ, ಈ ವಿಚಾರದಲ್ಲಿ ಪೀಠ ನೆರವಿಗೆ ಬರಬೇಕು. ಸಚಿವರು ಇದ್ದಾರೆ, ಕೂಡಲೇ ನಮ್ಮ ಎಲ್ಲಾ ಅನುದಾನವನ್ನು ಯಥಾವತ್ತಾಗಿ ವಾಪಸ್ಸು ಕೊಡಬೇಕು. ಈ ನಿಟ್ಟಿನಲ್ಲಿ ಆದೇಶ ಮಾಡಬೇಕು. ಏನಾದರೂ ಬದಲಾವಣೆಯ ಸೂಚನೆಗಳಿದ್ದರೆ ನಮಗೆ ಕೊಡಿ. ನಾವು ಅದನ್ನು ಪಾಲಿಸುತ್ತೇವೆ. ನೀವು ನಮಗೆ ಶಕ್ತಿಯನ್ನು ತುಂಬಬೇಕು, ಹೆಚ್ಚುವರಿಯಾಗಿ ಅನುದಾನವನ್ನು ಕೊಡುವುದರ ಬದಲಿಗೆ ಕೊಟ್ಟಿದ್ದನ್ನೇ ಕಿತ್ತುಕೊಂಡರೆ, ಹೇಗೆ?

(ಗೊಂದಲ)

**ಶ್ರೀ ಎಸ್.ಎಲ್. ಭೋಜೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ತಮಗೆ ಈ ವಿಚಾರದಲ್ಲಿ ಅನುಭವವಾಗಿದೆ. ತಮ್ಮ ಅಧ್ಯಕ್ಷತೆಯಲ್ಲಿ ಆರ್ಥಿಕ ಇಲಾಖೆಯ ಎಲ್ಲಾ ಅಧಿಕಾರಿಗಳನ್ನು ಒಳಗೊಂಡು, ಮಂತ್ರಿಗಳನ್ನು ಒಳಗೊಂಡಂತೆ ಸಭೆ ಮಾಡಿದ ಸಂದರ್ಭದಲ್ಲಿ ಏನು ಮಾತು ಕೊಟ್ಟರು ಮತ್ತು ಏನು ನಿರ್ಣಯ ಮಾಡಿದರು ಮತ್ತು ಇವತ್ತು ಆಗಿರುವ ಪರಿಸ್ಥಿತಿ ಏನು, ಏನು? ನಮಗೆ ಕೊಡುವಂತಹದ್ದು 2 ಕೋಟಿ ರೂಪಾಯಿಗಳು. ನಾವುಗಳು 6-6 ಜಿಲ್ಲೆಗಳಲ್ಲಿ ಕೆಲಸ ಮಾಡಬೇಕು, ಅದರ ಜೊತೆಯಲ್ಲಿ, 3-3 ಶಾಲೆಗಳನ್ನು ದತ್ತು ತೆಗೆದುಕೊಳ್ಳಬೇಕೆಂದು ಮುಖ್ಯಮಂತ್ರಿಗಳು ಆದೇಶ ಮಾಡಿದ್ದು, ಅದರಂತೆ ದತ್ತು ತೆಗೆದುಕೊಂಡಿದ್ದೇವೆ. ಆ ಕಡೆ ಇಂತಹ ಶಾಸಕರ ದತ್ತು ಶಾಲೆ ಎಂದು ಹೇಳಿ ಹೆಸರು ಬೇರೆ ಹಾಕಿದ್ದಾರೆ. ಅಲ್ಲಿ ಶೌಚಾಲಯಗಳಿಲ್ಲ, ಕುಡಿಯುವುದಕ್ಕೆ ನೀರು ಇಲ್ಲ.

ಸಭಾಪತಿಯವರು:– ಈ ವಿಚಾರದಲ್ಲಿ ಎಲ್ಲರದ್ದು ಸಮಸ್ಯೆ ಇದೆ. ಇದಕ್ಕೆ ಮಾನ್ಯ ಸಚಿವರು ಉತ್ತರ ಹೇಳಬೇಕು.

**ಶ್ರೀ ಮುನಿರತ್ನ (ತೋಟಗಾರಿಕೆ, ಯೋಜನೆ, ಹಾಗೂ ಸಾಂಖ್ಯಿಕ ಸಚಿವರು):–** ಮಾನ್ಯ ಸಭಾಪತಿಯವರೆ, ಇದಕ್ಕೆ ಸಂಬಂಧಪಟ್ಟಂತೆ ಸಂಪೂರ್ಣ ಮಾಹಿತಿಯನ್ನು ಕೇಳಿದ್ದೇನೆ. ಅದು ಬರುತ್ತದೆ. ಬಂದ ಕೂಡಲೇ ಅರ್ಧ ಗಂಟೆಯಲ್ಲಿ ಉತ್ತರ ಹೇಳುತ್ತೇನೆ.

ಸಭಾಪತಿಯವರು:- ಆಯಿತು, ಆಮೇಲೆ ಹೇಳಿ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ವಿಶೇಷವಾಗಿ ನಮ್ಮ ಕಲ್ಯಾಣ ಕರ್ನಾಟಕ ಭಾಗದಲ್ಲಿ ನಂಜುಂಡಪ್ಪ ವರದಿಯ ಆಧಾರದ ಮೇರೆಗೆ ಈ ವರ್ಷದ ಅನುದಾನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕಲ್ಯಾಣ ಕರ್ನಾಟಕ ಭಾಗಕ್ಕೆ 3 ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅವರನ್ನು ಅಭಿನಂದಿಸುತ್ತೇನೆ. ಅದರೆ, ಅಂಕಿ-ಸಂಖ್ಯೆ ಮತ್ತು ಯೋಜನೆಗೆ ಸಂಬಂಧಪಟ್ಟಂತೆ ಪ್ರಧಾನ ಕಾರ್ಯದರ್ಶಿಗಳು ಒಂದು ಸುತ್ತೋಲೆಯನ್ನು ಹೊರಡಿಸಿದ್ದಾರೆ. ಆ ಸುತ್ತೋಲೆ ಎಷ್ಟು ದುರಾದೃಷ್ಟ ಇದೆ ಎಂದರೆ, 2019-20, 2020-21, 2021-22 ಈ ಮೂರು ವರ್ಷದಲ್ಲಿ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರಿಗೆ ಏನು ಎರಡೆರಡು ಕೋಟಿ ರೂಪಾಯಿಗಳ ಅನುದಾನ ಬರಬೇಕೋ ಒಟ್ಟು 6 ಕೋಟಿ ರೂಪಾಯಿಗಳ ಅನುದಾನದಲ್ಲಿ ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಹೇಳಿದ್ದಾರೆ. 2019-20 ರಲ್ಲಿ ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿತ್ತು. ನಮ್ಮ ಜನರ ಬೇಡಿಕೆ ಇರುವುದು, ನಾನು ಎತಕ್ಕೆ ಕಲ್ಯಾಣ ಕರ್ನಾಟಕದ 3000 ಕೋಟಿ ರೂಪಾಯಿಗಳ ಉದಾಹಾರಣೆಯನ್ನು ಕೊಡುತ್ತಿದ್ದೇನೆಂದರೆ, ನಮ್ಮ ಕಣ್ಣು ಮುಂದೆಯೇ ಯೋಜನೆಯನ್ನು ಮಾಡುತ್ತಾರೆ, ಒಬ್ಬೊಬ್ಬ ಎಂ.ಎಲ್.ಎ.ಗೆ 40 ಕೋಟಿ-50 ಕೋಟಿ ರೂಪಾಯಿಗಳು ಪ್ರತಿ ವರ್ಷ ಅನುದಾನ ಬರುತ್ತದೆ. ಆದರೆ, ನಮ್ಮ, ವಿಧಾನ ಪರಿಷತ್ತಿನ ಸದಸ್ಯರನ್ನು ಮೂಸಿ ಸಹಿತ ನೋಡುವುದಿಲ್ಲ. ನಮಗೆ ಕೊಡುವಂತಹ 2 ಕೋಟಿ ರೂಪಾಯಿಗಳ ವಿಚಾರದಲ್ಲಿ ನಿಮ್ಮ ಪ್ರಧಾನ ಕಾರ್ಯದರ್ಶಿಗಳು ಸುತ್ತೋಲೆಯನ್ನು ಹೊರಡಿಸುತ್ತಾರೆ. 2019-20ನೇ ಸಾಲಿನ ಅನುದಾನದಲ್ಲಿ ಒಂದು ಕೋಟಿ ರೂಪಾಯಿಗಳನ್ನು ನಾವು ಕರೋನಾಗೆ ಬಳಸಿಕೊಂಡಿದ್ದೇವೆಂದು ಹೇಳುತ್ತಾರೆ. ನನ್ನದು 2019-20ನೇ ಸಾಲಿನ ಅನುದಾನಕ್ಕೆ ಸಂಬಂಧಪಟ್ಟಂತೆ ಯೋಜನೆಯಾಗಿದ್ದು, ಪೂರ್ಣ ಹಣ ಖರ್ಚಾಗಿದೆ. 2020-21 ನೇ ಸಾಲಿನ ಅನುದಾನಕ್ಕೆ ಸಂಬಂಧಪಟ್ಟಂತೆ ಯೋಜನೆಯ ಪ್ರಸ್ತಾವನೆ ಕೊಟ್ಟಿದ್ದರೆ, ಅದನ್ನು held up ಮಾಡಿದ್ದಾರೆ. ಇದು ಅವೈಜ್ಞಾನಿಕ ಮತ್ತು

ಅನ್ಯಾಯವಾಗಿದೆ. ಒಂದು ಕಡೆ ನಾವು ಶಾಸಕರು ಎಂದು ಗೌರವದಿಂದ ಹೇಳಕೊಳ್ಳುತ್ತೇವೆ. ಒಬ್ಬೊಬ್ಬ ಎಂ.ಎಲ್.ಎ.ಗೆ 40 ಕೋಟಿ-50 ಕೋಟಿ ರೂಪಾಯಿಗಳು ಪ್ರತಿ ವರ್ಷ ಅನುದಾನ ಬರುತ್ತದೆ. ಮತ್ತೆ, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಲ್ಲಿ, ಮಲೆನಾಡು ಅಭಿವೃದ್ಧಿ ಯೋಜನೆಯಡಿಯಲ್ಲಿ ಒಂದು ಪೈಸೆ ಸಮೇತ ಬಂದಿರುವುದಿಲ್ಲವೆಂದು ನಮ್ಮ ಸ್ನೇಹಿತರು ಹೇಳುತ್ತಿದ್ದರು. ಈ ರೀತಿಯ ತಾರತಮ್ಯ ಮಾಡುವುದು ಸರಿಯಲ್ಲ.

**ಮುಂದು.**

**(341) 15.03.2022 01.10 ಎಸ್‌ವಿ-ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)**

**07. ವರದಿಯನ್ನೊಪ್ಪಿಸುವುದು**

**ಶ್ರೀ ಬಿ.ಜಿ.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, **ವಿಧಾನ ಮಂಡಲದ ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿ 2020-21ನೇ ಸಾಲಿನ 37ನೇ ವರದಿಯನ್ನು** ಸಮಿತಿಯ ಅಧ್ಯಕ್ಷರ ಪರವಾಗಿ ಸಭೆಗೆ ಒಪ್ಪಿಸುತ್ತೇನೆ.

**ಸಭಾಪತಿಯವರು:-** ವರದಿಯನ್ನೊಪ್ಪಿಸಲಾಯಿತು.

ಈಗ ವಿತ್ತೀಯ ಕಾರ್ಯಕಲಾಪವನ್ನು ತೆಗೆದುಕೊಳ್ಳಲಾಗುವುದು. 52 ಜನ ಸದಸ್ಯರು ಹೆಸರನ್ನು ಕೊಟ್ಟಿದ್ದಾರೆ. ಇದರಲ್ಲಿ 17 ಜನ ಸದಸ್ಯರು ಮಾತನಾಡಿದ್ದಾರೆ. ಮಾನ್ಯ ಭಂಡಾರಿಯವರೇ, ನಿಮಗೆ ಎಷ್ಟು ಸಮಯ ಬೇಕಾಗುತ್ತದೆ ಎಂಬುದನ್ನು ಹೇಳಿ. ನಾನು ಬೆಲ್ ಹೊಡೆದಾಗ ನೀವು ಕುಳಿತುಕೊಳ್ಳಬೇಕು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ದಯಮಾಡಿ ಹೊಸದಾಗಿ ಬಂದವರಿಗೆ ಹೆಚ್ಚಿನ ಅವಕಾಶ ಕೊಡಿ. ಹಿರಿಯ ಸದಸ್ಯರಿಗೆಲ್ಲಾ ಒಂದೊಂದು ಗಂಟೆ ಮಾತನಾಡಿದ್ದಾರೆ.

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಪ್ರಥಮ ಬಾರಿಗೆ ಮಾತನಾಡುತ್ತಿದ್ದೇನೆ. ಹಾಗಾಗಿ ಎಷ್ಟು ಹೊತ್ತಿಗೆ ಮುಗಿಯುತ್ತದೆ ಎಂದು ನನಗೆ ಹೇಳಲಿಕ್ಕೆ ಆಗುವುದಿಲ್ಲ.

**ಸಭಾಪತಿಯವರು:–** ನಾನು 20 ನಿಮಿಷ ಸಮಯವನ್ನು ಕೊಡುತ್ತೇನೆ. ಅಷ್ಟರಲ್ಲಿ ಮುಗಿಸಿ. ನಾನು ಬೆಲ್ ಹೊಡೆದಾಗ ನೀವು ಕುಳಿತುಕೊಳ್ಳಬೇಕು.

**ಶ್ರೀ ಮಂಜುನಾಥ್ ಭಂಡಾರಿ:–** ಮಾನ್ಯ ಸಭಾಪತಿಯವರೇ, ಅರ್ಧ ಗಂಟೆ ಕಾಲಾವಕಾಶವನ್ನು ಕೊಡಿ.

**ಸಭಾಪತಿಯವರು:–** ಮಾತನಾಡಿ.

**೦೮. ವಿತ್ತೀಯ ಕಾರ್ಯಕಲಾಪ**

**2022-23ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ**

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ನಾನು ವಿಧಾನ ಪರಿಷತ್ತಿಗೆ ಬರಬೇಕಾದರೆ ಮಾನ್ಯ ಹರಿಪ್ರಸಾದ್ ಅವರು ಮತ್ತು ಮಾನ್ಯ ಆಯನೂರು ಮಂಜುನಾಥ್ ಅವರು ಒಂದು ಮಾತನ್ನು ಹೇಳಿದರು. ರಾಜ್ಯಸಭೆಯಲ್ಲಿ ಪ್ರಥಮವಾಗಿ ಮಾತನಾಡುವವರಿಗೆ maiden speech ಎಂದು ಹೇಳಿ ಸಭಾಪತಿಯವರು ಸಂಪೂರ್ಣ ಸಹಕಾರವನ್ನು ಕೊಡುತ್ತಾರೆ. ಹಾಗಾಗಿ ತಾವು ಹಾಗೂ ಎಲ್ಲಾ ಮಾನ್ಯ ಶಾಸಕರು ನನಗೆ ಸಂಪೂರ್ಣ ಸಹಕಾರವನ್ನು ಕೊಡುತ್ತೀರೆಂದು ನಾನು ನಂಬಿದ್ದೇನೆ.

ಪ್ರಪ್ರಥಮವಾಗಿ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಗುವುದಕ್ಕೂ ಮುಂಚೆ ಪರಿಷತ್ತಿನ ಪರಿಕಲ್ಪನೆಯನ್ನು ಮಾಡಿದಂತಹ ಆ ಮಹಾನ್ ಚೇತನಗಳಿಗೆ ಈ ಸದನದ ಮೂಲಕ ನಮನಗಳನ್ನು ಸಲ್ಲಿಸುವುದಕ್ಕೆ ನಾನು ಬಯಸುತ್ತಿದ್ದೇನೆ. ನಾನು ಈ ಸದನವನ್ನು **“ಅರಿವಿನ ಅರಮನೆಯ ಹೆಬ್ಬಾಗಿಲು”** ಮತ್ತು **“ಲೋಕಕಲ್ಯಾಣಕ್ಕಾಗಿ ತೆರೆದಿಟ್ಟ ವಿಚಾರದ ಅಮೃತಕುಂಭ”** ಎಂದು ಭಾವಿಸಿದ್ದೇನೆ. ಈ ಪರಿಷತ್ತಿಗೆ ಸದಸ್ಯನಾಗಲು ನನಗೆ ಅವಕಾಶವನ್ನು ಮಾಡಿಕೊಟ್ಟಂತಹ ನನ್ನ ಪಕ್ಷ ಹಾಗೂ ನನ್ನ ಪಕ್ಷದ ಎಲ್ಲಾ ನಾಯಕರಿಗೆ ಈ ಸದನದ ಮೂಲಕ ಅಭಿನಂದನೆಗಳನ್ನು ಸಲ್ಲಿಸಬಯಸುತ್ತೇನೆ. ಕರಾವಳಿ ಮೂಲದವನಾದ ನಾನು ಸಹ್ಯಾದ್ರಿಯ ತಪ್ಪಲಿನಲ್ಲಿ ರಾಜಕೀಯವಾಗಿ ಬೆಳೆದು, ಅಲ್ಲಿಂದ ಮತ್ತೆ ಕರಾವಳಿಯ ಜನತೆ ನನ್ನನ್ನು ಆಶೀರ್ವದಿಸಿ ವಿಧಾನ ಪರಿಷತ್ತಿಗೆ ಕಳುಹಿಸಿದ್ದಾರೆ. ಅವರಿಗೆ ನಾನು ಸಾಷ್ಟಾಂಗ ನಮಸ್ಕಾರವನ್ನು ಹೇಳಲಿಕ್ಕೆ ಬಯಸುತ್ತೇನೆ. ಅದಕ್ಕಿಂತಲೂ ಮುಖ್ಯವಾಗಿ ಈ ಚುನಾವಣೆಯ ಸಂದರ್ಭದಲ್ಲಿ ಏನಾಗುತ್ತದೆಯೋ ಎನ್ನುವ ಆತಂಕವಿದ್ದಾಗ, ಚುನಾವಣೆಗೆ ಸ್ಪರ್ಧಿಸಬೇಕೋ, ಬೇಡವೋ ಚುನಾವಣೆಯ ಖರ್ಚುವೆಚ್ಚಗಳನ್ನು ನೋಡಬೇಕು ಎಂದು ಹೇಳಿದಾಗ ಸಂಪೂರ್ಣವಾಗಿ ನನಗೆ ಮನಸ್ಥೈರ್ಯವನ್ನು ತುಂಬಿದಂತಹ ನನ್ನ ಧರ್ಮಪತ್ನಿಯಾದ ಶ್ರೀಮತಿ ಪ್ರಸನ್ನ ಹಾಗೂ ನನ್ನ ಮಗಳಾದ ಕು. ದೀಕ್ಷಾ, ಅದಕ್ಕಿಂತಲೂ ಮುಖ್ಯವಾಗಿ ನನ್ನ ಆತ್ಮೀಯ ಸ್ನೇಹಿತರಾದಂತಹ ಶ್ರೀ ರಾಧಾಕೃಷ್ಣ ಅವರು ನನಗೆ ಸಂಪೂರ್ಣವಾಗಿ ಸಹಕಾರವನ್ನು ಕೊಟ್ಟಿದ್ದಾರೆ.

48 ವರ್ಷಗಳ ಕಾಲ ನನ್ನನ್ನು ರಾಜಕೀಯ ಜೀವನದಲ್ಲಿ ಸಂಪೂರ್ಣವಾಗಿ ತಿದ್ದಿದಂತಹ ದಿವಂಗತ ಆಸ್ಕರ್ ಫರ್ನಾಂಡಿಸ್‌ರವರನ್ನು ಮತ್ತು ನಮ್ಮ ನಾಯಕರಾದಂತಹ ಶ್ರೀ ಮಲ್ಲಿಕಾರ್ಜುನ ಖರ್ಗೆಯವರನ್ನು ನೆನೆಸಿಕೊಳ್ಳುವುದು ನನ್ನ ಕರ್ತವ್ಯವಾಗಿದೆ.

ಮಾನ್ಯ ಸಭಾಪತಿಯವರೇ, ಎರಡು ಶತಮಾನದ ಹಿಂದಿನ ಒಂದು ಕವಿವಾಣಿಯಿದೆ. ಅವರು ಏನು ಹೇಳುತ್ತಾರೆಂದರೆ **"ಜಾತಿ ಸಂಕರವಿಲ್ಲ, ಜಡದೇಹಿಗಳಿಲ್ಲ; ನೀತಿಹೀನರಿಲ್ಲ, ಚೋರರಿಲ್ಲ; ಘಾತಕರಿಲ್ಲ, ಈ ನಾಡಿನ ಪರಿಯನ್ನು ಅದೆಂತು ಬಣ್ಣಿಸಲಿ."** ಆದರೆ ಎರಡು ಶತಮಾನಗಳು ಕಳೆದ ಮೇಲೆ ನಾವು ಇಂದು ಆತ್ಮಾವಲೋಕನವನ್ನು ಮಾಡಿಕೊಳ್ಳಬೇಕಾಗಿದೆ. ನನಗೆ ಈ ಬಜೆಟ್‌ನ ಬಗ್ಗೆ ಮಾತನಾಡಬೇಕೆಂದು ಹೇಳಿದಾಗ ನಾನು 20 ನಿಮಿಷ, 30 ನಿಮಿಷ ಎಂದು ಹೇಳಿರಬಹುದು. ಆದರೆ ಕಳೆದ 10 ದಿನಗಳಿಂದ ನಾನು ಈ ಬಜೆಟ್‌ನ ಬಗ್ಗೆ ತಯಾರಿ ನಡೆಸಿದ್ದೇನೆ. ತಯಾರಿ ಮಾಡುವಾಗ ನಾನು ಎರಡು ಹೆಸರುಗಳನ್ನು ನೋಡಿದೆ. ಒಂದು ದಿವಂಗತ ರಾಮಕೃಷ್ಣ ಹೆಗಡೆ, ಮತ್ತೊಂದು ಸಿದ್ದರಾಮಯ್ಯನವರು. 13-13 ಬಜೆಟ್‌ಗಳನ್ನು ಮಂಡಿಸಿದ್ದಾರೆ.

**(ಈ ಹಂತದಲ್ಲಿ ವೈಸ್ ಛೇರ್ಮನ್‌ರಾದ ಶ್ರೀಮತಿ ಭಾರತಿ ಶೆಟ್ಟಿಯವರು ಸಭಾ ಪೀಠವನ್ನು ಅಲಂಕರಿಸಿದರು.)**

ಅವರು ಬಜೆಟ್ ಅನ್ನು ಮಂಡನೆ ಮಾಡುವಾಗ ಯಾವ ರೀತಿ ಮಾಡಿದ್ದಾರೆ ಎನ್ನುವುದನ್ನು ನಾನು ನೋಡಬೇಕಾಗಿದೆ.

ಈ ಬಜೆಟ್ ಎನ್ನುವುದು ಮೂಲತಃ ಎಲ್ಲಿಂದ ಬಂದಿತು? ಬಜೆಟ್ ಎನ್ನುವುದು ಫ್ರಾನ್ಸ್ ದೇಶದ ಅತ್ಯಂತ ಪುರಾತನ ಪದ. ಅದನ್ನು "bougette" ಎಂದು ಹೇಳುತ್ತಾರೆ. ಅಂದರೆ ಅದು leather bag, purse ಎಂದರ್ಥ. ನಾವು ಎಷ್ಟು ಹಣವನ್ನು ಖರ್ಚು ಮಾಡುತ್ತೇವೆ. ಆ ಪರ್ಸಿನಲ್ಲಿ ಎಷ್ಟು ಇರುತ್ತದೆ ಎನ್ನುವುದು ಪ್ರಥಮವಾಗಿ ಬರುತ್ತದೆ. ನಂತರ 1760ರಲ್ಲಿ ಇಂಗ್ಲೆಂಡ್ ದೇಶದಲ್ಲಿ ಹಣಕಾಸಿನ ಕಷ್ಟ ಬಂದಾಗ ಹಣದ ಪರಿಮಿತಿಯನ್ನು ಯಾವ ರೀತಿ ಮಾಡಬೇಕೆಂದು ಹೇಳಿ ಇದು ಬರುತ್ತದೆ. 100 ವರ್ಷಗಳ ನಂತರ ಈಸ್ಟ್ ಇಂಡಿಯಾ ಕಂಪನಿ ಹಾಗೂ ಇಂಗ್ಲೆಂಡಿನ ಅಧಿಪತ್ಯದೊಂದಿಗೆ ಭಾರತ

ದೇಶದಲ್ಲಿ ಹಣಕಾಸಿನ ತೊಂದರೆಯಾದಾಗ James Wilson ಎನ್ನುವ Scottish ಅನ್ನು ಯಾವ ರೀತಿ ಈಸ್ಟ್ ಇಂಡಿಯಾ ಕಂಪನಿಯ ಬಜೆಟ್ ಅನ್ನು ಮಾಡಬೇಕು ಎಂದು ಅವರನ್ನು ಇಲ್ಲಿಗೆ ಕಳುಹಿಸಲಾಗುತ್ತದೆ. ನಂತರ ಪ್ರಥಮ ಬಾರಿಗೆ ಇಂಡಿಯನ್ ಬಜೆಟ್ ಎಂದಾಗುವುದು 1869ರಲ್ಲಿ ಬಂದಿತು.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ನಂತರ ಆರ್ಟಿಕಲ್ 122ರಲ್ಲಿ ಈ ದೇಶದ ಬಜೆಟ್ ಅನ್ನು, ಆರ್ಟಿಕಲ್ 202ರಲ್ಲಿ ರಾಜ್ಯದ ಬಜೆಟ್ ಅನ್ನು ಮಾಡಲಿಕ್ಕೆ ಪ್ರಸ್ತಾವನೆಯಿದೆ. ಆದರೆ ಸಂವಿಧಾನದಲ್ಲಿ ಎಲ್ಲಿಯೂ ಬಜೆಟ್ ಎಂಬ ಶಬ್ದದ ಬಳಕೆ ಇರುವುದಿಲ್ಲ. ಅದು Annual Financial Statement ಎಂಬುದಾಗಿದೆ. ಆದರೆ ನಾವು ಅದನ್ನು ಬಜೆಟ್ ಎಂದು ತಿಳಿದುಕೊಂಡಿದ್ದೇವೆ. ಪ್ರಥಮಬಾರಿಗೆ ನಮ್ಮ ದೇಶದ ಬಜೆಟ್ ಅನ್ನು ನವೆಂಬರ್ 26, 1947ರಂದು ಶ್ರೀ ಆರ್.ಕೆ.ಷಣ್ಮುಗಂ ಚೆಟ್ಟಿಯವರು ಮಂಡಿಸುತ್ತಾರೆ. ಅಂದಿನ ಬಜೆಟ್‌ನ ಗಾತ್ರ ರೂ.197 ಕೋಟಿ ಮಾತ್ರ ಆಗಿರುತ್ತದೆ. ಅದೇ ರೀತಿ ನಮ್ಮ ರಾಜ್ಯದ ಬಜೆಟ್ ಅನ್ನು 1952ರಲ್ಲಿ ಆಗಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಕೆಂಗಲ್ ಹನುಮಂತಯ್ಯನವರು ಮಂಡಿಸಿದಾಗ ಅದರ ಗಾತ್ರ ಕೇವಲ ರೂ.21 ಕೋಟಿ ಆಗಿರುತ್ತದೆ. ಇಂದು ನಮ್ಮ ದೇಶದ ಬಜೆಟ್ ರೂ.39 ಲಕ್ಷ ಕೋಟಿಯನ್ನು ದಾಟಿದೆ. ನಮ್ಮ ರಾಜ್ಯದ ಬಜೆಟ್ ರೂ.2,65,000 ಕೋಟಿಗಳನ್ನು ದಾಟಿದೆ.

ಸ್ವಾತಂತ್ರ್ಯ ಬಂದು 65 ವರ್ಷಗಳಿಂದ ಏನು ಮಾಡಿದ್ದೀರಿ ಎಂದು ಆಡಳಿತ ಪಕ್ಷದವರು ನಮ್ಮನ್ನು ಕೇಳುತ್ತಾರೆ. ಇಂದು ದೇಶದಲ್ಲಿ ಸುಮಾರು ರೂ.40 ಲಕ್ಷ ಕೋಟಿಯ ಬಜೆಟ್, ರಾಜ್ಯದಲ್ಲಿ ರೂ.2,65,000 ಕೋಟಿಯ ಬಜೆಟ್... ಈ ಬೀಜವನ್ನು ಯಾರು ಬಿತ್ತಿದ್ದು? ಇಷ್ಟು ದೊಡ್ಡ ಮರವಾಗಿ ಬೆಳೆದಿರುವುದಕ್ಕೆ ಕಾರಣವೇನು? ನಾನು ಒಂದು ಉದಾಹರಣೆಯನ್ನು ಕೊಡುವುದಾದರೆ, ನಮ್ಮಲ್ಲಿ ಒಂದು ಬಿದಿರು ಗಿಡವನ್ನು ಹಾಕುತ್ತೇವೆ. ಆದರೆ ಆ ಬಿದಿರು ಗಿಡಕ್ಕೆ 5 ವರ್ಷಗಳು, 6 ವರ್ಷಗಳು ಆದರೆ ಒಂದೇ ರೀತಿ ಬೆಳೆಯುತ್ತದೆ. ಇಂದು ಕಾಂಗ್ರೆಸ್ ಪಕ್ಷ ಯಾವ ರೀತಿ ಬಜೆಟ್ ಅನ್ನು ಮಾಡಿದೆ ಎಂದರೆ ಬಿದಿರು ಗಿಡದ ರೀತಿ. ಈಗ ಇವರು ನೀರು ಹಾಕಿ ನಮ್ಮದೇ ಗಿಡ ಬೆಳೆದಿದ್ದೇವೆ ಎಂದು ಹೇಳಬಹುದು. ತೊಂದರೆಯಿಲ್ಲ. ಆದರೆ ಈ ಬಜೆಟ್‌ಗಳನ್ನು ಅವಲೋಕನ ಮಾಡುವಂತಹ

ಸಂದರ್ಭದಲ್ಲಿ ಮಹಾಭಾರತದ ಒಂದು ಮಾತು ನೆನಪಾಗುತ್ತದೆ. "ಅಶ್ವತ್ಥಾಮೋ ಹತಃ" ಎಂದು ಜೋರಾಗಿ ಹೇಳಿ, ನಂತರ ಮೆಲ್ಲಗೆ "ಕುಂಜರಃ" ಎಂದು ಹೇಳುತ್ತಾರೆ. ಆ ರೀತಿ ನಾವು ಬಜೆಟ್‌ನಲ್ಲಿ ಹಲವಾರು ಘೋಷಣೆಗಳನ್ನು ಮಾಡುತ್ತಿರುತ್ತೇವೆ. ಆದರೆ ಕೊನೆಯ ಅಕ್ಷರ ಬಹಳಷ್ಟು ಮಾಯವಾಗುತ್ತಿರುತ್ತದೆ. ನನ್ನ ಒಂದು ಸಲಹೆ ಏನೆಂದರೆ ಈ ಬಜೆಟ್ ಅನ್ನು ಮಂಡಿಸಬೇಕೆನ್ನುವ ಸಂದರ್ಭದಲ್ಲಿ ಈ Annual Financial Statement ನ ಜೊತೆಯಲ್ಲಿ ತುಲನೆಯನ್ನು ಮಾಡಬೇಕು. ಯಾವ ಆಶ್ವಾಸನೆಗಳನ್ನು ನಾವು ಈ ಬಜೆಟ್‌ನಲ್ಲಿ ಕೊಟ್ಟಿದ್ದೇವೆ, ಯಾವುದನ್ನು ನಾವು ಮಂಡಿಸುತ್ತಿದ್ದೇವೆ, ಯಾವುದು ಮಾಡಿಲ್ಲ, ಯಾವುದು ಆಗಿದೆ ಎನ್ನುವುದು ಜನಕ್ಕೆ ತಿಳಿಯಬೇಕು. ಇಲ್ಲದಿದ್ದರೆ ಎಲ್ಲಾ ಪತ್ರಿಕೆಗಳಲ್ಲಿಯೂ ಅಷ್ಟು ಲಕ್ಷ ಕೋಟಿಯ ಕಾರ್ಯಕ್ರಮಗಳನ್ನು ಬಜೆಟ್‌ನಲ್ಲಿ ಮಾಡಲಾಗಿದೆ ಎಂದು ಹೇಳುತ್ತಿರುತ್ತೇವೆ, ಜನ ಅದನ್ನು ನಂಬಿರುತ್ತಾರೆ. ಆದರೆ Annual Financial Statement ನಲ್ಲಿ ಅದು ಬೇರೆಯದೇ ಆಗಿರುತ್ತದೆ. ಇದೆರಡರ ತುಲನೆಯನ್ನು ಮಾಡಿ ಮುಂದಿನ ದಿನಗಳಲ್ಲಿ ಬಜೆಟ್ ಅನ್ನು ಮಾಡಬೇಕೆಂದು ನನ್ನದೊಂದು ಆಸೆ.

**ಚಾಣಕ್ಯನ ಅರ್ಥಶಾಸ್ತ್ರದಲ್ಲಿ "ಆದಾಯವನ್ನು ಹೆಚ್ಚಿಸಿ ಖರ್ಚನ್ನು ಯಾರು ಕಡಿಮೆ ಮಾಡುತ್ತಾರೆಯೋ ಅವರು ಒಬ್ಬ ಉತ್ತಮ ಹಣಕಾಸಿನ ಮಂತ್ರಿ" ಎಂದು ಹೇಳುತ್ತಾರೆ.** ನಾವು ಇಂದು ಈ ರಾಜ್ಯದಲ್ಲಿ ಬಯಸುತ್ತಿರುವುದು ಅಂತಹ ಒಬ್ಬ ಹಣಕಾಸಿನ ಸಚಿವರು ನಮ್ಮಲ್ಲಿ ಆಗಬೇಕು. ಅದು ಯಾವುದೇ ಪಕ್ಷದವರಾಗಿರಬಹುದು.

**(...ಮುಂದು)**

(342) 15**-03-2022 (1.20) ಕೆಜಿ-ಆರ್‌ಎನ್ (ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಮಂಜುನಾಥ್ ಭಂಡಾರಿ (ಮುಂದು):-**

ನಿನ್ನೆ ದಿವಸ ಮಾನ್ಯ ಸದಸ್ಯರಾದ ಆಯನೂರು ಮಂಜುನಾಥ್‌ರವರು "ಸಾಲ ಮಾಡಿಲ್ಲವೇ, ಇವರು ಸಾಲ ಮಾಡಿಲ್ಲವೇ" ಎಂದು ಹೇಳಿದ್ದಾರೆ. ಅವರು ಹೇಳಿರುವುದು ನಿಜ. ಎಲ್ಲರೂ ಸಾಲ ಮಾಡಿದ್ದಾರೆ. ಆದರೆ, ನಾನು ಹೇಳುವುದೇನೆಂದರೆ, ಇಲ್ಲಿ revenue deficit ಬರುತ್ತಿದೆ. ಇದು ಬಹಳ ಆತಂಕಕಾರಿಯಾಗಿದೆ. ಕಳೆದ 3-4 ವರ್ಷಗಳಿಂದ ಬರುತ್ತಿರುವುದು, ಇದು ಎಲ್ಲಿ ಇವತ್ತಿನ revenue

deficit, ಬಜೆಟ್ ಬೀಜ ಹೆಮ್ಮರವಾಗಬಾರದು. ನಾವು ನಮ್ಮ ಆದಾಯಕ್ಕಿಂತ ಖರ್ಚನ್ನು ಹೆಚ್ಚಿಗೆ ಮಾಡುತ್ತಿದ್ದೇವೆ. ನಾನು ಸಾಲ ತೆಗೆದುಕೊಳ್ಳುವುದರ ಬಗ್ಗೆ ಹೇಳುತ್ತಿಲ್ಲ; ನಮ್ಮ ಆದಾಯ ಕಡಿಮೆಯಾಗುತ್ತಿದೆ, ಆದರೆ, ನಮ್ಮ ಖರ್ಚು ಜಾಸ್ತಿಯಾಗುತ್ತಿದೆ. ಇದನ್ನು revenue deficit ಎಂದು ಹೇಳುತ್ತಾರೆ. ಇದು ಮುಂದಿನ ದಿವಸಗಳಲ್ಲಿ ಆಗಬಾರದು. ಇದು ಈಗಾಗಲೇ ಒಂದು ಬೀಜವಾಗಿ ಮರವಾಗಿದ್ದು, ಈಗ ಹೆಮ್ಮರವಾಗುವುದಕ್ಕೆ ಪ್ರಾರಂಭವಾಗಿದೆ. ಇದಕ್ಕೆ ಒಂದು ಕಡಿವಾಣವನ್ನು ಹಾಕಬೇಕಾಗಿದೆ.

ಮಾನ್ಯ ಸಭಾಪತಿಯವರೇ, ಸದನದಲ್ಲಿ ಮಾನ್ಯ ಸದಸ್ಯರುಗಳಾದ ಶ್ರೀ ಆಯನೂರು ಮಂಜೂನಾಥ್‌ರವರು, ಶ್ರೀ ಎಂ.ಕೆ.ಪ್ರಾಣೇಶ್‌ರವರು ಮತ್ತು ಬಹಳ ಜನ ಸದಸ್ಯರು ನಮ್ಮ ಹಣಕಾಸಿನ ಪರಿಸ್ಥಿತಿ ಬಹಳ ಚೆನ್ನಾಗಿದೆ ಎಂದು ಹೇಳುತ್ತಿದ್ದರು. ಆದರೆ, ಶಾಸಕರಿಗೆ ಸಿಗುವಂತಹ ಅನುದಾನವೇ ನಮಗೆ ಸಿಗುತ್ತಿಲ್ಲವೆಂದು ನಾವು ಹೇಳಬೇಕಾದರೆ, ಇನ್ನು ಬೇರೆ ಬೇರೆ ಚಟುವಟಿಕೆಗಳಿಗೆ ನಿಗದಿಪಡಿಸಿರುವಂತಹ ಹಣ ಎಲ್ಲಿಂದ ಬರುತ್ತದೆ? ಈಗ ಪರಿಸ್ಥಿತಿ ಏನಿದೆ ಎಂದು ಒಪ್ಪಿಕೊಳ್ಳಬೇಕಲ್ಲವೇ; ಸರ್ಕಾರ ಕೋವಿಡ್-19 ಅನ್ನು ಉದಾಹರಣೆಗೆ ಹೇಳುವುದಲ್ಲ. ಅದಕ್ಕೆ ಎಷ್ಟು ಖರ್ಚು ಮಾಡಿದ್ದಾರೆಂದು ಸಂಪೂರ್ಣ ಲೆಕ್ಕ ಇದೆ. ಈ ಬಜೆಟ್‌ನ್ನು ನೋಡಿದಾಗ, ನನಗೆ ನಮ್ಮ ತುಳು ಭಾಷೆಯ **"ಪಣ್ಪಿನ್ಯೊಂಜಿ ಮಲ್ಪುನ್ಯೊಂಜಿ"** ಎಂಬ ಗಾದೆ ನೆನಪು ಆಗುತ್ತದೆ. ಇದರರ್ಥ "ಹೇಳುವುದೊಂದು, ಮಾಡುವುದು ಇನ್ನೊಂದು" ಎಂದು, ಆ ರೀತಿಯಾಗಿದೆ. "ಹೊಟ್ಟೆಗೆ ಹಿಟ್ಟು ಇಲ್ಲದಿದ್ದರೂ ಸಹ, ಜುಟ್ಟಿಗೆ ಮಲ್ಲಿಗೆ" ಆ ರೀತಿ ಸರ್ಕಾರ ಎಲ್ಲರಿಗೂ ಅನುದಾನ ಕೊಡುವುದಕ್ಕೆ ಹೋಗುತ್ತಿದೆ ಎನ್ನುವುದು ನನ್ನ ಭಾವನೆ.

**ಶ್ರೀ ಎಂ.ಕೆ.ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾನ್ಯ ಕೆಂಗಲ್ ಹನುಮಂತಯ್ಯನವರು ಇದ್ದಾಗ ಎಷ್ಟು ಜನಸಂಖ್ಯೆ ಇತ್ತು, ಈಗ ಎಷ್ಟು ಜನಸಂಖ್ಯೆ ಇದೆ ಎನ್ನುವುದನ್ನು ಯೋಚನೆ ಮಾಡಿದರೆ ಸಾಕು. ಬಜೆಟ್ ಗಾತ್ರ ಏಕೆ ದೊಡ್ಡದಾಗಿದೆ ಎನ್ನುವುದು ತಿಳಿಯುತ್ತದೆ.

**ಶ್ರೀ ಮಂಜುನಾಥ್ ಭಂಡಾರಿ:-** ಮಾನ್ಯ ಸಭಾಪತಿಯವರೇ, ನಿನ್ನೆ ದಿವಸ ಬಜೆಟ್‌ನ್ನು ಸಚಿವರೋ ಅಥವಾ ಅಧಿಕಾರಿಗಳೋ ಯಾರು ತಯಾರು ಮಾಡಿದ್ದಾರೆ ಎನ್ನುವ ಬಗ್ಗೆ ಚರ್ಚೆ ಆಗಿದೆ. ಆದರೆ, ಹಿಂದಿನ ವರ್ಷಗಳಲ್ಲಿ ಕರ್ನಾಟಕದ ಬಜೆಟ್‌ನ್ನು ಇಡೀ ನಮ್ಮ ದೇಶ ನೋಡುತ್ತಿತ್ತು. ನಮ್ಮ ದೇಶದ ಕೆಲವೇ ಕೆಲವು ರಾಜ್ಯಗಳ ಬಜೆಟ್‌ನ್ನು ನಾವು ನೋಡಬೇಕು ಎಂದಾಗ, ಕರ್ನಾಟಕಕ್ಕೆ ತನ್ನದೇ ಆದಂತಹ ಧನಾತ್ಮಾಕ ಬಜೆಟ್ ಇತ್ತು; ಈಗ ಋಣಾತ್ಮಕ ಬಜೆಟ್ ಆಗುತ್ತಿದೆ. ಅದು ಆಗಬಾರದು.

ಇನ್ನೊಂದು ನೀರಾವರಿ ಮತ್ತು ಬೆಂಗಳೂರು ಅಭಿವೃದ್ಧಿ ಈ ಎರಡು ಇಲಾಖೆಗಳು ಬಜೆಟ್‌ನಲ್ಲಿ major share ಅನ್ನು ತೆಗೆದುಕೊಳ್ಳುತ್ತಿವೆ. ಮಾನ್ಯ ಸದಸ್ಯರಾದ ಆಯನೂರು ಮಂಜುನಾಥ್‌ರವರು ಅವರಿಗೆ ಕೊಟ್ಟಿದ್ದಾರೆ, ಇವರಿಗೆ ಕೊಟ್ಟಿದ್ದಾರೆಂದು ಹೇಳುತ್ತಿದ್ದರು. ಹೌದು ಕೊಟ್ಟಿದ್ದಾರೆ. ಆದರೆ, ಅಲ್ಪಸ್ವಲ್ಪ ಅನುದಾನವನ್ನಷ್ಟೇ ಕೊಟ್ಟಿದ್ದಾರೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಲೋಕೋಪಯೋಗಿ ಇಲಾಖೆಯ ಬಗ್ಗೆ ಹೇಳುವುದನ್ನು ಬಿಟ್ಟಿದ್ದಾರೆ. ಆ ಇಲಾಖೆಯೇ ಬಹಳ ದೊಡ್ಡದು. ಮಾನ್ಯ ಸದಸ್ಯರಿಗೆ ಆ ಕಡೆಗೆ ಗಮನ ಇರಲಿ.

**ಶ್ರೀ ಮಂಜುನಾಥ್ ಭಂಡಾರಿ:-** ಮಾನ್ಯ ಸಭಾಪತಿಯವರೇ, ನಮಗೆ ಬೆಂಗಳೂರು major revenue ಕೊಡುತ್ತಿದೆ, ಇಲ್ಲವೆಂದು ಹೇಳುವುದಿಲ್ಲ. ಆದರೆ, ಬೆಂಗಳೂರಿನ ರಸ್ತೆಗಳಲ್ಲಿ ಒಂದು ದಿವಸ white topping, ಇನ್ನೊಂದು ದಿವಸ black topping, ಒಂದು ರಸ್ತೆಯನ್ನು ಅಗೆಯುತ್ತಾರೆ, ಇನ್ನೊಂದು ದಿವಸ ರಸ್ತೆ ಮಾಡುತ್ತಿರುವುದನ್ನು ನೋಡುತ್ತಿದ್ದೇವೆ. ಇದಕ್ಕೆ ಅನಗತ್ಯವಾಗಿ ಹಣವನ್ನು ಖರ್ಚು ಮಾಡುತ್ತಿದೆ. ಆದರೆ, ಇತ್ತೀಚಿನ ದಿವಸಗಳಲ್ಲಿ ಬಿಬಿಎಂಪಿ ಮತ್ತು ಬಿಡಿಎ ಗೆ ಸೇರಿದ ಎಷ್ಟೋ ಹಗರಣಗಳ ಬಗ್ಗೆ ದಿನ ಪತ್ರಿಕೆಗಳಲ್ಲಿ ವರದಿಯಾಗುತ್ತಿರುವುದನ್ನು ನೋಡುತ್ತಿದ್ದೇವೆ. ಅದಕ್ಕೆಲ್ಲಾ ಕಡಿವಾಣವನ್ನು ಹಾಕಿ, ಅಲ್ಲಿ ಬರುವಂತಹ ಹಣವನ್ನು ಬೆಂಗಳೂರು ಅಭಿವೃದ್ಧಿಗೆ ಹಾಕಲಿ. ಇಲ್ಲಿ ಬರುತ್ತಿರುವ ಆದಾಯವನ್ನು ಬೆಂಗಳೂರಿಗೆ ಉಪಯೋಗ ಮಾಡಲಿ. ನಾನು ಬೆಂಗಳೂರಿಗೆ ಕೊಡಬೇಡಿ ಎಂದು ಹೇಳುತ್ತಿಲ್ಲ. ಆದರೆ, ಅಲ್ಲಿ ಬರುತ್ತಿರುವುದನ್ನು ಕೊಡಿ ಎಂದು ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ.

ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದಲ್ಲಿ ನೀರಾವರಿ ಯೋಜನೆಗಳು ಸಂಪೂರ್ಣವಾಗಿ ಆಗಬೇಕೆಂದರೆ, ಅದಕ್ಕೆ ಸುಮಾರು ಒಂದು ಲಕ್ಷ ಕೋಟಿ ರೂಪಾಯಿಗಳ ಹಣ ಬೇಕಾಗುತ್ತದೆ. ಇದನ್ನು ಎಲ್ಲಿಂದ ಕೊಡುತ್ತಿದ್ದಾರೆ? ಎಲ್ಲಿ ನೀರು ಬರುತ್ತಿದೆ? ನಾನು ನೀರಾವರಿ ಬಗ್ಗೆ ಎರಡು ಉದಾಹರಣೆಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಮೊದಲನೆಯದಾಗಿ, ಉಡುಪಿಯಲ್ಲಿ ಇರುವಂತಹ ವರಾಹಿ ಯೋಜನೆ, ಇದನ್ನು ಮಾನ್ಯ ಗುಂಡೂರಾವ್‌ರವರು 1979 ರಲ್ಲಿ ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಕೇವಲ 9 ಕೋಟಿ ರೂಪಾಯಿಗಳು ಅದರ total estimate ಆಗಿತ್ತು. ಆದರೆ, ಅದಕ್ಕೆ ಈಗ ಸುಮಾರು 600 ಕೋಟಿ ರೂಪಾಯಿಗಳ ವೆಚ್ಚವಾಗಿದೆ. ಆದರೂ ಸಹ, ಈ ಯೋಜನೆ ಇನ್ನೂ ಸಂಪೂರ್ಣವಾಗಿಲ್ಲ. ಎರಡನೆಯದಾಗಿ, ಕಲಬರಗಿಯಲ್ಲಿ "ಬೆಣ್ಣೆತೊರಾ" ಎಂಬ ಒಂದು

project ನಡೆಯುತ್ತಿದೆ. ಈ ಯೋಜನೆಗೆ ಸುಮಾರು ವರ್ಷಗಳಿಂದ ಹಣವನ್ನು ಕೊಡುತ್ತಿದ್ದಾರೆ. ನಾವು ಈ ರೀತಿ ಹಣವನ್ನು ಖರ್ಚು ಮಾಡುತ್ತಿದ್ದರೆ, ಆದಾಯಕ್ಕಿಂತ ಹೆಚ್ಚು ಖರ್ಚು ಆಗಬೇಕಲ್ಲವೇ; ಇವೆಲ್ಲದಕ್ಕೂ ಕಡಿವಾಣವನ್ನು ಹಾಕಬೇಕೆಂದು ನಾನು ಬಯಸುತ್ತಿದ್ದೇನೆ.

ಮಾನ್ಯ ಸಭಾಪತಿಯವರೇ, ಇನ್ನೂ ಹಣಕಾಸಿನ ಬಗ್ಗೆ ಮಾನ್ಯ ಸದಸ್ಯರು ಬಹಳ ಚೆನ್ನಾಗಿ ಚರ್ಚೆ ಮಾಡುತ್ತಿದ್ದರು. ಕಳೆದ 10-12 ವರ್ಷಗಳಿಂದ ಹಣಕಾಸಿನ ಇಲಾಖೆಯಲ್ಲಿ ಇರುವಂತಹ ಅಧಿಕಾರಿಗಳು ಈಗಲೂ ಸಹ ಅಲ್ಲಿಯೇ ಇದ್ದಾರೆ. ಯಾರು ಹಣಕಾಸಿನ ಮಂತ್ರಿಯಾಗಿದ್ದಾರೆ, ಯಾರು ಮುಖ್ಯಮಂತ್ರಿಯಾಗಿದ್ದಾರೆ ಎನ್ನುವುದು ಮುಖ್ಯವಲ್ಲ. ನನಗೆ ಬಹಳ ಬೇಸರ ಏನೆಂದರೆ, ಇವತ್ತಿನ ದಿವಸ ಏನಾದರೂ revenue deficit ಬಜೆಟ್ ಮಾಡಿದ್ದರೆ, ಅದಕ್ಕೆ ಕಾರಣ ನಾವು ಎಂದು ಅವರಿಗೆ ಹೋಗಿ ಹೇಳಬೇಕಾಗುತ್ತದೆ. ಆದರೆ, ಇತ್ತೀಚೆಗೆ ಮಾನ್ಯ ಮುಖ್ಯಮಂತ್ರಿಯವರು ಹಣಕಾಸಿನ ಮಂತ್ರಿಗಳಾಗುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಹಣಕಾಸಿನ ಮಂತ್ರಿಗಳು ಆಗಬಾರದು ಎಂದು ನಾನು ಹೇಳುತ್ತಿಲ್ಲ; ಆದರೆ, ನಾನು ಒಂದು ಉದಾಹರಣೆಯನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಪಿ.ವಿ.ನರಸಿಂಹರಾವ್‌ರವರು ಪ್ರಧಾನಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಭಾರತ ದೇಶ ಬಂಗಾರವನ್ನು ತೆಗೆದಕೊಂಡು ಹೋಗಿ ಎಲ್ಲೋ ಅಡವಿಟ್ಟಿದ್ದರು. ಆ ಸಂದರ್ಭದಲ್ಲಿ ಶ್ರೀ ಮನಮೋಹನ್ ಸಿಂಗ್‌ರವರನ್ನು ಹಣಕಾಸಿನ ಮಂತ್ರಿ ಮಾಡಿದರು. ಅವರು ಎಂ.ಪಿ., ಎಂ.ಎಲ್.ಎ., ಆಗಿರಲಿಲ್ಲ. ಮಾನ್ಯ ಪ್ರಧಾನಮಂತ್ರಿಗಳಾಗಿದ್ದ ಶ್ರೀ ಚಂದ್ರಶೇಖರ್‌ರವರ ಟೈಮ್‌ನಲ್ಲಿದ್ದರು. ಮಾನ್ಯ ಪಿ.ವಿ.ನರಸಿಂಹರಾವ್‌ರವರು ಪ್ರಧಾನಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಆರ್ಥಿಕ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾಗ, ಶ್ರೀ ಮನಮೋಹನ್ ಸಿಂಗ್‌ರವರನ್ನು ಹಣಕಾಸಿನ ಮಂತ್ರಿಯನ್ನಾಗಿ ಮಾಡಿದರು. ನಂತರ ನಮ್ಮ ಇಡೀ ಹಣಕಾಸಿನ ವ್ಯವಸ್ಥೆಯೇ ಬದಲಾವಣೆ ಆಯಿತು. ಅಂತಹವರನ್ನು ಗುರುತಿಸಿ ಹಣಕಾಸಿನ ವ್ಯವಸ್ಥೆಯನ್ನು ಒಂದು ಸ್ಥಿತಿಗೆ ತರಬೇಕೆಂದು ಹೇಳುತ್ತಿದ್ದೇನೆ. ನಾನು ಸುಮಾರು 76 ಬಜೆಟ್‌ಗಳನ್ನು ಮಂಡಿಸಿರುವುದನ್ನು ನೋಡಿದ್ದೇನೆ. ಅದರಲ್ಲಿ ಸುಮಾರು 25 ರಿಂದ 30 ಬಜೆಟ್‌ಗಳನ್ನು ಹಣಕಾಸಿನ ಮಂತ್ರಿಗಳು ಮಂಡಿಸಿದ್ದಾರೆ. ಆದರೆ, ಇತ್ತೀಚಿನ ವರ್ಷಗಳಲ್ಲಿ ಬಜೆಟ್‌ನ್ನು ಮುಖ್ಯ ಮಂತ್ರಿಯವರು ಮಂಡಿಸುತ್ತಿದ್ದಾರೆ. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ಇಡೀ ರಾಜ್ಯಕ್ಕೆ ಮುಖ್ಯಮಂತ್ರಿಯವರು ಒಬ್ಬರೇ ಉತ್ತರವನ್ನು ಕೊಡಬೇಕಾಗುತ್ತದೆ. ಹಣಕಾಸು ನಮ್ಮ ಆಡಳಿತ ವ್ಯವಸ್ಥೆಯ ನರನಾಡಿಯಾಗಿದೆ. ಅದಕ್ಕೆ ಅದನ್ನು ಅಧಿಕಾರಿಗಳ ಕೈಯಲ್ಲಿ ಕೊಡಬಾರದು. ಅದಕ್ಕೆ ಜವಾಬ್ದಾರಿಯುತವಾದಂತಹ ಒಬ್ಬ ಮಂತ್ರಿಯವರನ್ನು ನೇಮಿಸಿ, ಅವರ ಕೈಯಲ್ಲಿ ಅದನ್ನು

ಕೊಟ್ಟು ಆಡಳಿತವನ್ನು ಮಾಡಬೇಕು ಎನ್ನುವಂತಹ ನನ್ನ ಒಂದು ಭಾವನೆಯನ್ನು ಇಲ್ಲಿ ವ್ಯಕ್ತಪಡಿಸುತ್ತಿದ್ದೇನೆ.

ಮಾನ್ಯ ಸಭಾಪತಿಯವರೇ, ಅದೇರೀತಿ ಇಂದಿನ ಪತ್ರಿಕೆಗಳಲ್ಲಿ "ಬೆಂಗಳೂರು ನಗರದಲ್ಲಿ ರಸ್ತೆಯಲ್ಲಿನ ಗುಂಡಿಗೆ ಬಿದ್ದು ಸಾವು" ಎಂದು ಬಂದಿರುವಂತಹ ವಿಷಯವನ್ನು ನೋಡಿದೆ. ಈ ರಸ್ತೆಗಳ ದುರಸ್ಥಿಗೆ ಹಾಗೂ ಬೆಂಗಳೂರು ಅಭಿವೃದ್ಧಿಗೆ ಕೊಡುತ್ತಿರುವಂತಹ ಕೋಟಿಗಟ್ಟಲೇ ಹಣ ಎಲ್ಲಿಗೆ ಹೋಯಿತು? ನಾವು ಬೆಂಗಳೂರು ನಗರ ವಿಶ್ವದಲ್ಲಿಯೇ ಒಂದು ಹೆಸರು ಮಾಡಿರುವಂತಹ ನಗರ ಎಂದು ಹೇಳುತ್ತಿದ್ದೇವೆ. ನಾವು ವಿಶ್ವದಲ್ಲಿಯೇ ದೊಡ್ಡವರು ಎಂದು ಹೇಳುತ್ತಿರುವಂತಹ ಒಂದು ನಗರದಲ್ಲಿ ಇವತ್ತಿನ ದಿವಸ ರಸ್ತೆಯಲ್ಲಿರುವಂತಹ ಗುಂಡಿಯಿಂದಾಗಿ ದ್ವಿಚಕ್ರ ವಾಹನ ಸವಾರನೊಬ್ಬ ಬಿದ್ದು ಸತ್ತಿದ್ದಾನೆ ಎಂದರೆ, ಇದು ನಿಜವಾಗಲೂ ನಮ್ಮೆಲ್ಲರಿಗೂ ನಾಚಿಕೆ ಎಂದು ಹೇಳಿದರೆ ತಪ್ಪಾಗಲಾರದು. ಇದರ ಬಗ್ಗೆ ತಾವೆಲ್ಲರೂ ಯೋಚನೆ ಮಾಡಬೇಕಾಗಿದೆ. ಬೆಂಗಳೂರು ನಗರ ಪ್ರಪಂಚದಲ್ಲಿಯೇ ಉತ್ತಮ ಹೆಸರನ್ನು ಪಡೆದಿದೆ ಎಂದು ಹೇಳುತ್ತಿದ್ದೇವೆ. ನಮ್ಮ ನಗರವನ್ನು ನಮ್ಮ ದೇಶದಲ್ಲಿಯೇ ಒಳ್ಳೆಯ ನಗರವೆಂದು ಹೇಳುತ್ತಿದ್ದೇವೆ. ಆದರೆ, ಇವತ್ತು ಏನು ನಡೆಯುತ್ತಿದೆ? ಹಾಗಾಗಿ, ನಾವೆಲ್ಲರೂ ಇದರ ಬಗ್ಗೆ ಪಕ್ಷಾತೀತವಾಗಿ ಗಮನಹರಿಸಬೇಕಾಗಿದೆ.

ಮಾನ್ಯ ಸಭಾಪತಿಯವರೇ,

"ಎಲ್ಲವೂ ಎಲ್ಲಿಯೋ ತಾಳ ತಪ್ಪುವುದನ್ನು ನೋಡುತ್ತಿದ್ದೇವೆ, ಎಲ್ಲವೂ ಸರಕು, ಎಲ್ಲರೂ ಸರಕಾಗಿದ್ದೇವೆ.

ಯಾಂತ್ರಿಕತೆಯ ಅಂಗಳದಲ್ಲಿ ನಿಂತು ಅಂಗುಲಿಯ ಅಂಗೈಯಲ್ಲಿ ಅರಮನೆಯನ್ನು ಕಟ್ಟುವಂತಹ ತವಕದಲ್ಲಿ ನಾವಿದ್ದೇವೆ. ಒಂದು ಕಡೆ ಮನಸ್ಸು ಮಾರುಕಟ್ಟೆಯಾಗಿದೆ, ಚಿಂತೆಗಳ ಸಂತೆಯಾಗಿದೆ, ಜಗ್ಗಾಟದ ಜಾತ್ರೆಯಾಗಿದೆ, ಪಾತಕಗಳ ಪಾತ್ರೆಯಾಗಿದೆ

ಹೀಗೆ ಬಗೆಹರಿಯದ ಲೆಕ್ಕ, ಉತ್ತರ ಸಿಗದ ಪ್ರಶ್ನೆಗಳ ಬದುಕು ಕಳೆದು ಹೋಗಿದೆ".

ಇದರ ಬಗ್ಗೆ ಇವತ್ತು ನಾವೆಲ್ಲರೂ ಯೋಚನೆ ಮಾಡಬೇಕಾಗಿದೆ. ಪಕ್ಷಾತೀತವಾಗಿ ಯೋಚನೆ ಮಾಡಬೇಕಾಗಿದೆ. ನಾವು ಇವತ್ತು ಕಾಂಗ್ರೆಸ್‌ನಲ್ಲಿದ್ದೇವೆ. ನಾಳೆ ದಿವಸ ಇನ್ನೊಂದು ಪಕ್ಷ ಅಧಿಕಾರಕ್ಕೆ

ಬರಬಹುದು. ಇವತ್ತು ನಾವು ಮಾಡುತ್ತಿರುವಂತಹ ಬಜೆಟ್ ಮುಂದಿನ ಪೀಳಗೆಗೆ ನಾವು ಮಾಡಿರುವ ಸಾಲಗಳು ಆಗಿರಬಹುದು, ಅದು ಅವರ ತಲೆಯ ಮೇಲೆ ಹೊರೆಯಾಗುತ್ತದೆ. ಇದು ಆಗಬಾರದು ಎನ್ನುವ ಭಾವನೆ ನನ್ನಲ್ಲಿದೆ,

ಮಾನ್ಯ ಸಭಾಪತಿಯವರೇ, ನಾನು 3-4 ಇಲಾಖೆಗಳ ಬಗ್ಗೆ ಮಾತನಾಡಲಿದ್ದು, ಅದರಲ್ಲಿ ಪ್ರಮುಖವಾಗಿ ಗ್ರಾಮೀಣಾಭಿವೃದ್ಧಿ ಇಲಾಖೆಯ ಬಗ್ಗೆ ಮೊದಲು ಮಾತನಾಡುತ್ತೇನೆ. ಈ ರಾಜ್ಯ ಮತ್ತು ಈ ದೇಶ ಹಳ್ಳಿಗಳಿಂದ ಹುಟ್ಟಿದಂತಹ ದೇಶ. ನಾವೆಲ್ಲರೂ ಹಳ್ಳಿಯವರು, ನಾವೆಲ್ಲರೂ ರೈತರು, ನಾವೆಲ್ಲರೂ ರೈತರ ಮಕ್ಕಳು; ಹಳ್ಳಿಗಳು ಉದ್ಧಾರವಾಗಬೇಕೆಂದು ಬಡಿದಾಡುತ್ತಿರುತ್ತೇವೆ. ಆದರೆ, ಬಜೆಟ್‌ನಲ್ಲಿ ಕೇವಲ 17 ಸಾವಿರ ಕೋಟಿ ರೂಪಾಯಿಗಳನ್ನು ಈ ಇಲಾಖೆಗೆ ಮೀಸಲಿಟ್ಟಿದ್ದಾರೆ. ಆದರೆ. ನಾನು ಅದರ ಚರ್ಚೆಗೆ ಹೋಗುವುದಿಲ್ಲ. ಇವತ್ತಿನ ದಿವಸ ಎಲ್ಲಾ ಕೆಲಸಗಳನ್ನು ಗ್ರಾಮ ಪಂಚಾಯಿತಿಗಳಿಗೆ ಕೊಡುತ್ತಿದ್ದಾರೆ. ಆ ಗ್ರಾಮ ಪಂಚಾಯಿತಿಗಳಲ್ಲಿ ಯಾವ ಮೂಲ ಸೌಕರ್ಯಗಳು ಇವೆ? ಅಲ್ಲಿ ಕೆಲಸ ಮಾಡುವಂತಹ ಕೆಲಸಗಾರರು ಯಾರು ಇದ್ದಾರೆ? ನಾವು ಅದು ಯಾವುದನ್ನು ನೋಡುತ್ತಿಲ್ಲ. ನನಗೆ ಮೊನ್ನೆ ದಿವಸ ಒಂದು ಕಾರಣಕ್ಕಾಗಿ ಬಹಳ ಬೇಸರವಾಯಿತು. ನಾವೆಲ್ಲರೂ 25 ಜನ ಚುನಾಯಿತ ಪ್ರತಿನಿಧಿಗಳು ಇಲ್ಲಿ ಸುಮಾರು 8 ಗಂಟೆಗಳ ಕಾಲ ಚರ್ಚೆ ಮಾಡಿದ್ದೇವೆ. ನಮ್ಮ ಗ್ರಾಮೀಣಾಭಿವೃದ್ಧಿ ಸಚಿವರು ನಮ್ಮನ್ನು ಮಾನ್ಯ ಮುಖ್ಯಮಂತ್ರಿಯವರ ಬಳಿಗೆ ಕರೆದುಕೊಂಡು ಹೋದರು. ನಾವು ಪ್ರಜಾಪ್ರಭುತ್ವದ ತಳಹದಿ ಎಂದು ಏನು ಹೇಳುತ್ತಿದ್ದೇವೆ, ಆ ಗ್ರಾಮ ಪಂಚಾಯಿತಿಗಳ ಚುನಾಯಿತ ಪ್ರತಿನಿಧಿಗಳಿಗೆ ಗೌರವಧನವನ್ನು ಗೌರವಯುತವಾಗಿ ಕೊಡಿ ಎಂದು ಕೇಳಿದೆವು. ಆದರೆ, ನಮಗೆ ಮಾನ್ಯ ಮುಖ್ಯಮಂತ್ರಿಗಳಿಂದ ಸಕಾರಾತ್ಮಕವಾಗಿ ಉತ್ತರ ಸಿಗಲಿಲ್ಲ. ಮತ್ತೆ ಅದನ್ನು ಆರ್ಥಿಕ ಇಲಾಖೆಗೆ ಕಳುಹಿಸುತ್ತೇವೆಂದು ಹೇಳಿದರು. ನಾನು ಇದನ್ನು complaint ಮಾಡುತ್ತಿಲ್ಲ. ಆದರೆ, ಮಾನ್ಯ ಮುಖ್ಯಮಂತ್ರಿಯವರು ಕಳುಹಿಸಿರುವಂತಹದ್ದಕ್ಕೆ ಆರ್ಥಿಕ ಇಲಾಖೆಯವರು ಆಗುವುದಿಲ್ಲವೆಂದು ವಾಪಸ್ಸು ಕಳುಹಿಸಿದ್ದಾರೆ. ಹಾಗಾಗಿ, ನಾವು ಮತ್ತೊಮ್ಮೆ ಆರ್ಥಿಕ ಇಲಾಖೆಗೆ ಹೋಗುವುದರಲ್ಲಿ ಅರ್ಥ ಇದೆಯೇ? ಹಾಗಾದರೆ, ಆರ್ಥಿಕ ಇಲಾಖೆಯವರು ಸರ್ಕಾರವನ್ನು ನಡೆಸುತ್ತಿದ್ದಾರೆಯೇ?

(ಮುಂದು.,)

**(343) 15-03-2022 (1.30) ಎಂ.ವಿ-ವಿಕೆ**

**(ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಮಂಜುನಾಥ್ ಭಂಡಾರಿ (ಮುಂದು):-**

ಸುಮಾರು ಒಂದು ಲಕ್ಷ ಜನರಿಗೆ ಒಂದು ಸಾವಿರ ರೂಪಾಯಿಗಳನ್ನು ಜಾಸ್ತಿ ಮಾಡಿದರೆ, ನೂರು ಕೋಟಿ ರೂಪಾಯಿಗಳಾಗಬಹುದು. ಮತ್ತೆ ಐದು ಸಾವಿರ ರೂಪಾಯಿಗಳನ್ನು ಜಾಸ್ತಿ ಮಾಡಿದರೆ, ಐದುನೂರು ಕೋಟಿ ರೂಪಾಯಿಗಳಾಗಬಹುದು. ಈ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಮಂತ್ರಿಗಳು ನಿರ್ಧಾರವನ್ನು ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲವೇ? ಈಗ ಇದಕ್ಕೆ ಆರ್ಥಿಕ ಇಲಾಖೆಯವರನ್ನು ಕೇಳಬೇಕೆ? ಆರ್ಥಿಕ ಇಲಾಖೆಯವರನ್ನು ಕೇಳುವುದಾದರೆ, ಎಂ.ಎಲ್.ಸಿ., ಎಂ.ಎಲ್.ಎ. ಮತ್ತು ಮಂತ್ರಿಗಳು ಏಕೆ ಬೇಕು? ಸರ್ಕಾರವನ್ನು ಆರ್ಥಿಕ ಇಲಾಖೆಯವರೆ ನಡೆಸಲಿ. ಆರ್ಥಿಕ ಇಲಾಖೆಯವರೆ ಮುಖ್ಯಮಂತ್ರಿಗಳಾಗಲಿ. ಇವತ್ತು ನಮಗೆ ಹಣಕಾಸಿನವರು dictate ಮಾಡುತ್ತಿದ್ದಾರೆಯೇ? ಈ ರೀತಿ ಆಗಬಾರದು. ನಾವುಗಳೆಲ್ಲರೂ ಸಹ ಚುನಾಯಿತ ಪ್ರತಿನಿಧಿಗಳಾಗಿರುವಂತಹವರು. ನಾವು 25 ಜನ ಸದಸ್ಯರು ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಗೆದ್ದು ಬಂದಿದ್ದೇವೆ. ನಾವೆಲ್ಲರೂ ಸಹ ಒಕ್ಕೊರಲಿನಿಂದ ಕೇಳುತ್ತಿದ್ದೇವೆ. ಇದನ್ನು ಮಾನ್ಯ ಮಂತ್ರಿಗಳು ಆರ್ಥಿಕ ಇಲಾಖೆಯವರಿಗೆ ಕಳುಹಿಸುತ್ತೇನೆಂದರೆ, ನಿಜವಾಗಿ ಪ್ರಜಾಪ್ರಭುತ್ವ ಪ್ರತಿನಿಧಿಗಳಾದ ನಮಗೆ ಮತ್ತು ಯಾರು ನಮ್ಮ ಪ್ರತಿನಿಧಿಗಳು ಇದ್ದಾರೆ ಅವರಿಗೆ ಆದಂತಹ ಅವಮಾನವೆಂದು ತಿಳಿದುಕೊಳ್ಳುತ್ತೇನೆ. ಆದರೆ, ಈ ರೀತಿ ಆಗಬಾರದು.

ಈಗ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಶಿಕ್ಷಣಕ್ಕೆ ಸುಮಾರು 31 ಸಾವಿರ ಕೋಟಿ ರೂಪಾಯಿಗಳನ್ನು ನೀಡಿದ್ದಾರೆ. ನನ್ನ ಪ್ರಕಾರ ಪ್ರಾಥಮಿಕ ಶಾಲೆಗಳು ನಮ್ಮ ತಳಹದಿಗಳು. ಅಲ್ಲಿಗೆ ಉತ್ತಮ ಗುಣಮಟ್ಟದ ಶಾಲೆಗಳನ್ನು ನೀಡಲಿ. ಅವರು ಹೇಳುವುದೇನೆಂದರೆ, ನವೋದಯ ಶಾಲೆ, ಮೊರಾರ್ಜಿ ದೇಸಾಯಿ ವಸತಿ ಶಾಲೆ, ಕಿತ್ತೂರು ರಾಣಿ ಚೆನ್ನಮ್ಮ ಬಾಲಕಿಯರ ಸೈನಿಕ ಶಾಲೆ ಮತ್ತು ಪಬ್ಲಿಕ್ ಶಾಲೆ ಎಂದು ಪ್ರಾರಂಭ ಮಾಡಿದ್ದಾರೆ ಇವುಗಳಲ್ಲಿ ಚೆನ್ನಾಗಿ ಶಿಕ್ಷಣ ಸಿಗುತ್ತಿದೆ ಎನ್ನುತ್ತಾರೆ. ಹಾಗಾದರೆ, ಪ್ರೌಢಶಾಲೆಗಳು ಉತ್ತಮವಾಗಿ ಇಲ್ಲವೇ? ಹಾಗಾದರೆ ಸರ್ಕಾರದವರು ಅವರಿಗೆ ಉತ್ತಮವಾದ ಶಿಕ್ಷಣವನ್ನು ನೀಡುತ್ತಿಲ್ಲವೆಂದು ಒಪ್ಪಿಕೊಳ್ಳುತ್ತಿದ್ದಾರೆಯೇ? ಇವರು ಅವರಿಗೆ ಉತ್ತಮವಾದ ಶಿಕ್ಷಣವನ್ನು ಕೊಡಬೇಕಲ್ಲವೇ? ಈಗ ನವೋದಯ ಶಾಲೆಯಲ್ಲಿ ಓದುವಂತಹ ಹುಡುಗರಿಗೆ ಮಾತ್ರ ಉತ್ತಮ ಶಿಕ್ಷಣ ಸಿಗಬೇಕೇ? ಹಾಗಾದರೆ ಬೇರೆಯವರು ಸಹ ರೈತರ ಮಕ್ಕಳಲ್ಲವೇ? ಅವರಿಗೂ ಸಹ

ಶಿಕ್ಷಣವನ್ನು ಕೊಡಬೇಕಲ್ಲವೇ? ಈಗ ಉನ್ನತ ಶಿಕ್ಷಣದ ಬಗ್ಗೆ ಹೇಳುವುದಾದರೆ, ಈಗ ರಾಜ್ಯದಲ್ಲಿ NEP (National Education Policy) ಯನ್ನು ಜಾರಿಗೆ ತಂದಿದ್ದಾರೆ. ನಿಜವಾಗಿಯೂ ಈ ಎನ್.ಇ.ಪಿ.ಯ ಅರ್ಥವೇನು? ಈ ಎನ್.ಇ.ಪಿ.ಯನ್ನು ಯಾರು ಮಾಡಿದ್ದು? ನಾನು ಸಹ ಅದರ 2-3 ಸಭೆಗಳಿಗೆ ಹೋಗಿದ್ದೆ. ಅವರು ಎನ್.ಇ.ಪಿ.ಯನ್ನು ಯಾವ ರೀತಿ ಅನುಷ್ಠಾನ ಮಾಡುತ್ತಿದ್ದಾರೆ. ಇವತ್ತು ಎನ್.ಇ.ಪಿ.ಗೆ ಅರ್ಥವಿದೆಯೇ? ನಾವು ಇದನ್ನು ಪ್ರಥಮ ಬಾರಿಗೆ ಮಾಡಿದ್ದೇವೆಂದು ಅವರು ಹೇಳುತ್ತಿರುತ್ತಾರೆ. ಹಾಗಾದರೆ, ಅವರು ಪ್ರಥಮ ಬಾರಿಗೆ ಏನೇನು ಮಾಡಿದ್ದಾರೆಂದು ಬೇಕಲ್ಲವೆ. ಈಗ ಒಂದು ವರ್ಷದಲ್ಲಿ ಎನ್.ಇ.ಪಿ.ಯನ್ನು ಜಾರಿಗೆ ತರುವುದಕ್ಕೆ ಆಗುತ್ತದೆಯೇ? ಅದನ್ನು ಪ್ರಾರಂಭ ಮಾಡಿರುವುದು ಪ್ರಥಮ ಅಷ್ಟೆ. ಈಗ ಯೂನಿವರ್ಸಿಟಿಗೆ ಯಾವ ರೀತಿ ಜಾಗ ಕೊಡಬೇಕು ಮತ್ತು ಅವುಗಳಿಗೆ ಏನು ಮಾಡಬೇಕೆಂದು ಅದು ಯಾವುದನ್ನು ಸಹ ಇಲ್ಲಿ ಹೇಳಿಲ್ಲ. ಆದರೆ, ಎನ್.ಇ.ಪಿ. ಬಗ್ಗೆ ಇತೀಚಿನ ದಿನಗಳಲ್ಲಿ ಬಹಳ ಬೇಸರದ ಸಂಗತಿ ಏನೆಂದರೆ, ನಾನೂ ಸಹ ಒಂದು ವಿದ್ಯಾಸಂಸ್ಥೆಯನ್ನು ನಡೆಸುತ್ತಿದ್ದೇನೆ. ನಾನು ಒಬ್ಬ ವಿದ್ಯಾರ್ಥಿ ನಾಯಕನಾಗಿ ದೊಡ್ಡವನಾದಂತಹವನು. ವಿದ್ಯಾರ್ಥಿ ನಾಯಕರ ಜೊತೆಯಲ್ಲಿಯೇ ಬೆಳೆದಂತಹವನು. ಸುಮಾರು 30 ರಿಂದ 40 ವರ್ಷಗಳ ಕಾಲ, ಮಾನ್ಯ ಆಯನೂರು ಮಂಜುನಾಥ್ ಮತ್ತು ಮಾನ್ಯ ಎನ್.ರವಿಕುಮಾರ್ ರವರ ಜೊತೆಯಲ್ಲಿ ಜಗಳವಾಡಿಕೊಂಡು ಒಟ್ಟಿಗೆ ಬಂದಂತಹವರು. ಅವತ್ತಿನ ಚುನಾವಣೆಗಳಲ್ಲಿ ಯಾವುದೇ ರೀತಿಯ ಕರ್ಫ್ಯೂ ಹಾಕುತ್ತಿರಲಿಲ್ಲ. ಯಾರೂ ಸಹ ಯಾವ ಬಟ್ಟೆಗಳನ್ನು ಹಾಕಬೇಕೆಂದು ಹೇಳುತ್ತಿರಲಿಲ್ಲ. ಆದರೆ, ಇವತ್ತು ನಮಗೆ ಯಾವ ಪರಿಸ್ಥಿತಿ ಬಂದಿದೆ ಎಂದರೆ, ಇವತ್ತು ಯಾವುದೋ ಜಡ್ಜಮೆಂಟ್ ಬರುತ್ತದೆಂದು ಕರ್ಫ್ಯೂ ಹಾಕಿ, ಶಾಲಾ-ಕಾಲೇಜುಗಳಿಗೆ ರಜೆ ನೀಡಿದ್ದಾರೆ. ಈ ರೀತಿ ಮಾಡುವುದು ಸರಿಯೇ? ಇವತ್ತು ನಾವು ಮಕ್ಕಳಿಗೆ ಯಾವ ರೀತಿಯ ಶಿಕ್ಷಣ ಮತ್ತು ಪಾಠ ಮಾಡಬೇಕು ಎನ್ನುವುದನ್ನು ಬಿಟ್ಟು, ಯಾರು ಯಾವ ಬಟ್ಟೆ ಹಾಕಬೇಕು ಮತ್ತು ಹಾಕಬಾರದು ಎನ್ನುವಂತಹ ಸ್ಥಿತಿಗೆ ಬಂದಿದ್ದೇವೆ. ನಾವು ಇವತ್ತು ಉತ್ತಮವಾದ ಊಟವನ್ನು ನೀಡಬೇಕೆ ಹೊರತು, ನೀವು ಊಟವನ್ನು ಬಂಗಾರದ ತಟ್ಟೆಯಲ್ಲಿ ಊಟ ಮಾಡುತ್ತಿದ್ದೀರಾ, ಬೆಳ್ಳಿ ತಟ್ಟೆಯಲ್ಲಿ ಊಟ ಮಾಡುತ್ತಿದ್ದೀರಾ, ಅಥವಾ ಎಲೆಯಲ್ಲಿ ಊಟ ಮಾಡುತ್ತೀದ್ದೀರಾ ಎಂದು ಕೇಳುವುದು ಮುಖ್ಯವೋ ಅಥವಾ ಅವರಿಗೆ ನೀಡುತ್ತಿರುವಂತಹ ಊಟ ಮುಖ್ಯವೋ? ಇವತ್ತು ನಾವು ಅವರಿಗೆ ವಿದ್ಯೆಯನ್ನು ಕೊಡುತ್ತಿರುವುದು ಮುಖ್ಯವೋ? ಯಾವ ರೀತಿಯ ಬಟ್ಟೆಯನ್ನು ಹಾಕಿಕೊಂಡು ಬಂದಿದ್ದಾರೆ ಅಥವಾ ಬಂದಿಲ್ಲ ಎನ್ನುವುದು ಮುಖ್ಯವೋ? ನಾವು ಇದರ ಬಗ್ಗೆಯೂ ಸಹ ಯೋಚನೆ ಮಾಡಬೇಕಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾತನಾಡುತ್ತಿರುವುದು ಹಿಜಾಬ್ ಬಗ್ಗೆ ಇರಬಹುದು. ಆ ವಿಷಯ ನ್ಯಾಯಾಲಯದಲ್ಲಿ ಇದ್ದುದ್ದರಿಂದ, ಆ ವಿಷಯಕ್ಕೆ ಸಂಬಂಧಪಟ್ಟಂತೆ ಈಗ ಮಾನ್ಯ ಹೈಕೋರ್ಟ್ ಜಡ್ಜಮೆಂಟ್ ನೀಡಿ ಆಗಿದೆ.

**ಡಾ॥ ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈಗ ಇದರ ಬಗ್ಗೆ ಯೋಚನೆ ಮಾಡಿ ಆಗಿದೆ ಮತ್ತು ಮಾನ್ಯ ಹೈಕೋರ್ಟ್ ತೀರ್ಪು ನೀಡಿ ಆಗಿದೆ. ನಾವು ಆ ತೀರ್ಪನ್ನು ಸ್ವಾಗತ ಮಾಡುತ್ತೇವೆ.

**ಶ್ರೀ ಮಂಜುನಾಥ್ ಭಂಡಾರಿ:–** ಮಾನ್ಯ ಸಭಾಪತಿಯವರೇ, ಈಗ ನಾನು ಹೇಳುತ್ತಿರುವುದೇನೆಂದರೆ...

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಈಗ ಮಾತನಾಡುತ್ತಿರುವಂತಹ ಸದಸ್ಯರು ಸದನಕ್ಕೆ ಹೊಸದಾಗಿ ಬಂದಿದ್ದು, ಅವರು ಮಾತನಾಡುವಾಗ ಮಾನ್ಯ ಸಭಾನಾಯಕರು ಮಧ್ಯದಲ್ಲಿ ಮಾತನಾಡುವುದು ತಪ್ಪಾಗುತ್ತದೆ.

**(ಗೊಂದಲ)**

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಚೆನ್ನಾಗಿ ಮಾತನಾಡುತ್ತಿದ್ದರು. ಆದರೆ, ಮಧ್ಯದಲ್ಲಿ ಟ್ರ್ಯಾಕ್ ತಪ್ಪಿದರು.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರನ್ನು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ತಿಳಿಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಈ ರೀತಿ ಏಕೆ ಮಾಡುತ್ತಿದ್ದಾರೆಂದು ನನಗೆ ಗೊತ್ತಿಲ್ಲ. ನಾವು ಕೆಲವೊಮ್ಮೆ ಸರ್ಕಾರದ ಪರವಾಗಿ ಎದ್ದು ನಿಂತು ಉತ್ತರ ಹೇಳಬೇಕಾಗುತ್ತದೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ತಮ್ಮ ಅನುಮತಿ ಪಡೆದು ಸಭಾನಾಯಕರು ಮಾತನಾಡುವಾಗ, ಮಾನ್ಯ ವಿರೋಧ ಪಕ್ಷದ ನಾಯಕರು ಸೌಜನ್ಯದಿಂದ ಸಹಕಾರ ನೀಡುವಂತಹ ಜ್ಞಾನ ಎಲ್ಲರಿಗೂ ಇರಬೇಕು ಎನ್ನುವುದು ನನ್ನ ಆಸೆ. ದಯವಿಟ್ಟು ನಾನು ವಿನಂತಿ ಮಾಡುತ್ತೇನೆ. ಈಗ ಮಾನ್ಯ ಮಂಜುನಾಥ ಭಂಡಾರಿಯವರು ಹೇಳುತ್ತಿರುವಂತಹ ವಿಚಾರಕ್ಕೆ ಸಂಬಂಧಪಟ್ಟಂತೆ ನ್ಯಾಯಾಲಯ ತೀರ್ಪು ನೀಡಿದೆ. ಅದಕ್ಕೆ ಈ ವಿಷಯವನ್ನು ಅಲ್ಲಿಗೇ ಮುಗಿಸೋಣವೆನ್ನುವುದು ಅಷ್ಟೆ. ಈಗ ನ್ಯಾಯಾಲಯ ತೀರ್ಪು ನೀಡಿದ್ದು, ಅದನ್ನು ಗೌರವಿಸಿಕೊಂಡು ಹೋಗೋಣ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ತಮ್ಮ ಅಪ್ಪಣೆ ತೆಗೆದುಕೊಂಡು ಮಾತನಾಡುತ್ತಿದ್ದೇನೆಂದು ಹೇಳಿದರು. ಮಾನ್ಯ ಸದಸ್ಯರುಗಳು ಬಜೆಟ್‌ಗೆ ಸಂಬಂಧಪಟ್ಟಂತೆ ಮಾತನಾಡುವಂತಹ ಸಂದರ್ಭದಲ್ಲಿ ಯಾರೂ ಸಹ ಮಧ್ಯದಲ್ಲಿ ಮಾತನಾಡುವಂತಿಲ್ಲವೆಂದು ಈ ಸದನದಲ್ಲಿ ಒಂದು ಸಂಪ್ರದಾಯವಿದೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಆ ರೀತಿ ಯಾವುದೇ ನಿಯಮವಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನಾನು ಇನ್ನು ನನ್ನ ಮಾತನ್ನು ಮುಗಿಸಿಲ್ಲ, ಮಾತನಾಡುತ್ತಿದ್ದೇನೆ. ಈ ಸದನದಲ್ಲಿ ಒಂದು ಸಂಪ್ರದಾಯವಿದೆ. ಅದನ್ನು ಅವರು ಅನುಕರಣೆ ಮಾಡಲಿ. ಈಗ ಮಾನ್ಯ ಸದಸ್ಯರು ಮಾತನಾಡುವಾಗ, ಅವರು ಏನಾದರೂ

objectionable ಹೇಳಿದಾಗ ಮಾತ್ರ, ಅವರು ಹೇಳಬೇಕು. ಈ ವಿಷಯ ಕೋರ್ಟ್‌ನಲ್ಲಿ ಇರುವುದು ನಮಗೂ ಸಹ ಗೊತ್ತಿದೆ. ಮಾನ್ಯ ಸದಸ್ಯರು ಹಿಜಾಬ್ ವಿಷಯದ ಬಗ್ಗೆ ಮಾತನಾಡುತ್ತಿದ್ದಾರೆಯೇ? ಅವರು ಸಮವಸ್ತ್ರವೆಂದು ಹೇಳುತ್ತಿದ್ದಾರೆ.

**(ಗೊಂದಲ)**

**ವೈಸ್ ಛೇರ್ಮನ್:–** ಈಗ ಆ ವಿಷಯಕ್ಕೆ ಸಂಬಂಧಪಟ್ಟಂತೆ ಚರ್ಚೆ ಬೇಡ. ದಯವಿಟ್ಟು ಎಲ್ಲಾ ಸದಸ್ಯರು ಸಹ ಕುಳಿತುಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಇಲ್ಲಿ ನಡೆಯುತ್ತಿರುವುದು ಕೇವಲ ಭಾಷಣವಲ್ಲ, ಬಜೆಟ್ ಮೇಲೆ ಚರ್ಚೆ ನಡೆಯುತ್ತಿದೆ. ಸಾಂದರ್ಭಿಕವಾಗಿ ಸರ್ಕಾರ ಸಭಾಪತಿಯವರ ಅನುಮತಿಯ ಮೇರೆಗೆ ಮಾನ್ಯ ಸದಸ್ಯರುಗಳು ಮಾತನಾಡುವಾಗ ಸರ್ಕಾರದ ಪರವಾಗಿ ನಮ್ಮ ಅಭಿಪ್ರಾಯಗಳನ್ನು ತಿಳಿಸಬಹುದು. ದಯವಿಟ್ಟು ಮಾನ್ಯ ವಿರೋಧ ಪಕ್ಷದ ನಾಯಕರು ಅರ್ಥ ಮಾಡಿಕೊಳ್ಳಬೇಕೆಂದು ನನ್ನ ವಿನಂತಿ.

**ಶ್ರೀ ಪ್ರಾಣೇಶ್ ಎಂ.ಕೆ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುತ್ತಿರುವುದು ಸರಿಯಿದೆ. ಇವತ್ತು ರಜೆ ಘೋಷಣೆ ಮಾಡಿದ್ದಾರೆ ಎಂದು ಪ್ರಶ್ನೆ ಮಾಡಿದಾಗ. ಈಗ ಕೋರ್ಟ್ ಹೇಳಿದಂತೆ ಅಶಾಂತಿ ನಿರ್ಮಾಣವಾಗಬಾರದು, ಅದು ಆದಮೇಲೆ ಯಾರೂ ಏನು ಮಾಡುವುದಕ್ಕೆ ಆಗುವುದಿಲ್ಲ. ಶಾಂತ ರೀತಿಯಿಂದ ಇರಬೇಕು ಎಂದು ರಜೆ ಘೋಷಣೆ ಮಾಡಿದ್ದಾರೆ ಅಷ್ಟೆ. ಮತ್ತೆ ಬೇರೆ ಏನೂ ಇಲ್ಲ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಏನು ತಪ್ಪು ಹೇಳುತ್ತಿದ್ದಾರೆ. ಹಾಗಾದರೆ ಏನೂ ಸಹ ಚರ್ಚೆ ಆಗಬಾರದೇ?

**(ಗೊಂದಲ)**

**ವೈಸ್ ಛರ್ಮನ್:-** ಮಾನ್ಯ ಮಂಜುನಾಥ ಭಂಡಾರಿಯವರೆ, ನೀವು ಮಾತನಾಡುವುದಕ್ಕೆ ಇನ್ನು ಐದು ನಿಮಿಷ ಮಾತ್ರ ಬಾಕಿಯಿದೆ. ತಾವು ಬಹಳ ಚೆನ್ನಾಗಿ ಮಾತನಾಡುತ್ತಿದ್ದೀರಿ. ಆ ವಿಷಯವನ್ನು divert ಮಾಡದೆ, ಬಜೆಟ್ ಬಗ್ಗೆ ಸೂಕ್ಷ್ಮವಾಗಿ ಮಾತನಾಡಬೇಕು.

**ಶ್ರೀ ಮಂಜುನಾಥ್ ಭಂಡಾರಿ:-** ಮಾನ್ಯ ಸಭಾಪತಿಯವರೇ, ನಾನು ಈ ಬಜೆಟ್ ಬಿಟ್ಟು ಬೇರೆ ವಿಷಯಕ್ಕೆ ಹೋಗುತ್ತಿಲ್ಲ.

**ವೈಸ್ ಛರ್ಮನ್:-** ಮಾನ್ಯ ಮಂಜುನಾಥ ಭಂಡಾರಿಯವರೆ, ನೀವು ಬಜೆಟ್ ಬಗ್ಗೆ ಬಹಳ ಚೆನ್ನಾಗಿ ಬೆಳಕು ಚೆಲ್ಲುತ್ತಿದ್ದೀರಿ.

**ಶ್ರೀ ಮಂಜುನಾಥ್ ಭಂಡಾರಿ:-** ಮಾನ್ಯ ಸಭಾಪತಿಯವರೇ, ಉನ್ನತ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ವಿಷಯ ಬಂದಾಗ ನಾನು ಈ ಮಾತನ್ನು ಹೇಳುತ್ತಿದ್ದೇನೆ.

**ವೈಸ್ ಛರ್ಮನ್:-** ರಜೆ ಕೊಡುವುದರ ಬಗ್ಗೆ ಚರ್ಚೆ ಬೇಡ.

**ಶ್ರೀ ಮಂಜುನಾಥ್ ಭಂಡಾರಿ:-** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಶಾಲೆಗಳಿಗೆ ರಜೆಯನ್ನು ಕೊಟ್ಟು ಬರಬೇಕಾಗಿದೆ ಎಂದು ಹೇಳುತ್ತಿದ್ದೇನೆ. ನಾನು ಬೇರೆ ವಿಷಯವನ್ನು ಹೇಳುತ್ತಿಲ್ಲ.

**ವೈಸ್ ಛರ್ಮನ್:-** ಅದು ಬೇರೆ ರೀತಿಯಲ್ಲಿ ಅರ್ಥವಾಗುತ್ತದೆ. ನಾನು ಪೀಠದಿಂದ ಹೇಳುವುದಕ್ಕೆ ಆಗುವುದಿಲ್ಲ. ದಯಮಾಡಿ ಬಜೆಟ್ ಭಾಷಣವನ್ನು ಮುಂದುವರೆಸಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಎಜುಕೇಷನ್ ಯಾವ ಮಟ್ಟದ್ದು ಎಂದು ಹೇಳುತ್ತಿದ್ದಾರೆ.

**ವೈಸ್ ಛರ್ಮನ್:-** ಮಾನ್ಯ ಮಂಜುನಾಥ ಭಂಡಾರಿಯವರು ಮಾತನಾಡಿ. ಬೇರೆ ಯಾವ ಸದಸ್ಯರ ಹೇಳಿಕೆಗಳು ಸಹ ಕಡತಕ್ಕೆ ಹೋಗಬಾರದು.

**(ಮಾನ್ಯ ವೈಸ್ ಛೇರ್ಮನ್‌ರವರ ಆದೇಶದಂತೆ ಮಾನ್ಯ ಮಂಜುನಾಥ ಭಂಡಾರಿಯವರ ಹೇಳಿಕೆಯನ್ನು ಹೊರತುಪಡಿಸಿ ಬೇರೆ ಸದಸ್ಯರ ಹೇಳಿಕೆಗಳನ್ನು ದಾಖಲಿಸಿರುವುದಿಲ್ಲ)**

**ಶ್ರೀ ಮಂಜುನಾಥ್ ಭಂಡಾರಿ:–** ಮಾನ್ಯ ಸಭಾಪತಿಯವರೇ, ಈಗ ನಿರುದ್ಯೋಗಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಕೇಂದ್ರ ಸರ್ಕಾರದವರು ವರ್ಷಕ್ಕೆ ಎರಡು ಕೋಟಿ ಉದ್ಯೋಗಗಳನ್ನು ನೀಡುತ್ತೇವೆಂದು ಹೇಳಿದ್ದರು. ಅವರು ಎರಡು ಕೋಟಿ ಉದ್ಯೋಗಗಳನ್ನು ನೀಡುತ್ತಾರೆಂದು ನಾವು ಕಾಲೇಜುಗಳನ್ನು ಪ್ರಾರಂಭ ಮಾಡಿ, ಅದಕ್ಕೆ ಕಾಯುತ್ತಿದ್ದೆವು. ಆದರೆ, ಇವತ್ತು ಕೇಂದ್ರ ಎಷ್ಟು ಉದ್ಯೋಗಗಳನ್ನು ನೀಡುತ್ತಿದೆ. ಆದರೆ, ರಾಜ್ಯ ಸರ್ಕಾರ ಏನಾದರೂ ನಿರುದ್ಯೋಗದ ಬಗ್ಗೆ ತಿಳಿಸಿದೆಯೇ? ನಿರುದ್ಯೋಗಿಗಳಿಗೆ ಉದ್ಯೋಗವನ್ನು ಯಾವ ರೀತಿ ಕೊಡುತ್ತೇವೆಂದು ಯೋಚನೆ ಮಾಡಬೇಕಲ್ಲವೇ? ಈಗ ಕೋವಿಡ್–19 ಬಂದಾಗ ಲಾಕ್‌ಡೌನ್ ಆಗಿ ಎಷ್ಟೋ ಕಂಪನಿಗಳು ಹೊರಟು ಹೋದವು. ನಾನು ಜಾಸ್ತಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಮಾನ್ಯ ವೈಸ್ ಛೇರ್ಮನ್‌ರವರು ಮಾತನ್ನು ಬೇಗ ಮುಗಿಸಬೇಕೆಂದು ಹೇಳುತ್ತಿದ್ದಾರೆ. ನಾನು ಇನ್ನು ಕೆಲವು ವಿಷಯಗಳನ್ನು ಹೇಳಬೇಕಾಗಿತ್ತು. ಆದರೆ, ಆ ವಿಷಯಗಳನ್ನು ಸಂಕ್ಷಿಪ್ತ ಮಾಡುತ್ತೇನೆ. ಇತ್ತೀಚಿನ ದಿನಗಳಲ್ಲಿ ಭಾರತ ದೇಶವೆಂದು ಹೇಳಿದರೆ, ನಾವು ತಲೆ ಎತ್ತಿ ನಡೆಯುತ್ತಿದ್ದೇವೆ, ನಮಗೆ ಎಲ್ಲರೂ ಸಹ ಗೌರವ ಕೊಡುತ್ತಾರೆಂದು ನನ್ನ ಮಿತ್ರರಾದ ಮಾನ್ಯ ಎಂ.ಕೆ.ಪ್ರಾಣೇಶ್‌ರವರು ಹೇಳಿದರು. ಆದರೆ, ನಾನು ಉದಾಹರಣೆ ಹೇಳುವುದಾದರೆ, ಇವತ್ತು ಮಾನ್ಯ ಸಲೀಂ ಅಹಮದ್‌ರವರು ಇದ್ದಾರೆ. 2001ರಲ್ಲಿ ACYPL (American Council of Young Political Leaders) exchange programme ಇತ್ತು. ಆ ಕಾರ್ಯಕ್ರಮಕ್ಕೆ ನಾನು ಮತ್ತು ಸಲೀಂ ಅಹಮದ್‌ರವರು ಹೋಗಿದ್ದೆವು. ಸುಮಾರು ಆರು ರಾಜ್ಯಗಳ ಕ್ಯಾಪಿಟಲ್ ವಿಧಾನ ಸಭೆಯವರು ಈ ಕಾರ್ಯಕ್ರಮದಲ್ಲಿ ನಾವು ಭಾಗವಹಿಸಿದ್ದೆವು. ಸ್ವಾಮಿ, ಯಾರೇ ಹೋದರು ಸಹ ಅವರು ಪ್ರಪ್ರಥಮವಾಗಿ ಮಾನ್ಯ ಪಂಡಿತ್ ಜವಾಹರ್‌ಲಾಲ್ ನೆಹರು ರವರ ಹೆಸರನ್ನು ಹೇಳುತ್ತಿದ್ದರು. ಏಕೆಂದರೆ, ಇವತ್ತು ಏನಾದರು ಅಮೆರಿಕಾವನ್ನು technocrat ಆಗಿ ಆಳುತ್ತಿದ್ದರೆ, ಅವತ್ತು ಯಾರೆಲ್ಲಾ ಐ.ಐ.ಟಿ. ಮತ್ತು ಎನ್.ಐ.ಟಿ.ಕೆ.ಯಲ್ಲಿ ಓದಿದಂತಹವರು, ಅಮೆರಿಕಾದ ನಾಸಾ ಅಥವಾ ಅಲ್ಲಿನ ಯಾವುದಾದರೂ ವಿಶ್ವವಿದ್ಯಾಲಯಗಳಲ್ಲಿ Professor ಗಳಾಗಿದ್ದಾರೆ. ಅವರು ಅಂದು ನಮ್ಮ ಐ.ಐ.ಟಿ. ಮತ್ತು ಎನ್.ಐ.ಟಿ.ಕೆ.ಯನ್ನು ಕಟ್ಟಿದಂತಹ ಮಾನ್ಯ ಪಂಡಿತ್ ಜವಾಹರ್‌ಲಾಲ್ ನೆಹರುರವರ ಹೆಸರನ್ನು ಹೇಳುತ್ತಿದ್ದರು.

**(ಮುಂದು)**

(344) 15.03.2022 01.40 LL-VK (ಸಭಾಪತಿಯವರ ಉಪಸ್ಥಿತಿ)

**ಶ್ರೀ ಮಂಜುನಾಥ್ ಭಂಡಾರಿ(ಮುಂದು)**

ಇನ್ನು ನಾನು ಒಂದು ಮಾತನ್ನು ಹೇಳುವುದಕ್ಕೆ ಬಯಸುವುದೇನೆಂದರೆ, ನಾನು ಮತ್ತು ಮಾನ್ಯ ಸಲೀಂ ಅಹಮದ್‌ರವರು ಯಾವ ಒಂದು ACYPL (American Council of Young Political Leaders) exchange programme ಗೆ ಹೋಗಿದ್ದೆವೋ, ಅದೇ ಕಾರ್ಯಕ್ರಮಕ್ಕೆ 1996ರಲ್ಲಿ ಮಾನ್ಯ ಅನಂತ್‌ಕುಮಾರ್‌ರವರು ಮತ್ತು ಮಾನ್ಯ ನರೇಂದ್ರ ಮೋದಿಯವರು ಸಹ ಹೋಗಿದ್ದರು. ಅದೇ ಕಾರ್ಯಕ್ರಮಕ್ಕೆ ನಾವು ಸಹ ಹೋಗಿದ್ದೆವು. ಆ ಕಾರ್ಯಕ್ರಮಕ್ಕೆ ನಮ್ಮ ದೇಶದಲ್ಲಿ ಯಾರೆಲ್ಲಾ ಹೋಗಿದ್ದಾರೆ, ಅವೆರಲ್ಲರಿಗೂ ಅಂತಹದ್ದೇ ಮರ್ಯಾದೆ ಸಿಕ್ಕಿರುತ್ತದೆ. ಆ ಸಮಯದಲ್ಲಿಯೂ ಸಹ ನಾವು ತಲೆ ಎತ್ತಿ ನಡೆಯುವಂತಹ ಸಂದರ್ಭ ಇರುತ್ತದೆ. ನಾನು ಇದನ್ನು ಮಾನ್ಯ ಎಂ.ಕೆ. ಪ್ರಾಣೇಶ್‌ರವರಿಗೆ ನೆನಪು ಮಾಡುತ್ತೇನೆ. ಅದೇನೆಂದರೆ, ಅಮೇರಿಕಾದ Houston ನಲ್ಲಿ, "Howdy Modi" ಎಂದು ಕಾರ್ಯಕ್ರಮ ಮಾಡಿದರು. ಅಲ್ಲಿ 1981 ರಿಂದ ಒಬ್ಬ ಪ್ರತಿನಿಧಿ, he is the senior most person in America. ಅವರು ಸುಮಾರು 50 ಸಾವಿರ ಜನರ ಮುಂದೆ, Howdy Modi event ನಲ್ಲಿ ಒಂದು ಮಾತನ್ನು ಹೇಳುತ್ತಾರೆ. ಅವರು ಏನು ಹೇಳುತ್ತಾರೆಂದರೆ, *"India, like America, is proud of its ancient traditions to secure a future according to Gandhi's teaching and Nehru's vision of India as a secular democracy where respect for pluralism and human rights safeguard every individual."* ಎನ್ನುವ ಮಾತನ್ನು ಅವರು ಹೇಳುತ್ತಾರೆ.

ಪ್ರಧಾನ ಮಂತ್ರಿಗಳು ಯಾರೇ ಆಗಿದ್ದರೂ ಸಹ ಅವರು ನಮ್ಮ ದೇಶದ ಪ್ರಧಾನ ಮಂತ್ರಿಗಳಾಗಿರುತ್ತಾರೆ. ಶ್ರೀಮತಿ ಇಂದಿರಾಗಾಂಧಿಯವರು ಪ್ರಧಾನ ಮಂತ್ರಿಯವರು ಅಲ್ಲಿಗೆ ಹೋದಂತಹ ಸಂದರ್ಭದಲ್ಲಿಯೂ ಸಹ ಅದೇ ರೀತಿಯ ಗೌರವ ಸಿಕ್ಕಿರುತ್ತದೆ. ಮಾನ್ಯ ರಾಜೀವ್ ಗಾಂಧಿಯವರು ಸಹ ಅಲ್ಲಿಗೆ ಹೋದಂತಹ ಸಂದರ್ಭದಲ್ಲಿ ಅಲ್ಲಿ ಒಂದು ಪ್ರೆಸ್ ಕಾನ್ಫರೆನ್ಸ್ ಅನ್ನು ಮಾಡುತ್ತಾರೆ. ಆ ಸಮಯದಲ್ಲಿ ಅವರಿಗೆ ಯಾವುದೇ Teleprompter ಇರಲಿಲ್ಲ. ಆ ಪ್ರೆಸ್

ಕಾನ್ಫರೆನ್ಸ್ ಬಗ್ಗೆ ಈಗಲೂ ಸಹ ಅಲ್ಲಿ ಮಾತನಾಡುತ್ತಿರುತ್ತಾರೆ. ಇತ್ತೀಚೆಗೆ ನಾನು ಅಲ್ಲಿಗೆ ಹೋದಂತಹ ಸಂದರ್ಭದಲ್ಲಿ, "ಯಾವ ರೀತಿ ಮಾನ್ಯ ರಾಜೀವ್ ಗಾಂಧಿಯವರು ಒಂದು ಪ್ರೆಸ್ ಕಾನ್ಫರೆನ್ಸ್ ಮಾಡಿದರು" ಎಂದು ಹೇಳಿದರು. ಮಾನ್ಯ ಜವಾಹರಲಾಲ್‌ರವರ ಬಗ್ಗೆ Eisenhower ರವರು ಒಂದು ಮಾತನ್ನು ಹೇಳುತ್ತಾರೆ. ನನಗೆ ಅಮೇರಿಕಾದಿಂದ ಅತ್ಯಂತ ಗೌರವಯುತವಾದ Eisenhower Fellowship ಅಲ್ಲಿನ ಪ್ರೆಸಿಡೆಂಟ್ ಹೆಸರಿನಲ್ಲಿ ಸಿಕ್ಕಿರುತ್ತದೆ. ಅಮೇರಿಕಾದವರು ಮಾನ್ಯ ಜವಾಹರಲಾಲ್ ನೆಹರುರವರ ನಾಯಕತ್ವದ ಬಗ್ಗೆ ಹೇಳುತ್ತಾರೆ. ಕೊನೆಯದಾಗಿ, ಮಾನ್ಯ ರಾಜೀವ್ ಗಾಂಧಿಯವರಿಗೆ ... ಮಾನ್ಯ ಎಂ.ಕೆ. ಪ್ರಾಣೇಶ್‌ರವರಿಗೆ ಈ ಫೋಟೋವನ್ನು ಕಳುಹಿಸಿಕೊಡುತ್ತೇವೆ. ಅದನ್ನು ಅವರು ನೋಡಲಿ.

**ವೈಸ್ ಚೇರ್ಮನ್:-** ಮಾನ್ಯ ಮಂಜುನಾಥ್ ಭಂಡಾರಿಯವರೇ, ತಾವು ಪ್ರಾಣೇಶ್‌ರವರ ಹೆಸರು ಹೇಳಿದರೆ ಪುನಃ ಅವರು ಮಾತನಾಡುವುದಕ್ಕೆ ಎದ್ದು ನಿಲ್ಲುತ್ತಾರೆ.

**ಶ್ರೀ ಮಂಜುನಾಥ್ ಭಂಡಾರಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಾಣೇಶ್‌ರವರು ನನ್ನ ಸ್ನೇಹಿತರು. ಹಾಗಾಗಿ, ಅವರು ಏನು ಹೇಳಿದ್ದಾರೆ...

**(ಗೊಂದಲ)**

**ವೈಸ್ ಚೇರ್ಮನ್:-** ತಾವು ನನ್ನ ಕಡೆ ನೋಡಿಕೊಂಡು ಮಾತನಾಡಿ. ತಾವು ಯಾರ ಹೆಸರನ್ನೂ ಉಲ್ಲೇಖ ಮಾಡಬೇಡಿ. ಏಕೆಂದರೆ, ಆ ಸದಸ್ಯರು ಎದ್ದು ನಿಂತು, "ನನ್ನ ಹೆಸರು ಉಲ್ಲೇಖ ಮಾಡಿದ್ದಾರೆ, ಹಾಗಾಗಿ ನಾನು ಮಾತನಾಡುತ್ತೇನೆಂದು" ಹೇಳುತ್ತಾರೆ. ಇದರಿಂದಾಗಿ, ತಮ್ಮ ಸಮಯ ವ್ಯರ್ಥವಾಗುತ್ತದೆ.

**(ಗೊಂದಲ)**

**ಶ್ರೀ ಮಂಜುನಾಥ್ ಭಂಡಾರಿ:-** ಮಾನ್ಯ ಸಭಾಪತಿಯವರೇ, ಆಯಿತು. ನಾನು ಏನು ಹೇಳುತ್ತಿದ್ದೇನೆಂದರೆ, ರೋನಾಲ್ಡ್ ರೇಗನ್‌ರವರು ಮಾನ್ಯ ರಾಜೀವ್ ಗಾಂಧಿಯವರು ಹೋಗಬೇಕಾದರೆ ಮಳೆ ಬರುತ್ತಿದೆಯೆಂದು ಅವರು ಕೊಡೆ ಹಿಡಿಯುತ್ತಾರೆ. ಅದನ್ನು ಹೇಳುವುದಕ್ಕೆ

ಆಗುತ್ತದೆಯೇ? ಆ ಸಂದರ್ಭದಲ್ಲಿ ಅವರು ಆ ಕೆಲಸವನ್ನು ಮಾಡಿದ್ದಾರೆ. ಮಾನ್ಯ ಮನಮೋಹನ್ ಸಿಂಗ್‌ರವರು ಪ್ರಧಾನ ಮಂತ್ರಿಯಾಗಿದ್ದಾಗ, ಮಾನ್ಯ ಬರಾಕ್ ಒಬಾಮಾರವರು ಒಂದು ಮಾತನ್ನು ಹೇಳುತ್ತಾರೆ. ಅದೇನೆಂದರೆ, "ನನಗೆ ಏನಾದರೂ ಮಾನ್ಯ ಮನಮೋಹನ್ ಸಿಂಗ್‌ರಂತಹ ಒಬ್ಬ ಆರ್ಥಿಕ ತಜ್ಞ ನನಗೆ ಸಿಕ್ಕಿದ್ದರೆ, ಇವೊತ್ತಿನ ದಿವಸ ಇರುವಂತಹ ಅಮೇರಿಕಾ ದೇಶವಲ್ಲದೇ, ಇದರ ನಾಲ್ಕು ಪಟ್ಟು ಅಮೇರಿಕಾವನ್ನು ಮಾಡುತ್ತಿದ್ದೆ" ಎನ್ನುವ ಮಾತನ್ನು ಅವರು ಹೇಳುತ್ತಿದ್ದರು.

**(ಈ ಹಂತದಲ್ಲಿ ವಿರೋಧ ಪಕ್ಷದ ಅನೇಕ ಸದಸ್ಯರು ಮೇಜು ತಟ್ಟುವ ಮೂಲಕ ಮಾನ್ಯ ಮಂಜುನಾಥ್ ಭಂಡಾರಿಯವರ ಮಾತಿಗೆ ಬೆಂಬಲ ಸೂಚಿಸಿದರು)**

ಯಾವುದೇ ಒಬ್ಬ ಅತಿಥಿ ಅಮೇರಿಕಾಕ್ಕೆ ಹೋದರೆ, ಅವರು ಮೊದಲು ಅಮೇರಿಕಾದ ಪ್ರೆಸಿಡೆಂಟ್ ಅನ್ನು ಭೇಟಿಯಾಗುತ್ತಾರೆ. ಆದರೆ, ಒಂದು ಸಂದರ್ಭದಲ್ಲಿ ಮಾನ್ಯ ಮನಮೋಹನ್ ಸಿಂಗ್‌ರವರು ಅಮೇರಿಕಾಕ್ಕೆ ಭೇಟಿ ನೀಡಿದಾಗ, ಅಮೇರಿಕಾದ ಪ್ರೆಸಿಡೆಂಟ್ ಆಗಿದ್ದಂತಹ ಮಾನ್ಯ ಬರಾಕ್ ಒಬಾಮಾರವರು ಮಾನ್ಯ ಮನಮೋಹನ್ ಸಿಂಗ್‌ರವರು ಅಲ್ಲಿ ತಂಗಿದ್ದರು ಅಲ್ಲಿನ ಕಟ್ಟಡದ ಪೋರ್ಟಿಕೋಗೆ ಬಂದು ಅವರನ್ನು ಭೇಟಿ ಮಾಡುತ್ತಾರೆ. ಇದು ಅಮೇರಿಕಾದ ಇತಿಹಾಸದಲ್ಲಿಯೇ ಪ್ರಪ್ರಥಮ ಬಾರಿಗೆ ನಡೆದಿರುವಂತಹ ಘಟನೆಯಾಗಿರುತ್ತದೆ. ಆ ಸಂದರ್ಭದಲ್ಲಿ ಯಾವುದೋ ವ್ಯಕ್ತಿ ಪ್ರಪ್ರಥಮ ಬಾರಿಗೆ ಈ ರೀತಿ ಆಗುತ್ತಿದೆ ಎಂದು ಕೇಳದಂತಹ ಪ್ರಶ್ನೆಗೆ, "ನಾನು ಮಾನ್ಯ ಮನಮೋಹನ್ ಸಿಂಗ್‌ರವರ ತಲೆಯಲ್ಲಿರುವಂತಹ ಆರ್ಥಿಕ ಜ್ಞಾನವನ್ನು ಮೆಚ್ಚಿ ನಾನು ಅವರಿಗೆ ಸಂಪೂರ್ಣವಾಗಿ ತಲೆಬಾಗಿದ್ದೇನೆ. ಹಾಗಾಗಿ, ಅವರು ನನ್ನ ಬಳಿ ಬರಬಾರದು. ಬದಲಾಗಿ, ನಾನು ಅವರ ಬಳಿ ಹೋಗಬೇಕೆಂದು" ಹೇಳುತ್ತಾರೆ.

**(ಈ ಹಂತದಲ್ಲಿ ವಿರೋಧ ಪಕ್ಷದ ಅನೇಕ ಸದಸ್ಯರು ಮೇಜು ತಟ್ಟುವ ಮೂಲಕ ಮಾನ್ಯ ಮಂಜುನಾಥ್ ಭಂಡಾರಿಯವರ ಮಾತಿಗೆ ಬೆಂಬಲ ಸೂಚಿಸಿದರು)**

ನಾನು ಕೊನೆಯದಾಗಿ ಕೆಲವು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ, ತಾವು ನನಗೆ ಮಾತನಾಡುವುದಕ್ಕೆ ಅವಕಾಶ ನೀಡುತ್ತಿಲ್ಲ.

**ವೈಸ್ ಚೇರ್ಮನ್:-** ಮಾನ್ಯ ಮಂಜುನಾಥ್ ಭಂಡಾರಿಯವರೇ, ತಮ್ಮ ಸಮಯ ಮುಗಿದಿದೆ. ಹಾಗಾಗಿ, ನಾನು ತಮಗೆ ಅವಕಾಶ ನೀಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದಾಗ್ಯೂ, ತಾವು ಇನ್ನು 5 ನಿಮಿಷದಲ್ಲಿ ತಮ್ಮ ಮಾತನ್ನು ಪೂರ್ಣಗೊಳಿಸಿ.

**ಶ್ರೀ ಮಂಜುನಾಥ್ ಭಂಡಾರಿ:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡಲು ಅರ್ಧ ಗಂಟೆ ಕಾಲಾವಕಾಶ ಕೇಳಿರುತ್ತೇನೆ.

**ವೈಸ್ ಛೇರ್ಮನ್:-** ತಾವು ಮಾತನಾಡಲು ಪ್ರಾರಂಭ ಮಾಡಿದ್ದು 1 ಗಂಟೆ 10 ನಿಮಿಷಕ್ಕೆ. ಹಾಗಾಗಿ, ತಮ್ಮ ಅರ್ಧ ಗಂಟೆ ಸಮಯ ಮುಗಿದಿರುತ್ತದೆ. ಆದರೂ ಸಹ ಸಂಕ್ಷಿಪ್ತವಾಗಿ ಇನ್ನು 5 ನಿಮಿಷದಲ್ಲಿ ತಮ್ಮ ಮಾತನ್ನು ಪೂರ್ಣಗೊಳಿಸಿ.

**ಶ್ರೀ ಮಂಜುನಾಥ್ ಭಂಡಾರಿ:-** ಮಾನ್ಯ ಸಭಾಪತಿಯವರೇ, ಅದರಲ್ಲಿ ಸುಮಾರು 20 ನಿಮಿಷ ಬೇರೆ ಸದಸ್ಯರು ಅಡ್ಡಿಪಡಿಸಿರುತ್ತಾರೆ. ನಿನ್ನೆಯ ದಿವಸ ಪಂಚ ರಾಜ್ಯಗಳಲ್ಲಿ ಬಂದಿರುವ ಚುನಾವಣಾ ಫಲಿತಾಂಶದ ಬಗ್ಗೆ ಚರ್ಚೆಗಳು ನಡೆಯುತ್ತಿತ್ತು. ಈ ಮೊದಲು ಬಹಳಷ್ಟು ಚುನಾವಣೆಗಳು ನಡೆಯುತ್ತಿದ್ದವು. ಅದರಲ್ಲಿ ಕೆಲವು issue based ಮೇಲೆ ನಡೆಯುತ್ತಿತ್ತು. ಕೆಲವು development based ಮೇಲೆ ನಡೆಯುತ್ತಿತ್ತು. ಆದರೆ, ಇವೊತ್ತಿನ ದಿವಸ ಭಾವನಾತ್ಮಕವಾದ ವಿಷಯಗಳ ಮೇಲೆ ಚುನಾವಣೆಗಳು ನಡೆಯುತ್ತಿವೆ. ಅದು ಯಾವ ರೀತಿ ನಡೆಯುತ್ತಿವೆ ಎನ್ನುವುದಕ್ಕೆ ಮುಂದೆ ಒಂದು ದಿನ ಉತ್ತರ ಸಿಕ್ಕೇ ಸಿಗುತ್ತದೆ. ನಾವು ಸೋಲು-ಗೆಲುವುಗಳ ಬಗ್ಗೆ ಚಿಂತಿಸುವುದಿಲ್ಲ. ನಾವು ಒಂದು ಪ್ರಕ್ರಿಯೆಯಲ್ಲಿ ನಡೆಯುತ್ತಿದ್ದೇವೆ. ಇವೊತ್ತಿನ ದಿವಸ ನಾವು ಸೋಲಬಹುದು, ನಾಳೆ ಗೆಲ್ಲಬಹುದು. ಇವೊತ್ತಿನ ದಿವಸ ಗೆದ್ದವರು ನಾಳೆ ದಿವಸ ಸೋಲಬಹುದು ಅಥವಾ ಈ ದಿನ ಸೋತವರು ನಾಳೆ ದಿವಸ ಗೆಲ್ಲಬಹುದು. ಇದು ನಡೆಯುತ್ತಲೇ ಇರುವಂಥದ್ದು. ಆದರೆ, ಈ ರೀತಿ ಚುನಾವಣೆಗಳು ಯಾವಾಗಿನಿಂದ ಪ್ರಾರಂಭವಾಗಿವೆ ಎಂಬುದನ್ನು ನಾವು ಯೋಚನೆ ಮಾಡಬೇಕು. ಈ ಬಗ್ಗೆ ತಮಗೆ ಗೊತ್ತಿರಬಹುದು. ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿ ಇದ್ದಂತಹ ಸಂದರ್ಭದಲ್ಲಿ ಒಂದು ಯಾತ್ರೆ ನಡೆಯಿತು. ಆ ಯಾತ್ರೆ issue ಮೇಲೆ ಚುನಾವಣೆ ನಡೆದಿರುತ್ತದೆ. ನಂತರ, ಮತ್ತೊಂದು issue ಮೇಲೆ ಚುನಾವಣೆ ನಡೆಯುತ್ತಿದೆ. ಈಗ ನಾವು ಒಂದು ಹೊಸ ಕಿಡಿಯನ್ನು ಹಂಚಿಕೊಂಡಿದ್ದೇವೆ. ಅದರ ಮೇಲೆ

ಭಾವನಾತ್ಮಕವಾಗಿ ಚುನಾವಣೆ ನಡೆಯುತ್ತಿದೆ. ಇದಕ್ಕೆಲ್ಲಾ ಒಂದು ಕೊನೆ ಬೀಳಬೇಕು ಹಾಗೂ ಇದು ನನ್ನ ಪ್ರಥಮ ಭಾಷಣ ಆಗಿರುವುದರಿಂದ ನಾನು ಹೆಚ್ಚು ವಿವಾದಕ್ಕೆ ಹೋಗುವುದಿಲ್ಲ. ಇನ್ನು ಮುಂದೆ ನಾವು 5 ವರ್ಷ 11 ತಿಂಗಳುಗಳ ಕಾಲ ಈ ಸದನದಲ್ಲಿ ಇರುತ್ತೇವೆ. ಹಾಗಾಗಿ, ಒಂದು ಉತ್ತಮ ಬಾಂಧವ್ಯವನ್ನು ಇಟ್ಟುಕೊಳ್ಳಬೇಕು ಎಂದು ಬಯಸುತ್ತೇನೆ.

ನಾನು ಕೊನೆಯದಾಗಿ ಹೇಳಬಯಸುವುದೇನೆಂದರೆ, ಈ ಬಜೆಟ್ ಮೇಲೆ ಮಾತನಾಡಲು ಸುಮಾರು ಅಂಕಿ-ಅಂಶಗಳನ್ನು ತಯಾರು ಮಾಡಿಕೊಂಡು ಬಂದಿದ್ದೆನು. ಆದರೆ, ನನ್ನ ಸ್ನೇಹಿತರು ಮಾತನಾಡುವುದಕ್ಕೆ ಅವಕಾಶ ಸಿಗಲಿ ಎಂದು ಹಾಗೂ ಅವರ ಸಮಯವನ್ನು ಕಟ್ ಮಾಡುವುದಕ್ಕೆ ನಾನು ಹೋಗುವುದಿಲ್ಲವೆಂದು ನಾನು ಹೆಚ್ಚಿಗೆ ಮಾತನಾಡುವುದಿಲ್ಲ. ಕೊನೆಯದಾಗಿ, ನಾನು ಹೇಳುವುದಕ್ಕೆ ಬಯಸುವುದೇನೆಂದರೆ, ಯಾರೇ ಬಜೆಟ್ ಅನ್ನು ಮಂಡಿಸಿದರೂ ಸಹ ಸುಳ್ಳು ಭರವಸೆಗಳನ್ನು ನೀಡುವ ಬದಲಾಗಿ, ವಾಸ್ತವಾಂಶಗಳನ್ನು ತಿಳಿದು, ರಾಜ್ಯದ ಜನರಲ್ಲಿರುವ ಆತಂಕವನ್ನು ದೂರ ಮಾಡಿ, ಸರ್ಕಾರಗಳು ಇನ್ನಾದರೂ ಜನರ ಪರವಾಗಿ, ಜನರ ಸೇವೆಗಾಗಿ, ಜನಪಯೋಗಿ ಕೆಲಸ ಮಾಡಬೇಕೆಂದು ನಾನು ಕೋರಿಕೊಳ್ಳುತ್ತಿದ್ದೇನೆ. ಅದು ಹೇಗಿರಬೇಕೆಂದರೆ, ಲೇಸೇ ಕೇಳಿಸಲಿ ಕಿವಿಗೆ, ಲೇಸೇ ಕಾಣಿಸಲು ಕಣ್ಣಿಗೆ, ಲೇಸೇ ನುಡಿಸಲಿ ಈ ನಾಲಿಗೆ ಎನ್ನುವ ಕವಿ ವಾಣಿಯಂತೆ ನಮ್ಮ ನಿಮ್ಮೆಲ್ಲರ ಸಂಬಂಧ ಉತ್ತರ ರೀತಿಯಲ್ಲಿ ಇರಲಿ. ಯಾವುದೂ ಕಿಡಿಗಳನ್ನು ಹಚ್ಚದೇ ಉತ್ತಮ ರೀತಿಯ ಸರ್ಕಾರವನ್ನು ನಾವು ಕೋಡೋಣವೆಂದು, ಮುಂದಿನ ಜನತೆಗೆ, ಮುಂದಿನ ಪೀಳಿಗೆಗೆ ನಾವು ಉತ್ತಮ ಸರ್ಕಾರ ನೀಡಬೇಕು. ಏಕೆಂದರೆ, ನಾವು ಇವೊತ್ತಿನ ದಿವಸ ಬೀಜ ಹಾಕಿದರೆ, ನಾಳೆಯ ದಿವಸ ಅದು ಮರ ಆಗುತ್ತದೆ. ಒಂದು ವೇಳೆ ಬೇವಿನ ಬೀಜ ಹಾಕಿದರೆ, ಬೇವಿನ ಮರವಾಗಿ ಬೆಳೆದು, ಬೇವಿನ ಗುಣ ಹೊಂದಿರುತ್ತದೆ. ಅದನ್ನು ನಾಳೆಯ ದಿವಸ ನಾವು ತಿನ್ನಬಹುದು ಅಥವಾ ಆಡಳಿತ ಪಕ್ಷದವರು ತಿನ್ನಬಹುದು. ಅದು ಆಗಬಾರದು ಎಂದು ಹೇಳಿ, ಈ ಅವಕಾಶ ಮಾಡಿಕೊಟ್ಟ ತಮಗೆಲ್ಲರಿಗೂ ವಂದಿಸಿ ನನ್ನ ಎರಡು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

**ವೈಸ್ ಛೇರ್ಮನ್:-** ಈಗ ಶ್ರೀ ಎ.ಹೆಚ್. ವಿಶ್ವನಾಥ್‌ರವರು ಮಾತನಾಡುತ್ತಾರೆ.

**ಶ್ರೀ ಅಡಗೂರ್ .ಹೆಚ್. ವಿಶ್ವನಾಥ್;-** ಮಾನ್ಯ ಸಭಾಪತಿಯವರೇ,...

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಉತ್ತರ ಬಂದಿದೆ.

**ವೈಸ್ ಛೇರ್ಮನ್:-** ಮಾನ್ಯ ಶ್ರೀಕಂಠೇಗೌಡರವರೇ, ಈಗ ಮಾನ್ಯ ವಿಶ್ವನಾಥ್‌ರವರು ಮಾತನಾಡಲಿ. ತಾವು ನಂತರ ಮಾತನಾಡಿ.

**(ಗೊಂದಲ)**

**ಡಾ: ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಆ ವಿಷಯವನ್ನು ಮಾನ್ಯ ಮಂತ್ರಿಗಳು ಬಂದ ನಂತರ ಚರ್ಚೆಗೆ ತೆಗೆದುಕೊಳ್ಳಿ. ಈಗ ಅವರು ಮಾತನಾಡಲಿ.

**(ಗೊಂದಲ)**

**ಶ್ರೀ ಅಡಗೂರ್ .ಹೆಚ್. ವಿಶ್ವನಾಥ್:-** ಮಾನ್ಯ ಸಭಾಪತಿಯವರೇ, ತಾವು ನನಗೆ ಅವಕಾಶ ಕೊಟ್ಟಿದ್ದೀರಿ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಇಲ್ಲಿ ಅವಕಾಶ ನೀಡಿರುವ ಪ್ರಶ್ನೆ ಇರುವುದಿಲ್ಲ. ಎಲ್ಲಾ ಸದಸ್ಯರ ಅನುದಾನದ ವಿಷಯ ಮೇಲೆ ಚರ್ಚೆ ಮಾಡಬೇಕಾಗಿರುತ್ತದೆ.

**ವೈಸ್ ಛೇರ್ಮನ್:-** ಹೌದು. ಎಲ್ಲರಿಗೂ ಸೇರಿದಂತಹ ವಿಷಯವಾಗಿರುತ್ತದೆ.

**ಡಾ: ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಆ ವಿಷಯದ ಬಗ್ಗೆ ಮಾನ್ಯ ಮಂತ್ರಿಗಳು ಬಂದ ನಂತರ ಸಮಗ್ರವಾಗಿ ಚರ್ಚೆಯಾಗಲಿ.

**(ಗೊಂದಲ)**

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ನಾನು ಹೆಚ್ಚು ಸಮಯ ಕೂಡ ತೆಗೆದುಕೊಳ್ಳುವುದಿಲ್ಲ. ಏಕೆಂದರೆ, ನಾನು ಇಲ್ಲಿಗೆ ಬಹಳ ದೊಡ್ಡ ಬೋರ್‌ವೆಲ್ ಅನ್ನು ಕೊರೆಯುವುದಕ್ಕೆ ತೆಗೆದುಕೊಂಡು ಬಂದಿರುವುದಿಲ್ಲ. ಕೆಲವೇ

ನಿಮಿಷಗಳಲ್ಲಿ ನಾನು ಏನು ಹೇಳಬೇಕೋ ಅದನ್ನು ಹೇಳಿ ಮುಗಿಸುತ್ತೇನೆ. ನಮ್ಮ ಮುಖ್ಯಮಂತ್ರಿಗಳಾದ ಮಾನ್ಯ ಬಸವರಾಜ ಬೊಮ್ಮಾಯಿಯವರು ತಂದಂತಹ ಈ ಬಜೆಟ್ ಅನ್ನು ಅತ್ಯಂತ ಅಭಿಮಾನದಿಂದ ನಾನು ಸ್ವಾಗತ ಮಾಡುತ್ತಿದ್ದೇನೆ. ಮಾನ್ಯ ಬಸವರಾಜ ಬೊಮ್ಮಾಯಿಯವರ ಮೊದಲನೆ ಬಜೆಟ್ ಇದು. ಇದು ಅವರ ಚೊಚ್ಚಲ ಹೆರಿಗೆಯಾಗಿದೆ. ಮಗು ಸಹ ಬಹಳ ಆರೋಗ್ಯವಾಗಿ, ನಗು ನಗುತ್ತಾ ಇದೆ. ಆ ಮಗು ಈ ಕಡೆ ಇದ್ದಾಗ ಬಹಳ ಚೆನ್ನಾಗಿ ನಗುತ್ತಿರುತ್ತಿದೆ. ಆ ಕಡೆ ಅಂದರೆ, ನಮ್ಮ ಪೂರ್ವಾಶ್ರಮದ ಸ್ನೇಹಿತರ ಕಡೆ ಹೋದಾಗ ಏತಕ್ಕೋ ಅಳುತ್ತದೆ. ಅಲ್ಲಿಂದ ಬಂದು ಮಾನ್ಯ ಮರಿತಿಬ್ಬೇಗೌಡರ ಕಡೆ ಹೋದಾಗ, ಕಿಟಾರನೆ ಕಿರುಚುತ್ತದೆ. ಅಲ್ಲಿಂದ ಮುಂದೆ ಮಾನ್ಯ ಕೆ.ಟಿ. ಶ್ರೀಕಂಠೇಗೌಡರು ಮತ್ತು ಮಾನ್ಯ ಎಸ್.ಎಲ್. ಭೋಜೇಗೌಡರವರು ಆ ಮಗುವನ್ನು ನೋಡಿ, "ಈ ಮಗು ನಮ್ಮ ರೀತಿಯೇ ಕಾಣುತ್ತದೆ" ಎಂದು ಮುದ್ದು ಮಾಡುತ್ತಾರೆ.

**ಡಾ: ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಭೋಜೇಗೌಡವರು ಆ ಮಗುವಿಗೆ ಲಾಲಿ ಹಾಡುತ್ತಾರೆ.

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್:-** ಮಾನ್ಯ ಸಭಾಪತಿಯವರೇ, ಈ ರೀತಿ ಮಾನ್ಯ ಬಸವರಾಜ ಬೊಮ್ಮಾಯಿಯವರ ಈ ಬಜೆಟ್ ಸಮಾಜದ ಸರ್ವರನ್ನು ಕೂಡ ಸ್ಪರ್ಶ ಮಾಡತಕ್ಕಂತಹ ಒಂದು ಬಜೆಟ್ ಆಗಿದೆ. ಇದನ್ನು ನಾನು ಅತ್ಯಂತ ಅಭಿಮಾನದಿಂದ ಸ್ವಾಗತ ಮಾಡುತ್ತಿದ್ದೇನೆ. ನಾನು ಮೊದಲನೆಯದಾಗಿ, ಈ ಹಣಕಾಸು ಇಲಾಖೆಯ ಮೇಲೆ ಮಾತನಾಡಬೇಕಾಗಿರುತ್ತದೆ. ಹಣಕಾಸು ಇಲಾಖೆ ಇವೊತ್ತಿನ ದಿವಸ ಏನಾಗಿದೆಯೆಂದರೆ, ನಮ್ಮ ರಾಜ್ಯದ ಆಡಳಿತ ವ್ಯವಸ್ಥೆಯಲ್ಲಿ ೩೩ ಇಲಾಖೆಗಳು ಇರುತ್ತದೆ. ಅದರಲ್ಲಿ ಬಹಳ ಪ್ರಮುಖವಾಗಿರುವಂತಹದ್ದು ೩ ಇಲಾಖೆಗಳು.

(ಮುಂದು)

---

(345) 15.03.2022 1.50 ವೈಎಲ್-ಬಿಎನ್ಎಸ್ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಅಡಗೂರ್ ಹೆಚ್.ವಿಶ್ವನಾಥ್ (ಮುಂದು):-**

ಆ 3 ಇಲಾಖೆಗಳು ಯಾವುದೆಂದರೆ, ಆರ್ಥಿಕ ಇಲಾಖೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಹಾಗೂ ಕಾನೂನು ಇಲಾಖೆ. ಈ ಮೂರು ಇಲಾಖೆಗಳು ತೀರ್ಮಾನ ತೆಗೆದುಕೊಳ್ಳುವಂಥ ಇಲಾಖೆಗಳಾಗಿದ್ದು, ಉಳಿದ ಇಲಾಖೆಗಳು "ನ್ಯಾಯ ಕೊಡು, ನ್ಯಾಯ ಕೊಡು" ಎಂದು touch and go ಅಷ್ಟೆ. ಈ ಮೂರು ಇಲಾಖೆಗಳ ಪೈಕಿ ಆರ್ಥಿಕ ಇಲಾಖೆ ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗಳೆರಡೂ ಮಾನ್ಯ ಮುಖ್ಯಮಂತ್ರಿಯವರ ಅಧೀನದಲ್ಲಿಯೇ ಇವೆ. ಈ ಹಿಂದೆ exclusive ಆಗಿ ಆರ್ಥಿಕ ಸಚಿವರು ಇರುತ್ತಿದ್ದರು. ಆದರೆ, ಕಳೆದ ಎರಡು ದಶಕಗಳಿಂದ ಮಾನ್ಯ ಮುಖ್ಯಮಂತ್ರಿಗಳೇ ನಡೆಸಿಕೊಂಡು ಬರುತ್ತಿದ್ದು, ಆ ಎರಡು ಇಲಾಖೆಗಳನ್ನು ನೋಡಿಕೊಳ್ಳುವುದಕ್ಕೆ ಸಮಯ ಎಲ್ಲಿರುತ್ತದೆ? ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಈ ರಾಜ್ಯದ ಉನ್ನತ ಅಧಿಕಾರಿಗಳ postings ಹಾಗೂ ಅವರ ಮೇಲಿರುವ ಆಪಾದನೆಗಳನ್ನು ಪರಿಶೀಲಿಸುವಂಥದ್ದಾಗಿದೆ. ಹಾಗಾಗಿ ಮಾನ್ಯ ಮುಖ್ಯಮಂತ್ರಿಯವರಿಗೆ ಈ ಎರಡು ಇಲಾಖೆಗಳನ್ನು ನೋಡಿಕೊಳ್ಳುವುದಕ್ಕೆ ಸಮಯ ಎಲ್ಲಿರುತ್ತದೆ? ಈ ಸಂಬಂಧ ನಾನು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಹೆಚ್. ಡಿ.ಕುಮಾರಸ್ವಾಮಿಯವರಿಗೆ ಹೇಳಿದಾಗ ಅವರು ನನ್ನ ಮೇಲೆ ಬಹಳ ಕೋಪ ಮಾಡಿಕೊಂಡು, ನನಗೆ ಆ ಇಲಾಖೆಗಳನ್ನು ನೋಡಿಕೊಳ್ಳುವ ಶಕ್ತಿ ಇದೆ ಎಂದು ದೊಡ್ಡ ಜಗಳವನ್ನೇ ಮಾಡಿದ್ದರು. ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರಾಗಲಿ, ಶ್ರೀ ಯಡಿಯೂರಪ್ಪನವರಾಗಲಿ, ಶ್ರೀ ಹೆಚ್. ಡಿ.ಕುಮಾರಸ್ವಾಮಿಯವರಾಗಲಿ ಹಾಗೂ ಹಾಲಿ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರಾಗಲಿ ಇವರೆಲ್ಲರಿಗೂ ಆ ಎಲ್ಲಾ ಇಲಾಖೆಗಳನ್ನು ನೋಡಿಕೊಳ್ಳುವಂಥ ಶಕ್ತಿ ಮತ್ತು ಜ್ಞಾನ ಇದೆ. ಆದರೆ, ಸಮಯ ಎಲ್ಲಿದೆ? ಸಮಯ ಮುಖ್ಯ ಅಲ್ಲವೇ? ಸಮಯ ಇಲ್ಲ. ಈ ಆರ್ಥಿಕ ಇಲಾಖೆ ಏನಿದೆ, ಅದು ಸಹ ಬಹಳ ಮುಖ್ಯ. ಏಕೆಂದರೆ, ಹಣ ಇದ್ದರೆ ಅಲ್ಲವೇ ನಾವು ಎಲ್ಲಾ ಕೆಲಸ-ಕಾರ್ಯಗಳನ್ನು ಮಾಡುವುದು, ಇಲ್ಲಿ ಕುಳಿತುಕೊಂಡು ಭಾಷಣ ಮಾಡುವುದು; ಆದರೆ, ಸಂಪನ್ಮೂಲದ ಕೊರತೆ ಉಂಟಾದರೆ ಏನಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಇವತ್ತಿನ ದಿವಸ ಮಾಜಿ

ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ.ಕೃಷ್ಣರವರನ್ನು ನಾವು ನೆನಪಿಸಿಕೊಳ್ಳಬೇಕು. ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಯಡಿಯೂರಪ್ಪ, ಶ್ರೀ ಸಿದ್ದರಾಮಯ್ಯ ಹಾಗೂ ಹಾಲಿ ಮುಖ್ಯಮಂತ್ರಿಯಾದ ಶ್ರೀ ಬಸವರಾಜ ಬೊಮ್ಮಾಯಿಯವರು "ನನ್ನ ಸರ್ಕಾರದಿಂದ ಸುಮಾರು ಒಂದೂವರೆ ಲಕ್ಷ ಕೋಟಿ, ಎರಡು ಲಕ್ಷ ಕೋಟಿ, ಎರಡೂವರೆ ಲಕ್ಷ ಕೋಟಿ ಬಜೆಟ್ ಮಾಡಿದ್ದೇವೆ" ಎಂದು ಹೇಳಿಕೊಳ್ಳಲು, who is behind it? ಅದಕ್ಕೆಲ್ಲಾ I.T–.B.T., cyber leader ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ.ಕೃಷ್ಣರವರು ಕಾರಣ. ಆದರೆ, ಇವತ್ತಿನ ದಿವಸ ನಾವು ಅವರನ್ನು ನೆನಪಿಸಿಕೊಳ್ಳುವುದಿಲ್ಲ. ಆದರೆ, ಇತ್ತೀಚಿನ ಆಡಳಿತದಲ್ಲಿ ಬರೀ ದಂಧೆಗಳು, ವರ್ಗಾವಣೆ ಆಗುತ್ತಿದೆ. ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಗುಂಡೂರಾವ್‌ರವರನ್ನು ನಾವು ನೆನಪಿಸಿಕೊಳ್ಳಬೇಕು. ಏಕೆಂದರೆ, ೮೦ರ ದಶಕದಲ್ಲಿ ಮುಖ್ಯಮಂತ್ರಿಗಳಾಗಿದ್ದ ಶ್ರೀ ಗುಂಡೂರಾವ್‌ರವರ ಕಾಲದಲ್ಲಿ ಒಂದು ಸಲ ವರ್ಗಾವಣೆಯಾದರೆ ಮತ್ತೆ cancellation, modification ಇರಲಿಲ್ಲ; ಅಷ್ಟರ ಮಟ್ಟಿಗೆ ಕಟ್ಟುನಿಟ್ಟಾಗಿತ್ತು. ಇವತ್ತಿನ ಆಡಳಿತ ವ್ಯವಸ್ಥೆ ಯಾವ ರೀತಿ ಬುಡಮೇಲಾಗಿದೆ ಎಂದರೆ, ವರ್ಗಾವಣೆ ದಂಧೆಯಾಗಿದೆ. ಇವತ್ತಿನ ದಿವಸ ವರ್ಗಾವಣೆಯನ್ನು industry ಎನ್ನಲಾಗುತ್ತಿದೆ. ಹಾಗಾಗಿ ಇದಕ್ಕೆ ಸರಿಯಾಗಿ ಒಂದು ಚಿಕಿತ್ಸೆಯಾಗಬೇಕು. ಈ ಹಿಂದಿನವರು ಯಾವ ರೀತಿ ಆಡಳಿತವನ್ನು ನಡೆಸಬೇಕು, ಏನು ಮಾಡಬೇಕೆಂದು ಹೇಳಿಕೊಟ್ಟು ಹೋಗಿದ್ದಾರೆ. ಇವತ್ತಿನ ದಿವಸ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ.ಕೃಷ್ಣರವರು ಸಂಪನ್ಮೂಲವನ್ನು ಕ್ರೋಢೀಕರಿಸಿಕೊಟ್ಟಂಥವರಾಗಿದ್ದಾರೆ. ಬಿಗಿಯಾದ ಆಡಳಿತವನ್ನು ತಂದುಕೊಟ್ಟ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಗುಂಡೂರಾವ್‌ರವರನ್ನು ನಾವು ನೆನಪಿಸಿಕೊಳ್ಳಬೇಕು. ಜೊತೆಗೆ ಜಿ.ಎಸ್.ಟಿ. ನಲ್ಲಿ ಏನಾಯಿತೆಂದರೆ, ಕೇಂದ್ರ ಸರ್ಕಾರವು ಎಲ್ಲವನ್ನೂ ಕೇಂದ್ರೀಕೃತ ಮಾಡಬೇಕೆಂದು ಹೊರಟ ಸಂದರ್ಭದಲ್ಲಿ ನಾನು ಮತ್ತು ಮಾಜಿ ಪ್ರಧಾನಮಂತ್ರಿಗಳಾದ ಶ್ರೀ ಹೆಚ್.ಡಿ.ದೇವೇಗೌಡರು ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರಿಗೆ "ರಾಜ್ಯ ಸರ್ಕಾರಗಳಿಗೂ ನೀಡಬೇಕು, ಇಲ್ಲದಿದ್ದರೆ federal system ಗೆ ಹಣಕಾಸು ವ್ಯವಸ್ಥೆಯಲ್ಲಿ ತೊಂದರೆಯಾಗುತ್ತದೆ" ಎಂದು ಕಾಗದ ಬರೆದೆವು. ಆ ಕಾಗದವು ತೆರಿಗೆ ಅಧಿಕಾರಿಗಳ ದಿನಚರಿಯಲ್ಲಿ reflect ಆಗಿದೆ. ಹಾಗಾಗಿ gross empowerment and power to state officers ಈ finance ನಲ್ಲಿ ನೀಡಿರುವುದು ದೊಡ್ಡ ಜಯ. ಮಾಜಿ ಮುಖ್ಯಮಂತ್ರಿಗಳಾದ ಶ್ರೀ

ಹೆಚ್.ಡಿ.ದೇವೇಗೌಡರವರು intervene ಆಗಿ ನಮ್ಮ ಕೈಯಿಂದ ಆ ಪತ್ರವನ್ನು ತೆಗೆದುಕೊಂಡು, ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರೊಂದಿಗೆ ಮಾತನಾಡಿದ್ದು ಇವತ್ತು ಫಲ ನೀಡಿದೆ. Central Board of Indirect Taxes ನಂತೆ ನಮ್ಮಲ್ಲಿ ಸಹ State Board of Indirect Taxes ಎಂದು ಇಲ್ಲಿ constitute ಆಗಬೇಕು. ತೆರಿಗೆಯಲ್ಲಿ ಸಿಕ್ಕಾಪಟ್ಟೆ evasion ಇದ್ದು, ಅದು ನಿಲ್ಲಬೇಕು. ಇಡೀ ಇಲಾಖೆ restructure ಆಗಬೇಕು. ಬೇರೆ ಯಾರು ಪ್ರಧಾನ ಕಾರ್ಯದರ್ಶಿಗಳು ನಮ್ಮ ರಾಜ್ಯದಲ್ಲಿ ಗತಿ ಇಲ್ಲವೇ? ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ಸಹ ಹಿಂದೆ ಇದ್ದಂಥವರೇ ಆ ಹುದ್ದೆಯಲ್ಲಿದ್ದು, ಅವರು ಸರ್ವಜ್ಞರೇ? ಇದು ಏನಾಗುತ್ತದೆ ಎಂದರೆ, ಬಹಳ ದಿವಸಗಳವರೆಗೂ ಅದೇ ಹುದ್ದೆಯಲ್ಲಿ ಬಿಟ್ಟರೆ, it is going to be proprietary. Proprietary ಆಗಿ ಹೋಗುತ್ತದೆ. ಸುಮಾರು 250 ರಿಂದ 300 ಮಂದಿ ಐ.ಎ.ಎಸ್. ಅಧಿಕಾರಿಗಳು ನಮ್ಮ ರಾಜ್ಯದಲ್ಲಿದ್ದು, ಹಲವಾರು ವಿಷಯದ ಮೇಲೆ ಅಧ್ಯಯನ ಮಾಡಿದವರಾಗಿದ್ದು, ಅವರಲ್ಲಿ ಯಾರೂ ಆ ಇಲಾಖೆಗಳನ್ನು ನಡೆಸುವಂಥವರಿಲ್ಲವೇ? Entire department has to be restructured. ಇಲ್ಲದಿದ್ದರೆ ಆಗುವುದಿಲ್ಲ. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಎಷ್ಟು ಸಾವಿರ ಕೋಟಿ ಕೊರತೆ ಇದ್ದು, ಅದನ್ನು ಸಾಲದ ರೂಪದಲ್ಲಿ ತರಲಾಗುತ್ತಿದೆ? ಅದರ ಬಗ್ಗೆ ಯಾರು ಯೋಚನೆ ಮಾಡುವವರು ಇಲ್ಲವೇ? ಏನೆಲ್ಲಾ ನಡೆಯುತ್ತಿದೆ, ಯಾವುದಕ್ಕೆಲ್ಲಾ ಹಣವನ್ನು ವ್ಯಯ ಮಾಡುತ್ತಿದ್ದೇವೆ? ಏನೆಲ್ಲಾ ಕೆಲಸಗಳಗೆ ದುಂದು ವೆಚ್ಚಗಳಾಗುತ್ತಿವೆ? ಸಂಪನ್ಮೂಲ ಸಂಗ್ರಹದಲ್ಲಿ ಯಾವ ರೀತಿ ವಿಫಲವಾಗುತ್ತಿದ್ದೇವೆ? ಸದನದಲ್ಲಿ ಯಾರಾದರೂ finance department ನ ಅಧಿಕಾರಿಗಳು ಇದ್ದಾರೆಯೇ? ಯಾರೋ ಒಬ್ಬರು ಇದ್ದಾರೆನ್ನಿಸುತ್ತದೆ. No, this is not the way. ಇದು ಬಜೆಟ್ ಅಧಿವೇಶನವಾಗಿದೆ. Prevention of evasion of taxes is necessary. ಪೋಲೀಸ್ ಠಾಣೆಗಳಗೆ ಹೋಗಿ ನೋಡಿದರೆ, ಯಾವ್ಯಾವ ರೀತಿ ಕಳ್ಳತನ ನಡೆಸುತ್ತಾರೆ ಎಂದು ಬರೆದಿರುತ್ತಾರೆ. ಯಾವ್ಯಾವ ರೀತಿ crimes ನಡೆಯುತ್ತವೆ, ಬೀಗ ಮುರಿಯುವುದು, ಡ್ರಗ್ಸ್, liquor, SITA, ಗೋಡೆಗೆ ಕನ್ನಾ ಹಾಕುವುದು, ಯಾರನ್ನೋ ಹೊತ್ತುಕೊಂಡು ಹೋಗುವುದು, ಯಾವುದೆಲ್ಲಾ ಇದೆ ಎಂಬುದನ್ನು ನೋಡಬಹುದು. ಆದರೆ, ನಿಮ್ಮ ಬಳ ಏನಿದೆ? ಏನು list ಮಾಡಿದ್ದೀರಿ? What are all the events? What are all the tax crimes? ಆರ್ಥಿಕ ಇಲಾಖೆಯವರು ಪಟ್ಟಿ

ಮಾಡಿದ್ದಾರೆಯೇ? ಯಾವ ರೀತಿ ಆಡಳಿತ ನಡೆಸುತ್ತಿದ್ದಾರೆ? The finance department of the State is the important department. Steel, electricals, granite, cement, marble, sanitary fittings, hardware and other 20 commodities' tax evasion is taking place. ಬೇರೆ ರಾಜ್ಯದಿಂದ ವಲಸೆ ಬಂದು ಮೈಸೂರಿನಲ್ಲಿ ನೆಲೆಸಿರುವಂಥ ಒಬ್ಬ ವ್ಯಕ್ತಿ ಸ್ಟೀಲ್ ಕಂಪನಿಯನ್ನು ನಡೆಸುತ್ತಿದ್ದು, ಆತ ಯಾವುದೇ ತೆರಿಗೆಯನ್ನು ಸರ್ಕಾರಕ್ಕೆ ಭರಿಸುತ್ತಿಲ್ಲ. ಸುಮಾರು ಎರಡು ವರ್ಷಗಳ ಹಿಂದೆ ಈ ಸಂಬಂಧ ನಾನು ಆಯುಕ್ತರ ಹತ್ತಿರ ವೈಯಕ್ತಿಕವಾಗಿ ಹೋಗಿ " ಮೈಸೂರಿನಲ್ಲಿ ಈ ರೀತಿ tax evasion ಆಗುತ್ತಿದೆ, ನೋಡಿ" ಎಂದು ಸಹ ಮಾತನಾಡಿದ್ದೇನೆ. ಆಯುಕ್ತರು "ಆಯಿತು, ನೋಡುತ್ತೇನೆ" ಎಂದು ಹೇಳಿದ್ದು, ಇಲ್ಲಿಯವರೆಗೂ ಏನೇನೂ ಕ್ರಮ ತೆಗೆದುಕೊಂಡಿಲ್ಲ. ಅದೇ ರೀತಿ ಗಡಿಯಿಂದ ಹಿಂದೂಪುರವು ಸುಮಾರು 30 ಕಿಲೋ ಮೀಟರ್ ಹಾಗೂ ಹೊಸೂರು 25 ಕಿಲೋ ಮೀಟರ್ ಅಂತರಲ್ಲಿದ್ದು, ಅಲ್ಲಿ ಎಷ್ಟು ಸ್ಟೀಲ್ ಕಂಪನಿಗಳಿವೆ? ಆ ಸ್ಟೀಲ್ ನ್ನು ಆಂಧ್ರಪ್ರದೇಶದವರು ಅಥವಾ ತಮಿಳುನಾಡಿನವರು ಉಪಯೋಗಿಸುತ್ತಿದ್ದಾರೆಯೇ? ಅವೆಲ್ಲವೂ ನಮ್ಮ ರಾಜ್ಯಕ್ಕೆ ಕದ್ದು ಬರುತ್ತಿದ್ದು, ಅವರು ಯಾವುದೇ ತೆರಿಗೆಯನ್ನು ಕಟ್ಟುತ್ತಿಲ್ಲ. ಇದಕ್ಕೆಲ್ಲಾ ಯಾರು ಶಾಮೀಲು?

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಒಟ್ಟಾರೆಯಾಗಿ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿಯೇ ಎಲೆಕ್ಟ್ರಾನಿಕ್ ಸಿಟಿ ಇರುವುದು. ಸರ್ಕಾರವು ಅದನ್ನು ಬಿ.ಬಿ.ಎಂ.ಪಿ. ವ್ಯಾಪ್ತಿಗೆ ತರಲು ಮತ್ತು ತೆರಿಗೆ ವಿಧಿಸಲು ಪ್ರಯತ್ನವೇ ಮಾಡುತ್ತಿಲ್ಲ. ಅದನ್ನು ಬಿಟ್ಟು ಬೇರೆ ಎಲ್ಲವನ್ನೂ ತೆಗೆದುಕೊಳ್ಳುತ್ತಾರೆ.

**ಶ್ರೀ ಅಡಗೂರ್ ಹೆಚ್.ವಿಶ್ವನಾಥ್ (ನಾಮನಿರ್ದೇಶನ ಹೊಂದಿದವರು):-** ಹಾಗಾಗಿ ಹಣಕಾಸು ಇಲಾಖೆ ಬಹಳ ಮುಖ್ಯವಾಗಿದ್ದು, ಕಳಕಳಿಯಿಂದ ವಿನಂತಿಸುತ್ತಿದ್ದೇನೆ. I am not against to anybody, ಏಕೆಂದರೆ, ನಾನು ಆಡಳಿತ ಪಕ್ಷದವನಾಗಿದ್ದೇನೆ. ನಮ್ಮಲ್ಲಿ ಎಷ್ಟು ಮಂದಿ ಎಂ.ಎಲ್.ಎ. ಹಾಗೂ ಎಂ.ಎಲ್.ಸಿ. ಗಳಿದ್ದಾರೆ; ಆರ್ಥಿಕ ಇಲಾಖೆಯನ್ನು ನಡೆಸುವುದಕ್ಕೆ ಒಬ್ಬ ಎಂ.ಎಲ್.ಎ. ಅಥವಾ ಎಂ.ಎಲ್.ಸಿ. ಇಲ್ಲವೇ? ಮಾನ್ಯ ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಗುಜರಾತಿನ

ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಮೂರು ಬಾರಿಯೂ ಯಾವುದೇ ಇಲಾಖೆಯನ್ನು ಅವರ ಅಧೀನಕ್ಕೆ ತೆಗೆದುಕೊಂಡಿರಲಿಲ್ಲ. ಅದೇ ರೀತಿ ಈಗ ಪ್ರಧಾನಮಂತ್ರಿಗಳಾಗಿಯೂ ಯಾವುದೇ ಇಲಾಖೆಯನ್ನು ಅವರ ಅಧೀನದಲ್ಲಿಟ್ಟುಕೊಂಡಿಲ್ಲ. ಈ ದೇಶದಲ್ಲಿ, in the democratic style and set up of administration, two offices are very important, ಒಂದು ಪಿ.ಎಂ.ಓ. (ಪ್ರಧಾನಮಂತ್ರಿಗಳ ಕಛೇರಿ) ಮತ್ತೊಂದು ಸಿ.ಎಂ.ಓ. (ಮುಖ್ಯಮಂತ್ರಿಯವರ ಕಛೇರಿ). ಆದರೆ, ಈ ಎರಡು ಇಲಾಖೆಗಳು, king cannot be questioned, ಆ ರೀತಿಯಾಗಿದ್ದು, ಏನು ಬೇಕಾದರೂ ಆಗಬಹುದು. ಹಾಗಾಗಿ ಏತಕ್ಕೆ ಮುಖ್ಯಮಂತ್ರಿಗಳು ಅವರ ಅಧೀನದಲ್ಲಿಟ್ಟುಕೊಳ್ಳಬೇಕು? Chief Minister is the supreme of the State in the administration. He can summon any file, any officer, any Minister. ಹಾಗೆ ಇರುವಾಗ, why does he keep all those portfolios? ಹಾಗಾಗಿ, ತಮ್ಮ ಮೂಲಕ ವಿನಂತಿಸುವುದೇನೆಂದರೆ, ಆಡಳಿತದಲ್ಲಿ ಬಿಗಿ ಬರಬೇಕೆಂದರೆ ಅದೆಲ್ಲವೂ ಸರಿಯಾಗಬೇಕು. ಇವತ್ತು ಆರ್ಥಿಕ ಇಲಾಖೆಯನ್ನು ಯಾವ ಮಟ್ಟಕ್ಕೆ ತಂದು ನಿಲ್ಲಿಸಿದ್ದೇವೆ ಎಂದರೆ, ನಾವೆಲ್ಲರೂ ಸೇರಿಕೊಂಡು ಅದರ ಶಕ್ತಿಯನ್ನೇ ಕುಂದಿಸಿಬಿಟ್ಟಿದ್ದೇವೆ.

(ಮುಂದು)

(346) 15.03.2022/2.00/ಎಸ್‌ಕೆ-ಬಿಎನ್‌ಎಸ್ (ವೈಸ್‌ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್ (ಮುಂದು):-**

ಹಣಕಾಸು ಇಲಾಖೆ ಎಂದರೆ, L.O.C. ಬಿಡುಗಡೆ ಇಲಾಖೆಯಷ್ಟೆ. ಹಣಕಾಸು ಇಲಾಖೆ L.O.C. ಕಂಟ್ರ್ಯಾಕ್ಟರ್. ಕಂಟ್ರ್ಯಾಕ್ಟರ್ ಮತ್ತು ಹಣಕಾಸು ಇಲಾಖೆ ಸಂಬಂಧವನ್ನು ಅಷ್ಟಕ್ಕೆ ತಂದು ನಿಲ್ಲಿಸಿಬಿಟ್ಟಿದ್ದೇವೆ. ಸಂಘ-ಸಂಸ್ಥೆಗಳು, ಮಠಗಳು ಅಂತಹವರಿಗೆ ಅನುದಾನ ಕೊಡುವಂತಹದ್ದು ಈ ಹಣಕಾಸು ಇಲಾಖೆ. ಅದನ್ನು ಅಷ್ಟು ಮಾತ್ರಕ್ಕೆ ತಂದು ನಿಲ್ಲಿಸಿಬಿಟ್ಟಿದ್ದೇವೆ. ಆ ಇಲಾಖೆಯನ್ನು ನಾವು ಯಾವ ಎತ್ತರದ ಮಟ್ಟಕ್ಕೆ ನೋಡಬೇಕಾಗಿತ್ತೋ ಆ ಮಟ್ಟಕ್ಕೆ ಅದನ್ನು ನಾವು ನೋಡುತ್ತಿದ್ದೇವೆಯೇ? ಅದರ ಬಗ್ಗೆ ಎರಡು ಸದನಗಳಲ್ಲಿ ಚರ್ಚೆಗಳಾಗುತ್ತಿವೆಯೇ? ನನಗೆ ಶ್ರೀ ಬಸವಲಿಂಗಪ್ಪ ಎನ್ನುವ ಗುರು

ಇದ್ದರು. ಎರಡೂ ಸದನಗಳ deliberations ಅನ್ನು ಓದಬೇಕು. ಇವೆರಡು ಸದನಗಳಲ್ಲಿ ಯಾರು ಏನೇನು ಮಾತನಾಡಿದ್ದಾರೆಂದು ನೋಡಬೇಕು. ಇಲ್ಲಿ ಏನು ನೋಡುತ್ತೀರಿ? ಎರಡು ಸದನಗಳಲ್ಲಿ ಹಣಕಾಸಿನ ಬಗ್ಗೆ ಯಾರೂ ಮಾತನಾಡುವುದಿಲ್ಲ. ಇಲ್ಲಿ ಯಾವುದು ಬಹಳ ಪ್ರಮುಖವೋ ಮತ್ತು ಈ ರಾಜ್ಯದ ಅಭಿವೃದ್ಧಿಗೆ ಯಾವುದು ಶ್ರೇಷ್ಠವೋ, ಅಂತಹ ಇಲಾಖೆಯನ್ನೇ ನಾವು ಸರಿಯಾದ ರೀತಿಯಲ್ಲಿ ಕಾಣುತ್ತಿಲ್ಲ. ಇದರ ಬಗ್ಗೆ ಸದನದಲ್ಲಿ ಚರ್ಚೆಯಾಗುತ್ತಿಲ್ಲ. ಸುಮಾರು ಶೇಕಡ 40 ರಷ್ಟು ಅಧಿಕಾರಿಗಳ ಹುದ್ದೆಗಳು ಖಾಲಿ ಇವೆ. ಬೆಂಗಳೂರು ನಗರದಲ್ಲಿ ಒಬ್ಬ ಅಧಿಕಾರಿ ಎರಡ್ಮೂರು ಹುದ್ದೆಗಳನ್ನು ಹೇಗೆ ನಿಭಾಯಿಸುತ್ತಿದ್ದಾರೆ? 70% of the total tax is collected from in and around Bengaluru. ಇಲ್ಲಿ ಅಧಿಕಾರಿಗಳ ಕೊರತೆ ಇದೆ. ಈ ಇಲಾಖೆಯನ್ನು ಗಂಭೀರವಾಗಿ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಹೇಳಬಯಸುತ್ತೇನೆ. 2022-23ನೇ ಬಜೆಟ್ ಕೊಟ್ಟಿದ್ದೀರಿ, ನಾವು ಅದನ್ನು ಯಾವ ರೀತಿ ಓದಬೇಕು? 2022-23ರ ಬಜೆಟ್‌ನ್ನು 2021-22ರ ಬಜೆಟ್‌ನ light ಮೇಲೆ ಓದಬೇಕು. ATR (Action Taken Report) ಏನು ಕೊಟ್ಟಿದ್ದೀರಿ, ಇದನ್ನು ನೀವು ಕೊಟ್ಟಿದ್ದಲ್ಲ, ನಾವು ನೋಟಿಸ್ ಆಫೀಸ್‌ಗೆ ಹೋಗಿ ಹುಡುಕಿಕೊಂಡು ತೆಗೆದುಕೊಂಡು ಬಂದಿದ್ದು. ATR ಅನ್ನು ಯಾರಿಗಾದರೂ ಕೊಟ್ಟಿದ್ದಾರೆಯೇ? ATR ನಲ್ಲಿ ಏನು ಬರೆದಿದ್ದೀರಿ? ಆದೇಶವನ್ನು ಹೊರಡಿಸಲಾಗಿದೆ; ಇದನ್ನು ಮಾಡುವುದಕ್ಕೆ ಒಂದು ವರ್ಷ ಬೇಕಾಯಿತೇ? ಇದರಲ್ಲಿ ಕ್ರಮ ವಹಿಸಲಾಗಿದೆ, ಸಮಿತಿ ರಚಿಸಲಾಗಿದೆ, ಪರಿಶೀಲನೆಯಲ್ಲಿದೆ, ಕೊನೆಗೆ ಕೈಬಿಡಲಾಗಿದೆ, ಕಾರ್ಯಕ್ರಮವನ್ನು ರದ್ದು ಪಡಿಸಲಾಗಿದೆ. ATR ಎಂದರೆ ಇದೇನಾ ಸ್ವಾಮಿ? I urge upon the Government, finance department to withdraw this. It is a shame. Is it an ATR? ಇಲ್ಲಿ ಎಷ್ಟು ಜನರಿದ್ದೇವೆ, ಇಲ್ಲಿ ಯವ್ಯಾವ ತರಹ ಜನರಿದ್ದಾರೆ. ನಾವು ಏನೆಲ್ಲಾ, ಓದಿಕೊಂಡು ಬಂದಿದ್ದೇವೆ, ನಮಗೆ ಏನೆಲ್ಲಾ ಅನುಭವ ಇದೆ. ಯಾರೋ ಬರೆದಿರುವಂತಹದ್ದನ್ನು ತಾವು ತೆಗೆದುಕೊಂಡು ಬಂದಿರುವುದು. ಇದನ್ನು ಪ್ರಧಾನ ಕಾರ್ಯದರ್ಶಿಯವರು ಬರೆದಿದ್ದಾರೆಯೇ ಅಥವಾ ಕಾರ್ಯದರ್ಶಿಯವರು ಬರೆದಿದ್ದಾರೆಯೇ, ಯಾರೋ ದ್ವಿತೀಯ ದರ್ಜೆ ಸಹಾಯಕ ಬರೆದಿರುವುದನ್ನು ನಮಗೆ ಅದನ್ನು ತೆಗೆದುಕೊಂಡು ಬಂದು ಕೊಡುತ್ತಿದ್ದೀರಿ. ಇಡೀ ಸದನಕ್ಕೆ ಅವಮಾನ ಮಾಡುತ್ತಿದ್ದೀರಿ. ಯಾರೋ ದ್ವಿತೀಯ ದರ್ಜೆ ಸಹಾಯಕರನ್ನು ಕೂರಿಸಿ, ಬರೆಸಿರುವುದನ್ನು ATR

ಎಂದು ತಿಳಿದುಕೊಳ್ಳುತ್ತೀರಲ್ಲಾ, ಹಣಕಾಸು ಇಲಾಖೆಯವರಿಗೆ ನಾಚಿಕೆಯಾಗುವುದಿಲ್ಲವೇ? ಯಾವ important department?

**ವೈಸ್ ಛೇರ್ಮನ್:–** ತಾವು ಎಷ್ಟು ಹೊತ್ತು ಮಾತನಾಡುತ್ತೀರಿ?

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್:–** ಮಾನ್ಯ ಸಭಾಪತಿಯವರೇ, ನನ್ನ ಮಾತನ್ನು ಬೇಗ ಮುಗಿಸಿಬಿಡುತ್ತೇನೆ. ನಾನು ದೊಡ್ಡ ಬೋರ್‌ವೆಲ್ ತರಹ ಹೆಚ್ಚು ಮಾತನಾಡಿಲ್ಲ. , ಒಂದು ಸಣ್ಣ ಸ್ಟ್ರೋನಲ್ಲಿಯೇ ನನ್ನ ಮಾತನ್ನು ಮುಗಿಸಿಬಿಡುತ್ತೇನೆ.

**ವೈಸ್ ಛೇರ್ಮನ್:–** ತಾವು ಮಾತನಾಡುವುದಾದರೆ, ಭೋಜನ ವಿರಾಮದ ನಂತರ ಮಾತನಾಡಿ.

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್:–** ಮಾನ್ಯ ಸಭಾಪತಿಯವರೇ, ನನ್ನ ಮಾತನ್ನು ಹತ್ತು ನಿಮಿಷದಲ್ಲಿ ಮುಗಿಸಿಬಿಡುತ್ತೇನೆ. ಈಗ ಏನಾಗಿದೆ ಎಂದರೆ, ' by the people, of the people, for the people' ಹೋಗಿ, ' by the bureaucrats, of the bureaucrats, for the bureaucrats' ಆಗಿದೆ. ಎಲ್ಲಾ ಅಧಿಕಾರಶಾಹಿ. ಅಲ್ಲಿಗೆ ಎಲ್ಲರೂ ಹೋಗಿ ದಮ್ಮಯ್ಯ ಎನ್ನಬೇಕು. No, ಮಾನ್ಯ ದೇವರಾಜ ಅರಸುರವರ ಕಾಲದಿಂದಲೂ ನಾವು ಇಲ್ಲಿ ಇದ್ದಂತಹವರು. ಸಣ್ಣ ಕಾಗದದಲ್ಲಿ ಬರೆದು ಹೋಗಿ ಬಿಟ್ಟರೆ, ವಿಷಯ ಹರಿಡಿ ಹೋಗಿಬಿಡುತ್ತಿತ್ತು. ಛೇ, ಛೇ, ಛೇ, ನಾವು ಯಾವ ಮಟ್ಟದಲ್ಲಿದ್ದೇವೆ. ಮೊದಲು ಪ್ರಮುಖವೆಂದರೆ, ಈ ರಾಜ್ಯದ ಅಭಿವೃದ್ಧಿ, ರಾಜ್ಯದ ಆಡಳಿತದ ಬಲದ ಮೇಲೆ ಹೋಗುತ್ತದೆ. ರಾಜ್ಯದ ಆಡಳಿತವೇ ಸರಿಯಿಲ್ಲವೆಂದರೆ, ರಾಜ್ಯದ ಅಭಿವೃದ್ಧಿ ಎಲ್ಲಿ ಆಗುತ್ತದೆ? ನೀವು ಅಭಿವೃದ್ಧಿಯನ್ನು ಎಲ್ಲಿ ಹುಡುಕಿಕೊಂಡು ಹೋಗುತ್ತೀರಾ? ಮಾನ್ಯ ಬಸವರಾಜ ಬೊಮ್ಮಾಯಿಯವರಾಗಲೀ ಅಥವಾ ಯಾರಾದರಾಗಲೀ, ಬಹಳ ಅನುಭವ ಇರುವಂತಹವರು. ನಾವು ಎಲ್ಲಿಗೆ ಬಂದು ನಿಂತುಕೊಂಡು ಬಿಟ್ಟಿದ್ದೇವೆಂದು ಹೇಳಿದರೆ, ನಾವು ರಾಜಕಾರಣಿಗಳು, ಹೇಗೆ ಬೇಕಾದರೂ ಮಜಾ ಮಾಡುವುದಕ್ಕೆ ಬಂದು ನಿಂತುಕೊಂಡು ಬಿಟ್ಟಿದ್ದೇವೆ. ಈ ರಾಜ್ಯದಲ್ಲಿ ಎಷ್ಟು ಜನ ಮುಖ್ಯಮಂತ್ರಿಗಳಾಗಿ ಹೋದರು. ಪುಣ್ಯಾತ್ಮರಾದ ಶ್ರೀ ಕೆಂಗಲ್ ಹನುಮಂತಯ್ಯನವರು

ವಿಧಾನಸೌಧವನ್ನು ಕಟ್ಟಿದಂತಹವರು. ಇಲ್ಲಿ ಎಂತೆಂಥವರು ಬಂದು ಹೋದರು. ಶ್ರೀ ದೇವರರಾಜ್ ಅರಸ್‌ರವರು ಈ ರಾಜ್ಯಕ್ಕೆ "ಕರ್ನಾಟಕ" ಎಂದು ನಾಮಕರಣ ಮಾಡಿದಂತಹವರು. ಅವರು ಆಡಳಿತದಲ್ಲಿ ಬಿಗಿಯನ್ನು ತಂದಂತಹವರು. ಇವತ್ತು ಯಾವ ಮಟ್ಟಿಗೆ ಬಂದಿದ್ದೇವೆ ಎಂದರೆ, ನಾವು vote ನ ಜನ. ನಾವು ಯಾವ ಮಟ್ಟಕ್ಕೆ ಬಂದಿದ್ದೇವೆ ಎಂದರೆ, ನನ್ನನ್ನು ಇನ್ನೊಮ್ಮೆ ಬಾರಿ ಮುಖ್ಯಮಂತ್ರಿಯನ್ನಾಗಿ ಮಾಡಿದರೆ, ನಿಮಗೆ 10 ಕೆ.ಜಿ. ಅಕ್ಕಿ ಕೊಡುತ್ತೇನೆ. ನಿಮ್ಮ ಕನಸು 10 ಕೆ.ಜಿ. ಅಕ್ಕಿಯೇ? ಈ ರಾಜ್ಯವನ್ನು ಬದಲಾವಣೆ ಮಾಡಿ ಸುಧಾರಣೆ ಮಾಡುತ್ತೇನೆ..... ಒಬ್ಬ ಮುಖ್ಯಮಂತ್ರಿಯಾಗಿದ್ದಂತಹವರು. ನನ್ನನ್ನು ಮತ್ತೆ ಮುಖ್ಯಮಂತ್ರಿಯನ್ನಾಗಿ ಮಾಡಿದರೆ, 10 ಕೆ.ಜಿ. ಅಕ್ಕಿ ಕೊಡುತ್ತೇನೆ ಎಂದರೆ, ಏನ್ರಿ ಇದು? ಮುಖ್ಯಮಂತ್ರಿಯಾಗಿದ್ದಂತಹವರು ನಾನು ಹದಿಮೂರು ಸಾರಿ ಬಜೆಟ್ ಮಂಡನೆ ಮಾಡಿದ್ದೇನೆ'. ಇನ್ನೊಬ್ಬರು ನಾನು ನಾಲ್ಕು ಬಾರಿ ಬಜೆಟ್ ಮಂಡನೆ ಮಾಡಿದ್ದೇನೆ ಎಂದರೆ ನೀವು ಕೊಟ್ಟಿರುವಂತಹ ಬಜೆಟ್‌ಗಳು ಎಲ್ಲಿಗೆ ಹೋಯಿತು ಮತ್ತು ಏನಾದವು? ಅದರಿಂದ ಜನರಿಗೆ ಏನು ಸಿಕ್ಕಿತು? ನಿಜ, ಬಹಳ ಜನರು ಮುಖ್ಯಮಂತ್ರಿಗಳಾಗಿ ಹೋಗಿದ್ದಾರೆ. ಈ ಸದನದಲ್ಲಿ ಕನ್ನಡ ಮತ್ತು ಸಂಸ್ಕೃತಿ ಸಚಿವರೇ ಇಲ್ಲ. ಕರ್ನಾಟಕದಲ್ಲಿ, ಏಕೆಂದರೆ ಕನ್ನಡದ ಆಡಳಿತದ ನಾಡು ಗುಡಿಯಲ್ಲಿ ನಾನು ನಿಂತುಕೊಂಡು ಇಲ್ಲಿ ಮಾತನಾಡುತ್ತಿದ್ದೇನೆ. ಶ್ರೀ ಕೆಂಗಲ್ ಹನುಮಂತಯ್ಯನವರು ಕಟ್ಟಿರುವ ಕನ್ನಡದ ಆಡಳಿತದ ನಾಡು ಗುಡಿಯಲ್ಲಿ ಕನ್ನಡ ಭಾಷೆಯನ್ನು ಏನು ಮಾಡುತ್ತೀದ್ದೇವೆ. ಕನ್ನಡ ಭಾಷೆಯನ್ನು ಎಷ್ಟರ ಮಟ್ಟಿಗೆ ಕೆಳಗೆ ಇಳಸುತ್ತಿದ್ದೇವೆ. ಕನ್ನಡ ಭಾಷೆಯನ್ನು ಹೇಗೆ ಕೊಂದೂಕುತ್ತಿದ್ದೇವೆ. ಹೇಯ್, 'ಧಮ್ ಐತಾ' ಎಂದು ಕೇಳುತ್ತಾರೆ. ಇದು ನಾವು ಮಾತನಾಡುವ ಭಾಷೆ ಇದೇನ್ರಿ? ಈ ರಾಜ್ಯದಲ್ಲಿ ಆಡಳಿತ ಮಾಡುವಂತಹವರು ಮಾತನಾಡುವ ಭಾಷೆ ಇದೇನಾ. ದಮ್ಮಿದೆಯಾ? ಟಗರು ಬಂದು ಗುಮ್ಮಿ ಬಿಟ್ಟಿತು. ಥೇ, ಥೇ, ಏನ್ರಿ ಈ ರೀತಿಯ ಭಾಷೆಯನ್ನು ಯಾವ ಹಳ್ಳಿಯ ಜನರು ಸಹ ಮಾತನಾಡುವುದಿಲ್ಲ. ಈ ತರಹ ಭಾಷೆಯನ್ನು ಯಾವ ಹಳ್ಳಿಗಳಲ್ಲಿಯೂ ಕೂಡ ಮಾತನಾಡುವುದಿಲ್ಲ. ದಯವಿಟ್ಟು, ಇದನ್ನು ಸರಿಪಡಿಸಿಕೊಳ್ಳಬೇಕು. ಒಬ್ಬರು ಮುಖ್ಯಮಂತ್ರಿಯಾಗಿದ್ದಂತಹವರು ತನ್ನದೇ ದೇಶದ ಪ್ರಧಾನಿ ಮಂತ್ರಿಯವರನ್ನು "ಏಯ್, ಮೋದಿ, useless fellow ' ಎಂದು ಅಡ್ರೆಸ್ ಮಾಡುತ್ತಾರೆ. ಓಹೋ! ಏನ್ರಿ ಇದು, ಜಗತ್ತಿನ ಅತ್ಯಂತ ಎತ್ತರದ ಜನತಂತ್ರ ವ್ಯವಸ್ಥೆಯನ್ನು ಅಪ್ಪಿ-ಒಪ್ಪಿ ಆಡಳಿತ ಮಾಡುತ್ತಿರುವಂತಹ ಮಾನ್ಯ ಪ್ರಧಾನ

ಮಂತ್ರಿಯವರನ್ನು ಒಂದು ರಾಜ್ಯದ ಮುಖ್ಯಮಂತ್ರಿಯಾಗಿದ್ದಂಥವರು ಈ ರೀತಿ ಮಾತನಾಡುತ್ತಾರೆ. is this the way to address our Prime Minister? ಇದೇನಾ. ರಾಜಕಾರಣ ಇದಲ್ಲ ಬೇರೆ. Prime Minister is our Prime Minister. "ಯಾರ್ರಿ ಮೋದಿ, 2001 ಅಕ್ಟೋಬರ್ ತನಕ ಅಡ್ರೆಸ್ ಇಲ್ಲ; ಪ್ರಚಾರಕ; ಮೂರು ಬಾರಿ ಮುಖ್ಯಮಂತ್ರಿ; ಗುಜರಾತಿನ ಪಟೇಲರು, ಅಂತಹ ಪಟೇಲ್‌ರನ್ನು ಕಟ್ಟಿಹಾಕಿ, ಮೂರು ಬಾರಿ ಮುಖ್ಯಮಂತ್ರಿಯಾದಂತಹವರು. ಇದೇನು ಹುಡಗಾಟನಾ? ನಾನು ಒಂದೇ ಬಾರಿ ಮುಖ್ಯಮಂತ್ರಿಯಾಗಿ, 36,000 ಮತಗಳಿಂದ ಕೆಳಗೆ ಬಿದ್ದು, ಏಯ್ ಮೋದಿ, no, this is not the way to address our Prime Minister in democratic India. ನಮ್ಮ ಭಾಷೆಗಳನ್ನು ಎಲ್ಲಿಗೆ ತೆಗೆದುಕೊಂಡು ಹೋಗುತ್ತಿದ್ದೇವೆ. ಮಾನ್ಯ ಮೋದಿಯವರು ಎರಡು ಬಾರಿ ಪ್ರಧಾನಿಮಂತ್ರಿಯಾದವರು. ನೆಹರುರವರ ಕುಟುಂಬವನ್ನು ಬಿಟ್ಟರೆ ಎರಡು ಬಾರಿ ಪ್ರಧಾನಿ ಮಂತ್ರಿ ಯಾರ್ರಿ ಅಗಿದ್ದಾರೆ? that too from backward class? ಮಾನ್ಯ ಮನ್‌ಮೋಹನ್ ಸಿಂಗ್‌ರವರು ಎರಡು ಬಾರಿ ಪ್ರಧಾನ ಮಂತ್ರಿಯಾಗಿದ್ದಂತಹವರು. ಏಕೆಂದರೆ ನನ್ನದು ಪೂರ್ವಾಶ್ರಮ ಅಲ್ಲೆ. ಮಾನ್ಯ ಮನ್‌ಮೋಹನ್ ಸಿಂಗ್‌ನಂತಹ ಪ್ರಧಾನ ಮಂತ್ರಿ ಮತ್ತು ಹಣಕಾಸಿನ ಮಂತ್ರಿ ಮತ್ತೆ ಬರುತ್ತಾರೋ ಇಲ್ಲವೋ ಗೊತ್ತಿಲ್ಲ. ದಿವಂಗತರಾದ ಶ್ರೀ ಕೆಂಗಲ್ ಹನುಮಂತಯ್ಯನವರು ಈ ರಾಷ್ಟ್ರದಲ್ಲಿ ಮತ್ತೆ ಹುಟ್ಟುತ್ತಾರೋ ಇಲ್ಲವೋ ಗೊತ್ತಿಲ್ಲ. ದಿವಂಗತರಾದ ಶ್ರಿ ದೇವರಾಜ್ ಅರಸ್‌ರವರು ಮತ್ತೆ ಈ ರಾಷ್ಟದಲ್ಲಿ ಹುಟ್ಟುತ್ತಾರೋ ಇಲ್ಲವೋ ಗೊತ್ತಿಲ್ಲ. ದಿವಂಗತರಾದ ಶ್ರೀಮತಿ ಇಂದಿರಾ ಗಾಂಧಿಯವರು ಮತ್ತೆ ಈ ರಾಷ್ಟದಲ್ಲಿ ಹುಟ್ಟುತ್ತಾರೋ ಇಲ್ಲವೋ ಗೊತ್ತಿಲ್ಲ. ಈ ರಾಷ್ಟದಲ್ಲಿ ನಾವು ಕೂಡ ಹುಟ್ಟಿದ್ದೇವೆ. ಶ್ರೀ ನರೇಂದ್ರ ಮೋದಿಯವರು ಮೂರು ಬಾರಿ ಗುಜರಾತಿನ ಮುಖ್ಯಮಂತ್ರಿಯಾಗಿ, ಎರಡು ಬಾರಿ ಪ್ರಧಾನ ಮಂತ್ರಿಯಾಗಿದ್ದಾರೆ. ನಾವು ಮತ್ತು ನಮ್ಮ ಸ್ನೇಹಿತರು ಬಿ.ಜೆ.ಪಿ ಪಕ್ಷದಲ್ಲಿದ್ದೇವೆ. ಪ್ರಧಾನ ಮಂತ್ರಿಯವರಾದ ಮಾನ್ಯ ನರೇಂದ್ರ ಮೋದಿಯವರು ಒಂದು ಸಾರಿ ಕೂಡ ಹಿಂದುತ್ವದ ಬಗ್ಗೆ ಮಾತನಾಡಲಿಲ್ಲ. "ಸಬ್ ಕಾ ಸಾಥ್, ಸಬ್ ಕಾ ವಿಕಾಸ್, ಸಬ್ ಕಾ ವಿಶ್ವಾಸ್". ಅವರು ಹಿಂದುತ್ವದ ಬಗ್ಗೆ ಎಲ್ಲಿಯೂ ಕೂಡ ಮಾತನಾಡಲಿಲ್ಲ.

(347) 15-03-2022 2.10 ಟಿಸಿಹೆಚ್-ಕೆಎಸ್ (ವೈಸ್ ಚೇರ್ಮನ್‌ರವರ ಉಪಸ್ಥಿತಿ)

**ಶ್ರೀ ಅಡಗೂರ್ ಹೆಚ್.ವಿಶ್ವನಾಥ್ (ಮುಂದು):-**

ಮಾನ್ಯ ಪ್ರಧಾನ ಮಂತ್ರಿಗಳಾದ ಸನ್ಮಾನ್ಯ ನರೇಂದ್ರ ಮೋದಿಯವರು ಮುಸ್ಲಿಂ ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ ಎರಡು ಕೋಟಿ ರೂಪಾಯಿಗಳನ್ನು ವಿದ್ಯಾರ್ಥಿ ವೇತನ ಕೊಡಿಸಿದ್ದಾರೆ. ಅವರು ಯಾರಿಗೂ against ಅಲ್ಲ. ಶ್ರೀ ಬಿ.ಕೆ.ಹರಿಪ್ರಸಾದ್ ಮತ್ತು ನಾವೆಲ್ಲರೂ ಈ ಹಿಂದೆ ಕಾಂಗ್ರೆಸ್ ಪಕ್ಷದಲ್ಲಿ ಇದ್ದವರು. ಈ ಹಿಂದೆ ಕಾಂಗ್ರೆಸ್‌ನವರ ಕೈಗೆ ಒಂದು ಮೈಕ್ ಕೊಟ್ಟರೆ, ಹರಿಜನ-ಗಿರಿಜನರೇ, ಹಿಂದುಳಿದ ವರ್ಗದವರೇ ಮತ್ತು ಅಲ್ಪಸಂಖ್ಯಾತರೇ ಎಂದು ಮಾತನಾಡುತ್ತಿದ್ದೆವು. ಆದರೆ ಈಗ ಆ ರೀತಿ ಎಲ್ಲೂ ಹೇಳುವುದಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾವು ಈಗಲೂ ಕೂಡ ಮಾತನಾಡುತ್ತೇವೆ. ಆದರೆ ತಾವ್ಯಾರೂ ಮಾತನಾಡುವುದಿಲ್ಲ ಅಷ್ಟೆ.

**ಶ್ರೀ ಅಡಗೂರ್ ಹೆಚ್.ವಿಶ್ವನಾಥ್:-** ಮಾನ್ಯ ಸಭಾಪತಿಯವರೇ, ಹಾಗಾಗಿ, ಪ್ರಧಾನ ಮಂತ್ರಿಗಳಾದ ಸನ್ಮಾನ್ಯ ನರೇಂದ್ರ ಮೋದಿಯವರು microscopic backward ತೇಲಿ... ಅವರು ಜಾತಿ ಹೆಸರು ಹೇಳಿಕೊಂಡು ಪ್ರಧಾನಮಂತ್ರಿಯಾಗಿಲ್ಲ. Prime Minister Narendra Modi is a common man. He is the pride of Indian democracy. ಅವರು ಭಾರತದ ಜನತಂತ್ರ ವ್ಯವಸ್ಥೆಯ ಹೆಮ್ಮೆ. ಅಂತಹವರೊಬ್ಬರು ಈ ದೇಶದಕ್ಕೆ ಪ್ರಧಾನ ಮಂತ್ರಿಗಳಾಗಿದ್ದಾರೆಂದರೆ ಇದೇನು ಹುಡುಗಾಟಿಕೆಯೇ. ಇದು ಎಷ್ಟು ಜನಕ್ಕೆ ಸಾಧ್ಯವಾಗುತ್ತದೆ?

**ಶ್ರೀ ಪ್ರಕಾಶ್ ಕೆ.ರಾಥೋಡ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಅಡಗೂರ್ ಹೆಚ್.ವಿಶ್ವನಾಥ್ ರವರು ಬಜೆಟ್ ಮೇಲೆ ಮಾತನಾಡುವುದನ್ನು ಬಿಟ್ಟು ಪ್ರಧಾನ ಮಂತ್ರಿಗಳ ಬಗ್ಗೆ ಮಾತನಾಡುತ್ತಿದ್ದಾರೆ.

**ವೈಸ್‌ಚೇರ್ಮನ್:–** ಅವರು ಪಂಡಿತ್ ಜವಾಹರ್‌ಲಾಲ್ ನೆಹರು ಹಾಗೂ ಶ್ರೀಮತಿ ಇಂದಿರಾ ಗಾಂಧಿಯವರ ಬಗ್ಗೆಯೂ ಹೊಗಳಿದರು. ಎಲ್ಲರನ್ನೂ ಹೊಗಳಿದ್ದಾರೆ. ಪ್ರಕಾಶ್ ಕೆ.ರಾಥೋಡ್ ರವರೇ ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಅಡಗೂರ್ ಹೆಚ್.ವಿಶ್ವನಾಥ್:–** ಮಾನ್ಯ ಸಭಾಪತಿಯವರೇ, ನಮ್ಮ ಮಗು ನಮ್ಮ ಮೇಡಂ ಗಿಂತಲೂ ಬೆಳ್ಳಗಿದೆಯೆಂದು ನಾನು ಆಗಲೇ ಹೇಳಿದ್ದೇನೆ. ಅದು ನಮ್ಮ ಹತ್ತಿರ ಇರದೇ ನಿಮ್ಮ ಹತ್ತಿರ ಬಂದಾಗ ಅದು ಕಿಟಾರನೆ ಕಿರುಚಿಕೊಳ್ಳುತ್ತದೆಂದು ಮೊದಲೇ ಹೇಳಿದ್ದೇನೆ. ಯಾಕೆ ಅಂಥದ್ದು ಏನಾಯಿತು ನಿಮಗೆ ನಾನು ಮೊದಲೇ ಹೇಳಲಿಲ್ಲವೇ? ಈ ದೇಶದಲ್ಲಿ ಶ್ರೀಮತಿ ಇಂದಿರಾಗಾಂಧಿ, ಶ್ರೀ ಡಿ .ದೇವರಾಜ ಅರಸು, ಶ್ರೀ ಕೆಂಗಲ್ ಹನುಮಂತಯ್ಯ ನವರಿಗಿಂತ ಬೇರೆ ಹೆಸರು ಹೇಳಬೇಕೇ? I am very sorry. ನಾವೆಲ್ಲಾ ಜೊತೆಯಲ್ಲಿ ಕೆಲಸ ಮಾಡಿರತಕ್ಕಂಥವರು. No, I am very sorry.

**ವೈಸ್ ಚೇರ್ಮನ್:–** ಮಾನ್ಯ ಶ್ರೀ ಪ್ರಕಾಶ್ ಕೆ.ರಾಥೋಡ್‌ರವರೇ ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, I am also very sorry. Let the Hon'ble member speak what he wanted to speak.

**(ಗೊಂದಲ)**

**ವೈಸ್ ಚೇರ್ಮನ್:–** ಮಾನ್ಯ ಶ್ರೀ ಪ್ರಕಾಶ್ ಕೆ.ರಾಥೋಡ್ ರವರೇ ಅವರು ಎಲ್ಲರ ಹೆಸರನ್ನೂ ಹೇಳಿದ್ದಾರೆ. ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ನಾವು ಕೂಡ ಮಾತನಾಡುತ್ತೇವೆ.

**ವೈಸ್ ಚೇರ್ಮನ್:–** ಮಾನ್ಯ ಅಡಗೂರ್ ಹೆಚ್.ವಿಶ್ವನಾಥ್ ರವರೇ, ತಾವು ಬೇಗ ಮಾತನಾಡಿ ಮುಗಿಸಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಅಡಗೂರ್ ಹೆಚ್.ವಿಶ್ವನಾಥ್ ರವರು ಒಳ್ಳೆಯ ವಿಚಾರಗಳನ್ನು ಹೇಳುತ್ತಿದ್ದಾರೆ. ಅವರ ಪ್ರಧಾನ ಮಂತ್ರಿಗಳು ಪ್ರತಿ ವರ್ಷ ಎರಡು ಕೋಟಿ ಜನರಿಗೆ ಉದ್ಯೋಗವನ್ನು ಕೊಡುತ್ತೇವೆಂದು ಹೇಳಿದ್ದರು. ಅದರ ಬಗ್ಗೆಯೂ ಕೂಡ ಸ್ವಲ್ಪ ಹೇಳಿದರೆ ನಮಗೆ ಸಹಾಯವಾಗುತ್ತದೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ವಿಧಾನ ಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಅಡಗೂರ್ ಹೆಚ್.ವಿಶ್ವನಾಥ್ ರವರೇ, ನಾನು ನಿಮಗೆ ದಯವಿಟ್ಟು ಕೈ ಮುಗಿದು ಕೇಳಿಕೊಳ್ಳುತ್ತೇನೆ. ನೀವು ಮೋದಿಯವರನ್ನು ಹೊಗಳುವುದಕ್ಕೆ ಹೋಗಬೇಡಿ.

**ಶ್ರೀ ಅಡಗೂರ್ ಹೆಚ್.ವಿಶ್ವನಾಥ್:–** ಮಾನ್ಯ ಸಭಾಪತಿಯವರೇ, ಮಾನ್ಯ ಲಕ್ಷ್ಮಣ ಸಂಗಪ್ಪ ಸವದಿಯವರೇ ನಾನು ಇರುವ ವಿಚಾರವನ್ನು ಹೇಳುತ್ತಿದ್ದೇನೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:–** ಮಾನ್ಯ ಸಭಾಪತಿಯವರೇ ಮಾನ್ಯ ಅಡಗೂರ್ ಹೆಚ್.ವಿಶ್ವನಾಥ್ ರವರೇ, ನೀವು ಮೋದಿಯವರನ್ನು ಹೊಗಳಿದರೆ ಕೆಲವೊಬ್ಬರಿಗೆ ಬೆಂಕಿ ಹಚ್ಚಿದಂತೆ ಆಗಿಬಿಡುತ್ತದೆ. ದಯವಿಟ್ಟು ತಾವು ಆ ಬೆಂಕಿಯನ್ನು ಹಚ್ಚುವುದಕ್ಕೆ ಹೋಗಬೇಡಿ.

**(ಗೊಂದಲ)**

**ವೈಸ್ ಚೇರ್ಮನ್:–** ಮಾನ್ಯ ಅಡಗೂರ್ ಹೆಚ್.ವಿಶ್ವನಾಥ್‌ರವರೇ, ತಾವು ಮಾತನಾಡಿ ಮುಗಿಸಿ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸನ್ಮಾನ್ಯ ನರೇಂದ್ರ ಮೋದಿಯವರು ಪ್ರಧಾನ ಮಂತ್ರಿಯಾಗುವುದಕ್ಕೆ ಮೊದಲೇ ಚುನಾವಣಾ ಪ್ರಣಾಳಿಕೆಯಲ್ಲಿ ಏನೇನು ಹೇಳಿದ್ದಾರೆ ಹಾಗೂ ಕಳೆದ 8 ವರ್ಷಗಳಿಂದ ಅವರು ಏನೇನು ಮಾಡಿದ್ದಾರೆಂದು ಅದರ ಬಗ್ಗೆಯೂ ಹೇಳಲಿ.

**ಶ್ರೀ ಅಡಗೂರ್ ಹೆಚ್.ವಿಶ್ವನಾಥ್:–** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡ ರವರೇ, ನಾನು ಮೊದಲೇ ಹೇಳಿದ್ದೇನೆ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ನಾಡಿನ ಪ್ರಧಾನ ಮಂತ್ರಿಯವರಿಗೆ ಏನು ಗೌರವ ಕೊಡಬೇಕೆಂದು ತಮ್ಮ ಮಾತುಗಳ ಮುಖಾಂತರ ಚೆನ್ನಾಗಿ ಹೇಳಿದ್ದಾರೆ. ಒಂದು ವಿಚಾರವನ್ನು ತಾವು ಜ್ಞಾಪಕ ಮಾಡಿಕೊಳ್ಳಬೇಕು. ಅವರು backward community ಯಿಂದ ಮಾನ್ಯ ಪ್ರಧಾನ ಮಂತ್ರಿಗಳು ಬಂದಿದ್ದಾರೆಂದು ಹೇಳಿದ್ದೀರಿ. ಆದರೆ ಇವತ್ತಿನ ದಿವಸ ಬಹಳ ನೋವಿನ ಒಂದು ಸಂಗತಿ ನಮ್ಮ ಮುಂದಿದೆ. ಇಡೀ ನಾಡಿನಲ್ಲಿ ಇವತ್ತಿನ ದಿವಸ ಯಾವ backward community ಯ ಹೆಣ್ಣುಮಕ್ಕಳಿಗೆ ಅಧಿಕಾರ ಕೊಟ್ಟು, ಆ ಹೆಣ್ಣುಮಕ್ಕಳು ತಲೆ ಎತ್ತಿ ತಿರುಗುವಂತೆ ಮಾಡಿದಂತಹ ಶ್ರೀ ನಾರಾಯಣಗುರು ರವರ ಸ್ತಬ್ಧಚಿತ್ರವನ್ನು ಇತ್ತೀಚೆಗೆ ಅಲ್ಲಿ ಕೆಲವು ಅಧಿಕಾರಿಗಳು ರಿಜೆಕ್ಟ್ ಮಾಡಿದ್ದರಲ್ಲಾ, ಆ ಅಧಿಕಾರಿಗಳಿಗೆ ಸನ್ಮಾನ್ಯ ಪ್ರಧಾನ ಮಂತ್ರಿಯವರು ಏನು punishment ಕೊಟ್ಟರು ಎನ್ನುವುದನ್ನು ದಯಮಾಡಿ ಈ ಸದನಕ್ಕೆ ಹೇಳಬೇಕಾಗುತ್ತದೆ.

**ಶ್ರೀ ಅಡಗೂರ್ ಹೆಚ್.ವಿಶ್ವನಾಥ್:–** ಮಾನ್ಯ ಸಭಾಪತಿಯವರೇ, ಈಗ ಯಾವುದೇ ಸರ್ಕಾರಗಳು ಹೇಳಿದ್ದೆಲ್ಲಾ ಕಾರ್ಯಗತವಾಗುವುದಿಲ್ಲ. ಯಾವುದೇ ಸರ್ಕಾರಗಳು . . .

**ವೈಸ್ ಚೇರ್ಮನ್:–** ಮಾನ್ಯ ಎಸ್.ಎಲ್.ಭೋಜೇಗೌಡರವರೇ ತಾವು ದಯವಿಟ್ಟು ಕುಳಿತುಕೊಳ್ಳಿ. ಅವರು ಮಾತನಾಡುತ್ತಾರೆ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ...

**(ಗೊಂದಲ)**

**ವೈಸ್ ಚೇರ್ಮನ್:–** ಮಾನ್ಯ ಎಸ್.ಎಲ್.ಭೋಜೇಗೌಡರವರೇ ತಾವು ದಯವಿಟ್ಟು ಕುಳಿತುಕೊಳ್ಳಿ. ತಾವು ಮಾತನಾಡುವಾಗ ಮಾತನಾಡಿ.

**ಶ್ರೀ ಅಡಗೂರ್ ಹೆಚ್.ವಿಶ್ವನಾಥ್:–** ಮಾನ್ಯ ಸಭಾಪತಿಯವರೇ, ಯಾವುದೇ ನಾಯಕರು, ಯಾವುದೇ ಪ್ರಧಾನ ಮಂತ್ರಿ ಹಾಗೂ ಮುಖ್ಯಮಂತ್ರಿಯವರು ಹೇಳಿದ್ದೆಲ್ಲಾ ನೂರಕ್ಕೆ ನೂರರಷ್ಟು ಕಾರ್ಯಗತವಾಗುವುದಿಲ್ಲ. ಅದಕ್ಕೆ ನಾವೆಲ್ಲಾ ಕಾರಣರಿರುತ್ತೇವೆ. ಸಾಧನೆ ಬೇರೆ. ಆದರೆ ಶ್ರೀ ನಾರಾಯಣ ಗುರುಗಳದ್ದು ನೀವು ತಿಳಿದುಕೊಂಡಷ್ಟು ಇಲ್ಲ. Do not politicize Sree Narayana Guru.

**ವೈಸ್ ಚೇರ್ಮನ್:–** ಯಾವುದೂ ಕಡತಕ್ಕೆ ಹೋಗಬಾರದು. ಮಾನ್ಯ ಅಡಗೂರ್ ಹೆಚ್.ವಿಶ್ವನಾಥ್ ರವರೇ ತಾವು ತಮ್ಮ ಮಾತನ್ನು ಮುಗಿಸಿ.

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ಆದೇಶದಂತೆ ಮಾನ್ಯ ಶಾಸಕರುಗಳಾದ ಶ್ರೀ ಎಸ್.ಎಲ್‌ಭೋಜೇಗೌಡ ಹಾಗೂ ಶ್ರೀ ಎನ್.ರವಿಕುಮಾರ್‌ರವರು ಮಾತನಾಡಿದ್ದನ್ನು ದಾಖಲಿಸಲಿಲ್ಲ)**

**(ಗೊಂದಲ)**

**ಶ್ರೀ ಅಡಗೂರ್ ಹೆಚ್.ವಿಶ್ವನಾಥ್:–** ಮಾನ್ಯ ಸಭಾಪತಿಯವರೇ, ಬಹಳ ಪ್ರಮುಖವಾಗಿ ಸನ್ಮಾನ್ಯ ಮುಖ್ಯಮಂತ್ರಿಗಳು ಈ ವರ್ಷದ ಬಜೆಟ್‌ನಲ್ಲಿ ಬಹಳ ದೊಡ್ಡ ದೊಡ್ಡ ಕಾರ್ಯಕ್ರಮಗಳನ್ನು ಹೇಳಿದ್ದಾರೆ. ಗ್ರಾಮಾಂತರ ಪ್ರದೇಶದ ಸುಮಾರು 95 ಲಕ್ಷ ಹಳ್ಳಿಗಳಿಗೆ ಸುಮಾರು 30 ಸಾವಿರ ಕೋಟಿ ರೂಪಾಯಿಗಳ "ಜಲ ಜೀವನ್ ಮಿಷಿನ್" (JJM) ಯೋಜನೆಯನ್ನು ಜಾರಿಗೆ ತಂದರು. ಬಹುಶಃ ಇವತ್ತಿನ ದಿವಸ ಕರ್ನಾಟಕದಲ್ಲಿ ಆ ಯೋಜನೆ ಬಹಳ ದೊಡ್ಡ ಕಾರ್ಯಕ್ರಮವಾಗಿತ್ತು. ಸುಮಾರು 30 ಸಾವಿರ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಗ್ರಾಮಾಂತರ ಪ್ರದೇಶದ ಸುಮಾರು 95 ಲಕ್ಷ ಹಳ್ಳಿಗಳಿಗೆ ಶುದ್ಧಕುಡಿಯುವ ನೀರನ್ನು ನೆಲದ ಮೂಲಕ ಕೊಡುವುದಾಗಿದೆ. ಆದರೆ ಇದು ದುರಂತ. ಆ ಮನೆಯಲ್ಲೂ ಕೂಡ, Leader of Opposition ಸಹ ಈ ಸುದ್ದಿಯನ್ನು ಚರ್ಚೆ ಮಾಡಲಿಲ್ಲ. ಅಲ್ಲಿ ವಿಷಯವೇ ಬರಲಿಲ್ಲ. ಯಾವ ಎಂಎಲ್‌ಎ ಕೂಡ ಕೆಳಮನೆಯಲ್ಲಿ ಮಾತನಾಡಲಿಲ್ಲ. ಏನ್ರೀ, ಇಂತಹ ಒಂದು ದೊಡ್ಡ ಕಾರ್ಯಕ್ರಮವನ್ನು ಇಡೀ ಕರ್ನಾಟಕ ರಾಜ್ಯದ ಎಲ್ಲಾ ಹಳ್ಳಿಗಳಿಗೂ ನೀರು

---

ಕೊಡತಕ್ಕಂಥದ್ದನ್ನು ಯಾರೂ ಕೂಡ ಚರ್ಚೆಗೆ ಕೈಗೆತ್ತಿಕೊಳ್ಳದಿದ್ದರೆ ಮತ್ತೆ ನಾವೆಲ್ಲಾ ಇನ್ನೇನು ಮಾಡುತ್ತಿದ್ದೇವೆ.

**(ಗೊಂದಲ)**

**ಶ್ರೀ ಆರ್.ಬಿ.ತಿಮ್ಮಾಪೂರ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, **(ಗೊಂದಲ)** ಕೊಡುವುದಕ್ಕೆ ಆಗುತ್ತಿತ್ತೇ?

**(ಗೊಂದಲ)**

**ವೈಸ್ ಚೇರ್ಮನ್:-** ಶ್ರೀ ಆರ್.ಬಿ.ತಿಮ್ಮಾಪೂರ ರವರೇ ತಾವು ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಅಡಗೂರ್ ಹೆಚ್.ವಿಶ್ವನಾಥ್ ರವರೇ ತಾವು ಮಾತನಾಡಿ.

**ಶ್ರೀ ಅಡಗೂರ್ ಹೆಚ್.ವಿಶ್ವನಾಥ್:-** ಮಾನ್ಯ ಸಭಾಪತಿಯವರೇ, ಹಾಗಾಗಿ, ಬಹಳ ದೊಡ್ಡ ವಿಚಾರ ಮಾಡಬೇಕಿದೆ. ಇಲ್ಲಿ ಏನಾಗಿದೆಯೆಂದರೆ ಶೇ.40 ಮುಗಿಸಿ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಆದರೆ ಇನ್ನೂ ಮುಗಿಸಿಲ್ಲ. ಶೇ.40 ಎಂದರೆ ನಾವು ಈಗಾಗಲೇ ಹಾಕಿಕೊಂಡಿರತಕ್ಕಂಥ ಎಲ್ಲಾ ನಲ್ಲಿಗಳನ್ನೂ ಸೇರಿಸಿ ಲೆಕ್ಕ ಹೇಳಿದ್ದಾರೆಂದು ಅನಿಸುತ್ತಿದೆ. No, ಆ ರೀತಿ ಆಗಬಾರದು. ನಾನು ಅದಕ್ಕೆ ಹೇಳುವುದೇನೆಂದರೆ, ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರಿಗೆ ರಿಕ್ವೆಸ್ಟ್ ಮಾಡುವುದೇನೆಂದರೆ, ದಯಮಾಡಿ ಈ ದೊಡ್ಡ ಕಾರ್ಯಕ್ರಮವನ್ನು ನೀವು ಕೈಗೆತ್ತಿಕೊಳ್ಳಬೇಕು. ಒಬ್ಬ ಸಚಿವ ಸಂಪುಟದ ಸಚಿವರಿಂದ ಇದು ಸಾಧ್ಯವಿಲ್ಲ. Because there are many Departments connected with this Mission. For the effective implementation of this Jal Jeevan Mission, ಇದರ ಅಡಿಯಲ್ಲಿ ಬೇರೆ ಬೇರೆ ಇಲಾಖೆಗಳು ಬರುತ್ತವೆ. ಈ ಯೋಜನೆ ಕ್ಲಿಯರ್ ಆಗಬೇಕಾದರೆ ಅರಣ್ಯ ಇಲಾಖೆ, ಜಲ ಸಂಪನ್ಮೂಲ ಇಲಾಖೆ, ರೆವೆನ್ಯೂ ಇಲಾಖೆಗಳು ಬರುತ್ತವೆ. In order to complete this Mission, it is necessary to coordinate all these Departments. ಹಾಗಾಗಿ, ಸನ್ಮಾನ್ಯ ಮುಖ್ಯಮಂತ್ರಿಯವರು ಈ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕು. ಏಕೆಂದರೆ ಇದು ಬಹಳ ದೊಡ್ಡ

ಪ್ರಾಜೆಕ್ಟ್. ಏಕೆಂದರೆ ಭಾರತದ ಪ್ರಧಾನ ಮಂತ್ರಿಗಳು 2019ನೇ ಇಸವಿಯಲ್ಲಿ ಈ ಯೋಜನೆಯನ್ನು ಕೊಟ್ಟಿದ್ದಾರೆ. ಆದರೆ ಇವತ್ತಿನ ದಿವಸ ಎಲ್ಲಾ ರಾಜ್ಯಗಳಲ್ಲೂ ಕೂಡ ಆ 30 ಸಾವಿರ ಕೋಟಿಗಳನ್ನು ಕೇಂದ್ರ ಸರ್ಕಾರ ಶೇ.50 ರಷ್ಟು ಹಾಗೂ ರಾಜ್ಯ ಸರ್ಕಾರ ಶೇ.50 ಕೊಡುತ್ತಿದೆ. ನಾವು ಶೇ.50 ಕೊಡುವುದಕ್ಕೂ ಕೂಡ ನಬಾರ್ಡ್ ಹತ್ತಿರ ಸಾಲ ಪಡೆದುಕೊಳ್ಳುತ್ತಿದ್ದೇವೆ. ಅದಕ್ಕಾಗಿ ನಾನು ಹೇಳುವುದೇನೆಂದರೆ, ನಮ್ಮ ರಾಜ್ಯದಲ್ಲಿ ಸಾಕಷ್ಟು ಸಂಪನ್ಮೂಲ ಇದೆ. ಅದನ್ನು ನಾವು ದುಂದುವೆಚ್ಚ ಮಾಡುತ್ತಿದ್ದೇವೆ, ಆದರೆ ನಾವ್ಯಾರು ಕೂಡ ಆ ದುಂದುವೆಚ್ಚ ತಪ್ಪಿಸುತ್ತಿಲ್ಲ. ಇವತ್ತಿನ ದಿವಸ ಎರಡೂವರೆ ಲಕ್ಷ ಯುವಕರು ಹೊರಗುತ್ತಿಗೆಯಲ್ಲಿ ಕೆಲಸ ಮಾಡುತ್ತಿದ್ದಾರೆ. Outsourcing agencies ನ್ನು ನಡೆಸುವವರು ಯಾರೆಂದರೆ ಐಎಎಸ್ ಅಧಿಕಾರಿಗಳ ಹೆಂಡತಿಯವರು. ಅವರ ಭಾವನವರ ಮಕ್ಕಳು ಹಾಗೂ ಅವರ ನೆಂಟರು. ಆದರೆ ಸರ್ಕಾರ ಅವರಿಗೆ ರೂ.15,000ಗಳು ಕೊಡುತ್ತದೆ. ಆದರೆ ಅವರು ಆ ನೌಕರರಿಗೆ ರೂ. 8,000-12,000ಗಳನ್ನು ಕೊಡುತ್ತಿದ್ದಾರೆ. ಏನ್ರೀ, ಹಾಡುಹಗಲೇ ಹಣ ದೋಚುತ್ತಿದ್ದಾರೆ. ಆ ರೀತಿಯದ್ದು ಆಗಬಾರದು. ದಯಮಾಡಿ ಸನ್ಮಾನ್ಯ ಮುಖ್ಯಮಂತ್ರಿಗಳು ಅಮೂಲಾಗ್ರವಾಗಿ ಚರ್ಚೆ ಮಾಡಬೇಕು. ನಾನು ತಮ್ಮ ಮೂಲಕ ವಿನಂತಿ ಮಾಡುವುದೇನೆಂದರೆ, ಸಭೆಗಳು ಆಗುತ್ತವೋ, ಇಲ್ಲವೋ ಎಂದು ಅವರಿಗೆ ಗೊತ್ತಿದೆ. ಏಕೆಂದರೆ ಸನ್ಮಾನ್ಯ ಮುಖ್ಯಮಂತ್ರಿಗಳು fair man. ಅವರು ಎಲ್ಲರನ್ನೂ ಕೂರಿಸಿಕೊಂಡು ಕೇಳಿಕೊಂಡು ಅನುಭವ ತೆಗೆದುಕೊಳ್ಳಬೇಕು. ಆ ಅನುಭವದ ಮೂಲಕ ಆಡಳಿತವನ್ನು ಬಿಗಿಗೊಳಿಸಬೇಕು ಎನ್ನತಕ್ಕಂಥ ಮನಸ್ಸು ಅವರಿಗೆ ಇದೆ. ಹಾಗಾಗಿ, irrespective of political party ತಾವು ಒಂದು ಬಾರಿ ಎಲ್ಲರನ್ನೂ ಸೇರಿಸಿ ಒಂದು ಸಭೆ ಕರೆಯಿರಿ ಅಥವಾ ನೀವು ಒಂದು ವಾರಗಳ ಕಾಲ ಅಸೆಂಬ್ಲಿಯನ್ನು ಕರೆಯಿರಿ. Question hour ನ್ನು ಬಿಟ್ಟು ಮಿಕ್ಕಿದ್ದನ್ನೆಲ್ಲಾ suspend ಮಾಡಿ, only to discuss on administration of the State. ಅದರಲ್ಲಿ ಅವರವರ ಅನುಭವಗಳನ್ನು ಹಂಚಿಕೊಳ್ಳುತ್ತಾರೆ. ಆ ಅನುಭವದ ಆಧಾರದ ಮೇಲೆ ತಮ್ಮ ಆಡಳಿತವನ್ನು ತಾವು ಬಿಗಿ ಮಾಡಿಕೊಳ್ಳಬಹುದು. ತಮ್ಮ administration ಸರಿಯಾದರೆ ಈ ರಾಜ್ಯಕ್ಕೂ ಕೂಡ ಒಳ್ಳೆಯದಾಗುತ್ತದೆ ಎನ್ನತಕ್ಕಂಥ ಮಾತನ್ನು ಈ ಸದನದಲ್ಲಿ ಹೇಳುತ್ತಾ, . . .

**ವೈಸ್ ಚೇರ್ಮನ್:-** ಮಾನ್ಯ ಅಡಗೂರ್ ಹೆಚ್.ವಿಶ್ವನಾಥ್‌ರವರೇ, ಈಗಾಗಲೇ ಸಮಯ 2 ಗಂಟೆ 20 ನಿಮಿಷ ಆಗಿದೆ. ಬೇಗ ಮಾತನಾಡಿ ಮುಗಿಸಿ.

**ಶ್ರೀ ಅಡಗೂರ್ ಹೆಚ್.ವಿಶ್ವನಾಥ್:-** ಮಾನ್ಯ ಸಭಾಪತಿಯವರೇ, ಆಯಿತು.

**ಡಾ.ಕೆ.ಗೋವಿಂದರಾಜ್ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಅವರು ಆಯಿತು ಎಂದರೆ ಅದಕ್ಕೆ ಮೇಲೆ ಎದ್ದೆನು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಅಡಗೂರ್ ಹೆಚ್.ವಿಶ್ವನಾಥ್‌ರವರು, ಸನ್ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿ ಮತ್ತು ಶ್ರೀಮತಿ ಇಂದಿರಾಗಾಂಧಿಯವರ ಬಗ್ಗೆ ಚರ್ಚೆ ಮಾಡುವುದಲ್ಲ. ಅವರು ತುಂಬಾ ಒಂದು ಶತಮಾನಕ್ಕೆ ಯೋಚನೆ ಮಾಡುವ ಅನುಭವವನ್ನು ಹೊಂದಿದವರು. ನನ್ನ ಅನುಭವದ ಪ್ರಕಾರ ಇಷ್ಟು ಅನುಭವವನ್ನು ಹೊಂದಿರತಕ್ಕಂಥವರು ಬೇರೆ ಯಾರೂ ಇಲ್ಲ. ಅವರು ಮಾತನಾಡುತ್ತಾರೆ. ಆದರೆ ಅವರು ಒಂದು ಬಾರಿ ಏನು ಹೇಳುತ್ತಾರೆಂದು ಕೇಳೋಣ. ಅದನ್ನು ಒಪ್ಪುವುದು ಮತ್ತು ಬಿಡುವುದು ಬೇರೆ ವಿಚಾರ.

(ಮುಂದು...)

(348)15.3.2022/2.20/ಎಂ.ಎಂ-ಕೆ.ಎಸ್ (ವೈಸ್ ಚೇರ್ಮನ್ ಉಪಸ್ಥಿತಿ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮುಂದು):-**

ಅವರು ಮತ್ತೆ ಮಾತನಾಡಲು ಅವಕಾಶ ಬೇಕು ಎಂದರೆ, ಊಟದ ನಂತರ ತಾವು ಅವರಿಗೆ ಅವಕಾಶ ಮಾಡಿ ಕೊಡಬಹುದಾಗಿದೆ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸದಸ್ಯರಾದ ವಿಶ್ವನಾಥ್‌ರವರು ಮಾತನಾಡಲಿ, ಅವರಿಗೆ ಮತ್ತೆ ಸಮಯ ಕೊಡುವುದು ಒಳ್ಳೆಯದು.

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ವಿಶ್ವನಾಥ್‌ರವರಿಗೆ ಊಟವಾದ ಮೇಲೆ ಸಮಯ ಕೊಡುವುದು ಒಳ್ಳೆಯದು.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ವಿಶ್ವನಾಥ್‌ರವರ ಅನುಭವಗಳನ್ನು ಕೇಳಬೇಕೆಂದು ನಮಗೆಲ್ಲಾ ಬಹಳ ಆಸೆ ಇದೆ. ದಯವಿಟ್ಟು ಅವರು ಊಟ ಆದಮೇಲೆ ಮಾತನಾಡಲಿ.

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್:–** ಮಾನ್ಯ ಸಭಾಪತಿಯವರೇ, ನಾನು ಏನು ಹೇಳಬೇಕೆಂಬುದನ್ನು precise ಆಗಿ ಹೇಳಿ ಅನಾವಶ್ಯಕವಾಗಿ ಯಾವುದನ್ನೂ ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನು ಕೊನೆಯದಾಗಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಮುಖ್ಯಮಂತ್ರಿಯವರು 10–15 ದಿವಸಗಳಿಗೆ ಒಂದು ಅಧಿವೇಶನವನ್ನು ಕರೆದು exclusive ಆಗಿ ಈ ರಾಜ್ಯದ ಆಡಳಿತ, ಅಭಿವೃದ್ಧಿ, ಈ ರಾಜ್ಯದಲ್ಲಿ ಯಾವ ಯಾವ ಇಲಾಖೆಗಳು, ಮಂತ್ರಿಗಳು; ATR (Action Taken Report) ಬಗ್ಗೆ ಮಂತ್ರಿಗಳಿಗೆ ಗೊತ್ತಿದೆಯೇ? ಮಂತ್ರಿಗಳ್ಯಾರಾದರೂ ATR ಅನ್ನು ಓದಿದ್ದಾರೆಯೇ? ಏನು ಮಾನ್ಯ ನಾರಾಯಣಗೌಡರೇ, ATR ಬಗ್ಗೆ ಮಂತ್ರಿಗಳಿಗೇ ಗೊತ್ತಿಲ್ಲ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಎ.ಟಿ.ಎಂ. ಗೊತ್ತು!

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್:–** ಮಾನ್ಯ ಸಭಾಪತಿಯವರೇ, ಎ.ಟಿ.ಎಂ. ಗೊತ್ತು, ATR ಗೊತ್ತಿಲ್ಲ! ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದನೆಗಳನ್ನು ಹೇಳಿ, ಎಲ್ಲಾ ಸ್ನೇಹಿತರುಗಳಿಗೂ ನಮಸ್ಕಾರ ಮಾಡಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ವಿಶ್ವನಾಥ್‌ರವರೇ, ಎಲ್ಲವನ್ನೂ ಹೇಳಿದಿರಿ, ಬಾಂಬೆ ಇತಿಹಾಸವನ್ನು ಹೇಳಲಿಲ್ಲ.

**ವೈಸ್ ಚೇರ್ಮನ್:–** ಸದನವನ್ನು ಭೋಜನಕ್ಕಾಗಿ ಮಧ್ಯಾಹ್ನ 03 ಗಂಟೆ 30 ನಿಮಿಷದವರೆಗೆ ಮುಂದೂಡಲಾಗಿದೆ.

**(ಸದನವನ್ನು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 02 ಗಂಟೆ 22 ನಿಮಿಷದಿಂದ 03 ಗಂಟೆ 30 ನಿಮಿಷದವರೆಗೆ ಮುಂದೂಡಲಾಯಿತು)**

(349) ಎಸ್‌ಪಿಆರ್/ಜಿಆರ್/3:40/15/03/2022

**(ಅಪರಾಹ್ನ 2 ಗಂಟೆ 22 ನಿಮಿಷಕ್ಕೆ ಭೋಜನಕ್ಕಾಗಿ ಮುಂದೂಡಲ್ಪಟ್ಟ ಸದನವು ಪುನಃ ಅಪರಾಹ್ನ 3 ಗಂಟೆ 43 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ವಿತ್ತೀಯ ಕಾರ್ಯಕಲಾಪ**

**2022-23ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ**

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. 2022-23 ನೇ ಸಾಲಿನ ಮುಂಗಡ ಪತ್ರದ ಬಗ್ಗೆ ಮಾತನಾಡುವುದು ಬಹಳ ಇದೆ. ಈಗಾಗಲೇ ನಮ್ಮ ಕೆಲವು ಸದಸ್ಯರು ಇದರ ಬಗ್ಗೆ ಮಾತನಾಡಿದ್ದಾರೆ. ಅವರು ಮಾತನಾಡಿದ ವಿಚಾರಗಳನ್ನು ಆದಷ್ಟು ಹೊರತುಪಡಿಸಿ ನಾನು ಕೆಲವು ಸಂಗತಿಗಳ ಬಗ್ಗೆ ಮಾತ್ರವೇ ಸೀಮಿತವಾಗಿ ಮಾತನಾಡುವುದಕ್ಕೆ ಬಯಸುತ್ತೇನೆ.

ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಬಗ್ಗೆ ನಾನು ಮೊದಲನೆಯದಾಗಿ ಮಾತನಾಡುತ್ತೇನೆ. ನಮ್ಮ ದೇಶದಲ್ಲಿಯೇ ಪ್ರಥಮವಾಗಿ ನಮ್ಮ ರಾಜ್ಯದಲ್ಲಿ ನೂತನ ರಾಷ್ಟ್ರೀಯ ಶಿಕ್ಷಣ ಜಾರಿಗೆ ತರಬೇಕೆಂದು ತರಾತುರಿಯಲ್ಲಿ ಇದನ್ನು ಜಾರಿಗೊಳಿಸಿದರು. ಆದರೆ ಈ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಿಂದಾಗಿ ವಿದ್ಯಾರ್ಥಿಗಳಿಗೆ ಯಾವುದೇ ಉಪಯೋಗವಾಗದಿರುವಂತಹ ಪರಿಸ್ಥಿತಿಯಲ್ಲಿ ಇವತ್ತಿನ ದಿವಸ ನೂತನ ಶಿಕ್ಷಣ ನೀತಿಯು ಇದೆ. ನಮ್ಮ ರಾಜ್ಯದಲ್ಲಿ ಇವತ್ತಿನ ದಿವಸ ಯಾವ ಪರಿಸ್ಥಿತಿ ಇದೆ ಎಂದು ನಾನು ಉದಾಹರಣೆಯೊಂದಿಗೆ ಇಲ್ಲಿ ಉಲ್ಲೇಖಿಸಬಯಸುತ್ತೇನೆ. ಇಂಜನಿಯರಿಂಗ್ ಕಾಲೇಜಿನಲ್ಲಿ ಬಿ.ಎಸ್ಸಿ(ಹಾನರ್ಸ್) ಎಂಬ ಹೊಸ ಕೋರ್ಸ್‌ನ್ನು ಪ್ರಾರಂಭಿಸಿದರು. ಇಡೀ ರಾಜ್ಯದಲ್ಲಿ ಯಾವುದೇ ಒಬ್ಬ ವಿದ್ಯಾರ್ಥಿಯೂ ಸಹ ಈ ಹೊಸ ಬಿ.ಎಸ್ಸಿ., (ಹಾನರ್ಸ್) ಕೋರ್ಸ್‌ಗೆ ಪ್ರವೇಶವನ್ನು ಪಡೆದುಕೊಳ್ಳಲಿಲ್ಲ. ಮುಂದುವರೆದು, ಕನ್ನಡ ಮಾಧ್ಯಮದಲ್ಲಿ ಇಂಜಿನಿಯರಿಂಗ್ ವಿದ್ಯಾಭ್ಯಾಸವನ್ನು

ನೀಡುವುದಾಗಿ ಹೇಳಲಾಗಿತ್ತು. ಇದಕ್ಕೂ ಸಹ ಯಾವುದೇ ಒಬ್ಬ ವಿದ್ಯಾರ್ಥಿಯೂ ಸಹ ಪ್ರವೇಶಾತಿಯನ್ನು ಪಡೆದುಕೊಂಡಿಲ್ಲ. ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ವಯ, ಐಚ್ಛಿಕ ವಿಷಯಗಳಲ್ಲಿ ವಾಣಿಜ್ಯ, ಕಲೆ ಮತ್ತು ವಿಜ್ಞಾನ ಎಲ್ಲಾ ವಿಷಯಗಳನ್ನು ಕೂಡ ಅಭ್ಯಾಸ ಮಾಡಬಹುದು. ಆದರೆ, ನಮ್ಮ ರಾಜ್ಯದ ಬಹುತೇಕ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಹಾಗೂ ಗ್ರಾಮಾಂತರದ ಪದವಿ ಕಾಲೇಜುಗಳಲ್ಲಿ ಸರ್ವೇ ಸಾಮಾನ್ಯವಾಗಿ ವಾಣಿಜ್ಯ ಮತ್ತು ಕಲೆ ವಿಭಾಗಗಳು ಇವೆ. ಇವತ್ತಿನ ದಿವಸ ಅಲ್ಲಿನ ವಿಜ್ಞಾನ ವಿಭಾಗದಲ್ಲಿ ಐಚ್ಛಿಕ ವಿಷಯವನ್ನು ಆಯ್ಕೆ ಮಾಡಿಕೊಳ್ಳುತ್ತೇವೆ ಎಂದು ಹೇಳಿದರೆ, ವಿಜ್ಞಾನ ವಿಭಾಗದಲ್ಲಿ ಪಾಠ ಮಾಡುವ ಉಪನ್ಯಾಸಕರೇ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ನಮ್ಮ ರಾಜ್ಯದಲ್ಲಿ ಇವತ್ತಿನ ದಿವಸ ತರಾತುರಿಯಲ್ಲಿ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೊಳಿಸಿದರೆ, ನಮಗೆ ಕಿರೀಟ ದೊರೆಯುತ್ತದೆಯೋ ಏನೋ ಎನ್ನುವ ಕಾರಣಕ್ಕಾಗಿ ಇದನ್ನು ಜಾರಿಗೊಳಿಸಿದರು. ಆದರೆ, ಅದರಿಂದ ವಿದ್ಯಾರ್ಥಿಗಳಿಗೆ ತುಂಬಾ ಅನ್ಯಾಯವಾಗುತ್ತಿದೆ. ಮುಂದುವರೆದು, ಇನ್ನು ಕೆಲವು ಕಾಲೇಜುಗಳಲ್ಲಿ ಈ ಸೆಮಿಸ್ಟರ್‌ನಲ್ಲಿ ಪೂರ್ಣ ಪ್ರಮಾಣದಲ್ಲಿ ಪಠ್ಯಕ್ರಮವನ್ನೂ ಪೂರ್ತಿಗೊಳಿಸಿರುವುದಿಲ್ಲ ; ಹಾಗೂ ಪೂರ್ಣ ಪ್ರಮಾಣದಲ್ಲಿ ಪಠ್ಯಕ್ರಮವನ್ನು ಪೂರ್ತಿಗೊಳಿಸಲೂ ಆಗುತ್ತಿಲ್ಲ. ನೂತನ ರಾಷ್ಟ್ರೀಯ ಶಿಕ್ಷಣ ನೀತಿಯು ಜಾರಿಗೆ ಬಂದ ಮೇಲೆ, ಈ ರೀತಿಯ ಗೊಂದಲಗಳು ಪ್ರಾರಂಭವಾಗಿವೆ. ಇದರ ಜೊತೆಗೆ ಸರ್ಕಾರಿ 418 ಕಾಲೇಜುಗಳಲ್ಲಿ ಕಳೆದ 12 ವರ್ಷಗಳಿಂದ ಪ್ರಾಂಶುಪಾಲರ ಹುದ್ದೆಗಳು ಭರ್ತಿಯಾಗಿಲ್ಲ. ಪರಿಸ್ಥಿತಿ ಹೀಗಿದ್ದರೂ ಸಹ ನಮ್ಮ ರಾಜ್ಯದಲ್ಲಿ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯು ಜಾರಿಗೊಳಿಸಲಾಗಿದೆ. 7 ನೂತನ ವಿಶ್ವವಿದ್ಯಾನಿಲಯಗಳನ್ನು ಪ್ರಾರಂಭಿಸಿರುವುದಾಗಿ ಸರ್ಕಾರವು ತಿಳಿಸಿದೆ. ನಾನು ಪ್ರತಿನಿಧಿಸುವ ಕ್ಷೇತ್ರದ ಪೈಕಿ ಚಾಮರಾಜನಗರ ಹಾಗೂ ಹಾಸನ ಜಿಲ್ಲೆಗಳಿಗೂ ಸಹ ವಿಶ್ವವಿದ್ಯಾನಿಲಯಗಳ ಘೋಷಣೆಯಾಗಿದೆ. ಹೀಗಾಗಿ ಇದನ್ನು ನಾನು ಸ್ವಾಗತಿಸುತ್ತೇನೆ. ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ವಯ ರಾಜ್ಯದ ಪ್ರತಿಯೊಂದು ಜಿಲ್ಲೆಗೆ ಒಂದೊಂದು ವಿಶ್ವವಿದ್ಯಾನಿಲಯಗಳಿರಬೇಕು. ಇದನ್ನು ನಾನು ಒಪ್ಪುತ್ತೇನೆ. ಆದರೆ, ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಸದರಿ ವಿಶ್ವವಿದ್ಯಾನಿಲಯಗಳ ನಿರ್ವಹಣೆಗೆ ವರ್ಷಕ್ಕೆ 2 ಕೋಟಿ ರೂಪಾಯಿಗಳಷ್ಟು ಅನುದಾನ ನೀಡಿದ್ದಾರೆ. ಇಷ್ಟು ಮೊತ್ತದಿಂದ ನಿರ್ವಹಣೆ ಸಾಧ್ಯವೇ? ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪದವಿಯ ಕೇಂದ್ರವು ಚಾಮರಾಜನಗರದಲ್ಲಿದೆ. ಇದನ್ನು ಟ್ಯಾಗ್ ಮಾಡಿಕೊಂಡು ನಡೆಸಲು ಸಾಧ್ಯತೆ ಇದೆ. ಆದರೆ, ಅಲ್ಲಿ ಒಬ್ಬನೇ ಒಬ್ಬ ಖಾಯಂ ಬೋಧಕ ಅಥವಾ ಬೋಧಕೇತರ ಸಿಬ್ಬಂದಿಗಳಿಲ್ಲ. ಅದೇ ರೀತಿಯಾಗಿ ಹಾಸನದಲ್ಲಿನ ಸ್ನಾತಕೋತ್ತರ ಕೇಂದ್ರದಲ್ಲಿಯೂ ಸಹ ಯಾವುದೇ ಒಬ್ಬ ಖಾಯಂ ಸಿಬ್ಬಂದಿ ಇಲ್ಲ.

ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ವಯ ಇಂತಹ ಸ್ಥಳಗಳಲ್ಲಿ ವಿಶ್ವವಿದ್ಯಾನಿಲಯಗಳನ್ನು ಪ್ರಾರಂಭಿಸಿದರೆ, ಅಲ್ಲಿನ ವಿದ್ಯಾರ್ಥಿಗಳ ಕಲಿಕೆಗೆ ಅಧ್ವಾನ ಮಾಡುವ ಬದಲು ಸರ್ಕಾರವು ದಯಮಾಡಿ ಸದರಿ 7 ವಿಶ್ವವಿದ್ಯಾನಿಲಯಗಳ ನಿರ್ವಹಣೆಗೆ ಆಯವ್ಯಯದಲ್ಲಿ ಪ್ರತಿ ವಿಶ್ವವಿದ್ಯಾನಿಲಯಕ್ಕೆ 100 ಕೋಟಿ ರೂಪಾಯಿಗಳ ಅನುದಾನ ಬಿಡುಗಡೆ ಮಾಡಿದ್ದರೆ, ನಿಜವಾಗಿಯೂ ಸಹ ಆ ವಿಶ್ವವಿದ್ಯಾನಿಲಯಕ್ಕೆ ಮೂಲಭೂತ ಸೌಲಭ್ಯಗಳು ದೊರೆತು ಅವುಗಳ ನಿರ್ವಹಣೆಯಾಗುತ್ತಿತ್ತು. ಆದರೆ ಈಗ ನೀಡಿರುವ 2 ಕೋಟಿ ರೂಪಾಯಿಗಳು ಸಾಕಾಗುವುದಿಲ್ಲ. ಈ 7 ವಿಶ್ವವಿದ್ಯಾನಿಲಯಕ್ಕೆ 7 ಕುಲಪತಿಗಳು, 7 ರಿಜಿಸ್ಟ್ರಾರ್‌ಗಳನ್ನು ನೇಮಕಾತಿ ಮಾಡಿಕೊಳ್ಳಲು ಇವುಗಳ ಘೋಷಣೆಯಾಗಿದೆಯೇ? ನೂತನ 7 ವಿಶ್ವವಿದ್ಯಾನಿಲಯಗಳಂದ ನಮ್ಮ ರಾಜ್ಯದ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಏನನ್ನು ಕಲಿಯುವುದಕ್ಕೆ ಸಾಧ್ಯವಾಗುತ್ತದೆ? ಈ ರೀತಿಯಾದ ವ್ಯವಸ್ಥೆಗಳನ್ನು ಸರ್ಕಾರವು ಇಲ್ಲಿ ರೂಢಿಸಿದೆ. ಈಗಲಾದರೂ ಸಹ ನಾನು ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಈ 7 ವಿಶ್ವವಿದ್ಯಾನಿಲಯಗಳಿಗೆ ತಲಾ 100 ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿದ್ದಲ್ಲಿ ಅಲ್ಲಿ ತುಂಬಾ ಅಚ್ಚುಕಟ್ಟಾದ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಸಾಧ್ಯವಾಗುತ್ತದೆ. ಹೀಗಾಗಿ ಹೆಚ್ಚಿನ ಮೊತ್ತದ ಅನುದಾನ ಬಿಡುಗಡೆಗೆ ನಾನು ಒತ್ತಾಯಿಸುತ್ತೇನೆ.

ರಾಜ್ಯದ 7 ಇಂಜನಿಯರಿಂಗ್ ಕಾಲೇಜುಗಳನ್ನು ಐ.ಐ.ಟಿ. ಮಾದರಿಯಲ್ಲಿ ಮಾಡುತ್ತೇವೆ ಎಂದು ಸರ್ಕಾರವು ಹೇಳಿದೆ. ಹಾಲಿ ಇರುವ ಸರ್ಕಾರಿ ಇಂಜನಿಯರಿಂಗ್ ಕಾಲೇಜುಗಳಲ್ಲಿ ನೈಟ್ ವಾಚ್‌ಮೆನ್ ಇಲ್ಲ.

(ಮುಂದು)

(350)/15-3-2022/3-50/ಎಲ್ಎಂ/ಎಂಡಿ

**ಶ್ರೀ ಮರಿತಿಬ್ಬೇಗೌಡ**(ಮುಂದು):-

ಅಲ್ಲಿ Principals ಇಲ್ಲ, Attenders ಇಲ್, ಕಸ ಗೂಡಿಸುವವರು ಇಲ್ಲ. ವಿದ್ಯುತ್ ಬಿಲ್‌ನ್ನು ಕಟ್ಟಿಲ್ಲ ಎಂದು ವಿದ್ಯುತ್ ಕಟ್ ಮಾಡಿದ್ದಾರೆ. ಬೇರೆಯವರ ಸಹಕಾರ ಸಹಯೋಗದಿಂದ ಇಂತಹ ಕಾಲೇಜುಗಳನ್ನು IIT (Indian Institute of Technology) ಮಾದರಿಯಲ್ಲಿ ಉನ್ನತಿಕರಿಸುತ್ತೇವೆ ಎಂದು ಹೇಳುತ್ತಾರೆ. ಯಾರು ಎಷ್ಟು ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ? ಈ 7 ಕಾಲೇಜುಗಳನ್ನು IIT ಮಾದರಿಯಲ್ಲಿ ಉನ್ನತಿಕರಿಸಲು ಯಾವ ಕಂಪನಿಯವರು, ಯಾವ ಸಂಸ್ಥೆಯವರು

ಮುಂದೆ ಬಂದಿದ್ದಾರೆ ಎನ್ನುವುದನ್ನು ಕೂಡಾ ಬಜೆಟ್‌ನಲ್ಲಿ ಸ್ಪಷ್ಟವಾಗಿ ಹೇಳಿರುವುದಿಲ್ಲ. ಈ ಕಾಲೇಜುಗಳು ಯಾವ ಮಟ್ಟದಲ್ಲಿವೆ ಎಂದರೆ, diesel ಕಾಸ ಇಲ್ಲ, ಪರೀಕ್ಷೆಗಳನ್ನು ನಡೆಸಲು ತೊಂದರೆ. ಸರ್ಕಾರಿ ಇಂಜಿನೀಯರಿಂಗ್ ಕಾಲೇಜುಗಳಲ್ಲಿ ವಿದ್ಯಾರ್ಥಿಗಳನ್ನು ಬೇರೆ ಕಾಲೇಜುಗಳಿಗೆ ಕರೆದುಕೊಂಡು ಹೋಗಿ laboratory ನಡೆಸುತ್ತಾರೆ. ಉನ್ನತಿಕರಿಸಿ ನಾವು ಸ್ವಾಗತ ಮಾಡುತ್ತೇವೆ. ಆದರೆ ಒಂದೊಂದು ಕಾಲೇಜಿಗೆ 50 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಘೋಷಣೆ ಮಾಡಿ ಕೊಡಿ. ಆಗ ಈ ಕಾಲೇಜುಗಳನ್ನು ಐಐಟಿ ಮಾದರಿಯಲ್ಲಿ ಮಾಡುತ್ತೇವೆ, ಪ್ರಾರಂಭಿಕವಾಗಿ 50 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ ಎಂದು ಹೇಳಿ. ಅದನ್ನು ನಾವು ಸ್ವಾಗತ ಮಾಡುತ್ತೇವೆ. ಆದರೆ ಸುಮ್ಮನೆ NEP (National Education Policy) ಯಲ್ಲಿ ಈ ರೀತಿ ಮಾಡಿದ್ದೇವೆ ನಾವು ಎಂದು ಹೇಳಿದರೆ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತದೆ. ಸರ್ಕಾರಿ ಇಂಜಿನೀಯರಿಂಗ್ ಕಾಲೇಜಿನಲ್ಲಿ ಕಲಿಯುವಂತಹ ನಾಡಿನ ಬಡ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತದೆ. ಆದ್ದರಿಂದ ಪ್ರಾರಂಭಿಕವಾಗಿ ಪ್ರತಿ ಕಾಲೇಜಿಗೆ 50 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಘನ ಸರ್ಕಾರದಲ್ಲಿ ವಿನಂತಿಸಿಕೊಳ್ಳುತ್ತೇನೆ.

ಸರ್ಕಾರಿ ಮತ್ತು ಅನುದಾನಿತ ಕಾಲೇಜುಗಳಲ್ಲಿ, ಪದವಿ ಕಾಲೇಜುಗಳಲ್ಲಿ, ವಿಶ್ವವಿದ್ಯಾನಿಲಯಗಳಲ್ಲಿ ಅನೇಕ ಹುದ್ದೆಗಳು ಖಾಲಿ ಇವೆ. ಈ ಸರ್ಕರಿ ಹುದ್ದೆಗಳನ್ನು ಭರ್ತಿ ಮಾಡಲು ಅವಕಾಶವನ್ನೇ ಕೊಡುತ್ತಿಲ್ಲ. ನಮ್ಮ ಮೈಸೂರು ವಿಶ್ವವಿದ್ಯಾನಿಲಯ ಶತಮಾನೋತ್ಸವವನ್ನು ಆಚರಣೆ ಮಾಡಿಕೊಂಡಿದೆ. ವಿಶ್ವವಿಖ್ಯಾತ ಮೈಸೂರು ವಿಶ್ವವಿದ್ಯಾನಿಲಯದಲ್ಲಿ 300 ಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇವೆ. ವಿಶ್ವವಿದ್ಯಾನಿಲಯಕ್ಕೆ NAAC (National Assessment and Accreditation Council) ನಲ್ಲಿ five star grading ಬರುತ್ತಿತ್ತು, 350 ಖಾಲಿ ಇರುವ ಹುದ್ದೆಗಳನ್ನು ತುಂಬದೆ ಇರುವುದಕ್ಕೆ ಈಗ 'A' grade ಗೆ ಬಂದಿದೆ. ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿಯು ಈ ಕೊರತೆ ಇದೆ. 10 ವರ್ಷಗಳಿಂದ ಬ್ಯಾಕ್ ಲಾಗ್ ಹುದ್ದೆಗಳನ್ನೇ ತುಂಬಿರುವುದಿಲ್ಲ. ಉನ್ನತ ಶಿಕ್ಷಣದಲ್ಲಿ ಎಲ್ಲಾ ಹುದ್ದೆಗಳು ಸೇರಿ ಒಟ್ಟು 20,000 teaching faculty ಹುದ್ದೆಗಳು ಖಾಲಿ ಇವೆ. ಈ 20,000 ಹುದ್ದೆಗಳನ್ನು ಹೇಗೆ ತುಂಬುತ್ತಾರೆ, ಯಾವಾಗ ತುಂಬುತ್ತಾರೆ? ನಾಲ್ಕೈದು ವರ್ಷಗಳಲ್ಲಿ ಪ್ರತಿ ವರ್ಷ ಬಜೆಟ್‌ನಲ್ಲಿ ಉನ್ನತ ಶಿಕ್ಷಣದಲ್ಲಿ ಉಪನ್ಯಾಸಕರನ್ನು, ಸಹಾಯಕ ಪ್ರಾಧ್ಯಾಪಕರನ್ನು ನೇಮಕ ಮಾಡಲು ತೀರ್ಮಾನ ತೆಗೆದುಕೊಳ್ಳುತ್ತಾರೆ,

ಈ ಸಾರಿ 5000 ಉಪನ್ಯಾಸಕರ ನೇಮಕಾತಿಗೆ ಆದೇಶವನ್ನು ಕೊಡುತ್ತಾರೆ, ನೋಟಿಫಿಕೇಶ್‌ನನ್ನು ಈ ಬಜೆಟ್‌ನಲ್ಲಿ ಕೊಡುತ್ತಾರೆ ಎಂದು ಬಹಳ ನಿರೀಕ್ಷೆ ಮಾಡಿಕೊಂಡಿದೆ. ಈ ರೀತಿ ಮಾಡಿ ನಾಲ್ಕು ವರ್ಷಗಳಲ್ಲಿ 20,000 ಉಪನ್ಯಾಸಕರನ್ನು ತುಂಬಿಕೊಳ್ಳುವಂತಹ ಕೆಲಸವನ್ನು ಮಾಡಬೇಕಾಗಿತ್ತು. ಈ 20,000 ಹುದ್ದೆಗಳನ್ನು ತುಂಬಿಕೊಳ್ಳುವಷ್ಟರಲ್ಲಿ 20,000 ಉಪನ್ಯಾಸಕರು ನಿವೃತ್ತರಾಗುತ್ತಾರೆ.

ಖಾಸಗಿ ಕಾಲೇಜುಗಳು ಇಂದು ಬಹಳ ಬಡತನದ ಪರಿಸ್ಥಿತಿಯಲ್ಲಿವೆ. ಬಡ ಮಕ್ಕಳಿಗೆ ಶಿಕ್ಷಣವನ್ನು ಕೊಡಬೇಕು ಎಂದು ಸ್ಥಾಪಿತವಾಗಿರುವ ಖಾಸಗಿ ಕಾಲೇಜುಗಳು ಬಹಳ ತೊಂದರೆಯಲ್ಲಿವೆ. ಅವೆಲ್ಲವುಗಳನ್ನು ಅಧ್ಯಯನ ಮಾಡದೆ. ಅವರಿಗೂ ಹುದ್ದೆಗಳನ್ನು ತುಂಬಿಕೊಳ್ಳಲು ಅನುಮತಿ ಕೊಡದೆ ಇದ್ದರೆ ಯಾವ ವಿದ್ಯಾರ್ಥಿಗಳಿಗೆ ಈ NEP (National Education Policy) ಯಿಂದ ಅನುಕೂಲವಾಗುತ್ತದೆ. ಪ್ರತಿ ವರ್ಷ 5000 ಸಹಾಯಕ ಉಪನ್ಯಾಸಕರ ಹುದ್ದೆಗಳನ್ನು ತುಂಬಿಕೊಳ್ಳುತ್ತೇವೆ ಎನ್ನುವುದನ್ನು ದಯಮಾಡಿ ಘೋಷಣೆ ಮಾಡಿ.

ಅತಿಥಿ ಉಪನ್ಯಾಸಕರುಗಳಿಗೆ ಏನೋ ಒಂದು ಅನುಕೂಲವನ್ನು ಸರ್ಕಾರ ಮಾಡಿಕೊಟ್ಟಿದೆ. ಇಂತಹ ಕಾಯಕಲ್ಪವನ್ನು ಇದುವರೆಗೆ ಯಾವ ಸರ್ಕಾರವು ಮಾಡಿರಲಿಲ್ಲ. ದೊಡ್ಡ ಉಪಕಾರವನ್ನು ಮಾಡಿದ್ದೀರಿ. ಅದಕ್ಕಾಗಿ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಆದರೆ ಅತಿಥಿ ಉಪನ್ಯಾಸಕರಿಗೆ ಸೇವಾ ಭದ್ರತೆಯನ್ನು ಕೊಡುತ್ತೇವೆ ಎಂದು ಹೇಳಿ ಆ ಕೆಲಸವನ್ನು ಮಾಡಲಿಲ್ಲ. ಇದರಿಂದ ಇವತ್ತು 7000 ಅತಿಥಿ ಉಪನ್ಯಾಸಕರು ಬೀದಿಗಿಳಿದು ಹೋರಾಟ ಮಾಡುತ್ತಿದ್ದಾರೆ. ಚಳುವಳಿ ಮಾಡುತ್ತಿದ್ದಾರೆ. ಅವರ ಬಗ್ಗೆ ಸರ್ಕಾರ ಗಮನಹರಿಸಬೇಕು. ದಯಮಾಡಿ ಅವರಿಗೂ ಕೂಡಾ ಸೇವಾ ಭದ್ರತೆಯನ್ನು ಒದಗಿಸಬೇಕು. NEP ಬಂದ ಮೇಲೆ ಹೆಚ್ಚುವರಿ ಹುದ್ದೆಗಳನ್ನು create ಮಾಡಿ ಈಗ ಚಳುವಳಿ ಮಾಡುತ್ತಿರುವ 15 ರಿಂದ 20 ವರ್ಷಗಳಿಂದ ಸೇವೆ ಮಾಡುತ್ತಿರುವ 7000 ಅತಿಥಿ ಉಪನ್ಯಾಸಕರನ್ನು ಭರ್ತಿ ಮಾಡಿಕೊಂಡು ಅವರಿಗೆ ಸೇವಾಭದ್ರತೆಯನ್ನು ಒದಗಿಸಿಕೊಡಬೇಕು. ಅದರ ಬಗ್ಗೆ ಸರ್ಕಾರ ಗಮನಹರಿಸಬೇಕೆಂದು ಘನ ಸರ್ಕಾರದಲ್ಲಿ ಒತ್ತಾಯ ಮಾಡುತ್ತೇನೆ.

ITI (Industrial Training Institute) ಗಳ ಬಗ್ಗೆ ಹೇಳಬೇಕು ಎಂದರೆ, ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರ ಸರ್ಕಾರದ ಅವಧಿಯಲ್ಲಿ 100 ITI ಗಳನ್ನು ಮತ್ತೆ ನಮ್ಮ

ಸರ್ಕಾರದಲ್ಲಿ 50 ITI ಗಳನ್ನು ಪ್ರಾರಂಭಿಸಲಾಯಿತು. ಐಟಿಐ ಗಾಗಿ ಕೇಂದ್ರ ಸರ್ಕಾರ 5000 ಕೋಟಿ ರೂಪಾಯಿಗಳನ್ನು ಕೊಟ್ಟಿದೆ ಎಂದು ಮಾನ್ಯ ಉನ್ನತ ಶಿಕ್ಷಣ ಸಚಿವರು ಹೇಳಿದ್ದಾರೆ. ಆದರೆ ಇದುವರೆಗೂ ಈ ITI ಗಳಲ್ಲಿ ಯಾವುದೇ ಪರಿವರ್ತನೆಯಾಗಿರುವುದಿಲ್ಲ. ಉನ್ನತ ಶಿಕ್ಷಣವನ್ನು ಪಡೆಯಲು ಸಾಧ್ಯವಾಗದ ಬಡವರ ಮಕ್ಕಳು ಈ ತರಬೇತಿಯನ್ನು ಪಡೆದುಕೊಂಡು ಉದ್ಯೋಗವನ್ನು ಮಾಡುವಂತಹ ಶಿಕ್ಷಣ ಇದು. ಇದನ್ನು ಶಕ್ತಿಯುತವಾಗಿ ಮಾಡಬೇಕು. 1500 JTO (Junior Training Officers) ಹುದ್ದೆಗಳನ್ನು ತುಂಬಲು ಆದೇಶ ಕೊಟ್ಟು ಕೆಪಿಎಸ್‌ಸಿಗೆ ಕೊಟ್ಟು 4 ವರ್ಷಗಳಾಗಿದೆ. ಪ್ರಥಮ ಪಟ್ಟಿ ಪ್ರಕಟ ಮಾಡಿ ಒಂದುವರೆ ವರ್ಷವಾಗಿದೆ. ಇದುವರೆಗೆ ಅಂತಿಮ ಪಟ್ಟಿಯನ್ನು ಬಿಡುಗಡೆ ಮಾಡಿರುವುದಿಲ್ಲ. ಈ ಇಲಾಖೆಗೆ ಸಂಬಂಧಪಟ್ಟ ನಿರ್ದೇಶಕರಿಗೆ, ಆಯುಕ್ತರಿಗೆ ಇದರಲ್ಲಿ ಯಾವುದೇ ಆಸಕ್ತಿ ಇಲ್ಲ. ಇಷ್ಟು ಹುದ್ದೆಗಳ ಕೊರತೆಯಿಂದ ಏನು ತೊಂದರೆಯಾಗುತ್ತಿದೆ ಎನ್ನುವ ಪರಿಜ್ಞಾನ ಅಧಿಕಾರಿಗಳಿಗೆ ಇಲ್ಲ. ಒಂದೊಂದು ITI ಗಳಲ್ಲಿ ಒಬ್ಬರೆ ಪ್ರಭಾರ ಪ್ರಿನ್ಸಿಪಾಲರು, ಒಬ್ಬನೆ ಗುಮಾಸ್ತ. ಈ ರೀತಿಯಾದರೆ ಸರ್ಕಾರಿ ITI ಗಳಲ್ಲಿ ಯಾವ ರೀತಿಯ ತರಬೇತಿಗಳು ನಡೆಯಲು ಸಾಧ್ಯ? ದಯಮಾಡಿ ಕೂಡಲೇ ಇದರ ಬಗ್ಗೆ ಕ್ರಮ ತೆಗೆದುಕೊಂಡು ITI ನಲ್ಲಿ ಪರಿವರ್ತನೆ ತರಬೇಕು ಎಂದು ನಾನು ಸರ್ಕಾರದಲ್ಲಿ ಒತ್ತಾಯ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೆ, ಮಾನ್ಯ ಸದಸ್ಯರು ಉನ್ನತ ಶಿಕ್ಷಣದ ಬಗ್ಗೆ ಮಾತನಾಡುತ್ತಿದ್ದಾರೆ, ದಯಮಾಡಿ ಉನ್ನತ ಶಿಕ್ಷಣ ಸಚಿವರನ್ನು ಸದನಕ್ಕೆ ಕರೆಯಿಸಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಗಳೆ, 12 ವರ್ಷಗಳಿಂದ ಪದವಿ ಪೂರ್ವ ಕಾಲೇಜುಗಳಲ್ಲಿ, ಪ್ರಾಥಮಿಕ ಶಾಲೆಗಳಲ್ಲಿ, ಪ್ರೌಢ ಶಾಲೆಗಳಲ್ಲಿ ದೈಹಿಕ ಶಿಕ್ಷಕರ ನೇಮಕವೇ ಆಗಿರುವುದಿಲ್ಲ. ಎಲ್ಲಾ ಸರ್ಕಾರಗಳು ಈ ದೈಹಿಕ ಶಿಕ್ಷಣವನ್ನು ತುಂಬಾ ನಿರ್ಲಕ್ಷ್ಯ ಮಾಡಿದ್ದಾರೆ. ಇದು ಅತ್ಯಂತ ಶೋಚನೀಯ ಸಂಗತಿ. ಮಾನ್ಯ ಸಭಾಪತಿಯವರು ಶಿಕ್ಷಣ ಸಚಿವರಾಗಿದ್ದಾಗ, ಇದನ್ನು ಉನ್ನತಿಕರಿಸಿ, ಇವರಿಗಾಗಿ C & R (Cadre and Recruitment) rule ನಲ್ಲಿ ತಿದ್ದುಪಡಿ ಮಾಡಬೇಕು ಎಂದು ಹೇಳಿದ್ದರು. 14 ವರ್ಷಗಳಾದರೂ ಒಂದು ತಿದ್ದುಪಡಿಯನ್ನು ಮಾಡಲು ಆಗಿರುವುದಿಲ್ಲ. ಇದನ್ನು ನೋಡಿದರೆ ನಾವೆಲ್ಲರೂ ತಲೆತಗ್ಗಿಸಬೇಕು. ಇಲಾಖಾಧಿಕಾರಿಗಳು ಏನು ಮಾಡುತ್ತಿದ್ದಾರೆ? ದೈಹಿಕ ಶಿಕ್ಷಣಕ್ಕೆ ಶಕ್ತಿ ಕೊಡಬೇಕು ಎಂದು ಮಾನ್ಯ ಸಭಾಪತಿಗಳು ಆಗ ಪ್ರೊ:ವೈದ್ಯನಾಥನ್‌ರವರ ವರದಿಯನ್ನು ತೆಗೆದುಕೊಂಡು ಇದರಲ್ಲಿ

ಪರಿವರ್ತನೆ ಮಾಡಬೇಕೆಂದು 14 ವರ್ಷಗಳಿಂದ ಪ್ರಯತ್ನ ಮಾಡುತ್ತಿದ್ದಾರೆ. ಆದರೂ ಇದುವರೆಗೆ ಒಂದು ತಿದ್ದುಪಡಿಯನ್ನು ಮಾಡಲು ಆಗುತ್ತಿಲ್ಲ.

**ಸಭಾಪತಿಯವರು:-** ಅದಕ್ಕೆ ಆಗ cabinet approval ಕೂಡಾ ಆಗಿದೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಗಳೆ, Cabinet approval ಕೊಟ್ಟರು ಇನ್ನು ಜಾರಿಗೆ ಮಾಡುತ್ತಿಲ್ಲ. ದಯಮಾಡಿ ಸರ್ಕಾರ ಈ ಕಡೆಗೆ ಗಮನಹರಿಸಬೇಕು. ಮಕ್ಕಳಿಗೆ ಇವತ್ತು ದೈಹಿಕ ಶಿಕ್ಷಣ ಬಹಳ ಅನಿವಾರ್ಯವಾಗಿದೆ.

ಇನ್ನೊಂದು ಕಾಲ್ಪನಿಕ ಬಡ್ತಿ ಬಗ್ಗೆ, ಮಾನ್ಯ ಸಭಾಪತಿಯವರು ಅಧ್ಯಕ್ಷತೆಯಲ್ಲಿ ಎರಡು ಸಾರಿ ಸರ್ಕಾರ ಸಮಿತಿಯನ್ನು ಮಾಡಿತ್ತು. ಸಮಿತಿ ಎಲ್ಲವನ್ನು ಚರ್ಚೆ ಮಾಡಿ ತನ್ನ ವರದಿಯನ್ನು ಕೊಟ್ಟಿದೆ. ಆದರೆ ಆ ವರದಿ ಇಲ್ಲಿಯವರೆಗೆ ಏನಾಯಿತು ಎನ್ನುವ ವಿಷಯ ಸದನದಲ್ಲಿ ಬರಲೇ ಇಲ್ಲ. ಆ ಸಮಿತಿಯ ವರದಿಯನ್ನು ಯಾವ ಸರ್ಕಾರವು ಗಮನಿಸುತ್ತಿಲ್ಲ. ಇದು ಅತ್ಯಂತ ಶೋಚನೀಯ ಸಂಗತಿ. ಕಾಲ್ಪನಿಗೆ ವೇತನ ಬಡ್ತಿಯಲ್ಲಿ ಕೆಲಸ ಮಾಡುತ್ತಿರುವ ಯಾರಿಗೂ ಒಂದು ರೂಪಾಯಿಯ ನಿವೃತ್ತಿ ವೇತನ ಸಿಗುವುದಿಲ್ಲ.

(ಮುಂದು)

(351) 15.03.2022 4.00 ಹೆಚ್‌ವಿ:ಎಂ.ಡಿ

**ಶ್ರೀ ಮರಿತಿಬ್ಬೇಗೌಡ(ಮುಂದುವರೆದದ್ದು):-**

ಸನ್ಮಾನ್ಯ ಸಭಾಪತಿಯವರೇ, ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಕಾಲ್ಪನಿಕ ವೇತನ ಬಡ್ತಿಯಡಿ ನೇಮಕಗೊಂಡಿರುವವರಿಗೆ ಒಂದು ರೂಪಾಯಿ ನಿವೃತ್ತಿ ವೇತನ ಸಿಗುತ್ತಿಲ್ಲ. ಇಂತಹವರ ಪರಿಸ್ಥಿತಿಯನ್ನು ಸುಧಾರಣೆ ಮಾಡಬೇಕೆಂದು ಸಮಿತಿಯು ವರದಿಯನ್ನು ಕೊಟ್ಟರೆ, ಈ ಸರ್ಕಾರ ಇಲ್ಲಿಯವರೆವಿಗೂ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಈ ವಿಚಾರದ ಬಗ್ಗೆ ಮೊನ್ನೆ ಮಂಡನೆ ಮಾಡಿದಂತಹ ಆಯವ್ಯಯದಲ್ಲಿ ಘೋಷಣೆ ಮಾಡುತ್ತಾರೆನ್ನುವ

ಆಶಯವನ್ನು ಇಟ್ಟುಕೊಂಡಿದ್ದೆ, ಆದರೆ ಅದು ಆಗಲಿಲ್ಲ. ಮಾನ್ಯ ಶಿಕ್ಷಣ ಸಚಿವರು ದಯವಿಟ್ಟು ಈಗಲಾದರೂ ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಮಾತನಾಡಿ ಸಮಿತಿಯ ಶಿಫಾರಸ್ಸುಗಳನ್ನು ಜಾರಿಗೆ ತರುವಂತಹ ಪ್ರಯತ್ನವನ್ನು ಮಾಡಬೇಕೆಂದು ಒತ್ತಾಯಿಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಖಾಸಗಿ ಅನುದಾನಿತ ಶಾಲಾ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ ಯಾವುದೇ ಆರೋಗ್ಯ ವಿಮೆಯನ್ನು ಒದಗಿಸಿಕೊಟ್ಟಿಲ್ಲ. ಈ ಸಾಲಿನ ಆಯವ್ಯಯದಲ್ಲಿ ಈ ವರ್ಗಕ್ಕೆ ಏನಾದರು ಸವಲತ್ತುಗಳನ್ನು ನೀಡಬಹುದು ಎನ್ನುವ ನಿರೀಕ್ಷೆಯನ್ನು ಇಟ್ಟುಕೊಂಡಿದ್ದೆ. ಈ ನಾಡಿನಲ್ಲಿರುವ ಶ್ರೀಸಾಮಾನ್ಯನಿಗೆ ಸರ್ಕಾರದಿಂದ ಒಂದಲ್ಲ ಒಂದು ಆರೋಗ್ಯ ವಿಮಾ ಯೋಜನೆಯನ್ನು ನೀಡಲಾಗಿದೆ. ಆದರೆ, ಈ ವರ್ಗದ ಶಿಕ್ಷಕರಿಗೆ ಸರ್ಕಾರ ಯಾವುದೇ ಆರೋಗ್ಯ ವಿಮೆಯನ್ನು ನೀಡಿಲ್ಲ. ಅವರ ಪರಿಸ್ಥಿತಿ ಎಷ್ಟು ಕೆಟ್ಟದ್ದಾಗಿರಬಹುದು ಎನ್ನುವುದನ್ನು ತಾವೇ ಊಹಿಸಬಹುದಾಗಿದೆ. ಈ ಶಿಕ್ಷಕರಿಗೆ "ಜ್ಯೋತಿ ಸಂಜೀವಿನಿ ಆರೋಗ್ಯ ವಿಮೆ" ಯನ್ನು ಜಾರಿಗೊಳಿಸಬೇಕೆಂದು ಹಿಂದಿನ ಸರ್ಕಾರದವರಲ್ಲಿಯೂ ಮತ್ತು ಈ ಸರ್ಕಾರದಲ್ಲಿಯೂ ಹಲವಾರು ಬಾರಿ ವಿನಂತಿ ಮಾಡಿಕೊಂಡಿದ್ದೆವು. ಚುನಾವಣೆಯ ವರ್ಷವಾಗಿರುವುದರಿಂದ ಈ ಸಾಲಿನ ಆಯವ್ಯಯದಲ್ಲಿಯಾದರು ಘೋಷಣೆ ಮಾಡಬಹುದು ಎನ್ನುವ ನಿರೀಕ್ಷೆಯಲ್ಲಿದ್ದೆ. ಆದರೆ, ಘೋಷಣೆ ಮಾಡಿಲ್ಲ. ಇದು ಆರೋಗ್ಯದ ವಿಚಾರವಾಗಿರುವುದರಿಂದ ದಯವಿಟ್ಟು ಈಗಲಾದರೂ ಮಾನ್ಯ ಮುಖ್ಯಮಂತ್ರಿಗಳ ಮನವೊಲಿಸಿ ಇವರಿಗೆ ಆರೋಗ್ಯ ವಿಮೆಯನ್ನು ಕೊಡಿಸುವಂತಹ ಕೆಲಸವನ್ನು ಮಾನ್ಯ ಶಿಕ್ಷಣ ಸಚಿವರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಉನ್ನತ ಶಿಕ್ಷಣ ಇಲಾಖೆಯಲ್ಲಿ ಸುಮಾರು 20 ಸಾವಿರ ಉಪನ್ಯಾಸಕರ ಹುದ್ದೆಗಳು ಖಾಲಿ ಇವೆ. ಪ್ರಾಥಮಿಕ ಶಿಕ್ಷಣ ಇಲಾಖೆಯಲ್ಲಿ ಸುಮಾರು 35 ಸಾವಿರ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಈ ಸಾಲಿನ ಆಯವ್ಯಯದಲ್ಲಿ 15 ಸಾವಿರ ಪ್ರಾಥಮಿಕ ಶಾಲಾ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗುವುದು ಎನ್ನುವ ಘೋಷಣೆಯನ್ನು ಮಾಡಿದ್ದಾರೆ. ಈ 15 ಸಾವಿರ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವುದಕ್ಕೆ 10 ವರ್ಷಗಳು ಬೇಕಾಗುತ್ತದೆ. ಏಕೆಂದರೆ, ಈಗ ಒಮ್ಮೆ ನೇಮಕಾತಿ ಪ್ರಕ್ರಿಯೆಯನ್ನು ಪೂರ್ತಿ ಮಾಡುವುದಕ್ಕೆ 3 ರಿಂದ 4 ವರ್ಷಗಳನ್ನು

ತೆಗೆದುಕೊಳ್ಳಲಾಗುತ್ತಿದೆ. ಉದಾಹರಣೆಗೆ ಹೇಳಬೇಕಾದರೆ, 10 ಸಾವಿರ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವುದಕ್ಕೆ ಅಧಿಸೂಚನೆಯನ್ನು ಹೊರಡಿಸಿದರೆ, 2 ಸಾವಿರ ಶಿಕ್ಷಕರು ಮಾತ್ರ ಆಯ್ಕೆ ಹೊಂದುವಂತಹ ಪರಿಸ್ಥಿತಿ ಇದೆ. ಇನ್ನು 35 ಸಾವಿರ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವಷ್ಟರಲ್ಲಿ, ಪುನಃ 50 ಸಾವಿರ ಹುದ್ದೆಗಳು ಖಾಲಿ ಬೀಳುತ್ತವೆ. ಹೀಗಾದರೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ವ್ಯವಸ್ಥೆ ಯಾವ ರೀತಿ ನಡೆಯಬೇಕು? ಉನ್ನತ ಶಿಕ್ಷಣದಲ್ಲಿ ಸುಮಾರು 20 ಸಾವಿರ ಉಪನ್ಯಾಸಕರ ಹುದ್ದೆಗಳು ಖಾಲಿ ಇವೆ.

ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಮನಸ್ಸು ಮಾಡಿದರೆ ಏನುಬೇಕಾದರು ಮಾಡಬಹುದು ಎನ್ನುವುದಕ್ಕೆ ಒಂದು ಉದಾಹರಣೆ ಇದೆ. ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಾಗ, ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಉಪ ಮುಖ್ಯಮಂತ್ರಿಗಳಾಗಿದ್ದರು ಮತ್ತು ಮಾನ್ಯ ಸಭಾಪತಿಯವರು ಶಿಕ್ಷಣ ಸಚಿವರಾಗಿದ್ದರು. ಆಗ ದಾಖಲೆಯ ಪ್ರಮಾಣದಲ್ಲಿ ಅಂದರೆ, ಕೇವಲ 18 ತಿಂಗಳ ಕಾಲಾವಧಿಯಲ್ಲಿ ಸುಮಾರು 48 ಸಾವಿರ ಶಿಕ್ಷಕರ ನೇಮಕಾತಿ ಆಗಿತ್ತು. ಸುಮಾರು 1000 ಸರ್ಕಾರಿ ಪ್ರೌಢ ಶಾಲೆಗಳನ್ನು ತೆರೆಯಲಾಗಿತ್ತು. ಈ ಎಲ್ಲ ಶಾಲೆಗಳಿಗೂ ಹುದ್ದೆಗಳನ್ನು ಮಂಜೂರು ಮಾಡಿ ನೇಮಕಾತಿ ಮಾಡಲಾಗಿತ್ತು. 1995ರವರೆಗೆ ತೆರೆಯಲಾಗಿದ್ದ ಎಲ್ಲ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ಅನುದಾನವನ್ನು ನೀಡಲಾಗಿತ್ತು. ಇದು ಶಿಕ್ಷಣ ಇಲಾಖೆಯಲ್ಲಿ ಮಾತ್ರವಲ್ಲ ಸರ್ಕಾರದಲ್ಲಿಯೇ ಒಂದು ದೊಡ್ಡ ಇತಿಹಾಸವಾಗಿದೆ. ಗ್ರಾಮಾಂತರ ಪ್ರದೇಶದಲ್ಲಿ 386 ಪದವಿಪೂರ್ವ ಕಾಲೇಜುಗಳು ಮತ್ತು 186 ಡಿಗ್ರಿ ಕಾಲೇಜುಗಳಲ್ಲಿ ಉಪನ್ಯಾಸಕರ ನೇಮಕಾತಿ ಸೇರಿದಂತೆ ಒಟ್ಟು 48 ಸಾವಿರ ಶಿಕ್ಷಕರ ಮತ್ತು ಉಪನ್ಯಾಸಕರ ನೇಮಕಾತಿ ಮಾಡಲಾಗಿತ್ತು. ಆದರೆ, ಇವತ್ತಿನ ಪರಿಸ್ಥಿತಿಯಲ್ಲಿ ನೇಮಕಾತಿ ನೋಟಿಫಿಕೇಶನ್ ಹೊರಡಿಸಿ 3-4 ವರ್ಷಗಳಾದ ನಂತರ ನೇಮಕಾತಿ ಆದೇಶವನ್ನು ನೀಡಲಾಗುತ್ತಿದೆ. ಶಿಕ್ಷಣ ಇಲಾಖೆಯ ಅಧಿಕಾರಿಗಳು ಏನು ಮಾಡುತ್ತಿದ್ದಾರೆ?

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಶಿಕ್ಷಣ ಸಚಿವರಾದ ಶ್ರೀ ಬಿ.ಸಿ.ನಾಗೇಶ್‌ರವರು ಬಹಳ ಉತ್ತಮರು. ಆದರೆ, ಇವರು ತಮ್ಮ ಎಲ್ಲ ಅಧಿಕಾರವನ್ನು ಅಧಿಕಾರಿಗಳ ಕೈಗೆ ಕೊಟ್ಟು ಸುಮ್ಮನಾಗಿಬಿಟ್ಟಿದ್ದಾರೆ. ಈ ಸದನದಲ್ಲಿ ಇವರು ಉತ್ತರ ಕೊಡುವಂತಹ ಸಂದರ್ಭದಲ್ಲಿಯೇ ಅವರು

ಅಧಿಕಾರಿಗಳ ಮಾತನ್ನು ಎಷ್ಟು ಕೇಳುತ್ತಾರೆನ್ನುವುದನ್ನು ನೋಡಿದ್ದೇವೆ. "ಎತ್ತಿ ಹಾಕಿದರೆ ಒಡೆಯುವುದಿಲ್ಲ, ಎಳೆದರೆ ಸವೆಯುವುದಿಲ್ಲ" ಎಂದು ನಮ್ಮ ಕಡೆ ಒಂದು ಗಾದೆ ಮಾತಿತೆ. ಅದೇ ರೀತಿ ಇವರನ್ನು ನಾವು ಏನೂ ಮಾಡುವಂತಿಲ್ಲ, ಏನೂ ಅನ್ನುವಂತಿಲ್ಲ. ಗಟ್ಟಿಯಾಗಿ ಮಾತನಾಡುವಂತಿಲ್ಲ. ಇವರಿಗೆ ಹೋಲಿಕೆ ಮಾಡಿದರೆ, ಮಾಜಿ ಶಿಕ್ಷಣ ಸಚಿವರಾಗಿದ್ದ ಮಾನ್ಯ ಸುರೇಶ್ ಕುಮಾರ್‌ರವರು ಸಾವಿರ ಪಾಲು ಮೇಲು. ಅವರು ಆಗಾಗ ಶಾಸಕರನ್ನು ಮತ್ತು ಅಧಿಕಾರಿಗಳನ್ನು ಕರೆದು ಚರ್ಚೆ ಮಾಡುತ್ತಿದ್ದರು. ಇಡೀ ರಾಜ್ಯವ್ಯಾಪಿ ಸುತ್ತುತ್ತಿದ್ದರು. ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳುತ್ತಿದ್ದರು. ಆದರೆ, ಮಾನ್ಯ ಬಿ.ಸಿ.ನಾಗೇಶ್ ಅವರನ್ನು ಕಟ್ಟಿಕೊಂಡು ಈ ಇಲಾಖೆಯನ್ನು ಹೇಗೆ ನಡೆಸುವುದು?

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯೆನ್ನುವುದು ಎಷ್ಟು ಆಗಾಧವಾಗಿದೆ ಎನ್ನುವುದನ್ನು ನಮ್ಮ ಮಾನ್ಯ ಸಭಾಪತಿಯವರನ್ನು ಕೇಳಿ ತಿಳಿದುಕೊಳ್ಳಬೇಕಾಗಿದೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಬಹಳ ಶೋಭಾಯಮಾನವಾಗಿ ಬರುತ್ತಾರೆ. ಆದರೆ, ನಮ್ಮ ಸಹಕಾರ ಸಚಿವರು ತಲೆ ಬಾಚುವುದಕ್ಕೂ ಸಮಯವಿಲ್ಲದೆ, ಹಾಗೆಯೇ ಓಡಿ ಬರುತ್ತಾರೆ. ಅವರಿಗೆ ಅಷ್ಟೊಂದು ಸಮಸ್ಯೆಗಳಿವೆ. ಮಾನ್ಯ ಬಿ.ಸಿ.ನಾಗೇಶ್ ಅವರಂತಹ ಸಚಿವರನ್ನು ಕಟ್ಟಿಕೊಂಡು ನಾವು ಏನು ತಾನೇ ಮಾಡುವುದು? ಸರ್ಕಾರ ಏನಾದರೂ ಬದಲಿ ವ್ಯವಸ್ಥೆ ಮಾಡಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ ಒಂದು ಕಾಯಕಲ್ಪವನ್ನು ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ನಾಲ್ಕನೆಯ ಬಾರಿಗೆ ಸಚಿವ ಸಂಪುಟ ವಿಸ್ತರಣೆಯಾಗುವ ಸಂಭವವಿದೆ ಎನ್ನುವ ಸುದ್ದಿ ಇದೆ. ಅದನ್ನಾದರೂ ಬೇಗ ಮಾಡಿದರೆ ಒಳ್ಳೆಯದು ಎನ್ನುವುದು ನನ್ನ ಅಭಿಪ್ರಾಯವಾಗಿದೆ. ಮಾನ್ಯ ಸುರೇಶ್‌ಕುಮಾರ್ ಅವರಿಗೆ ನೀಡಿದ್ದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಖಾತೆಯನ್ನು ಕಿತ್ತುಕೊಂಡು ಎಂಥವರಿಗೆ ಕೊಡಲಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರನ್ನು ತೆಗಳುವುದಕ್ಕಾಗಿ ಮಾಜಿ ಶಿಕ್ಷಣ ಸಚಿವರಾಗಿರುವ ಶ್ರೀಯುತ ಸುರೇಶ್‌ಕುಮಾರ್ ಅವರನ್ನು ಹೊಗಳುತ್ತಿದ್ದಾರೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾಗಿರುವ ಮಾನ್ಯ ಬಿ.ಸಿ.ನಾಗೇಶ್‌ರವರು ಬಹಳ ಅಚ್ಚುಕಟ್ಟಾಗಿ ಕೆಲಸವನ್ನು ಮಾಡುತ್ತಿದ್ದಾರೆ. ಆರ್ಥಿಕ ಸ್ಥಿತಿಯಲ್ಲಿ ಉಂಟಾಗಿರುವ ಕೆಲವು ಸಮಸ್ಯೆಗಳಿಂದಾಗಿ ಮಾನ್ಯ ಸದಸ್ಯರು

ಕೇಳಿರುವುದನ್ನೆಲ್ಲ ಮಂಜೂರು ಮಾಡುವುದಕ್ಕೆ ಸಾಧ್ಯವಾಗಿಲ್ಲ. ಮಾನ್ಯ ಮರಿತಿಬ್ಬೇಗೌಡರು ಹೇಳುವಂತಹ ಎಲ್ಲ ಮಾತುಗಳನ್ನು ಬಹಳ ಗೌರವದಿಂದ ಮತ್ತು ಯಥಾವತ್ತಾಗಿ ಕೇಳುವವರಲ್ಲಿ ಮಾನ್ಯ ಬಿ.ಸಿ.ನಾಗೇಶ್‌ರವರು ಒಬ್ಬರು. ಅವರ ಮಾತನ್ನೆಲ್ಲ ಮಾನ್ಯ ಸಚಿವರು ಕೇಳಿದ್ದಾರೆ. ಮಾನ್ಯ ಸದಸ್ಯರು ಉಲ್ಲೇಖ ಮಾಡಿರುವ ಕೆಲವೊಂದು ಬೇಡಿಕೆಗಳನ್ನು ಆರ್ಥಿಕವಾಗಿ ಜಾರಿಗೊಳಿಸುವುದಕ್ಕೆ ಸ್ವಲ್ಪ ಕಷ್ಟವಾಗಿದೆ. ಮಾನ್ಯ ಸದಸ್ಯರು ಅನುಸರಿಸಿಕೊಂಡು ಹೋಗಬೇಕಾಗಿದೆ.

**ಶ್ರೀ ಮರಿತಿಬ್ಬೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನ ಸಂಸ್ಥೆಯು 2024ರಲ್ಲಿ ಶತಮಾನೋತ್ಸವವನ್ನು ಆಚರಣೆ ಮಾಡಿಕೊಳ್ಳುತ್ತಿದೆ. ಈ ಕಟ್ಟಡದ ಸುಣ್ಣ-ಬಣ್ಣಕ್ಕಾಗಿ ರಾಜ್ಯ ಸರ್ಕಾರ 89 ಕೋಟಿ ರೂಪಾಯಿಗಳ ಅನುದಾನವನ್ನು ಕಳೆದ ಮೂರು ವರ್ಷಗಳಲ್ಲಿ ನೀಡಿದೆ. ಇದು ಮೈಸೂರು ಮಹಾರಾಜರು ಸ್ಥಾಪನೆ ಮಾಡಿದಂತಹ, ರಾಜ್ಯದಲ್ಲಿಯೇ ಅತ್ಯಂತ ಹಳೆಯ ಮೆಡಿಕಲ್ ಕಾಲೇಜಾಗಿದೆ. ಆದರೆ, ಈ ಕಾಲೇಜಿನ ಇನ್‌ಟೇಕ್ ಸಾಮರ್ಥ್ಯ ಕೇವಲ 150 ಸೀಟ್‌ಗಳಿಗಷ್ಟೇ ಸೀಮಿತವಾಗಿದೆ. ಈಗ ಹೊಸದಾಗಿ ಪ್ರಾರಂಭ ಮಾಡಿರುವಂತಹ ಮೆಡಿಕಲ್ ಕಾಲೇಜುಗಳಿಗೂ 150 ಸೀಟ್‌ಗಳ ಇನ್‌ಟೇಕ್ ಕೊಡುತ್ತಿದ್ದಾರೆ. ಆದರೆ, ಇಷ್ಟು ಹಳೆಯದಾಗಿರುವ ಶತಮಾನೋತ್ಸವ ಆಚರಣೆ ಮಾಡಿಕೊಳ್ಳುತ್ತಿರುವ ಈ ಮೆಡಿಕಲ್ ಕಾಲೇಜಿಗೆ ಇನ್ನೊಂದು 100 ಕೋಟಿ ರೂಪಾಯಿಗಳ ಅನುದಾನವನ್ನು ಕೊಟ್ಟು, ಈ ಕಾಲೇಜಿನಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ಕಲಿಯುವುದಕ್ಕೆ ಅನುಕೂಲವಾಗುವಂತೆ 250 ಸೀಟ್‌ಗಳ ಇನ್‌ಟೇಕ್ ಕೊಡಬೇಕೆನ್ನುವುದು ನನ್ನ ಮನವಿಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಎಲ್ಲ ಸರ್ಕಾರಿ ಮೆಡಿಕಲ್ ಕಾಲೇಜುಗಳಲ್ಲಿ ಬಿ.ಎಸ್ಸಿ., ನರ್ಸಿಂಗ್ ಮತ್ತು ಅಲೈಡ್ ಸೈನ್ಸ್ ಎನ್ನುವ ಕೋರ್ಸ್‌ಗಳನ್ನು ನಡೆಸಲಾಗುತ್ತಿದೆ. ಮೆಡಿಕಲ್ ಕಾಲೇಜಿನ ಸಿಬ್ಬಂದಿಗಳಿಗೆ ಸರ್ಕಾರ ಸಂಬಳ ಕೊಡುತ್ತಿದೆ. ಆದರೆ, ಬಿ.ಎಸ್ಸಿ., ನರ್ಸಿಂಗ್ ಮತ್ತು ಅಲೈಡ್ ಸೈನ್ಸ್ ಕಾಲೇಜಿಗೆ ಒಂದು ರೂಪಾಯಿ ಅನುದಾನವನ್ನು ಸಹ ಕೊಟ್ಟಿಲ್ಲ. ಅಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಒಂದು ಹುದ್ದೆಯನ್ನು ಸಹ ಮಂಜೂರಾತಿ ಕೊಟ್ಟಿಲ್ಲ. ಅವರು ಯಾವ ರೀತಿ ಕಾಲೇಜು ನಡೆಸಬೇಕು? ಬಿ.ಎಸ್ಸಿ., ನರ್ಸಿಂಗ್ ಮತ್ತು ಅಲೈಡ್ ಸೈನ್ಸ್ ಓದಿದಂತಹ ವಿದ್ಯಾರ್ಥಿಗಳಿಗೆ

ಉದ್ಯೋಗಾವಕಾಶಗಳು ಹೇರಳವಾಗಿವೆ. ನಮ್ಮ ದೇಶದ ಪ್ರಧಾನ ಮಂತ್ರಿಗಳು ಉದ್ಯೋಗ ಸೃಷ್ಟಿಗೆ ಹೆಚ್ಚಿನ ಮಹತ್ವವನ್ನು ನೀಡಿದ್ದಾರೆ. ಎಲ್ಲ ಸರ್ಕಾರಿ ಮೆಡಿಕಲ್ ಕಾಲೇಜುಗಳಲ್ಲಿ ಇರುವಂತಹ ಬಿ.ಎಸ್ಸಿ., ನರ್ಸಿಂಗ್ ಮತ್ತು ಅಲೈಡ್ ಸೈನ್ಸ್ ಕಾಲೇಜುಗಳಿಗೆ ಸರ್ಕಾರ ಅನುದಾನವನ್ನು ನೀಡಿ, ಹುದ್ದೆಗಳನ್ನು ಸೃಜಿಸಿ, ಕಟ್ಟಡವನ್ನು ಮತ್ತು ಹಾಸ್ಟಲ್ ಸೌಲಭ್ಯವನ್ನು ನೀಡಬೇಕಾಗಿದೆ. ಆದರೆ, ಈಗ ಈ ಎಲ್ಲ ಮೂಲಸೌಲಭ್ಯಗಳನ್ನು ಆ ಕಾಲೇಜಿನವರೇ ತಮ್ಮ ಸ್ವಂತ ಸಾಮರ್ಥ್ಯದಿಂದ ಮಾಡಿಕೊಳ್ಳುತ್ತಿದ್ದಾರೆ. ಆದರೆ, ಪೂರ್ಣ ಪ್ರಮಾಣದಲ್ಲಿ ಒದಗಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಸರ್ಕಾರ ಈ ಎಲ್ಲ ಸೌಲಭ್ಯಗಳನ್ನು ಒದಗಿಸಿಕೊಡಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೆ, ಚಾಮರಾಜನಗರಕ್ಕೆ ಒಂದು ವಿಶ್ವವಿದ್ಯಾಲಯವನ್ನು ನೀಡಲಾಗಿದೆ. ಅದನ್ನು ನಾನು ಸ್ವಾಗತಿಸುತ್ತಿದ್ದೇನೆ. ಚಾಮರಾಜನಗರದಂತಹ ಹಿಂದುಳಿದ ಜಿಲ್ಲೆಯಲ್ಲಿ ಒಂದು ಮೆಡಿಕಲ್ ಕಾಲೇಜ್ ಇದೆ. ಆ ಕಾಲೇಜಿನಲ್ಲಿ ಬಿ.ಎಸ್ಸಿ., ನರ್ಸಿಂಗ್ ಕಾಲೇಜನ್ನು ಪ್ರಾರಂಭ ಮಾಡುವುದಕ್ಕೋಸ್ಕರ ಅನುದಾನವನ್ನು ನೀಡಬೇಕಾಗಿದೆ. ಹುದ್ದೆಗಳನ್ನು ಸೃಜಿಸಿ, ಕಟ್ಟಡ ಕಟ್ಟಿ, ಅಲ್ಲಿನ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ವ್ಯವಸ್ಥೆಯನ್ನು ಮಾಡಿಕೊಟ್ಟರೆ, ಆ ಕಾಲೇಜು ಇನ್ನೂ ಉತ್ತಮ ಮಟ್ಟದಲ್ಲಿ ನಡೆಯುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ಚಾಮರಾಜನಗರದಲ್ಲಿ ಕಾನೂನು ಕಾಲೇಜನ್ನು ಪ್ರಾರಂಭ ಮಾಡಲಾಗುತ್ತದೆಂದು ಮೂರು ವರ್ಷಗಳ ಹಿಂದೆ ಹೇಳಲಾಗಿತ್ತು. ರೇಷ್ಮೆ ಇಲಾಖೆಯ, ರೇಷ್ಮೆ ಹುಳು ಸಾಕಾಣಿಕೆ ಮಾಡುತ್ತಿದ್ದ ಕಟ್ಟಡದಲ್ಲಿ "ಲಾ ಕಾಲೇಜು" ಎನ್ನುವ ಬೋರ್ಡ್ ಮಾತ್ರ ತೂಗು ಹಾಕಿದ್ದಾರೆ. ಅದಕ್ಕೆ ಇನ್ನೂ ಬಾರ್ ಕೌನ್ಸಿಲ್ ಆಫ್ ಇಂಡಿಯಾದಿಂದ ಇನ್ನೂ ಅನುಮತಿಯೇ ಸಿಕ್ಕಿಲ್ಲ. ಕಾನೂನು ಕಾಲೇಜು ಸ್ಥಾಪನೆ ಮಾಡುವ ಬಗ್ಗೆ ಘೋಷಣೆ ಮಾಡಿ ಮೂರು ವರ್ಷಗಳೇ ಕಳೆದು ಹೋಗಿವೆ. ಆದಷ್ಟು ಬೇಗನೇ ಸರ್ಕಾರ ಬಾರ್ ಕೌನ್ಸಿಲ್ ಆಫ್ ಇಂಡಿಯಾದಿಂದ ಅನುಮತಿಯನ್ನು ಪಡೆದುಕೊಂಡು ಲಾ ಕಾಲೇಜನ್ನು ಪ್ರಾರಂಭ ಮಾಡಿದರೆ, ಬಡತನದಲ್ಲಿರುವ ಅಲ್ಲಿನ ಮಕ್ಕಳು ಕಾನೂನು ವಿಷಯ ವ್ಯಾಸಂಗ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, 4 ಹೊಸ ಮೆಡಿಕಲ್ ಕಾಲೇಜುಗಳ ಸ್ಥಾಪನೆಯ ಬಗ್ಗೆ ಸರ್ಕಾರ ಘೋಷಣೆ ಮಾಡಿದೆ.

(ಮುಂದುವರಿದಿದೆ)

(352) 15.3.2022 4.10 ಪಿಕೆ:ಎಕೆ

**ಶ್ರೀ ಮರಿತಿಬ್ಬೇಗೌಡ(ಮುಂದು)**

ಮಾನ್ಯ ಸಭಾಪತಿಗಳೆ, 4 ಹೊಸ ಮೆಡಿಕಲ್ ಕಾಲೇಜುಗಳನ್ನು ಪ್ರಾರಂಭ ಮಾಡಿದರು. ಅದರಲ್ಲಿ ನಮ್ಮ ಸಚಿವರ ಊರಾದ ಚಿಕ್ಕಬಳ್ಳಾಪುರ ಮೆಡಿಕಲ್ ಕಾಲೇಜಿಗೆ 100 ಸೀಟುಗಳಿಗೆ ಸೀಮಿತವಾಗಿ ಪ್ರವೇಶಕ್ಕೆ ಅವಕಾಶ ಮಾಡಿಕೊಟ್ಟರು. 3 ಮೆಡಿಕಲ್ ಕಾಲೇಜುಗಳಿಗೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರ ಅನುಮತಿ ಕೊಡಲಿಲ್ಲ. ನಮ್ಮದು ಡಬ್ಬಲ್ ಇಂಜಿನ್ ಸರ್ಕಾರ. ಪ್ರಧಾನ ಮಂತ್ರಿಗಳು ಬಂದು ತಮಿಳುನಾಡಿಗೆ ಒಂದೇ ದಿನ 11 ಮೆಡಿಕಲ್ ಕಾಲೇಜುಗಳಿಗೆಂದು ರೂ.4000 ಕೋಟಿಗಳನ್ನು ಕೊಡುತ್ತಾರೆ. 11 ಮೆಡಿಕಲ್ ಕಾಲೇಜುಗಳನ್ನು ತೆರೆಯುತ್ತಾರೆ. ನಾವು ಅದನ್ನು ನೋಡಿದ್ದೇವೆ. ನಮ್ಮಲ್ಲಿ 4 ಕಾಲೇಜುಗಳನ್ನು ಕೇಳಿದೆವು. ಮಾನ್ಯ ಮಂತ್ರಿಗಳು ಕನಕಪುರದಿಂದ ಒಂದು ಕಾಲೇಜನ್ನು ಎತ್ತಿಕೊಂಡು ಬಂದುಬಿಟ್ಟರು. 150 ಸೀಟುಗಳ ಪ್ರವೇಶಕ್ಕೆ ಅವಕಾಶ ಪಡೆದುಕೊಳ್ಳುವುದಕ್ಕೆ ಆಗಲಿಲ್ಲ; 100 ಸೀಟುಗಳಿಗೆ ಸೀಮಿತವಾಗಿ ಅನುಮತಿ ಕೊಡಲಾಯಿತು. ಎಷ್ಟೊಂದು ಅಸಹಾಯಕತೆ? ದಯವಿಟ್ಟು ಈ ಕಾಲೇಜುಗಳನ್ನು ಮುಂದಿನ ವರ್ಷಗಳಲ್ಲಿ ಪ್ರಾರಂಭ ಮಾಡಿದರೆ ಸುಮಾರು 600 ಸೀಟುಗಳು ನಮ್ಮ ಕನ್ನಡ ನಾಡಿನ ಮಕ್ಕಳಿಗೆ ಸಿಗುವಂತಾಗುತ್ತದೆ. ಈ ಕಾಲೇಜುಗಳಿಗೆ ಅಗತ್ಯವಾಗಿರುವ ಅನುದಾನಗಳನ್ನು ಬಜೆಟ್‌ನಲ್ಲಿಯೇ ಕೊಡುವ ಕೆಲಸ ಮಾಡಬೇಕು. ಈ ಕಾಲೇಜುಗಳು ಬರಬೇಕು ಎಂದರೆ, N.M.C. (National Medical Commission) ಅನುಮತಿ ಕೊಡಬೇಕು ಎಂದರೆ ಕಾಮಗಾರಿ ಪೂರ್ಣಗೊಂಡಿರಬೇಕು, ಮೂಲಭೂತ ಸೌಲಭ್ಯಗಳು ಕೊಡಬೇಕು, ಫ್ಯಾಕಲ್ಟಿ ಇರಬೇಕಾಗುತ್ತದೆ. ಇನ್ನೊಂದು ದುರ್ದೈವದ ವಿಷಯ ಇದೆ. ಈ 4 ಕಾಲೇಜುಗಳಿಗೆ, ಅದರಲ್ಲೂ ಚಿಕ್ಕಬಳ್ಳಾಪುರ ಮೆಡಿಕಲ್ ಕಾಲೇಜಿಗೆ ಸಂಬಂಧಪಟ್ಟಂತೆ ಕಳೆದ ಮಾರ್ಚ್ ತಿಂಗಳಿನಲ್ಲಿ

Walk-in Interview ಆಯಿತು. Walk-in Interview ಅಂದರೆ, ಯಾವಾಗಾದರೂ ಆರ್ಡರ್ ಕೊಡಬಹುದೇ? ನಾನು ಅರ್ಥ ಮಾಡಿಕೊಂಡಿರುವುದರ ಪ್ರಕಾರ Walk-in Interview ಎಂದರೆ, ಅರ್ಜೆಂಟಾಗಿ ನಾಳೆ ಬೆಳಗ್ಗೆಯೇ, ಅನಿವಾರ್ಯ, ಅಗತ್ಯ ಎನ್ನುವ ಸಂದರ್ಭದಲ್ಲಿ ಕರೆದು Walk-in Interview ಮಾಡಿ, ನೀವು ನಾಳೆಯಿಂದಲೇ ಕೆಲಸಕ್ಕೆ ಹಾಜರು ಆಗಿ ಎಂದು ಆವತ್ತೇ ಆರ್ಡರ್ ಕೊಡುತ್ತಾರೆ. ಕಳೆದ ಮಾರ್ಚ್‌ನಲ್ಲಿ Walk-in Interview ಆಗಿದೆ. ಸುಮಾರು 1 ವರ್ಷವಾದರೂ ಅವರಿಗೆ ಆರ್ಡರ್ ಕೊಡಲಿಲ್ಲ. ನಿಮ್ಮ ಸರ್ಕಾರದ ಬದ್ಧತೆ ಏನು? ನಿಮ್ಮ ಮಂತ್ರಿಗಳ ಬದ್ಧತೆ ಏನು? ಅದರ ಅರ್ಥ ಏನು? ಪ್ರತ್ಯೇಕವಾಗಿ ಬಂದು ನೋಡಬೇಕೇ? ಮಂತ್ರಿಗಳನ್ನು ನೋಡಬೇಕೇ ಅಥವಾ ಮುಖ್ಯಮಂತ್ರಿಗಳನ್ನು ನೋಡಬೇಕೇ? Walk-in Interview ಆಗಿ ಒಂದು ವರ್ಷವಾಗಿದೆ. ಏನ್ ಸ್ವಾಮಿ ಇದು? ಹೀಗಾದರೆ ಯಾವ ಮೆಡಿಕಲ್ ಕಾಲೇಜುಗಳು ಉಳಿಯುತ್ತವೆ? ಇನ್ನೊಂದು ಬಹಳ ಸ್ವಾರಸ್ಯಕರ ಸಂಗತಿ ಇದೆ. 18 ಮೆಡಿಕಲ್ ಕಾಲೇಜುಗಳಲ್ಲಿ ಸುಮಾರು 14 ಸರ್ಕಾರಿ ಮೆಡಿಕಲ್ ಕಾಲೇಜುಗಳಲ್ಲಿ ಪ್ರಭಾರ ನಿರ್ದೇಶಕರಿದ್ದಾರೆ. ನಿರ್ದೇಶಕರ ಹುದ್ದೆಯನ್ನು 6 ತಿಂಗಳ ಕಾಲ ಪ್ರಭಾರ ಎಂಬುದಾಗಿ ಇಡಬಹುದು. ಗದಗನಲ್ಲಿ ಒಬ್ಬರು ಡಾ:ಭೂಸರೆಡ್ಡಿ ಎನ್ನುವವರು 2014ರಿಂದಲೂ ಇನ್‌ಚಾರ್ಜ್‌ನಲ್ಲಿದ್ದಾರೆ; 6 ತಿಂಗಳಿಗೆ ಒಂದು ಸಲ ರಿನ್ಯೂವಲ್ ಮಾಡುತ್ತಾರೆ. ಅಲ್ಲಿ ಬೇರೆ ಸೀನಿಯರ್ ಪ್ರತಿಭಾನ್ವಿತರಿದ್ದರೂ ಕೂಡ ಆತ ಅಲ್ಲಿ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಇದೇ ರೀತಿ 14 ಮೆಡಿಕಲ್ ಕಾಲೇಜುಗಳಲ್ಲಿ ಇನ್‌ಚಾರ್ಜ್‌ಗಳಿದ್ದಾರೆ. Director, Medical Education ಹುದ್ದೆಗಳಲ್ಲಿ 3 ವರ್ಷದಿಂದ ಇನ್‌ಚಾರ್ಜ್ ಇದ್ದಾರೆ ಮತ್ತು 6 ತಿಂಗಳಿಗೊಂದು ಸಲ ರಿನ್ಯೂವಲ್ ಆಗುತ್ತದೆ. ಈಸ್ಕೊಂಡು, ಈಸ್ಕೊಂಡು ರಿನ್ಯೂವಲ್ ಮಾಡುತ್ತಾರೆ. ಇಲ್ಲಿ ಯಾವುದೇ ರೀತಿಯ ಸೀನಿಯಾರಿಟಿಯ ಮಾನದಂಡ ಇಲ್ಲ. ಮೆಡಿಕಲ್ ಕಾಲೇಜುಗಳಲ್ಲಿ ಸೀನಿಯರ್ ಆಗಿರುವವರನ್ನು ಸಂದರ್ಶನ ಮಾಡಿ, ನಿರ್ದೇಶಕರಾಗಿ ಆಯ್ಕೆ ಮಾಡಿ ಕಾಲೇಜನ್ನು ಚೆನ್ನಾಗಿ ನಡೆಸುವಂಥ ವ್ಯವಸ್ಥೆ ಮಾಡಬೇಕೋ ಅಥವಾ ಈ ರೀತಿ ಮಾಡಬೇಕೋ? ಜ್ಯೂನಿಯರ್‌ಗಳಿಗೆ ಕೊಟ್ಟು ಸೀನಿಯರ್‌ಗಳು ನೆಮ್ಮದಿಯಾಗಿ ಹೇಗೆ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ? ಹೇಗೆ ಆಡಳಿತ ನಡೆಸುವುದಕ್ಕೆ ಸಾಧ್ಯವಾಗುತ್ತದೆ? ಎಲ್ಲಾ ಕಡೆ ಬರೀ ಖರಾಬು; ಎಲ್ಲಾ ಕಡೆ ಆರೋಪ. ಇನ್‌ಚಾರ್ಜ್ ಇರುವ ಎಲ್ಲಾ ಕಡೆಗಳಲ್ಲೂ ಬರೀ ದೂರು, ಕಂಪ್ಲೇಂಟ್ಸ್

ಇರುತ್ತದೆ. ಯಾವ ದೂರಿನ ಬಗ್ಗೆಯೂ ತಲೆ ಕೆಡಿಸಿಕೊಳ್ಳುವುದಿಲ್ಲ. ಇನ್ನೊಂದು ಇತಿಹಾಸ ಇದೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆ ಪ್ರಾರಂಭವಾಗಿ ಬಹಳ ವರ್ಷವಾಯಿತು. ಆದರೆ ಇದುವರೆಗೂ ಒಂದು ಸಿ & ಆರ್ ರೂಲ್ಸ್ ಮಾಡಲಿಲ್ಲ. N.M.C. ಪ್ರಕಾರ ಸಿ & ರೂಲ್ಸ್ ಇಲ್ಲವೇ ಇಲ್ಲ. ಎಲ್ಲಾ ಕಡೆ Governing Council body ಇದೆ. ಆ Governing Council body ನಲ್ಲಿ ಅವರೇ ರಾಜರು-ಮಹಾರಾಜರು. ಅವರು ಮಾಡಿದ ಹಾಗೆ ರೂಲ್ಸ್ ಇರುತ್ತದೆ. ಇಂತಹ ಒಂದು ವ್ಯವಸ್ಥೆ ಮೆಡಿಕಲ್ ಕಾಲೇಜುಗಳಲ್ಲಿ ಇದೆ. ಒಂದು ಸಿ & ಆರ್ ರೂಲ್ಸ್ ಇಲ್ಲ; ಒಂದು bylaw ಮಾಡುವುದಕ್ಕೆ ಆಗಲಿಲ್ಲ. ಸರ್ಕಾರ ೩ ವರ್ಷದಿಂದ ಒಬ್ಬ ವೈದ್ಯರನ್ನೇ ಮಂತ್ರಿಯನ್ನಾಗಿ ಮಾಡಿದೆ. ಒಂದು bylaw ಮಾಡಿಸುವುದಕ್ಕೆ ಆಗಲಿಲ್ಲ; ನಿರ್ದೇಶಕರನ್ನು ನೇಮಕ ಮಾಡುವುದಕ್ಕಾಗಲಿಲ್ಲ. ಮೆಡಿಕಲ್ ಕಾಲೇಜುಗಳನ್ನು ನಾವು ಎಂತಹ ಪರಿಸ್ಥಿತಿಯಲ್ಲಿ ನಡೆಸುತ್ತಿದ್ದೇವೆ? ದಯವಿಟ್ಟು ಈಕಡೆ ಗಮನಹರಿಸಬೇಕು ಎಂದು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

ಮಾನ್ಯ ಸಭಾಪತಿಗಳೆ, ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಂತೆ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. K.R.E.I.S (Karnataka Residential Educational Institutions Society) ವಸತಿ ಶಾಲೆಗಳ ಸ್ಥಿತಿ-ಗತಿ ಬಗ್ಗೆ ನಿಮ್ಮ ಜೊತೆ ಮಾತನಾಡಿದ್ದೇವೆ. ಅಲ್ಲಿ ಕಲಿಯುತ್ತಿರುವ ಬಡವರ, ಪ್ರತಿಭಾನ್ವಿತ ಮಕ್ಕಳಿಗೆ ನಿಜವಾಗಿಯೂ ಕೂಡ ಕಾಲ ಕಾಲಕ್ಕೆ ಸವಲತ್ತು ತಲುಪುತ್ತಿಲ್ಲ. ಅದು ನಿಮಗೂ ಗೊತ್ತಿದೆ. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ಮಾಡಿದಾಗ ಕೆಲವೇ ಶಾಲೆಗಳಿತ್ತು, ಇವತ್ತು ೮೦೦ಕ್ಕೂ ಹೆಚ್ಚು ಶಾಲೆಗಳಾಗಿವೆ. ಅಲ್ಲಿ ಒಳ್ಳೆಯ ಶಿಕ್ಷಣ ವ್ಯವಸ್ಥೆ ಇದೆ. ಅಲ್ಲಿ ನೀವು ಪ್ರತಿಭಾನ್ವಿತ ಶಿಕ್ಷಕರನ್ನು, ಪ್ರಾಂಶುಪಾಲರುಗಳನ್ನು ಆಯ್ಕೆ ಮಾಡಿದ್ದೀರಿ. ಅವರು ಖಾಯಂ ಆಗಿ ಹಾಸ್ಟೆಲ್‌ನಲ್ಲಿ ಉಳಿದುಕೊಂಡು ಮಕ್ಕಳಿಗೆ ಒಳ್ಳೆಯ ಬೋಧನೆ ಮಾಡುತ್ತಿದ್ದಾರೆ; ಒಳ್ಳೆಯ ಫಲಿತಾಂಶ ಕೂಡ ಬರುತ್ತಿದೆ. ಈಗ ಕ್ರೈಸ್ ವತಿಯಿಂದ ಇದನ್ನು ನಿರ್ವಹಣೆ ಮಾಡುವುದಕ್ಕೆ ಆಗುತ್ತಿಲ್ಲ. ಇದರ ಬಗ್ಗೆ ನೀವೂ ಕೂಡ ಚರ್ಚೆ ಮಾಡಿದ್ದೀರಿ. ದಯವಿಟ್ಟು ಒಂದು ನಿರ್ದೇಶನಾಲಯವನ್ನಾಗಿ ಮಾಡಿಸಿ. ಈ ಸಲದ ಬಜೆಟ್‌ನಲ್ಲಿ, ನಿರ್ದೇಶನಾಲಯ ಮಾಡುತ್ತೇವೆ ಎಂದು ಘೋಷಣೆ ಮಾಡುತ್ತೀರಿ ಎಂದು ನಾನು ಭಾವಿಸಿದ್ದೆ.

ನಿರ್ದೇಶನಾಲಯ ಮಾಡಿದ್ದರೆ, ಆ ಮಕ್ಕಳಿಗೆ ಗುಣಾತ್ಮಕವಾದ ಶಿಕ್ಷಣ ಸಿಗುತ್ತದೆ; ಅಲ್ಲಿರತಕ್ಕಂಥ ಸಿಬ್ಬಂದಿಗಳಿಗೂ ಸರ್ಕಾರದ ಎಲ್ಲಾ ಸವಲತ್ತುಗಳು ಸಿಗುತ್ತವೆ. ಇದೊಂದು ಉತ್ಕೃಷ್ಟವಾದಂತಹ, ಗುಣಾತ್ಮಕವಾದ ಶಿಕ್ಷಣ ವ್ಯವಸ್ಥೆಯನ್ನು ತಾವು ಮುಂದುವರೆಸುತ್ತಿದ್ದೀರಿ. ಇಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಕೂಡ ಬಹಳ ಇದೆ. ಇದನ್ನು ನೀಗಿಸುವ ಕೆಲಸ ಮಾಡಬೇಕು. ಇದನ್ನು ಒಂದು ನಿರ್ದೇಶನಾಲಯ ಮಾಡಬೇಕು ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಎಸ್‌ಸಿ, ಎಸ್‌ಟಿ, ಓಬಿಸಿ ವಿದ್ಯಾರ್ಥಿಗಳ ವಸತಿ ನಿಲಯಗಳ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ಕಟ್ಟಿರುವ ವಸತಿ ನಿಲಯಗಳು ಖಾಲಿ ಹೊಡೆಯುತ್ತಿವೆ. ಏಕೆಂದರೆ, ಎಲ್ಲಾ ವಿದ್ಯಾರ್ಥಿಗಳು N.E.P (National Education Policy) ಅಡಿಯಲ್ಲಿ ಹೊಸ ಕೋರ್ಸ್‌ಗಳು ಬಂದ ಮೇಲೆ ಅವರೆಲ್ಲರೂ ನಗರ ಪ್ರದೇಶಗಳಿಗೆ ಬರುತ್ತಿದ್ದಾರೆ. ನಗರ ಪ್ರದೇಶಗಳಲ್ಲಿ ಇವತ್ತು ಹಾಸ್ಟೆಲ್‌ಗಳ ಕೊರತೆ ಬಹಳ ಇದೆ. ಅದರಲ್ಲೂ ಹೆಣ್ಣು ಮಕ್ಕಳ ಹಾಸ್ಟೆಲ್‌ಗಳ ಕೊರತೆ ಬಹಳ ಬಹಳ ಇದೆ. ನಮ್ಮ ಮೈಸೂರಿನಲ್ಲಂತೂ ಹೆಣ್ಣು ಮಕ್ಕಳಿಗೋಸ್ಕರ ಇನ್ನೂ 10 ಹಾಸ್ಟೆಲ್‌ಗಳನ್ನು ತೆರೆದರೂ ಸಾಕಾಗುವುದಿಲ್ಲ. 5-6 ಜಿಲ್ಲೆಗಳಿಂದ ಮೈಸೂರು ನಗರಕ್ಕೆ ಬರುತ್ತಾರೆ. ಹೆಣ್ಣು ಮಕ್ಕಳಿಗಂತೂ ಬಹಳ ತೊಂದರೆಯಾಗಿದೆ. ಆದ್ದರಿಂದ ನಗರ ಪ್ರದೇಶಗಳಲ್ಲಿ ಅಗತ್ಯಗನುಗುಣವಾಗಿ ತಾವು ಎಸ್‌ಸಿ, ಎಸ್‌ಟಿ ಮತ್ತು ಓಬಿಸಿ ಹೆಣ್ಣು ಮತ್ತು ಗಂಡು ಮಕ್ಕಳ ವಸತಿ ನಿಲಯಗಳನ್ನು ಖಂಡಿತವಾಗಿಯೂ ಹೆಚ್ಚಿನ ಸಂಖ್ಯೆಯಲ್ಲಿ ನಿರ್ಮಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಮಾನ್ಯ ಸಭಾಪತಿಗಳೆ, "ವಿದ್ಯಾಸಿರಿ" ಯೋಜನೆಯನ್ನು ತೆಗೆದುಕೊಂಡು ಬಂದರು. ಎಲ್ಲಾ ಕಡೆ ಓಬಿಸಿ ವಿದ್ಯಾರ್ಥಿಗಳಿಗೆ ಹಾಸ್ಟೆಲ್‌ಗಳ ಸೌಲಭ್ಯ ಕೊಡುವುದಕ್ಕಾಗುವುದಿಲ್ಲ ಎಂದು ರೂ. 1500ಗಳನ್ನು ಕೊಟ್ಟರು. ರೂ. 1500 ಗಳಲ್ಲಿ ಇವತ್ತು ಏನು ಮಾಡುವುದಕ್ಕೆ ಸಾಧ್ಯ? ಈ ಮೊತ್ತದಲ್ಲಿ ನಗರ ಪ್ರದೇಶಗಳಲ್ಲಿ ಒಂದು ತಿಂಗಳು ಜೀವನ ಮಾಡುವುದಕ್ಕೆ ಸಾಧ್ಯವೇ? ಹಾಗಾಗಿ ಈ ಮೊತ್ತವನ್ನು ಸರ್ಕಾರ ದುಪ್ಪಟ್ಟು ಮಾಡಬೇಕು. ಕನಿಷ್ಠ ರೂ.3000ಗಳನ್ನಾಗಿ ಮಾಡಿ ಓಬಿಸಿ ವಿದ್ಯಾರ್ಥಿಗಳ ಶಿಕ್ಷಣಕ್ಕೆ ತಾವು ಹೆಚ್ಚು ಒತ್ತು ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಮಾನ್ಯ ಸಭಾಪತಿಗಳೆ, ಪ್ರತಿಭಾನ್ವಿತ ಎಸ್‌ಸಿ, ಎಸ್‌ಟಿ ಮತ್ತು ಓಬಿಸಿ ವಿದ್ಯಾರ್ಥಿಗಳು ಏನು ವಿದೇಶದಲ್ಲಿ ವ್ಯಾಸಂಗ ಮಾಡುವುದಕ್ಕೆ ಹೊರಡುತ್ತಾರೋ ಅಂಥವರಿಗೆ ಹೆಚ್ಚಿನ ಸವಲತ್ತುಗಳನ್ನು ಕೊಡಬೇಕು. ಅವರಿಗೆ ಸಾಲ ಕೊಡಿಸುವುದರ ಜೊತೆಗೆ ನೀವು ವಿದ್ಯಾರ್ಥಿ ವೇತನವನ್ನು ಹೆಚ್ಚಿನ ಪ್ರಮಾಣದಲ್ಲಿ ಕೊಟ್ಟು, ವಿದೇಶದಲ್ಲಿ ಉನ್ನತ ಶಿಕ್ಷಣ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಈಗೇನು ಮಿತಿಯನ್ನು ಇಟ್ಟುಕೊಂಡು ಕೊಡುತ್ತಿದ್ದಾರೋ ಅದನ್ನು ಹೆಚ್ಚು ಮಾಡಿದರೆ ಇನ್ನೂ ಒಳ್ಳೆಯದಾಗುತ್ತದೆ ಎನ್ನುವುದು ನನ್ನ ಭಾವನೆಯಾಗಿದೆ. ದಯವಿಟ್ಟು ತಾವು ಇದನ್ನು ಮಾಡಬೇಕು.

ಮಾನ್ಯ ಸಭಾಪತಿಗಳೆ, ಕೃಷಿ ಇಲಾಖೆ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಬಜೆಟ್‌ನಲ್ಲಿ ಕೃಷಿಗೆ ಸಂಬಂಧಪಟ್ಟಂತೆ ಬಹಳ ನಿರೀಕ್ಷೆ ಮಾಡಿದ್ದೆ. ಒಂದು ಎಕರೆಗೆ ಒಂದು ಲೀಟರ್ ಡೀಸೆಲ್‌ಗೆಂದು ರೂ. 250ಗಳನ್ನು ಕೊಟ್ಟಿದ್ದೀರಿ. ಇದನ್ನು 5 ಎಕರೆಯವರೆಗೆ ಅನ್ವಯಿಸುತ್ತದೆ ಎಂದು ಮಾಡಿದ್ದೀರಿ. ಈ ಮೊತ್ತ ಪೆಪ್ಪರ್‌ಮಿಂಟ್‌ಗೆ ಆಗುವುದಿಲ್ಲ. ಶುಗರ್ ಪೇಶೆಂಟ್ ಪೆಪ್ಪರ್‌ಮಿಂಟ್ ತೆಗೆದುಕೊಂಡು ಜಮೀನಿಗೆ ಹೋಗುವುದಕ್ಕಾಗುವುದಿಲ್ಲ. ಮತ್ತೆ, ಪಿ.ಎಂ. ಕಿಸಾನ್ ಯೋಜನೆ ಇದೆ. ವರ್ಷಕ್ಕೆ ಮೂರು ಸಲ ರೂ. 2000ಗಳನ್ನು; ರಾಜ್ಯ ಸರ್ಕಾರ ಎರಡು ಸಲ ರೂ.2000ಗಳನ್ನು ಕೊಡುತ್ತದೆ. ಒಟ್ಟು ರೂ.10,000ಗಳನ್ನು ಕೊಡುತ್ತೀರಿ. ಇದು ಉಪ್ಪು-ಮೆಣಸಿನಕಾಯಿಗೂ ಸಾಕಾಗುವುದಿಲ್ಲ. ಇನ್ನು ಗೊಬ್ಬರ ತೆಗೆದುಕೊಳ್ಳುವುದಕ್ಕೆ ಆಗುತ್ತದೆಯೇ? ಎಷ್ಟು ಆಳುಗಳಿಗೆ ಕೂಲಿ ಕೊಡುವುದಕ್ಕೆ ಆಗುತ್ತದೆ? ಯಾವ ಉಪಕರಣ ತೆಗೆದುಕೊಳ್ಳುವುದಕ್ಕೆ ಆಗುತ್ತದೆ?

**ಶ್ರೀ ವೈ.ಎ.ನಾರಾಯಣಸ್ವಾಮಿ:-** ಈ ಹಿಂದೆ ಯಾರಿಗೂ ಸಹ ಇಂತಹ ಯೋಜನೆ ಕೊಡಬೇಕೆಂದು ಯೋಚನೆಯೇ ಬಂದಿರಲಿಲ್ಲ. ಈಗ ದೇಶದ ರೈತರ ಅಕೌಂಟ್‌ಗೆ ನೇರವಾಗಿ ಹೋಗುತ್ತದೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಗಳೆ, ಈ ಪಿ.ಎಂ. ಕಿಸಾನ್ ಯೋಜನೆಯಡಿ ರೂ.10000 ದಂತೆ ಮೂರು ಕಂತುಗಳನ್ನು ಕೊಡಬೇಕು. ರಾಜ್ಯ ಸರ್ಕಾರ ರೂ. 10000 ಗಳ ಮೊತ್ತವನ್ನು ವರ್ಷಕ್ಕೆ ಎರಡು ಸಲ ಕೊಡಬೇಕು. ಇದನ್ನು ದ್ವಿಗುಣ ಮಾಡುವಂತಹ ಪ್ರಯತ್ನ ಮಾಡಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಗಳೆ, ಮಾನ್ಯ ಮನಮೋಹನ್ ಸಿಂಗ್‌ರವರ ಸರ್ಕಾರ ಕೇಂದ್ರದಲ್ಲಿದ್ದಾಗ ಸಾಲ ಮನ್ನಾ ಯೋಜನೆಯನ್ನು 5 ವರ್ಷಕ್ಕೆಂದು ಮಾಡಲಾಗಿತ್ತು. ಆಗ ಅದರ ಮೊತ್ತ ರೂ. 72000 ಕೋಟಿಗಳಾಗಿತ್ತು.

(ಮುಂದು . . .)

353/15-3-2022/4-20/bkp-ak

**ಶ್ರೀ ಎನ್.ರವಿಕುಮಾರ್**(ಮುಂದು):

ಅದರಲ್ಲಿ ರೈತರ ಸಾಲ ಮನ್ನಾ ಆಗಿದ್ದು ಹೆಚ್ಚು ಅಂದರೆ 59 ಸಾವಿರ ಕೋಟಿ ರೂಪಾಯಿಗಳು. ಈ ಪಿ.ಎಂ.ಕಿಸಾನ್ ಯೋಜನೆಯಲ್ಲಿ ದೇಶದಲ್ಲಿ ರೈತರಿಗೆ ಪ್ರತಿ ವರ್ಷಕ್ಕೆ 75 ಸಾವಿರ ಕೋಟಿ ರೂಪಾಯಿಗಳು, ಇದು 5 ವರ್ಷಕ್ಕೆ ಅಲ್ಲ. ಪ್ರತಿ ವರ್ಷಕ್ಕೆ 75 ಸಾವಿರ ಕೋಟಿ ರೂಪಾಯಿಗಳನ್ನು ಕೊಡಲಾಗುತ್ತಿದೆ. ಈ ವಿಚಾರವನ್ನು ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರು ಅರ್ಥ ಮಾಡಿಕೊಳ್ಳಬೇಕು. ಅದರ ಜೊತೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ಪ್ರತಿ ವರ್ಷಕ್ಕೆ 4 ಸಾವಿರ ರೂಪಾಯಿಗಳನ್ನು ಸೇರಿಸಲಾಗುತ್ತದೆ. 5 ವರ್ಷ ಪೂರ್ಣ ಆಗುವಷ್ಟರಲ್ಲಿ ಒಬ್ಬ ಸಾಮಾನ್ಯ ರೈತನಿಗೆ 50 ಸಾವಿರ ರೂಪಾಯಿಗಳು ಬರುತ್ತದೆ. ಇದು 5 ವರ್ಷಕ್ಕೆ ಸಿಮೀತವಾಗಿರುವುದಿಲ್ಲ. ಆ ರೈತನ ಕೈಯಲ್ಲಿ ಜಮೀನು ಇರುವವರೆಗೂ ಕೂಡ 50 ಸಾವಿರ ರೂಪಾಯಿಗಳು ಬರುತ್ತಾ ಇರುತ್ತದೆ. ಹೀಗಾಗಿ, ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರು ಇದನ್ನು ಅರ್ಥ ಮಾಡಿಕೊಳ್ಳಬೇಕೆಂದು ಹೇಳುತ್ತೇನೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೆ, ಈ ವಿಚಾರವಾಗಿ ಮಾನ್ಯ ಸದಸ್ಯರು ಸಂಪೂರ್ಣ ಸುಳ್ಳು ಹೇಳಿದರು.

(ಗೊಂದಲ)

**ಶ್ರೀ ಎನ್. ರವಿಕುಮಾರ್ :-** ಮಾನ್ಯ ಸಭಾಪತಿಯವರೆ, ನಾನು ಈ ವಿಚಾರವಾಗಿ ಪಂಥ ಆಹ್ವಾನ ಮಾಡುತ್ತೇನೆ. ನಾನು ಹೇಳಿದ್ದು ಸರಿ ಇದೆ. ನಾನು ಹೇಳಿದ್ದು ಸರಿ ಇದ್ದರೆ, ಶ್ರೀ ಮರಿತಿಬ್ಬೇಗೌಡರ ಮೇಲೆ ತಾವು ಏನು ಕ್ರಮ ಮಾಡುತ್ತೀರಿ?

**(ಗೊಂದಲ)**

**ಡಾ|| ವೈ.ಎಲ್. ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):-** ಸುಳ್ಳು ಹೇಳಿದರೆ ನಿಮ್ಮ ಮನೆ ದೇವರು.

**ಶ್ರೀ ಎನ್. ರವಿಕುಮಾರ್:-** ನಾನು ದಾಖಲೆ ಕೊಡುತ್ತೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಸುಳ್ಳು ಹೇಳುವುದನ್ನು ಬಿಟ್ಟುಬಿಡಿ. ಬರಿ ಸುಳ್ಳು ಹೇಳುತ್ತಿದ್ದೀರಿ.

**ಡಾ|| ವೈ.ಎಲ್. ನಾರಾಯಣಸ್ವಾಮಿ:-** ದುಡ್ಡು ಹಾಕಿರುವುದನ್ನು ನೋಡಿ. ನಿಮಗೆ ರೈತರ ಹತ್ತಿರ ಸಂಬಂಧ ಇಲ್ಲ. ರೈತರ ಹತ್ತಿರ ಹೋಗಿ ಚೆಕ್ ಮಾಡಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ನಿಮಗೂ ಸಹ ಯಾವುದೇ ಸಂಬಂಧ ಇಲ್ಲ.

**ಡಾ|| ವೈ.ಎಲ್. ನಾರಾಯಣಸ್ವಾಮಿ:-** ರೈತರಿಗೆ ದುಡ್ಡು ಹಾಕಿರುವುದು ಸುಳ್ಳೆ. ಜೆ.ಡಿ(ಎಸ್)ನ, ಬಿಜೆಪಿ ಯ ಎಲ್ಲಾ ರೈತರ ಅಕೌಂಟ್‌ಗೆ ದುಡ್ಡು ಹೋಗಿದೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** 15 ಲಕ್ಷ ರೂಪಾಯಿಗಳು ಎಲ್ಲರಿಗೂ ಬಂದಿದೆ.

**ಡಾ|| ವೈ.ಎಲ್. ನಾರಾಯಣಸ್ವಾಮಿ:-** ಅದು ನಿಮಗೂ ಬಂದಿದೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಬರಿ ಬಿಜೆಪಿ ಯವರಿಗೆ ಬಿಟ್ಟು ಎಲ್ಲರಿಗೂ ಬಂದಿದೆ.

**ಶ್ರೀ ಎನ್.ರವಿಕುಮಾರ್:-** ಇನ್ನು ಉಳಿದಿರತಕ್ಕಂತಹ ಹಣ ಯಾರ ಜೇಬಿಗೆ ಹೋಗಿದೆ?

**(ಗೊಂದಲ)**

ನೀವು ಹಣವನ್ನೇ ಖರ್ಚು ಮಾಡಿಲ್ಲ. ನಾನು ಒಂದೇ ಲೈನ್‌ನಲ್ಲಿ ಹೇಳುತ್ತೇನೆ.

**Sri NASEER AHMED:** It's a diversion. ಅವರು ವಿಷಯವನ್ನು divert ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ನಮ್ಮ ಮಾನ್ಯ ಮರಿತಿಬ್ಬೇಗೌಡರು ಈ ವಿಷಯವನ್ನು ಡೈವರ್ಟ್ ಮಾಡುತ್ತಿದ್ದಾರೆ. ಮಾನ್ಯ ಮರಿತಿಬ್ಬೇಗೌಡರ ವಾದ ಎಂತಹದ್ದು ಎಂದರೆ ಬರಿ ಸಮಸ್ಯೆಗಳ ಪಟ್ಟಿಯನ್ನು ಮಾಡುವಂತಹದ್ಧಾಗಿದೆ. Negative attitude ನಿಂದ ಇದನ್ನು criticism ಮಾಡಿದ್ದಾರೆ. ಸ್ವಲ್ಪ ವಿಮರ್ಶೆಯನ್ನು ಮಾಡಬೇಕು, ಟೀಕೆ ಮಾಡಬೇಕೆಂದರೆ, ಸ್ವಲ್ಪ ಮಾಡಲಿ, ತೊಂದರೆಯಿಲ್ಲ, ಅದನ್ನು ಬಿಟ್ಟು, ಬರಿ ಸಮಸ್ಯೆಗಳ ಪಟ್ಟಿಯನ್ನು ಮಾಡುವುದು ಸರಿಯಲ್ಲ.

**ಶ್ರೀ ಬಿ.ಕೆ. ಹರಿಪ್ರಸಾದ್:-** ವಿರೋಧ ಪಕ್ಷದವರ ಕೆಲಸವೇ ಇದಾಗಿದೆ. ಸಮಸ್ಯೆ ಏನಿದೆ ಎನ್ನುವುದನ್ನು ಕಂಡು ಹಿಡಿಯುವುದಾಗಿದೆ. ಬಟ್ಟಂಗಿತನ ಮಾಡಲಿಕ್ಕೆ ನಾವು ಬಂದಿಲ್ಲ.

**(ಗೊಂದಲ)**

**ಸಭಾಪತಿಯವರು:** ಶ್ರೀಯುತ ಎನ್. ನಾರಾಯಣ ಸ್ವಾಮಿಯವರೆ, ಈಗ ನೀವು ಹೇಳಿದಿರಿ, ಅವರು ಸುಳ್ಳು ಎಂದು ಹೇಳಿದರು. ನಿಮಗೆಲ್ಲರಿಗೂ ಸ್ವಾತಂತ್ರ ಇದೆ. ಆಕಸ್ಮಾತ್ ಹೇಳಿದ್ದರೆ, ನೀವು ದಾಖಲೆಯನ್ನು ಕೊಡಿ, ಅವರು ದಾಖಲೆಯನ್ನು ಕೊಡಲಿ.

**ಶ್ರೀ ಮರಿತಿಬ್ಬೇಗೌಡ:-** ಸನ್ಮಾನ್ಯ ಸಭಾಪತಿಯವರೆ, ತಮಗೂ ಗೊತ್ತಿದೆ, ಈ ಸಮಸ್ಯೆ ಏನೆಂದರೆ, ಪಂಪ್‌ಸೆಟ್‌ಗಳಿಗೆ 7 ಗಂಟೆ ವಿದ್ಯುತ್ ಕೊಡುತ್ತೇವೆಂದು ಹೇಳಿ, ಈಗ 6 ಗಂಟೆಗೆ ಬಂದಿದ್ದಾರೆ. ಕೊಡುವಂತಹ 6 ಗಂಟೆ ಕೂಡ ಪಾರ್ಟ್‌ಟೈಮ್ ಕೊಡುತ್ತಿದ್ದಾರೆ. 2 ಗಂಟೆ ಒಂದು ವೇಳೆ, 4 ಗಂಟೆ ಒಂದು ವೇಳೆ ಕೊಡುತ್ತಿದ್ದಾರೆ. ಅದು ಸಹ ರಾತ್ರಿ ವೇಳೆ

ಕೊಡುತ್ತಿದ್ದಾರೆ. ರಾತ್ರಿ 10 ಗಂಟೆ ಮೇಲೆ 2 ಗಂಟೆ, ಮತ್ತೆ ಬೆಳಗಿನ ಜಾವ 3 ಗಂಟೆ ಮೇಲೆ 4 ಗಂಟೆ ಕೊಡುತ್ತಾರೆ. ಈ ರೀತಿಯಲ್ಲಿ shift ಮಾಡಿದ್ದಾರೆ. 7 ಗಂಟೆ ಹೋಗಿ 6 ಗಂಟೆ ಮಾಡಿ ಅದನ್ನೂ ಸಹ shift ಮಾಡಿದ್ದಾರೆ.

ಮಾನ್ಯ ಸಭಾಪತಿಯವರೆ, ಇವತ್ತು ರಾಜ್ಯದಲ್ಲಿ ಯಾವ ರೈತನು ಕೂಡ ರಾತ್ರಿ ವೇಳೆ ಕಾಡಿಗೆ ಮತ್ತು ಬಯಲಿಗೆ ಹೋಗಲಿಕ್ಕೆ ಆಗುವುದಿಲ್ಲ. ಏಕೆಂದರೆ, ಪ್ರಾಣಿಗಳ ಮತ್ತು ಹಾವುಗಳ ಕಾಟ. ಚಿರತೆ ಮತ್ತು ಆನೆ ಕಾಟ. ಹೀಗಾಗಿ ಅವರು ಆ ಸಮಯದಲ್ಲಿ ಹೋಗಲಿಕ್ಕೆ ಆಗುವುದಿಲ್ಲ. ಇವತ್ತು ಆಟೋ ಬಂದಿದ್ದರೂ ಕೂಡ ನಮ್ಮ ಎಲೆಕ್ಟ್ರಿಸಿಟಿಯಲ್ಲಿ ಪಂಪ್‌ಸೆಟ್‌ಗಳು ಚಾಲನೆಯಾಗಲಿಕ್ಕೆ auto-generator ಗಳು ಬಂದಿದ್ದರೂ ಕೂಡ ಆ ನೀರು ಎಲ್ಲಿ ಹೋಗುತ್ತದೆ ಎಂದು ನೋಡಬೇಕಲ್ಲವೇ? ಅಂತಹ ಒಂದು ಪರಿಸ್ಥಿತಿ ಇದೆ. ದಯಮಾಡಿ ಇವತ್ತು ನಾವು ಇಂಧನದ ವಿಚಾರವಾಗಿ ಸಂಪೂರ್ಣವಾಗಿ ಸ್ವಾಲಂಬಿಯಾಗಿದ್ದೇವೆ. ಕರ್ನಾಟಕಕ್ಕೆ ಅಗತ್ಯವಾದ ಇಂಧನವನ್ನು ಉತ್ಪಾದನೆ ಮಾಡುತ್ತಿರುತ್ತೇವೆಂದು ಘೋಷಣೆ ಮಾಡಿ ಬಹಳ ವರ್ಷಗಳಾಯಿತು. ಏತಕ್ಕೆ ಹಗಲು ಸಮಯದಲ್ಲಿ 12 ಗಂಟೆ ಕಾಲ ರೈತರಿಗೆ ವಿದ್ಯುತ್ ಕೊಡಲಿಕ್ಕೆ ಆಗುವುದಿಲ್ಲ?

**ಸಭಾಪತಿಯವರು:–** 7 ಗಂಟೆ ವಿದ್ಯುತ್ ಕೊಟ್ಟರೆ ಸಾಕು.

**ಶ್ರೀ ಮರಿತಿಬ್ಬೇಗೌಡ:–** ಸನ್ಮಾನ್ಯ ಸಭಾಪತಿಯವರೆ, 7 ಗಂಟೆ ಇದ್ದುದನ್ನು ಕಡಿಮೆ ಮಾಡಿದ್ದಾರೆ. 12 ಗಂಟೆಗಳ ಕಾಲ ನೀವು ಏತಕ್ಕೆ ವಿದ್ಯುತ್ ಅನ್ನು ಕೊಡಲಿಕ್ಕೆ ಆಗುವುದಿಲ್ಲ? ಇವತ್ತು ಕೃಷಿ ಆದಾಯ ಯಾವುದೇ ಸರ್ಕಾರಕ್ಕೆ ಎಷ್ಟು ಬರುತ್ತದೆ, ಇವತ್ತು ರೈತನ ದುಡಿಮೆಯಿಂದ ಎಷ್ಟು ಆದಾಯ ಬರುತ್ತದೆ? ಪ್ರತಿಯೊಂದು ಆದಾಯವೂ ಕೂಡ ಈ ಸರ್ಕಾರಕ್ಕೆ ಬರುವಂತಹದ್ದು ಅಂದರೆ, agriculture income ನಿಂದ 14.7% ರಷ್ಟು G.S.D.P. (Gross State Domestic Product) ಬರುತ್ತದೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೆ, ಕೃಷಿಯಿಂದ ಶೇಕಡ 2.2% ರಷ್ಟು ಆದಾಯ ಬರುತ್ತದೆ ಮಾನ್ಯ ಸದಸ್ಯರು ಪುಸ್ತಕವನ್ನಿಟ್ಟುಕೊಂಡು ಅಂಕಿ-ಅಂಶವನ್ನು ಹೇಳಬೇಕು. ಅಂಕಿ-ಅಂಶಗಳನ್ನು ನನಗೂ ಹೇಳಲಿಕ್ಕೆ ಬರುತ್ತದೆ. ಸುಮ್ಮ-ಸುಮ್ಮನೆ ತಪ್ಪು ತಪ್ಪಾಗಿ ವರದಿಯನ್ನು ಕೊಡುವಂತಹ ಅವಶ್ಯಕತೆ ಇಲ್ಲ. ನಿಮ್ಮ ಪುಸ್ತಕ ತೆಗೆದು ನೋಡಿ. 2% ಕೃಷಿಯಿಂದ ಬರುತ್ತದೆ. 9%....

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸದಸ್ಯರು ಸುಳ್ಳನ್ನು ಹೇಳುತ್ತಿದ್ದಾರೆ. ಅದು ಸುಳ್ಳಿನ ಕಂತೆ. The Hon'ble Member is telling the facts and figures.

**ಶ್ರೀ ಮರಿತಿಬ್ಬೇಗೌಡ: -** ಆಯವ್ಯಯದ ಪಟ ಸಂಖ್ಯೆ 8 ರಲ್ಲಿ ಮಧ್ಯಮಾವಧಿ ವಿತ್ತೀಯ ಯೋಜನೆ. ನೋಡಿ. 2022-26ರಲ್ಲಿ ಕೃಷಿಯಿಂದ 14.7% ರಷ್ಟು G.S.D.P. contribution ಬರುತ್ತದೆ. ಇದು ಕೃಷಿಯ ಕೊಡುಗೆ.

**(ಗೊಂದಲ)**

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:-** ನಮಗೆ ನಾಗಪುರದಲ್ಲಿ ಬೆಣ್ಣೆ ಕೊಡುವಂತಹದ್ದು ಸತ್ಯ ಇದೆ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ತಾವು ಬ್ಲೂ ಫಿಲಂ ನೋಡಿದ್ದು ಸಹ ಸತ್ಯ ಇದೆ. ಸತ್ಯ ನನಗೂ ಗೊತ್ತಿದೆ.

**(ಗೊಂದಲ)**

**ಶ್ರೀ ವೈ.ಎ. ನಾರಾಯಣಸ್ವಾಮಿ:** ಪ್ರತಿಪಕ್ಷದ ನಾಯಕರಿಗೆ ಒಂದು ಗೌರವ ಸ್ಥಾನ-ಮಾನ ಇದೆ. ಅವರು ಈ ರೀತಿ ಮಾತನಾಡುವುದೇ?

**ಶ್ರೀ ಮರಿತಿಬ್ಬೇಗೌಡ:-** ಮಾಹಿತಿ ಇಲ್ಲದೆ ಬಾಯಿಗೆ ಬಂದ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ಇಲ್ಲಿ ನೋಡಿ, ನಾನು ತೋರಿಸುತ್ತೇನೆ. ಏನಾದರೂ ತಿದ್ದುಪಡಿ ಇದ್ದರೆ ತಿದ್ದಿಕೊಳ್ಳುತ್ತೇನೆ.

**ಸಭಾಪತಿಯವರು:** ಕಳುಹಿಸಿ, ಇಬ್ಬರನ್ನು ಆ ಕಡೆ ಕಳುಹಿಸಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೆ, ಇನ್ನು 14.7% ಆದಾಯವನ್ನು ಕೊಟ್ಟರೆ, ಅದಕ್ಕೆ ಬಜೆಟ್‌ನಲ್ಲಿ ಅನುದಾನ ಕೊಟ್ಟಿರುವಂತಹದ್ದು 3%. ನೋಡಿ. G.S.D.P. ಗೆ 14.7% ರಷ್ಟು ಕೊಡುಗೆಯನ್ನು ಕೊಡುವಂತಹ ಕೃಷಿಗೆ ನಾವು ಅನುದಾನವನ್ನು ಕೊಟ್ಟಿರುವುದು 3% ಮಾತ್ರ. ರೈತರಿಗೆ ಕೆಲಸ ಮಾಡಿದ್ದೇವೆ, ರೈತರನ್ನು ಬಂಗಾರ ಮಾಡಿದ್ದೇವೆ, ಈ ರೀತಿಯಲ್ಲಿ ಹೇಳಿಕೊಳ್ಳುವುದೇನು? ದುಪ್ಪಟ್ಟು ಬೆಲೆ.

ಮಾನ್ಯ ಸಭಾಪತಿಯವರೆ, ದಯಮಾಡಿ ನಾನು ರೈತರ ಪಂಪ್‌ಸೆಟ್‌ಗಳಿಗೆ, ಕನಿಷ್ಟ 10 ಗಂಟೆಯಾದರೂ ಸಹ ಹಗಲು ಹೊತ್ತಿನಲ್ಲಿ ವಿದ್ಯುಚ್ಛಕ್ತಿ ಕೊಡುವಂತಹದ್ದನ್ನು ದಯವಿಟ್ಟು ಮಾಡಿ, ತಾವು ರಕ್ಷಣೆಗೆ ಬನ್ನಿ. ರೈತರು ಉಳಿದರೆ ಮಾತ್ರ ನಾವು ಮತ್ತು ನೀವು ಉಳಿಯುತ್ತೇವೆ, ಮತ್ತೆ ಈ ದೇಶ ಉಳಿಯುತ್ತದೆ. ಇದನ್ನು ದಯವಿಟ್ಟು ಅರ್ಥಮಾಡಿಕೊಳ್ಳಿ. ನೋಡಿ, ಈ ಎಲೆಕ್ಟ್ರಿಸಿಟಿ ವ್ಯವಸ್ಥೆಗೆ ಸಂಬಂಧಪಟ್ಟಹಾಗೆ ಬಲವರ್ಧನೆಗೆ ಒಂದು ಸ್ವಲ್ಪವೂ ಅವಕಾಶವನ್ನು ಕೊಡುತ್ತಿಲ್ಲ. ಏನಿದ್ದರೂ ಈ ಮೀಟರ್ ಅನ್ನು ತೆಗೆದು ಹಾಕಿ, ಆ ಮೀಟರ್ ಹಾಕಿ ಎಂದು ಹೇಳುತ್ತಾರೆ. ಇಲ್ಲಿ ನಡೆಯುತ್ತಿರುವುದು ಇಷ್ಟು ಕೆಲಸ ಮಾತ್ರ. ಸಿಸ್ಟಮ್ ಬಲವರ್ಧನೆಗೆ K.P.T.C.L ನಲ್ಲಿ ಏನೂ ಕ್ರಮ ಇಲ್ಲ. ಯಾವುದೇ ಬಜೆಟ್‌ನಲ್ಲಿ ಹಣವನ್ನು ಇಟ್ಟಿರುವುದಿಲ್ಲ. ಪ್ರತಿ ವರ್ಷವೂ ಸಹ ವಿದ್ಯುತ್‌ದರ ಜಾಸ್ತಿಯಾಗುತ್ತಿರುತ್ತದೆ.

**ಮುಂದು.**

**(354) 15.03.2022 04.30 ಎಸ್‌ವಿ-ವಿಕೆ (ಎಂಡಿ) (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಮರಿತಿಬ್ಬೇಗೌಡ (ಮುಂದು):-**

ಹೊರರಾಜ್ಯಗಳಲ್ಲಿ ಸಬ್ಸಿಡಿಯನ್ನು ಕೊಟ್ಟರೆ ನಮ್ಮ ರಾಜ್ಯದಲ್ಲಿ ದರ ಹೆಚ್ಚಾಗುತ್ತಿರುತ್ತದೆ. ಆದರೆ ನೀವು ಎಲ್ಲಾ ಕಂಪನಿಗಳು ನಷ್ಟದಲ್ಲಿ ನಡೆಯುತ್ತಿವೆ ಎಂದು ಹೇಳುತ್ತೀರಿ. ಏಕೆ ನಷ್ಟ ಅನುಭವಿಸುತ್ತವೆ? ಪ್ರತಿ ವರ್ಷವೂ ನೀವು ದರ ಹೆಚ್ಚು ಮಾಡುತ್ತೀರಿ. ಎಲ್ಲವನ್ನೂ ಮಾಡುತ್ತೀರಿ. ಹಾಗಾದರೆ ಖಾಸಗಿ ಕಂಪನಿಯವರಿಂದ ಖರೀದಿ ಮಾಡುವಲ್ಲಿ ಏನಾದರೂ ಲೋಪವಾಗುತ್ತಿದೆಯೇ? ಕಂಪನಿಗಳು ಏಕೆ ಇಷ್ಟೆಲ್ಲಾ ನಷ್ಟ ಅನುಭವಿಸುತ್ತಿವೆ? ರೈತನಿಗೆ ಟ್ರಾನ್ಸ್‌ಫಾರ್ಮರ್ ಅನ್ನು 24 ಗಂಟೆಗಳಲ್ಲಿ ಕೊಡುತ್ತೇವೆಂದು ಹೇಳಿದಿರಿ. Additional TC ಹಾಕಬೇಕೆಂದರೆ ಒಂದು ತಿಂಗಳು ಕಳೆದರೂ ಆಗುವುದಿಲ್ಲ. ಈ ಬೇಸಿಗೆ ಕಾಲದಲ್ಲಿ ರೈತ ಉಳಿಯುವುದು ಹೇಗೆ? Additional TC ಹಾಕುವ ಕಾರ್ಯ ಒಂದು ತಿಂಗಳಾದರೂ ಆಗುವುದಿಲ್ಲ, ಅದಕ್ಕೆ ರೈತ ಹಣವನ್ನು ಕಟ್ಟುತ್ತಾನೆ. ದಯಮಾಡಿ ಕೂಡಲೇ ರೈತರಿಗೆ ಟ್ರಾನ್ಸ್‌ಫಾರ್ಮರ್ ಸಿಗುವಂತೆ ಮಾಡಿಸಿ.

ಕೃಷಿ ವಿಶ್ವವಿದ್ಯಾಲಯದಲ್ಲಿ ತಳಿಗಳ ಸಂಶೋಧನೆ ಮತ್ತು ಅಭಿವೃದ್ಧಿಗೆ ಅವಕಾಶ ಇದೆ. ಆದರೆ ಕೃಷಿ ವಿಶ್ವವಿದ್ಯಾಲಯದ ಎಲ್ಲಾ ಕಡೆಗಳಲ್ಲಿಯೂ ಬೋಧಕ ಹುದ್ದೆಗಳು ಅಂದರೆ teaching faculty ಖಾಲಿಯಿವೆ. ದಯವಿಟ್ಟು ಅವುಗಳನ್ನು ಭರ್ತಿ ಮಾಡುವಂತಹ ಕೆಲಸ ಮಾಡಬೇಕು. ಜೊತೆಗೆ ಮಂಡ್ಯದಲ್ಲಿ ವಿಸಿ ಫಾರಂ ಎಂದು ಇದೆ. ಇದನ್ನು ಮಹಾರಾಜರು ಪ್ರಾರಂಭ ಮಾಡಿದ್ದು, ಸರ್ ಎಂ.ವಿಶ್ವೇಶ್ವರಯ್ಯನವರ ಹೆಸರನ್ನು ಇಡಲಾಗಿದೆ. ಇಲ್ಲಿ 600 ಎಕರೆ ಪ್ರದೇಶವಿದ್ದು, ರಾಗಿ, ಕಬ್ಬು, ಭತ್ತ ಮುಂತಾದವುಗಳ ಎಲ್ಲಾ ತಳಿಗಳನ್ನು ಸಂಶೋಧನೆ ಮಾಡಲಾಗುತ್ತದೆ. ಅಲ್ಲಿ ಸ್ನಾತಕೋತ್ತರ ಕೇಂದ್ರವಿದ್ದು, ಪಿ.ಹೆಚ್.ಡಿಯನ್ನು ಕೊಡುತ್ತಾರೆ. ಇದನ್ನು ಈ ಬಾರಿಯ ಆಯವ್ಯಯದಲ್ಲಿ ವಿಶ್ವವಿದ್ಯಾಲಯವನ್ನಾಗಿ ಮಾಡುತ್ತಾರೆ ಎಂದು ನಾನು ಕಾಯುತ್ತಿದ್ದರೆ, ಅದನ್ನು ವಿಶ್ವವಿದ್ಯಾಲಯವನ್ನಾಗಿ ಮಾಡಲೇ ಇಲ್ಲ. ಇದು ಎಂತಹ ಜಾಗ! ಮೈಸೂರು ಮಹಾರಾಜರು ಮಾಡಿರುವ 600 ಎಕರೆಯುಳ್ಳ ಪ್ರದೇಶ. ಮಂಡ್ಯದ ಪಕ್ಕದಲ್ಲೇ ಇದ್ದು, ಇಲ್ಲಿ ಉತ್ತಮವಾದ

ಸಂಶೋಧನೆಗಳು ನಡೆಯುತ್ತಿವೆ. ದಯಮಾಡಿ ಅದನ್ನು ವಿಶ್ವವಿದ್ಯಾಲಯವನ್ನಾಗಿ ಮಾಡಬೇಕೆಂದು ನಾನು ಘನ ಸರ್ಕಾರದಲ್ಲಿ ಒತ್ತಾಯ ಮಾಡುತ್ತೇನೆ.

ಮಾನ್ಯ ಯಡಿಯೂರಪ್ಪನವರು ರೈತರ ಶಾಲನ್ನು ಹೊದ್ದುಕೊಂಡು "ಕೃಷಿ ಬಜೆಟ್" ಎಂದು ಪ್ರತ್ಯೇಕವಾಗಿ ಒಂದು ಬಜೆಟ್ ಅನ್ನು ಮಾಡಿದ್ದರು. ಕೃಷಿ ಬಜೆಟ್ ಎಂದು ಒಂದು ಪುಸ್ತಕ, ಇತರೆ ಬಜೆಟ್ ಎಂದು ಒಂದು ಪುಸ್ತಕವನ್ನು ನಮಗೆ ಕೊಟ್ಟಿದ್ದರು. ರೈತರ ಹಸಿರು ಶಾಲನ್ನು ಹೊದ್ದು, ಪ್ರಮಾಣ ವಚನ ಸ್ವೀಕರಿಸಿದರು. ನಮ್ಮ ಸರ್ಕಾರ ಬಂದರೆ ಸ್ವಾಮಿನಾಥನ್ ವರದಿಯನ್ನು ಜಾರಿಗೆ ತರುತ್ತೇವೆಂದು ಮಾನ್ಯ ಪ್ರಧಾನಮಂತ್ರಿಯವರು ಹೇಳಿದ್ದರು. ಸ್ವಾಮಿನಾಥನ್ ವರದಿ ಜಾರಿಗೆ ಬರಲೇ ಇಲ್ಲ. ಕರ್ನಾಟಕ ರಾಜ್ಯದಲ್ಲಿ ಕೃಷಿ ವಲಯವನ್ನು ಕೈಗಾರಿಕಾ ವಲಯ ಎಂದು ಮಾಡಬೇಕು. ಅದರಿಂದಲಾದರೂ ಸ್ವಲ್ಪ ಏನಾದರೂ ಸುಧಾರಣೆಯಾಗಲಿ.

ಮಾನ್ಯ ಎಸ್.ಎಂ.ಕೃಷ್ಣ ಅವರು ಮೊಟ್ಟಮೊದಲಿಗೆ "ಸ್ತ್ರೀಶಕ್ತಿ ಮಹಿಳಾ ಸ್ವಸಹಾಯ ಸಂಘ" ಎಂದು ಈ ರಾಜ್ಯದಲ್ಲಿ ಪ್ರಾರಂಭ ಮಾಡಿದರು. ಅದು ಇಡೀ ಭಾರತ ದೇಶವನ್ನೇ ಆವರಿಸಿತು.

**ಶ್ರೀಮತಿ ಭಾರತಿ ಶೆಟ್ಟಿ:–** ಇಲ್ಲ ಮಾನ್ಯ ಸಭಾಪತಿಯವರೇ, ದಿವಂಗತ ಅಟಲ್ ಬಿಹಾರಿ ವಾಜಪೇಯಿಯವರು ಪ್ರಧಾನಿಯಾಗಿದ್ದಾಗ ಸ್ವಸಹಾಯ ಸಂಘಗಳನ್ನು ಕೇಂದ್ರದಲ್ಲಿ ಮಾಡಿದ್ದರು. ನಂತರ ನಮ್ಮ ರಾಜ್ಯದಲ್ಲಿ ಮಾನ್ಯ ಎಸ್.ಎಂ.ಕೃಷ್ಣ ಅವರು ಸ್ತ್ರೀಶಕ್ತಿ ಗುಂಪುಗಳನ್ನು ಮಾಡಿದ್ದರು. ಇಡೀ ಭಾರತದಲ್ಲಿ ಮೊದಲು ಮಾಡಿದ್ದು ದಿವಂಗತ ಅಟಲ್ ಬಿಹಾರಿ ವಾಜಪೇಯಿಯವರು.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಭಾರತಿ ಶೆಟ್ಟಿಯವರೇ, ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರನ್ನು ನಾವು ನೆನಪಿಸಿಕೊಳ್ಳುತ್ತೇವೆ. ದೊಡ್ಡ ಮಹಾತ್ಮರು. ಈ ಜಗತ್ತಿನಲ್ಲಿ, ಈ ಭಾರತ ದೇಶದಲ್ಲಿ ಎಲ್ಲಾ ಜನಾಂಗದವರೂ, ಎಲ್ಲಾ ರಾಜಕೀಯ ಪಕ್ಷದವರು, ಎಲ್ಲಾ ಜಾತಿ–ಧರ್ಮದವರೂ ಪ್ರೀತಿಸುವಂತಹ ದೊಡ್ಡ ವ್ಯಕ್ತಿತ್ವ ದಿವಂಗತ ವಾಜಪೇಯಿಯವರದ್ದು. ಆದರೆ ಈಗ ನಿಮ್ಮ ಸರ್ಕಾರದಲ್ಲಿ ಆ ಬದ್ಧತೆ ಇದೆಯೇ? ಇದು ವಾಜಪೇಯಿ ಸರ್ಕಾರವಲ್ಲ.

ಮಾನ್ಯ ಎಸ್.ಎಂ.ಕೃಷ್ಣ ಅವರು ಸ್ವಸಹಾಯ ಸಂಘ ತೆಗೆದುಕೊಂಡು ಬಂದ ಮೇಲೆ ಮಹಿಳೆಯರಿಗೆ ಬ್ಯಾಂಕ್‌ಗಳಿಂದ ಸಾಲ-ಸವಲತ್ತು ಕೊಟ್ಟು ಹದಿನೈದಿಪ್ಪತ್ತು ಮಂದಿ ಸೇರಿ ಸಂಘ ರಚನೆ ಮಾಡಿಕೊಂಡು ಅಲ್ಲಿ ಅವರು ಆರ್ಥಿಕ ಬೆಳವಣಿಗೆಯನ್ನು ರೂಢಿಸಿಕೊಳ್ಳಬೇಕು. ಬ್ಯಾಂಕಿಂಗ್ ಪದ್ಧತಿ ರೂಢಿಯಾಗಬೇಕೆಂದು ಇದನ್ನು ತರಲಾಯಿತು. ಸಹಕಾರ ಸಂಘಗಳಿಂದ ಶೇ.4 ರ ಬಡ್ಡಿ ದರದಲ್ಲಿ ಅವರಿಗೆ ಸಾಲ ಕೊಡುವ ವ್ಯವಸ್ಥೆಯನ್ನು ನೀವು ಮಾಡಿದ್ದೀರಿ. ಮಹಿಳೆಯರು ಸಮಾಜದಲ್ಲಿ ಪ್ರಮುಖರಾಗಿದ್ದು, ಶೇ.50 ಭಾಗ ಮಹಿಳೆಯರಿದ್ದಾರೆ. ಈ ಮಹಿಳೆಯರ ಆರ್ಥಿಕ ಅಭಿವೃದ್ಧಿ ಆಗಬೇಕಾಗಿದೆ. ಇದರಿಂದ ಎಲ್ಲರ ಆರ್ಥಿಕ ಅಭಿವೃದ್ಧಿಯಾಗುತ್ತದೆ. ಶೇ.4 ರ ದರದ ಸಾಲವನ್ನು ಬಡ್ಡಿ ರಹಿತವಾಗಿ ಶೂನ್ಯ ಬಡ್ಡಿ ದರದಲ್ಲಿ ಅವರಿಗೆ ಸಾಲ ಕೊಡಬೇಕೆಂದು ನಾನು ಮನವಿ ಮಾಡುತ್ತೇನೆ. ಈ ಬಾರಿಯ ಆಯವ್ಯಯದಲ್ಲಿ ಇದನ್ನು ಮಾಡುತ್ತಾರೆ ಎಂದು ಭಾವಿಸಿದ್ದೆನು. ಶೂನ್ಯ ಬಡ್ಡಿ ದರದಲ್ಲಿ ಅವರಿಗೆ ಸಾಲ ಸವಲತ್ತನ್ನು ಕೊಡಬೇಕು. ಅವರ ಆರ್ಥಿಕ ಸುಧಾರಣೆಯಾಗಬೇಕು. ಮಹಿಳೆಯರ ಸಬಲೀಕರಣದ ವಿಷಯದಲ್ಲಿ ಇದನ್ನು ಮಾಡಬೇಕೆಂದು ನಾನು ವಿನಂತಿಸುತ್ತೇನೆ.

ರೂ.3 ಲಕ್ಷಗಳವರೆಗೆ ಶೂನ್ಯ ಬಡ್ಡಿ ದರದಲ್ಲಿ ಬೆಳೆ ಸಾಲವನ್ನು ನೀಡಲಾಗುತ್ತಿದೆ. ಇದರಿಂದ ರೈತರಿಗೆ ಬಹಳಷ್ಟು ಅನುಕೂಲವಾಗುತ್ತಿದೆ. ದಯವಿಟ್ಟು ಇದನ್ನು ರೂ.5 ಲಕ್ಷಗಳವರೆಗೆ ಹೆಚ್ಚಿಸುವ ಬಗ್ಗೆ ಸರ್ಕಾರ ಒಂದು ಚಿಂತನೆ ಮಾಡಬೇಕು.

ದಿನಾಂಕ 31.01.2020ರಂದು ಕೋವಿಡ್ ಸಂದರ್ಭದಲ್ಲಿ ಸುಸ್ತಿಯಾಗಿದ್ದವರಿಗೆ ಬಡ್ಡಿ ಮನ್ನಾ ಮಾಡಿದ್ದರು. ಈ ವಿಷಯದಲ್ಲಿ ಸರ್ಕಾರವನ್ನು, ಮಾನ್ಯ ಮುಖ್ಯಮಂತ್ರಿಯವರನ್ನು ಹಾಗೂ ಮಾನ್ಯ ಸಹಕಾರ ಸಚಿವರನ್ನು ಬಹಳವಾಗಿ ಅಭಿನಂದಿಸುತ್ತೇನೆ. ದಿನಾಂಕ 30.06.2020ಕ್ಕೆ ಹಣವನ್ನು ಕಟ್ಟಿಬಿಟ್ಟರೆ ಬಡ್ಡಿ ಕಟ್ಟುವಂತಿಲ್ಲ. ಬಡ್ಡಿಯನ್ನು ಸರ್ಕಾರ ತುಂಬಿ ಕೊಡುತ್ತದೆ ಎಂದು ಮಾಡಿದರು. ಅದರಲ್ಲಿ ಶೇ.50ಕ್ಕೂ ಹೆಚ್ಚು ಮಂದಿ ಸಾಲ ತೀರುವಳಿ ಮಾಡಿದರು. ಈಗ ಹೊಸ ಸಾಲ ತೆಗೆದುಕೊಳ್ಳುತ್ತಿದ್ದಾರೆ. ಆದರೆ ಶೇ.40 ರಷ್ಟು ಮಂದಿಗೆ ಹಣ ಲಭ್ಯತೆಯಾಗದ ಕಾರಣ ಕಟ್ಟಲಿಕ್ಕೆ ಆಗಲಿಲ್ಲ. ಅಂತಹವರಿಗೆ ಇನ್ನೊಂದು ಅವಧಿಯನ್ನು ವಿಸ್ತರಣೆ ಮಾಡಿದರೆ ಅವರು ಕೂಡ ತೀರುವಳಿ ಮಾಡಿ ಪುನಃ ಹೊಸ ಸಾಲ ತೆಗೆದುಕೊಳ್ಳುವಂತೆ ಆಗುತ್ತದೆ. ಹಣ ಕಟ್ಟದಿರುವುದರಿಂದ ಈಗ

ಯಾರಿಗೂ ಹೊಸ ಸಾಲ ಸಿಗುತ್ತಿಲ್ಲ. ಆದ್ದರಿಂದ ಈ ಕೆಲಸವನ್ನು ದಯಮಾಡಿ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

ನಮ್ಮ ನಾಯಕರಾದಂತಹ ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಕಾಂಗ್ರೆಸ್ ಪಕ್ಷದೊಂದಿಗೆ ಮೈತ್ರಿ ಸರ್ಕಾರ ಇದ್ದಾಗ ರೂ. 1 ಲಕ್ಷದವರೆಗೆ ಸಾಲ ಮನ್ನಾ ಮಾಡಿದರು. ಅದರಲ್ಲಿ ಬಹಳಷ್ಟು ಮಂದಿಗೆ ಕೆಲವು ದಾಖಲೆಗಳಲ್ಲಿ ತಪ್ಪುಗಳಿದೆ, ಅವು ತಿದ್ದುಪಡಿಯಾಗಬೇಕು ಎನ್ನುವ ದೃಷ್ಟಿಯಿಂದ ಇನ್ನೂ ಕೂಡ ಆ ಯೋಜನೆಯಲ್ಲಿ ಹಣ ತಲುಪಿಲ್ಲ. ಈಗ ಅವೆಲ್ಲವನ್ನು ಮಾಡಿ green sheet ಅನ್ನು ಸಿದ್ಧಪಡಿಸಲಾಗಿದೆ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಿದ್ದರಾಮಯ್ಯನವರು ರೂ.50,000 ಮಾಡಿದಂತಹ ಸಂದರ್ಭದಲ್ಲಿ ಷರತ್ತುಗಳನ್ನು ಹಾಕಲಿಲ್ಲ. ರೂ.1 ಲಕ್ಷ ಮನ್ನಾ ಮಾಡಿದಂತಹ ಸಂದರ್ಭದಲ್ಲಿ ಷರತ್ತು ಹಾಕಿದರು. ಎಪಿಎಲ್ ಅಥವಾ ಬಿಪಿಎಲ್ ಕಾರ್ಡ್‌ದಾರರು, ಪಿಂಚಣಿ ರಹಿತರು, ಆದಾಯ ತೆರಿಗೆ ಕಟ್ಟದಿರುವವರು, ಪಹಣಿ ಮುಂತಾದವು ಅವರ ಹೆಸರಿನಲ್ಲಿರಬೇಕು. ಬ್ಯಾಂಕ್ ಅಕೌಂಟ್ ಸಂಖ್ಯೆಯನ್ನು ಕೊಡಬೇಕು ಎಂದು ಮಾಡಿದ್ದರು. ಶೇ.90ರಷ್ಟು ಜನಕ್ಕೆ ಸಾಲ ಮನ್ನಾ ಆಗಿದೆ. ಇನ್ನು 15,000 ಜನಕ್ಕೆ ಅದನ್ನು ಮಾಡಿಕೊಡಲು ಎರಡು ವರ್ಷದಿಂದ ಶತ ಪ್ರಯತ್ನ ಪಡುತ್ತಿದ್ದೇವೆ. ಬಿಪಿಎಲ್ ಅಥವಾ ಎಪಿಎಲ್ ಕಾರ್ಡ್, ಬ್ಯಾಂಕ್ ಅಕೌಂಟ್, ಪಿಂಚಣಿಯ ಮಾಹಿತಿಗಳನ್ನು ಕೊಟ್ಟರೆ ಇನ್ನುಳಿದ 15,000 ಜನರಿಗೂ ಕ್ಲಿಯರ್ ಆಗುತ್ತದೆ. ನೂರಕ್ಕೆ ನೂರರಷ್ಟು ಸಾಲ ಮನ್ನಾ ಮಾಡಲಾಗುವುದು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಚಿವರೇ, ನಿನ್ನೆ ತಾವು ಇರಲಿಲ್ಲ. ಈ ವಿಷಯದಲ್ಲಿ ನಿನ್ನೆ ನಾನು ಪ್ರಸ್ತಾಪ ಮಾಡಿದೆನು. ಮಂಡ್ಯ ಜಿಲ್ಲೆಯಲ್ಲಿ 3,200 ಜನರದ್ದು update ಆಗಿದೆ, feed ಕೂಡ ಆಗಿದೆ. 39 ತಿಂಗಳು ಕಳೆದಿದ್ದರೂ ಅವರಿಗೆ ಹಣ ತುಂಬಿರುವುದಿಲ್ಲ. ಈಗ ಅವರಿಗೆ ಹೊಸ ಸಾಲವೂ ಸಿಗುವುದಿಲ್ಲ. ಮನ್ನಾ ಹಣವನ್ನೂ ತುಂಬಲಿಲ್ಲ. ಈ ಪರಿಸ್ಥಿತಿಯಲ್ಲಿ ಏನು ಮಾಡುವುದು?

**ಶ್ರೀ ಎಸ್.ಟಿ.ಸೋಮಶೇಖರ್:-** 55000 ದಲ್ಲಿ 40,000 ಕ್ಲಿಯರ್ ಆಗಿದೆ. ರೂ.232 ಕೋಟಿ ಆರ್ಥಿಕ ಇಲಾಖೆಗೆ ಹೋಗಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಒಟ್ಟು ರೂ.460 ಕೋಟಿ ಬೇಕಾಗುತ್ತದೆ.

**ಶ್ರೀ ಎಸ್,ಟಿ.ಸೋಮಶೇಖರ್:-** ಅದನ್ನೂ ಸೇರಿಸಿ claim ಮಾಡಿದ್ದೇವೆ. ಮಾನ್ಯ ಮುಖ್ಯಮಂತ್ರಿಯವರು ಒಪ್ಪಿದ್ದಾರೆ, ಕ್ಲಿಯರ್ ಆಗುತ್ತದೆ. ಎರಡು ವರ್ಷಗಳಾದರೂ 15,000 ಜನರು ಸರಿಯಾದ ದಾಖಲೆಗಳನ್ನು ಕೊಡುತ್ತಿಲ್ಲ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಏನೇನು conditions ಇವೆಯೋ ಅವುಗಳನ್ನು ಸರಳ ಮಾಡಿಕೊಡಿ ಎಂದು ನಾನು ಕೇಳುವುದಿಲ್ಲ. ಅವುಗಳ ಜೊತೆಗೆ ಸಣ್ಣಪುಟ್ಟ ತಪ್ಪುಗಳನ್ನು ಮನ್ನಿಸಿ ಅವರಿಗೆ ಆ ಸೌಲಭ್ಯವನ್ನು ತಲುಪಿಸುವಂತಹ ಕೆಲಸ ಮಾಡಬೇಕು.

ಮಾನ್ಯ ಸಚಿವರೇ, ಮಾನ್ಯ ಮುಖ್ಯಮಂತ್ರಿಯವರನ್ನು ಮತ್ತು ತಮ್ಮನ್ನು ವಿಶೇಷವಾಗಿ ಅಭಿನಂದಿಸುತ್ತೇನೆ. ಯಶಸ್ವಿನಿ ವಿಮಾ ಯೋಜನೆಯನ್ನು ಪುನಃ ಜಾರಿಗೆ ತರುತ್ತಿದ್ದು, ಅಲ್ಲಿ ಬಹಳಷ್ಟು ಲೋಪದೋಷಗಳಿದ್ದು, ಅವುಗಳನ್ನು ಸರಿ ಮಾಡುವಂತಹ ಕೆಲಸವನ್ನು ತಾವು ಮಾಡಬೇಕು. ಇನ್ನೂ ಕೆಲವು ಕಾಯಿಲೆಗಳಿಗೆ, ಶಸ್ತ್ರಚಿಕಿತ್ಸೆಗಳಿಗೆ ಅದನ್ನು ವಿಸ್ತರಿಸಿ ಅದನ್ನು ಜಾರಿಗೆ ತನ್ನಿ. ಅದರ ಪುಣ್ಯ ನಿಮಗೆ ಬರುತ್ತದೆ. ವಿಶೇಷವಾಗಿ ನಾನು ತಮ್ಮನ್ನು ಅಭಿನಂದಿಸುತ್ತೇನೆ.

**(...ಮುಂದು)**

**(355) 15-03-2022 (4.40) ಕೆಜಿ-ಎಂಡಿ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಮರಿತಿಬ್ಬೇಗೌಡ (ಮುಂದು):-**

ಬಜೆಟ್ ಮುಂಚೆ ಸರ್ಕಾರಿ ನೌಕರರ ಬಗ್ಗೆ ಬಾರಿ ಸಿಡಿಲು, ಗುಡುಗು ಬಹಳ ಆಗಿತ್ತು. 7 ನೇ ವೇತನ ಆಯೋಗ ರಚನೆ ಆಯಿತು. ಕೇಂದ್ರ ಮಾದರಿ ವೇತನ ಮತ್ತು ಹಳೆ ಪಿಂಚಣಿ ಆಗಿಯೇ ಬಿಟ್ಟಿತ್ತು ಎಂದು ಹೇಳುತ್ತಿದ್ದರು. ನಾನು ಅದನ್ನು ಬಜೆಟ್ ಪುಸ್ತಕದಲ್ಲಿ ಓದುವುದೊಂದೇ ಬಾಕಿ

ಅಂದುಕೊಂಡಿದ್ದೆ. ಆದರೆ, ಏನು ಆಗಿಲ್ಲ. ನಮ್ಮ ಸರ್ಕಾರಿ ನೌಕರರು ಕೋವಿಡ್-19 ಇದ್ದ ಸಂದರ್ಭದಲ್ಲಿ ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ. ಆದ್ದರಿಂದ, ದಯವಿಟ್ಟು ರಾಜ್ಯ ಸರ್ಕಾರಿ ನೌಕರರಿಗೆ 7ನೇ ವೇತನ ಆಯೋಗವನ್ನು ರಚನೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಹಾಗೆಯೇ, ಕೇಂದ್ರ ಸರ್ಕಾರಿ ನೌಕರರಿಗೆ ಕೊಡುವ ಮಾದರಿಯಲ್ಲಿಯೇ ರಾಜ್ಯ ಸರ್ಕಾರಿ ನೌಕರರಿಗೂ ವೇತನವನ್ನು ಕೊಡಬೇಕೆಂದು ಮನವಿಯನ್ನು ಮಾಡುತ್ತೇನೆ. ಈಗಾಗಲೇ ಛತ್ತೀಸ್‌ಘಡ ಮತ್ತು ರಾಜಸ್ಥಾನ ರಾಜ್ಯಗಳಲ್ಲಿ Old Pension Scheme ಅನ್ನು ಬಜೆಟ್‌ನಲ್ಲಿ ಜಾರಿಗೆ ತಂದಿದ್ದಾರೆ.

**ಸಭಾಪತಿಯವರು:-** ಈಗ 2 ದಿವಸಗಳ ಹಿಂದೆ ಮಾಡಿದ್ದಾರೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಆ ರಾಜ್ಯದವರು 2 ದಿವಸಗಳ ಹಿಂದೆ ಘೋಷಣೆ ಮಾಡಿದ್ದಾರೆ. ಬಹಳಷ್ಟು ಸರ್ಕಾರಿ ನೌಕರರು ಹೊಸ ಪಿಂಚಣಿ ಯೋಜನೆಯಡಿ ನಿವೃತ್ತಿ ಆದವರಿಗೆ ಅವರ ಮನೆಗಳಲ್ಲಿ ಗೌರವ ಇಲ್ಲದಂತಾಗಿದೆ. ಈಗ ಅವರು ಜೀವನ ಮಾಡುವುದು ಬಹಳ ಕಷ್ಟವಾಗಿದೆ. ಅದರಲ್ಲೂ Aided ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವವರಿಗೆ ಬಹಳ ಕಷ್ಟವಾಗಿದೆ. ಹಾಗಾಗಿ, ದಯವಿಟ್ಟು ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೆ ತರಬೇಕು. ಹೊಸ ಪಿಂಚಣಿಯ ಯೋಜನೆಯನ್ನು ರದ್ದು ಮಾಡಬೇಕು. ಇಲ್ಲವೆಂದರೆ, ಯಾವ ಉದ್ಯೋಗಿಗಳು ನೆಮ್ಮದಿಯಿಂದ ಬದುಕುವುದಕ್ಕೆ ಸಾಧ್ಯವಿಲ್ಲ. ಬಹಳ ಸಂಕಷ್ಟ ಪರಿಸ್ಥಿತಿ ಎದುರಾಗುತ್ತದೆ. ಆದ್ದರಿಂದ, ಈಗ ಆ ಎರಡು ರಾಜ್ಯಗಳಲ್ಲಿ ಯಾವ ರೀತಿ ಹಳೆಯ ಪಿಂಚಣಿಯನ್ನು ಮತ್ತೆ ಜಾರಿಗೆ ತಂದಿದ್ದಾರೆ, ಅದೇ ಮಾದರಿಯಲ್ಲಿ ನಮ್ಮ ರಾಜ್ಯದಲ್ಲಿಯೂ ಈ ಅಧಿವೇಶನದಲ್ಲಿ ಘೋಷಣೆ ಮಾಡಬೇಕೆಂದು ಹಾಗೂ 7ನೇ ವೇತನ ಆಯೋಗವನ್ನು ಸಹ ಇದೇ ಬಜೆಟ್‌ನಲ್ಲಿ ತಾವೆಲ್ಲರೂ ಮಾನ್ಯ ಮುಖ್ಯಮಂತ್ರಿಯವರಿಗೆ ಒತ್ತಡ ತಂದು ಮಾಡಿಸಬೇಕೆಂದು ನಾನು ತಮ್ಮ ಮೂಲಕ ಮನವಿ ಮಾಡುತ್ತೇನೆ.

---

**೦೯. ಪ್ರಕಟಣೆ:**

**ಡಾ:ವೈ.ಎ.ನಾರಾಯಣಸ್ವಾಮಿಯವರನ್ನು ಸರ್ಕಾರಿ ಮುಖ್ಯ ಸಚೇತಕರನ್ನಾಗಿ ನೇಮಿಸಿರುವ ಬಗ್ಗೆ**

~~~

**ಸಭಾಪತಿಯವರು:–** ಮರಿತಿಬ್ಬೇಗೌಡರವರೇ, ಒಂದು ನಿಮಿಷ. ನಿಮ್ಮ ಗೆಳೆಯರಾದ ಡಾ॥ವೈ.ಎ.ನಾರಾಯಣಸ್ವಾಮಿಯವರ ಬಗ್ಗೆ ಒಂದು ಪ್ರಕಟಣೆ ಬಂದಿದೆ. **ಡಾ॥ವೈ.ಎ.ನಾರಾಯಣಸ್ವಾಮಿ, ವಿಧಾನ ಪರಿಷತ್ತಿನ ಸದಸ್ಯರು, ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಕರ್ನಾಟಕ ವಿಧಾನ ಪರಿಷತ್ತಿನ ಮುಖ್ಯ ಸಚೇತಕರರನ್ನಾಗಿ ನೇಮಿಸುವಂತೆ ಕೋರಿದೆ. ಸದನವು ಅನುಮೋದನೆ ಕೊಟ್ಟಿದೆ. ಇವತ್ತಿನಿಂದ ಅವರು ಮುಖ್ಯಸಚೇತಕರರಾಗಿ ಕಾರ್ಯ ನಿರ್ವಹಿಸಲಿದ್ದಾರೆ.**

**(ಈ ಹಂತದಲ್ಲಿ ಮಾನ್ಯ ಸದಸ್ಯರುಗಳು ಮೇಜು ತಟ್ಟಿ ಸಂತೋಷವನ್ನು ವ್ಯಕ್ತಿಪಡಿಸಿದರು)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಇವತ್ತು ನನಗೆ ಬಹಳ ಸಂತೋಷವಾಯಿತು.

**ಸಭಾಪತಿಯವರು:–** ಡಾ॥ವೈ.ಎ.ನಾರಾಯಣಸ್ವಾಮಿಯವರು ಮರಿತಿಬ್ಬೇಗೌಡರವರ ಗೆಳೆಯರು. ಮರಿತಿಬ್ಬೇಗೌಡರವರು ಮಾತನಾಡುತ್ತಿದ್ದಂತಹ ಸಂದರ್ಭದಲ್ಲಿ ಆ ಪತ್ರ ಬಂತು ಅದಕ್ಕೆ ಅದನ್ನು ಓದಿದೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನಮಗೂ ಅವರಿಗೂ ಬಹಳ ಸಂಬಂಧವಿದೆ.

**(ಈ ಹಂತದಲ್ಲಿ ಮಾನ್ಯ ಸದಸ್ಯರುಗಳು ಮಾನ್ಯ ಡಾ॥ವೈ.ಎ.ನಾರಾಯಣಸ್ವಾಮಿಯವರು ಇದ್ದ ಸ್ಥಾನಕ್ಕೆ ತೆರಳಿ ಅಭಿನಂದನೆಗಳನ್ನು ಸಲ್ಲಿಸಿದರು)**

**ಸಭಾಪತಿಯವರು:–** ಡಾ॥ವೈ.ಎ.ನಾರಾಯಣಸ್ವಾಮಿಯವರು ಇನ್ನೂ ಮುಂದೆ ಸರಿಯಾಗಿ ಅವರ ಜಾಗದಲ್ಲಿ ಕುಳಿತುಕೊಂಡು ಕೆಲಸ ಮಾಡಿದರೆ ಸಾಕು.
~~~

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಡಾ॥ವೈ.ಎ.ನಾರಾಯಣಸ್ವಾಮಿಯವರಿಗೆ ಸರ್ಕಾರದ Chief Whip ಬಗ್ಗೆ ಸ್ವಲ್ಪ ಹೇಳಿಕೊಡಬೇಕು.

**ಸಭಾಪತಿಯವರು:-** ಆಯಿತು. ಎಲ್ಲರೂ ಅವರವರ ಸ್ಥಾನದಲ್ಲಿ ಕುಳಿತುಕೊಳ್ಳಿ. ನಾರಾಯಣಸ್ವಾಮಿಯವರೇ, ತಾವು ತಮ್ಮ ಸ್ಥಳವನ್ನು occupy ಮಾಡಿಕೊಳ್ಳಿ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಈ ಸದನದ ಪರವಾಗಿ ನೂತನವಾಗಿ Chief Whip ಆಗಿ ನೇಮಕಗೊಂಡಿರುವಂತಹ ಡಾ॥ವೈ.ಎ.ನಾರಾಯಣಸ್ವಾಮಿಯವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಸಭಾಪತಿಯವರು:-** ನಾನು ನಿಮ್ಮೆಲ್ಲರ ಪರವಾಗಿ ಡಾ॥ವೈ.ಎ ನಾರಾಯಣಸ್ವಾಮಿಯವರಿಗೆ ಹೇಳುವುದೇನೆಂದರೆ, ಅವರಿಗೆ ಕುರ್ಚಿ ಬಿಟ್ಟು ಎಲ್ಲೂ ಅಡ್ಡಾಡಬೇಡವೆಂದು ಹೇಳುತ್ತೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ Fevicol Company ರವರ ಜೊತೆಗೆ ಮಾತನಾಡಬೇಕಾಗಿದೆ.

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರವರು ಮಾತನಾಡುವಾಗ ಏಕೆ ಹೇಳಿದ್ದೇನೆಂದರೆ, ಡಾ॥ವೈ.ಎ.ನಾರಾಯಣಸ್ವಾಮಿಯವರಿಗೆ ಮತ್ತು ಶ್ರೀ ಮರಿತಿಬ್ಬೇಗೌಡರವರ ಬಗ್ಗೆ ಬಹಳ ಸ್ನೇಹ. ಅದಕ್ಕೆ ಅವರು ಮಾತನಾಡುವಾಗಲೇ ಬಂದಿದೆ. ಅದು ಒಳ್ಳೆಯದು ಬಂದಿದೆ ಎಂದು ಹೇಳಿದೆ.

**10. ವಿತ್ತೀಯ ಕಾರ್ಯಕಲಾಪ**

**2022-23ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ತಾವು ಇರುವವರೆವಿಗೂ ಅವರಿಗೆ ಕಡಿವಾಣ ಹಾಕಿದಂತಾಗುತ್ತದೆ. ಆ ಜಾಗದಲ್ಲಿ ಕೆಲಸ ಮಾಡುವುದು. ಇದರಿಂದ ಬಹಳ ಸಂತೋಷವಾಯಿತು. ಅವರಿಗೆ ಧನ್ಯವಾದಗಳು. ಕಾಡು ಪ್ರಾಣಿಗಳ ಹಾವಳಿ ಜಾಸ್ತಿಯಾಗಿ ಬೆಳೆ ರಕ್ಷಣೆ ಮತ್ತು ರೈತರನ್ನು ರಕ್ಷಣೆ ಮಾಡುವುದಕ್ಕೆ ರೈಲ್ವೆ ಕಂಬಿಯ barricade ಹಾಕುವುದಕ್ಕೆ ಪ್ರಾರಂಭ

ಮಾಡಿದ್ದಾರೆ. ಇದು ತುಂಬ ಯಶ್ವಸಿಯಾಗಿ ಆನೆ ಹಾವಳಿಯನ್ನು ತಡೆಗಟ್ಟುವುದಕ್ಕೆ ತುಂಬ ಪರಿಣಾಮಕಾರಿಯಾಗಿದೆ. ನಾವು ಅರ್ಜಿ ಸಮಿತಿಯ ಅಧ್ಯಕ್ಷರಾಗಿದ್ದ ಶ್ರೀ ಎಂ.ಕೆ.ಪ್ರಾಣೇಶ್‌ರವರ ನೇತೃತ್ವದಲ್ಲಿ ಬಂಡೀಪುರ ಮತ್ತು ನಾಗರಹೊಳೆ ಅರಣ್ಯ ಪ್ರದೇಶದಲ್ಲಿ ರೈಲೆ ಕಂಬಿ barricade ಹಾಕಿರುವುದನ್ನು ಹೋಗಿ ಸ್ಥಳ ಪರಿಶೀಲನೆ ಮಾಡಿದ್ದೇವೆ. ನಿಜಕ್ಕೂ ಸಹ ಅದು ಬಹಳ ಪರಿಣಾಮಕಾರಿಯಾಗಿ ಯಶ್ವಸಿಯಾಗುತ್ತಿದೆ. ಆ ಯೋಜನೆಯನ್ನು ಸಂಪೂರ್ಣವಾಗಿ ಅನುಷ್ಠಾನಗೊಳಸಬೇಕೆಂದರೆ, ಇನ್ನು ಸಾಕಷ್ಟು ಅನುದಾನ ಬೇಕಾಗುತ್ತದೆ. ಇದಕ್ಕೆ ಕೇಂದ್ರ ಸರ್ಕಾರದ ಅನುದಾನ ಸಿಗುತ್ತಿಲ್ಲವೆಂದು ಇಲಾಖಾಧಿಕಾರಿಗಳು ತಿಳಿಸಿದರು. ಆದರೂ ಸಹ, ಈ ಬಾರಿ ಬಜೆಟ್‌ನಲ್ಲಿ 100 ಕೋಟಿ ರೂಪಾಯಿಗಳನ್ನು ಚಿಕ್ಕಮಂಗಳೂರು, ಹಾಸನ ಮತ್ತು ಕೊಡಗು ಭಾಗಗಳಿಗೆ ರೈಲ್ವೆ ಕಂಬಿ barricade ಅನ್ನು ಹಾಕುವುದಕ್ಕೆ ಕೊಟ್ಟಿದ್ದಾರೆ. ನಾವು ಸಮಿತಿಯಿಂದ ಹೋಗಿದ್ದಂತಹ ಸಂದರ್ಭದಲ್ಲಿ ಬಂಡೀಪುರ ಅರಣ್ಯ ವ್ಯಾಪ್ತಿಯಲ್ಲಿ ಮಳೂರು ವಲಯ ಮತ್ತು ಸಿಗೇವಾಡಿ ಎಂದು ಇದೆ. ಅಲ್ಲಿ stretch gap ಉಳಿದುಕೊಂಡಿದೆ. ಅದನ್ನು ಪೂರೈಸದಿರುವುದರಿಂದ ಅಲ್ಲಿಂದ ಆನೆಗಳು ಬಂದು ಬಹಳ ತೊಂದರೆ ಕೊಡುತ್ತಿವೆ. ಆದ್ದರಿಂದ, ಈ ಅನುದಾನದಲ್ಲಿಯೋ ಅಥವಾ ಇನ್ನೂ ಸ್ವಲ್ಪ ಹೆಚ್ಚಿಗೆ ಅನುದಾನವನ್ನು ಬಂಡೀಪುರ ವ್ಯಾಪ್ತಿಯ ಮಳೂರು ಮತ್ತು ಸಿಗೇವಾಡಿ ವಲಯದಲ್ಲಿ ಬಾಕಿ ಇರುವ ರೈಲ್ವೆ ಕಂಬಿ barricade ಅನ್ನು ಪೂರ್ಣಗೊಳಿಸಿಕೊಡಬೇಕು. ಈ ಮುಂಗಡ ಪತ್ರದಲ್ಲಿ ಅದಕ್ಕೂ ಸಹ ಹಣ ಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಮಾನ್ಯ ಸಭಾಪತಿಯವರೇ, ವಿಧವೆಯರಿಗೆ ಮತ್ತು ವಯೋವೃದ್ಧರಿಗೆ ಮಾನ್ಯ ಮುಖ್ಯಮಂತ್ರಿಯವರು ಪ್ರಮಾಣ ವಚನವನ್ನು ತೆಗೆದುಕೊಂಡ ಕೂಡಲೇ ಮಾನ್ಯ ಬಸವರಾಜು ಬೊಮ್ಮಾಯಿರವರು ಮಾಶಾಸನವನ್ನು ಘೋಷಣೆ ಮಾಡಿ ಸುಮಾರು 200 ರೂಪಾಯಿಗಳಷ್ಟು ಹೆಚ್ಚಿಗೆ ಮಾಡಿದರು. ಇದು ಬಹಳ ಒಳ್ಳೆಯ ಕೆಲಸ. ಇದರ ಜೊತೆಗೆ ರೈತರ ಮಕ್ಕಳ ವಿದ್ಯಾಭ್ಯಾಸಕ್ಕೆ ವಿದ್ಯಾರ್ಥಿ ವೇತನವನ್ನು ಘೋಷಣೆ ಮಾಡಿದ್ದಾರೆ. ಈ ಎರಡು ವಿಚಾರಗಳಲ್ಲಿಯೂ ಸಹ ನಾನು ಮಾನ್ಯ ಮುಖ್ಯಮಂತ್ರಿಯವರನ್ನು ಬಹಳ ಸಂತೋಷದಿಂದ ಅಭಿನಂದಿಸುತ್ತೇನೆ. ಇದರ ಜೊತೆಗೆ ಮಾಶಾಸನವನ್ನು ಇನ್ನೂ ಸ್ವಲ್ಪ ಜಾಸ್ತಿ ಮಾಡಬೇಕಾಗಿತ್ತು ಎನ್ನುವುದು ನನ್ನ ಭಾವನೆ. ಏಕೆಂದರೆ, ಅವರ

ಪರಿಸ್ಥಿತಿ ಬಹಳ ಕೆಟ್ಟದಾಗಿದೆ. ಆದ್ದರಿಂದ, ಅದಕ್ಕೆ ಒತ್ತು ಕೊಟ್ಟರೆ, ಬಹಳ ಸಂತೋಷ. ಇನ್ನು ಮುಂದೆಯಾದರೂ ಸಹ ಇದಕ್ಕೆ ಹೆಚ್ಚು ಒತ್ತು ಕೊಡಲಿ ಎಂದು ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಯವರಿಗೆ ಅಭಿನಂದಿಸುತ್ತೇನೆ.

ಮಾನ್ಯ ಸಭಾಪತಿಯವರೇ, ನಮ್ಮ ಭಾರತ ಸರ್ಕಾರದ ಪ್ರಧಾನ ಮಂತ್ರಿಯವರು ಕೃಷಿ ಸಂಬಂಧ ಮಾಡಿದ್ದಂತಹ ಮೂರು ಕಾಯಿದೆಗಳನ್ನು ಬಹಳ ದೊಡ್ಡ ಮನಸ್ಸು ಮಾಡಿ ಹಿಂಪಡೆದುಕೊಂಡಿದ್ದಾರೆ. ಆದರೆ, ನಮ್ಮ ರಾಜ್ಯ ಸರ್ಕಾರ ಆ ಕಾಯಿದೆಗಳನ್ನು ವಾಪಸ್ಸು ತೆಗೆದುಕೊಳ್ಳಲಿಲ್ಲ. ಹಾಗಾದರೆ, ಈ ವಿಚಾರದಲ್ಲಿ ಕೇಂದ್ರ ಸರ್ಕಾರದ ನಿಲುವು ಬೇರೇಯೇ? ರಾಜ್ಯ ಸರ್ಕಾರದ ನಿಲುವು ಬೇರೆಯೇ? Double engine ಸರ್ಕಾರ. ಈ ಅಧಿವೇಶನದಲ್ಲಿ ಈ ಕಾಯಿದೆಗಳನ್ನು ವಾಪಸ್ಸು ಪಡೆಯುತ್ತಾರೆಂದು ಭಾವಿಸಿದ್ದೆ. ಕೇಂದ್ರ ಸರ್ಕಾರ ವಾಪಸ್ಸು ಪಡೆದಿರುವಂತಹ ಮೂರು ಕಾಯಿದೆಗಳನ್ನು ನಮ್ಮ ರಾಜ್ಯ ಸರ್ಕಾರವೂ ಸಹ ವಾಪಸ್ ಪಡೆದುಕೊಂಡು ನಮ್ಮ ರೈತರ ಹಿತಕಾಪಾಡಬೇಕೆಂದು ಘನ ಸರ್ಕಾರಲ್ಲಿ ಒತ್ತಾಯ ಮಾಡುತ್ತೇನೆ.

ಮಾನ್ಯ ಸಭಾಪತಿಯವರೇ, ಮನೆ ಮನೆಗೆ ಕಂದಾಯ ದಾಖಲೆಗಳು ಎಂದು ಮಾಡಿದರು. ಈಗ ಕಂದಾಯ ಸಚಿವರು ಸದನದಲ್ಲಿ ಇಲ್ಲ. ಮಾನ್ಯ ಸಚಿವರು ಇಲ್ಲದಿದ್ದರೂ ಸಹ ಪರವಾಗಿಲ್ಲ.

**ಸಭಾಪತಿಯವರು:-** ಮರಿತಿಬ್ಬೇಗೌಡರವರೇ, ತಮಗೆ ಯಾರು ಬೇಕಾಗಿತ್ತು?

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರು. ಒಂದು ಅಥವಾ ಎರಡು ಆರ್‌ಟಿಸಿ ಗಳನ್ನು ಒಂದು ಕವರ್‌ನಲ್ಲಿ ಹಾಕಿ ರೈತರಿಗೆ ಕೊಟ್ಟಿದ್ದಾರೆ. ಅದರಲ್ಲಿ ಭೂದಾಖಲೆಗಳು, ಎಂ.ಆರ್.ಪ್ರತಿಯಾಗಲಿ, ನಕ್ಷೆಯಾಗಲಿ ಆ ಕವರ್‌ನಲ್ಲಿ ಬೇರೆ ಯಾವುದು ಇಲ್ಲ. ಇದಕ್ಕೆ ಪ್ರತ್ಯೇಕವಾಗಿ ಒಂದು ಜಾಹೀರಾತನ್ನು ಕೊಟ್ಟಿದ್ದಾರೆ. ಆ ಕವರ್‌ನ ಮೇಲೆ ಮಾನ್ಯ ಪ್ರಧಾನ ಮಂತ್ರಿಯವರ, ಮಾನ್ಯ ಮುಖ್ಯ ಮಂತ್ರಿಯವರ ಹಾಗೂ ಕಂದಾಯ ಸಚಿವರು ಭಾವಚಿತ್ರಗಳನ್ನು ಹಾಕಿದ್ದಾರೆ. ಇದನ್ನು ಮಾಡುತ್ತಾರೆಯೇ? ಇದು ಚುನಾವಣೆಯ ಪ್ರಚಾರವೇ? ಇದು ರೈತರಿಗೆ ನೆರವು ಮಾಡುತ್ತಿರುವುದೇ? ದಯವಿಟ್ಟು ತಾವು ಯೋಚನೆ ಮಾಡಿ. ಸರ್ಕಾರದ ಹಣ ಸಾರ್ಜನಿಕರ ಹಣ.

**(ಈ ಹಂತದಲ್ಲಿ ಮಾನ್ಯ ಸದಸ್ಯರು ಕವರಿನ ಮೇಲೆ ಭಾವಚಿತ್ರಗಳು ಇರುವುದನ್ನು ಸಭೆಗೆ ತೋರಿಸಿದರು)**

(ಮುಂದು.,)

**(356) 15-03-2022 (4.50) ಎಂ.ವಿ-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಪಹಣಿ ಯಾವ ರೀತಿ ಇದೆ ಎಂದರೆ, mobile app ಅನ್ನು open ಮಾಡಿದರೆ, ಒಂದು ಸೆಕೆಂಡ್‌ನಲ್ಲಿ ಸಿಗುತ್ತದೆ. ಎಲ್ಲಿ ಬೇಕಾದರೂ ಐದು ನಿಮಿಷದಲ್ಲಿ ಸಿಗುತ್ತದೆ ಇದು ದೊಡ್ಡ ಮಹತ್ಕಾರ್ಯವಲ್ಲ. ಪೋಡಿ ಮತ್ತು ಪೌತಿಖಾತೆಯ ವಿಚಾರ.

**(ಈ ಹಂತದಲ್ಲಿ ವೈಸ್ ಛೇರ್ಮನ್‌ರವರಾದ ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಪೀಠವನ್ನು ಅಲಂಕರಿಸಿದರು)**

ಅವತ್ತು "P" ನಂಬರ್ ಬಗ್ಗೆ ಎಲ್ಲರೂ ಸಹ ಮಾತನಾಡಿದರು. ಈಗ "P" ನಂಬರ್‌ಗೆ ಏನದರೂ ಅರ್ಜಿ ಹಾಕಿ, ಆ "P" ನಂಬರ್ ಸಿಗುವುದಕ್ಕೆ ಕಷ್ಟಪಟ್ಟು ಓಡಾಡಿದರ ಕನಿಷ್ಠಪಕ್ಷ ಆರು ತಿಂಗಳು ಬೇಕು. ಇಂತಹ ಪರಿಸ್ಥಿತಿ ಇರಬೇಕಾದರೆ, ಇದು ಯಾವ ರೀತಿಯ ಕಂದಾಯ ದಾಖಲೆ? ಇದನ್ನು ತೆಗೆದುಕೊಂಡು ಏನು ಉಪ್ಪಿನಕಾಯಿ ಹಾಕಿಕೊಳ್ಳುವುದೇ? ಪಹಣಿ ತೆಗೆದುಕೊಂಡು ಏನು ಮಾಡುವುದು. ನಾನು ಬೇಕಾದರೆ ಆ ಪಹಣಿಯನ್ನು ಐದು ನಿಮಿಷಕ್ಕೆ ಕೊಡಿಸುತ್ತೇನೆ. ಅವರು ಕೊಡುವುದೇ ಬೇಡ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಎಲ್ಲಾ ದಾಖಲೆಗಳು ಎಲ್ಲಿ ಸಿಗುತ್ತವೆ?

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಎಲ್ಲಾ ಅಲ್ಲೇ ಸಿಗುತ್ತದೆ.

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಎಲ್ಲಾ ದಾಖಲೆಗಳು ಸಿಗುವುದಿಲ್ಲ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇದನ್ನು ಸರ್ವೇ ಇಲಾಖೆಯಲ್ಲಿ expect ಮಾಡಿದರೆ, ಅವತ್ತು ಕಂದಾಯ ಇಲಾಖೆ ಸ್ವಚ್ಛವೆಂದು ಹೇಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಎಲ್.ಭೋಜೇಗೌಡರು ಐದು ನಿಮಿಷದಲ್ಲಿ ಆರ್.ಟಿ.ಸಿ. ಕೊಡಿಸುತ್ತೇನೆಂದು ಹೇಳಿದರು. ಇದು ಒಂದು ಭಾಗ. ಸರ್ಕಾರದ ವ್ಯವಸ್ಥೆಯಲ್ಲಿ ಐದು ನಿಮಿಷದಲ್ಲಿ ಕೊಡುವುದಕ್ಕೆ ಅವಕಾಶ ಮಾಡಲಾಗಿದೆ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮೂರು ವರ್ಷಗಳ ಹಿಂದೆ ವರ್ಷಾನುಗಟ್ಟಲೆ, ಉದಾಹರಣೆಗೆ; "ಕಿಸಾನ್ ಸಮ್ಮಾನ್ ಯೋಜನೆ" ಅನೇಕರಿಗೆ ಬರುತ್ತಿಲ್ಲ ಅದು ಏಕೆಂದರೆ, ಅವರುಗಳ ಖಾತೆಗಳು ವಿಭಜನೆಯಾಗಿಲ್ಲ. ಅವರ ಬಳಿ ಬೇಕಾದಂತಹ ಭೂ ದಾಖಲೆಗಳು ಇಲ್ಲ. ಪರಿಣಾಮವಾಗಿ ಯಾರು ಬಡ ರೈತರು ಇದ್ದಾರೆ ಅವರಿಗೆ "ಕಿಸಾನ್ ಸಮ್ಮಾನ್ ಯೋಜನೆ" ಸಿಗುತ್ತಿಲ್ಲ. ಈ ರೀತಿ ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಅನುಕೂಲತೆಗಳು ನೇರವಾಗಿ ಅವರ ಖಾತೆಗೆ ಬರಬೇಕು ಎನ್ನುವುದಾದರೆ, ಅವರ ಬಳಿ ಜಮೀನು ಮತ್ತು ಮನೆಗೆ ಸಂಬಂಧಪಟ್ಟಂತಹ ಮತ್ತು ಕಂದಾಯಕ್ಕೆ ಸಂಬಂಧಪಟ್ಟಂತಹ ಎಲ್ಲಾ ದಾಖಲಾತಿಗಳನ್ನು ಅವರ ಮನೆಗಳಿಗೆ ತಲುಪಿಸುವಂತಹ ಒಂದು ಅಭೂತಪೂರ್ವವಾದ ಕೆಲಸವನ್ನು ಈ ಸರ್ಕಾರ ಮಾಡುತ್ತಿದೆ. ಆದರೆ, ಇದನ್ನು ಸಹಿಸಿಕೊಳ್ಳಲಾರದೆ ಮಾನ್ಯ ಮರಿತಿಬ್ಬೇಗೌಡರು ತಮ್ಮ ಹೊಟ್ಟೆ ಉರಿಸಿಕೊಳ್ಳುತ್ತಿದ್ದಾರೆ. ಅವರಿಗೆ ಇದನ್ನು ತಡೆದುಕೊಳ್ಳುವುದಕ್ಕೆ ಆಗುತ್ತಿಲ್ಲ.

**(ಗೊಂದಲ)**

**ಶ್ರೀ ನಸೀರ್ ಅಹಮದ್:-** ಮಾನ್ಯ ಸಭಾಪತಿಯವರೇ,...

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಈಗ ಮನೆ ಮನೆಗೆ ನೀರು ಒದಗಿಸುವುದು ಮತ್ತು ಮನೆ ಮನೆಗೆ ಕಂದಾಯದ certificate ಗಳನ್ನು ನೀಡುವುದನ್ನು ಟೀಕೆ ಮಾಡುತ್ತಾರೆ. New Education Policy ತರದೆ ಇವರಿಗೆ ಅದೇ ಬ್ರಿಟಿಷರ ಕಾಲದ ನೀತಿಯೇ ಬೇಕೆ? ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರ ಹೆಸರು ಹೇಳಿದರೆ ಇವರ

ಹೊಟ್ಟೆಗೆ ಬೆಂಕಿ ಬೀಳುತ್ತದೆ. ಮನೆ ಮನೆಗಳಿಗೆ ಅನುಕೂಲತೆಗಳನ್ನು ತಲುಪಿಸುತ್ತೇವೆಂದು ಹೇಳಿದರು ಸಹ ಅವರ ಹೊಟ್ಟೆಗೆ ಬೆಂಕಿ ಇಟ್ಟುಕೊಳ್ಳುತ್ತಾರೆ.

**(ಗೊಂದಲ)**

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಸಹ ಕಂದಾಯ ಇಲಾಖೆಯ ನಾಲ್ಕೈದು ಗ್ರಾಮಪಂಚಾಯಿತಿಯ ಕಾರ್ಯಕ್ರಮಗಳಿಗೆ ಹೋಗಿದ್ದೆ. ಕಂದಾಯ ಇಲಾಖೆಯಿಂದ ಮಾಡುತ್ತಿರುವ ಕಾರ್ಯಕ್ರಮ ಬಹಳ ಅದ್ಭುತವಾದಂತಹ ಕಾರ್ಯಕ್ರಮವಾಗಿದೆ. ಈಗ ಪಹಣಿ, ಅಟ್ಲಾಸ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ನೀಡಲಾಗುತ್ತದೆ. ಖಂಡಿತವಾಗಿ ಅಲ್ಲಿ ಇದ್ದಂತಹ ರೈತರು ತಾಲ್ಲೂಕು ಕಛೇರಿಗಳಿಗೆ ಹೋಗುವುದಕ್ಕೆ ಬಹಳ ಕಷ್ಟವಾಗುತ್ತದೆ. ಇದರಿಂದ ರೈತರಿಗೆ ಸಾವಿರಾರು ರೂಪಾಯಿ ಹಣ ಖರ್ಚಾಗುತ್ತದೆ. ಆದರೆ, ಈಗ ಅವರ ಮನೆ ಬಾಗಿಲಿಗೆ ಹೋಗಿ ಸೇವೆಗಳನ್ನು ಒದಗಿಸಲಾಗುತ್ತದೆ.

**ಶ್ರೀ ನಸೀರ್ ಅಹಮದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಎನ್.ರವಿಕುಮಾರ್‌ರವರಿಗೆ ಹುದ್ದೆ ಖಾಲಿ ಇಲ್ಲವೆಂದು ಹೇಳಿ.

**(ಗೊಂದಲ)**

**ಶ್ರೀ ಸಿ.ಎನ್.ಮಂಜೇಗೌಡ:–** ಮಾನ್ಯ ಸಭಾಪತಿಯವರೇ, ಈಗ ಇವರು ಏನು ಆರ್.ಟಿ.ಸಿ. ಮತ್ತು ಭೂ ದಾಖಲಾತಿಗಳ ಬಗ್ಗೆ ಹೇಳುತ್ತಾರೆ. ಈಗ ಮೊಬೈಲ್‌ನಲ್ಲಿ open ಮಾಡಿದರೆ, ಅವುಗಳು ಸಿಗುತ್ತವೆ.

**ಶ್ರೀ ಡಿ.ಎಸ್.ಅರುಣ್:–** ಮಾನ್ಯ ಸಭಾಪತಿಯವರೇ, ಅದು ಎಲ್ಲರ ಬಳಿ ಇರುವುದಿಲ್ಲ.

**(ಗೊಂದಲ)**

**ಶ್ರೀ ಸಿ.ಎನ್.ಮಂಜೇಗೌಡ:–** ಮಾನ್ಯ ಸಭಾಪತಿಯವರೇ, ಈಗ ಎಲ್ಲರ ಬಳಿ ಇಲ್ಲದೇ ಹೋದರೆ, ಅವರು ನಾಡ ಕಛೇರಿಗೆ ಹೋದರೆ ಬಹಳ ಸುಲಭವಾಗಿ ಸಿಗುತ್ತದೆ.

**(ಗೊಂದಲ)**

**ಶ್ರೀ ಡಿ.ಎಸ್.ಅರುಣ್:–** ಮಾನ್ಯ ಸಭಾಪತಿಯವರೇ, ಆ ರೀತಿಯಾದರೆ ಹಣ ಖರ್ಚಾಗಿ ಅವರ ಸಮಯ ಹಾಳಾಗುತ್ತದೆ.

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ತೋರಿಸಿದಂತಹ ಆ ಒಂದು ಪೇಜ್‌ನಿಂದ ಇಡೀ ಸದನವೇ divert ಆಯಿತು.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ರೀತಿಯಾದರೆ ನಾನು ಹೇಗೆ ಮಾತನಾಡುವುದು?

**ವೈಸ್ ಛೇರ್ಮನ್:–** ಮಾನ್ಯ ಸಿ.ಎನ್.ಮಂಜೇಗೌಡ, ಮಾನ್ಯ ಎನ್.ರವಿಕುಮಾರ್ ಮತ್ತು ಮಾನ್ಯ ಡಿ.ಎಸ್.ಅರುಣ್ ರವರುಗಳು ದಯವಿಟ್ಟು ಕುಳಿತುಕೊಳ್ಳಿ. ದಯವಿಟ್ಟು ಮಾನ್ಯ ಮರಿತಿಬ್ಬೇಗೌಡರು ಮಾತನಾಡಬೇಕು. ಈಗ ಸಮಯವಿಲ್ಲ ಸಾಕು ಮಾಡಿ. ಮಾನ್ಯ ಮರಿತಿಬ್ಬೇಗೌಡರೆ ನೀವು yield ಆಗಬೇಡಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಅವರುಗಳಿಗೆ ಸಮಯ ನೀಡಿದಾಗ ಅವರು ಮಾತನಾಡಲಿ. ಮಾನ್ಯ ಎನ್.ರವಿಕುಮಾರ್‌ರವರೆ, ತಾವು ಎರಡು ಗಂಟೆಗಳ ಕಾಲ ನನ್ನನ್ನು ಕುರಿತು ಮಾತನಾಡಿದರೂ ಸಹ ನಾನು ಕುಳಿತುಕೊಂಡು ಕೇಳಿಸಿಕೊಳ್ಳುತ್ತೇನೆ. ದಯವಿಟ್ಟು ಮಾನ್ಯ ಎನ್.ರವಿಕುಮಾರ್‌ರವರನ್ನು ಕುಳಿತುಕೊಳ್ಳುವುದಕ್ಕೆ ತಿಳಿಸಿ.

**ವೈಸ್ ಛೇರ್ಮನ್:–** ಮಾನ್ಯ ಮರಿತಿಬ್ಬೇಗೌಡರೆ, ತಾವು ನನ್ನ ಕಡೆ ನೋಡಿಕೊಂಡು ಮಾತನಾಡಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಅವರ ಪಕ್ಷದವರು ಮಾನ್ಯ ಎನ್. ರವಿಕುಮಾರ್‌ರವರನ್ನು ಮಂತ್ರಿಗಳನ್ನಾಗಿ ಮತ್ತು ಸರ್ಕಾರದ ಮುಖ್ಯ ಸಚೇತಕರನ್ನಾಗಿಯೂ ಸಹ ಮಾಡಲಿಲ್ಲ. ನನಗೆ ಅವರ ಸಂಕಟ ಏನೆಂದು ಗೊತ್ತಿದೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರಿಗೆ ಹೊಟ್ಟೆ ಉರಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಈ ರೀತಿಯಾಗಿ ಮನೆ ಮನೆಗೆ ಕಂದಾಯ ದಾಖಲೆಗಳನ್ನು ನೀಡುತ್ತೇವೆಂದು, ಮಾನ್ಯ ಪ್ರಧಾನ ಮಂತ್ರಿಗಳು, ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಕಂದಾಯ ಸಚಿವರ ಭಾವಚಿತ್ರ ಹಾಕಿಕೊಂಡು ಪ್ರಚಾರ ಮಾಡಿಕೊಳ್ಳುತ್ತಿದ್ದಾರೆ. ಇದನ್ನು ನಾನು ಸಂಪೂರ್ಣವಾಗಿ ಖಂಡಿಸುತ್ತೇನೆ. ಇದು ಒಂದು ರಾಜಕೀಯ ಪ್ರಚಾರ. ರೈತರಿಗೆ ಅನುಕೂಲ ಮಾಡಬೇಕೆಂದು ಒಂದೇ ಒಂದು ಉದ್ದೇಶವಿಲ್ಲ. ಮಾನ್ಯ ಸದಸ್ಯರು ಹೇಳಿದರು, ಈ ಫೋನ್‌ನಲ್ಲಿ ಬರುವುದಿಲ್ಲ. ಆ ಫೋನ್‌ನಲ್ಲಿ ಬರುತ್ತದೆ ಎಂದು. ಇಲ್ಲಿಯೇ ಮಾನ್ಯ ಮಾಹಿತಿ ಮತ್ತು ತಂತ್ರಜ್ಞಾನ ಸಚಿವರು ಇದ್ದಾರೆ ಅವರು ಎಲ್ಲಾ ಫೋನ್‌ಗಳಲ್ಲಿ ಬರುವಂತೆ ಮಾಡುತ್ತಾರೆ. ದಯವಿಟ್ಟು ಆ ಕೆಲಸವನ್ನು ಮಾಡಿಸಲಿ. ಈ ರೀತಿ ಸರ್ಕಾರಿ ಹಣದಲ್ಲಿ ವೈಯಕ್ತಿಕವಾಗಿ ಪ್ರಚಾರ ಮಾಡುವುದು, ಅದು ಯಾವುದೇ ಪಕ್ಷಕ್ಕೂ ಸಹ ಗೌರವ ತರುವಂತಹ ವಿಚಾರವಲ್ಲ. ಆ ರೀತಿ ಯಾವುದೇ ಪಕ್ಷದವರು ಯಾವಾಗ ಮಾಡಿದರೂ ಸಹ ನಾನು ಅದನ್ನು ಖಂಡಿಸುತ್ತೇನೆ. ಮಂಡ್ಯ, ಮೈಸೂರು, ಚಾಮರಾಜನಗರ ಮತ್ತು ಹಾಸನ ಈ ಜಿಲ್ಲೆಗಳಿಗೆ ಈ ಬಜೆಟ್‌ನಲ್ಲಿ ಶೂನ್ಯ. ಅಂದರೆ, ಏನೇನೂ ಸಹ ನೀಡಿಲ್ಲ. ಮಂಡ್ಯ ಜಿಲ್ಲೆಯ ಮೈ ಶುಗರ್ ಕಂಪನಿ ಪ್ರಾರಂಭ ಮಾಡುವುದಕ್ಕೆ ಐವತ್ತು ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿರುವುದನ್ನು ಬಿಟ್ಟರೆ, ಬೇರೆ ಏನೂ ಇಲ್ಲ. ಮಂಡ್ಯ ನಗರಕ್ಕೆ ಒಂದು ಪಾಲಿಟೆಕ್ನಿಕ್ ಕಾಲೇಜು, ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳನ್ನು ಕೊಡುತ್ತಾರೆ ಮತ್ತು ವಿ.ಸಿ.ಫಾರಂನಲ್ಲಿ ಯೂನಿವರ್ಸಿಟಿ ಮಾಡುತ್ತಾರೆಂದು ಬಹಳ ಆಸೆ ಇಟ್ಟುಕೊಂಡಿದ್ದೆ. ಆದರೆ, ಏನನ್ನೂ ಸಹ ನೀಡಿಲ್ಲ. ದಯವಿಟ್ಟು ಈಗಲಾದರೂ ಸಹ ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿಸಿ. ಈಗ ಮಂಡ್ಯ ಕೇಂದ್ರದಲ್ಲಿ ಒಂದು ಪಾಲಿಟೆಕ್ನಿಕ್ ಕಾಲೇಜು ಇಲ್ಲ. ಅಲ್ಲಿ ಒಂದು ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಇಲ್ಲ. ಮತ್ತೆ ವಿ.ಸಿ.ಫಾರಂನಲ್ಲಿ ಯೂನಿವರ್ಸಿಟಿ ಮಾಡುವುದಕ್ಕೆ ಆಗಿಲ್ಲ. ಆದುದರಿಂದ, ದಯವಿಟ್ಟು ಇವುಗಳನ್ನು ಘೋಷಣೆ ಮಾಡಿಸಲಿ. ಏಕೆಂದರೆ, ಈಗಲೂ ಸಹ ಇನ್ನೂ ಕಾಲ ಮಿಂಚಿಲ್ಲ. ಮೈಸೂರು ಜಿಲ್ಲೆಗೆ ಏನೂ ಸಹ ನೀಡಿಲ್ಲ. ಮೈಸೂರು ಜಿಲ್ಲೆಯ ಮೆಡಿಕಲ್ ಕಾಲೇಜ್‌ನ upgradation ಗೆ ೮೯ ಕೋಟಿ ರೂಪಾಯಿಗಳನ್ನು ನೀಡಿದ್ದಾರೆ. ಮತ್ತೆ ಬೇರೆ ಏನನ್ನು ಸಹ ನೀಡಿಲ್ಲ. ಮೈಸೂರಿನಲ್ಲಿ ಸಿ.ಪಿ.ಸಿ. ಪಾಲಿಟೆಕ್ನಿಕ್ ಇದೆ. ಅಲ್ಲಿ ಒಂದು ಸಂಜೆಯ ಪಾಲಿಟೆಕ್ನಿಕ್ ಪ್ರಾರಂಭ ಮಾಡಿ ಎಂದು ಬಹಳವಾಗಿ ಕೇಳಿಕೊಂಡಿದ್ದೆವು. ಆದರೆ, ಅದನ್ನು ಪ್ರಾರಂಭ ಮಾಡಲಿಲ್ಲ. ಹಾಗೆಯೇ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತಾಲಯ ಮಾಡಿ ಎಂದು ಸುಮಾರು ಹತ್ತು ಅಧಿವೇಶನಗಳಿಂದ ಬೇಡುತ್ತಿದ್ದೇನೆ. ಆದರೆ,

ಯಾರೂ ಸಹ ಮಾಡುತ್ತಿಲ್ಲ. ಮೈಸೂರು ವಿಭಾಗಕ್ಕೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತಾಲಯ ಇಲ್ಲದೆ ಬಹಳಷ್ಟು ತೊಂದರೆಯಾಗುತ್ತಿದೆ. ದಯಮಾಡಿ ಅಲ್ಲಿ ಒಂದು ಆಯುಕ್ತಾಲಯ ಪ್ರಾರಂಭ ಮಾಡಿಸಿ. ಸಿ.ಪಿ.ಸಿ. ಪಾಲಿಟೆಕ್ನಿಕ್‌ನಲ್ಲಿ ಸಂಜೆ ಪಾಲಿಟೆಕ್ನಿಕ್ ಕಾಲೇಜು ಪ್ರಾರಂಭ ಮಾಡುವಂತೆ ಮಾಡಿಸಿ. ಮೈಸೂರು ಜಿಲ್ಲೆಗೆ ಅದನ್ನಾದರೂ ಮಾಡಿಸಿ. ಈಗ ಚಾಮರಾಜನಗರ ಮತ್ತು ಹಾಸನ ಜಿಲ್ಲೆಗಳ ಪಿ.ಜಿ. ಸೆಂಟರ್‌ಗಳಲ್ಲಿ ಒಂದೊಂದು ವಿಶ್ವವಿದ್ಯಾಲಯವನ್ನು ಮಾಡಿದ್ದಾರೆ. ಅದಕ್ಕೆ ಸುಮಾರು ಎರಡು ಕೋಟಿ ರೂಪಾಯಿಗಳನ್ನು ನೀಡಿದ್ದಾರೆ. ಈಗ ಎನ್.ಇ.ಪಿ.ಯನ್ನು ಜಾರಿಗೆ ತಂದಿದ್ದಾರೆ. ಈ ಎನ್.ಇ.ಪಿ.ಯಲ್ಲಿ ಎರಡು ಕೋಟಿ ರೂಪಾಯಿಗಳಿಗೆ ವಿಶ್ವವಿದ್ಯಾಲಯವನ್ನು ನಿರ್ಮಾಣ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ? ದಯವಿಟ್ಟು ಈ ಎರಡೂ ವಿಶ್ವವಿದ್ಯಾಲಯಗಳಿಗೂ ಪ್ರಾರಂಭಿಕವಾಗಿ ನೂರು ನೂರು ಕೋಟಿ ರೂಪಾಯಿಗಳನ್ನು ನೀಡಿದರೆ ನಿಜವಾಗಿ ಅದು ಒಂದು ಒಳ್ಳೆಯ ಕ್ಯಾಂಪಸ್ ಆಗುತ್ತದೆ. ಅಲ್ಲಿ ಮಕ್ಕಳು ಕಲಿಯುವುದಕ್ಕೆ ಅನುಕೂಲವಾಗುತ್ತದೆ. ಈ ವಿಶ್ವವಿದ್ಯಾಲಯಗಳಿಗೆ ವರ್ಷಕ್ಕೆ ಎರಡು ಕೋಟಿ ರೂಪಾಯಿಗಳನ್ನು ನೀಡಿ, ಪಿ.ಜಿ.ಸೆಂಟರ್‌ನವರೆ ಆ ವಿಶ್ವವಿದ್ಯಾಲಯಗಳನ್ನು ನಡೆಸುತ್ತಾರೆ. ಇದೊಂದು ವಿಶೇಷವಾದ ವಿಶ್ವವಿದ್ಯಾಲಯವೆಂದು ಹೇಳಿದರೆ, ಇದು ಯಾವ ರೀತಿ ವಿಶೇಷ! ದಯವಿಟ್ಟು ಈ ಎರಡೂ ವಿಶ್ವವಿದ್ಯಾಲಯಗಳಿಗೂ ಸಹ ನೂರು ನೂರು ಕೋಟಿ ರೂಪಾಯಿಗಳನ್ನು ಕೊಡಿಸಲಿ. ಚಾಮರಾಜನಗರದಲ್ಲಿರುವಂತಹ ಮೆಡಿಕಲ್ ಕಾಲೇಜ್‌ನಲ್ಲಿ ಬಿ.ಎಸ್ಸಿ. ನರ್ಸಿಂಗ್ ಕಾಲೇಜ್ ಇದೆ. ದಯವಿಟ್ಟು ಆ ಕಾಲೇಜ್‌ಗೆ ಅನುದಾನ ನೀಡಲಿ. ಹುದ್ದೆಗಳಿಗೆ ಮಂಜೂರಾತಿ ನೀಡಲಿ. ಹಾಸ್ಟೆಲ್ ಮತ್ತು ಕಟ್ಟಡವನ್ನು ನೀಡಲಿ. ಅದು ಹಿಂದುಳಿದ ಪ್ರದೇಶ. ದಯವಿಟ್ಟು ಇವುಗಳನ್ನು ಈ ಬಜೆಟ್‌ನಲ್ಲಿ ಮಾಡಲಿ. ಮತ್ತೆ ಅಲ್ಲಿರುವಂತಹ ಕಾನೂನು ಕಾಲೇಜು ಮೂರು ವರ್ಷದಿಂದ ಬೋರ್ಡ್ ಅನ್ನು ನೇತು ಹಾಕಿದ್ದಾರೆ. ಅದು ಇನ್ನು ಸಹ ಪ್ರಾರಂಭವಾಗಿಲ್ಲ. ಅದಕ್ಕೆ Bar Council of India ದ affiliation ಬರಬೇಕಂತೆ. ದಯವಿಟ್ಟು ಅದನ್ನು ಮಾಡಿಸಿ, ಮುಂದಿನ ವರ್ಷವಾದರೂ ಆ ಕಾನೂನು ಕಾಲೇಜು ಪ್ರಾರಂಭವಾಗುವಂತೆ ಮಾಡಲಿ. ಈಗ ಉಕ್ರೇನ್‌ನ ಯುದ್ಧದ ಪರಿಣಾಮದಿಂದ, ಬಹಳಷ್ಟು ಕನ್ನಡಿಗರ ಮಕ್ಕಳು ಆ ದೇಶಕ್ಕೆ ಶಿಕ್ಷಣ ಕಲಿಯುವುದಕ್ಕೆ ಹೋಗಿ, ಬಹಳ ತೊಂದರೆಯಿಂದ ವಾಪಸ್ಸು ಬಂದಿದ್ದಾರೆ. ಅವರೆಲ್ಲರನ್ನು ಸಹ ಸುರಕ್ಷಿತವಾಗಿ ಕರೆದುಕೊಂಡು ಬಂದಿದ್ದಾರೆ. ಅದಕ್ಕೆ ಏನು ಹೇಳುತ್ತೇನೆಂದರೆ, ಅವರನ್ನು ಕರೆದುಕೊಂಡು ಬಂದಿರುವುದು ಆಗಿದೆ. ಈಗ ಅವರ ಪರಿಸ್ಥಿತಿ ಬಹಳ ಕೆಟ್ಟಿದೆ. ಬಂದಿರುವವರಲ್ಲಿ ತಮ್ಮ ಶಿಕ್ಷಣವನ್ನು ಮುಂದುವರೆಸುವವರು ಇದ್ದಾರೆ, ಅದರಲ್ಲಿ ಕೆಲವರು ಮುಕ್ತಾಯ ಮಾಡಿಕೊಂಡು ಬಂದಿರುವಂತಹವರು ಇದ್ದಾರೆ. ಮತ್ತೆ ಅವರಲ್ಲಿ ಉದ್ಯೋಗದ ಆಕಾಂಕ್ಷಿಗಳು ಇದ್ದಾರೆ. ದಯವಿಟ್ಟು ಇದಕ್ಕೆ ರಾಜ್ಯ ಸರ್ಕಾರದಿಂದ ಏನು ಮಾಡುವುದಕ್ಕೆ ಸಾಧ್ಯವಿದೆಯೋ ಅದನ್ನು ಮಾಡಲಿ.

**ವೈಸ್ ಛೇರ್ಮನ್:-** ಅಂತಹ ವಿದ್ಯಾರ್ಥಿಗಳು ತಮ್ಮ ಶಿಕ್ಷಣ ಮುಂದುವರೆಸುವುದಕ್ಕೆ ಅವಕಾಶ ಮಾಡಿಕೊಡುತ್ತೇವೆಂದು, ನಿನ್ನೆಯ ದಿವಸ ಮಾನ್ಯ ಆರೋಗ್ಯ ಸಚಿವರು ಒಪ್ಪಿಕೊಂಡಿದ್ದಾರೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರ ಜೊತೆ ಮಾತನಾಡಿ, ಉಕ್ರೇನ್‌ನಿಂದ ವಾಪಸ್ಸು ಬಂದಿರುವಂತಹ ಮಕ್ಕಳು ತಮ್ಮ ಶಿಕ್ಷಣವನ್ನು ಮುಂದುವರೆಸಿ ಪೂರ್ಣಗೊಳಿಸುವುದಕ್ಕೆ ಮತ್ತು ಶಿಕ್ಷಣವನ್ನು ಪೂರ್ಣಗೊಳಿಸಿರುವಂತಹವರಿಗೆ ಉದ್ಯೋಗ ಕೊಡಿಸುವುದಕ್ಕೆ ಏನು ಮಾಡಬೇಕು ಎಂಬುದರ ಬಗ್ಗೆ ರಾಜ್ಯ ಸರ್ಕಾರ ಚಿಂತನೆ ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

**ವೈಸ್ ಛೇರ್ಮನ್:-** ಆಯಿತು. ಮಾನ್ಯ ಮರಿತಿಬ್ಬೇಗೌಡರೆ ನೀವು ಮಾತನಾಡುವ ಕಾಲಾವಕಾಶ ಮುಕ್ತಾಯಗೊಂಡಿದೆ.

**(ಮುಂದು...**

(357) 15.03.2022 05.00 LL-BNS **(ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ವೈಸ್ ಛೇರ್ಮನ್ (ಮುಂದು):-**

ತಾವು 3 ಗಂಟೆ 40 ನಿಮಿಷಕ್ಕೆ ಬಜೆಟ್ ಮೇಲೆ ಮಾತನಾಡುವುದಕ್ಕೆ ಪ್ರಾರಂಭ ಮಾಡಿರುತ್ತೀರಿ. ಹಾಗಾಗಿ, ತಾವು 5-00 ಗಂಟೆಗೆ ತಮ್ಮ ಮಾತನ್ನು ಪೂರ್ಣಗೊಳಿಸಿ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇಲ್ಲ ನಾನು ಮಾತನಾಡುವುದಕ್ಕೆ ಈಗ ಪ್ರಾರಂಭ ಮಾಡಿರುತ್ತೇನೆ. ಈ ಮಧ್ಯದಲ್ಲಿ ಗಲಾಟೆ ಆಗಿರುತ್ತದೆ. ಹಾಗಾಗಿ, ನಾನು ಇನ್ನು 15 ನಿಮಿಷಕ್ಕೆ ನನ್ನ ಮಾತನ್ನು ಪೂರ್ಣಗೊಳಿಸುತ್ತೇನೆ.

**ವೈಸ್ ಛೇರ್ಮನ್:-** ಇಲ್ಲ ಆಗುವುದಿಲ್ಲ. ತಾವು ತಮ್ಮ ಮಾತನ್ನು ಪೂರ್ಣಗೊಳಿಸಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಕೋವಿಡ್-19 ವಿಚಾರದ ಬಗ್ಗೆ ಶ್ರೀ ಆಯನೂರು ಮಂಜುನಾಥ್‌ರವರು ಹಾಗೂ ಇತರ ಬಹಳಷ್ಟು ಸದಸ್ಯರು ಮಾತನಾಡಿರುತ್ತಾರೆ. ಕೋವಿಡ್-19 ಸಂದರ್ಭದಲ್ಲಿ ನಾವು ಈ ದೇಶದ ಜನರನ್ನು ರಕ್ಷಣೆ ಮಾಡಿರುತ್ತೇವೆ ಹಾಗೂ ಅವರಿಗೆ

ಲಸಿಕೆ ಹಾಕಿಸಿದ್ದೇವೆ ಹಾಗೂ ಇನ್ನಿತರ ಕೆಲಸಗಳನ್ನು ಮಾಡಿರುತ್ತೇವೆ. ಅದರಿಂದಾಗಿ, ಇಷ್ಟೆಲ್ಲಾ ಆರ್ಥಿಕ ನಷ್ಟ ಉಂಟಾಯಿತು. ಅದಕ್ಕಾಗಿ, ನಮ್ಮ ಸರ್ಕಾರದಿಂದ ಇಷ್ಟು ಸಾಲ ಪಡೆಯುತ್ತಿದ್ದೇವೆ ಎಂದು ಹೇಳಿದರು. ದಯಮಾಡಿ, ನಾನು ಹೇಳುವುದೇನೆಂದರೆ, ಕೋವಿಡ್-19 ಸಂದರ್ಭದಲ್ಲಿ ಈ ನಾಡಿನ ಮತ್ತು ಈ ದೇಶದ ಜನರನ್ನು ರಕ್ಷಣೆ ಮಾಡಿರುವುದಕ್ಕೆ ಈ ಸರ್ಕಾರಕ್ಕೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಆದರೆ, ಲಸಿಕೆ ಪುಕ್ಕಟೆಯಾಗಿ ಕೊಟ್ಟಿದ್ದೇವೆ ಎಂದು ಹೇಳುತ್ತಿದ್ದಾರಲ್ಲಾ; ಶ್ರೀ ನರೇಂದ್ರ ಮೋದಿಯವರು ಅಲ್ಲದೇ, ಒಂದು ವೇಳೆ ಡಾ: ಸಿ.ಎಸ್. ಅಶ್ವತ್ಥನಾರಾಯಣರವರು ಪ್ರಧಾನ ಮಂತ್ರಿಯಾಗಿದ್ದರೆ ಅವರು ಹಣ ಪಡೆದು ಲಸಿಕೆ ಕೊಡುತ್ತಿದ್ದರೆ? ಆ ಸ್ಥಾನದಲ್ಲಿ ಯಾರೇ ಇದ್ದರೂ ಸಹ ಅವರು ಲಸಿಕೆಯನ್ನು ಉಚಿತವಾಗಿಯೇ ಕೊಡುತ್ತಿದ್ದರು. ಉಚಿತವಾದ ಲಸಿಕೆಯನ್ನು ಬಿ.ಜೆ.ಪಿ.ಯ ಖಜಾನೆಯಿಂದ ಕೊಟ್ಟಿದ್ದಾರೆಯೇ? ಅದು ಸಾರ್ವಜನಿಕರ ಹಣ ಸ್ವಾಮಿ. ಈ ದೇಶದಲ್ಲಿ ಸಾರ್ವಜನಿಕರ ಹಣದಿಂದ ಉಚಿತವಾಗಿ ಲಸಿಕೆ ನೀಡಿದ್ದಾರೆ.

**ಡಾ: ಸಿ.ಎಸ್. ಅಶ್ವತ್ಥನಾರಾಯಣ(ಉನ್ನತ ಶಿಕ್ಷಣ, ಐ.ಟಿ. & ಬಿ.ಟಿ., ವಿಜ್ಞಾನ ಹಾಗೂ ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ...

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನನ್ನ ಮಾತನ್ನು ಪೂರ್ಣಗೊಳಿಸುತ್ತೇನೆ.

**ವೈಸ್ ಛೇರ್ಮನ್:-** ಮಾನ್ಯ ಮರಿತಿಬ್ಬೇಗೌಡರವರೇ, ತಾವು ಅವರ ಹೆಸರನ್ನು ಪ್ರಸ್ತಾಪಿಸಿದ್ದೀರಿ. ಹಾಗಾಗಿ, ತಾವು yield ಆಗಬೇಕು.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಅವರು ಪ್ರಧಾನ ಮಂತ್ರಿಯಾದಾಗ ಮಾತನಾಡಲಿ. ಈಗ ನಾನು ಮಾತನಾಡುತ್ತೇನೆ.

**(ಗೊಂದಲ)**

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ,...

**ವೈಸ್ ಛೇರ್ಮನ್:-** ಮಾನ್ಯ ರವಿಕುಮಾರ್‌ರವರೇ, ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಸಚಿವರು ಮಾತನಾಡುವುದಕ್ಕೆ ಎದ್ದು ನಿಂತಿದ್ದಾರೆ.

**(ಗೊಂದಲ)**

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಿದ್ದರಾಮಯ್ಯನವರು ಸಹ ಅವರ ಮನೆಯಿಂದ ಕೊಡುವುದಿಲ್ಲ.

**ವೈಸ್ ಛೇರ್ಮನ್:-** ಮಾನ್ಯ ರವಿಕುಮಾರ್‌ರವರೇ, ಮಾನ್ಯ ಸಚಿವರು ಮಾತನಾಡುತ್ತಿದ್ದಾರೆ.

**(ಗೊಂದಲ)**

**ಡಾ: ಸಿ.ಎಸ್. ಅಶ್ವತ್ಥನಾರಾಯಣ:-** ಮಾನ್ಯ ಸಭಾಪತಿಯವರೇ, ಕೋವಿಡ್-19 ಲಸಿಕೆ ಒದಗಿಸುವುದೇ ಒಂದು ದೊಡ್ಡ ಸವಾಲು ಆಗಿತ್ತು. ಸಾಮಾನ್ಯವಾಗಿ ಒಂದು ಲಸಿಕೆಯನ್ನು ತಯಾರು ಮಾಡಬೇಕಾದರೆ ನೂರು ವರ್ಷ ಸಮಯ ತೆಗೆದುಕೊಳ್ಳುತ್ತಿದ್ದರು. ಆದರೆ, ಒಂದು ವರ್ಷದಲ್ಲಿ ಕೋವಿಡ್-19 ಗೆ ಲಸಿಕೆಯನ್ನು ತಯಾರು ಮಾಡಿರುವಂಥದ್ದು ಮತ್ತು ಇಡೀ ದೇಶದಲ್ಲಿರುವ 135 ಕೋಟಿ ಜನಸಂಖ್ಯೆಯಲ್ಲಿ ಸುಮಾರು 100 ಕೋಟಿ ಜನರಿಗೆ ಲಸಿಕೆ ಕೊಡುವಂತಹದ್ದು ಆಗಿದೆ. ಇದು universal immunization progamme ಅಲ್ಲ. Universal immunization progamme ಸರ್ಕಾರದಲ್ಲಿ ಕೊಡುವಂಥದ್ದನ್ನು ಮಾಡಲಾಗುತ್ತಿದೆ. ಇದು ಯಾವುದು specifically ಇಂತಹ pandemic situation ಬಂದಾಗ ಲಸಿಕೆಗಳನ್ನು ಹೆಚ್ಚಿನ ದೇಶಗಳ ಪೈಕಿ ಕೆಲವೇ ಸೀಮಿತ ದೇಶಗಳು ಮಾಡಿರುವಂಥದ್ದು ಇದೆ. ಇವೊತ್ತಿನ ದಿವಸ ಪ್ರತಿಯೊಬ್ಬರಿಗೂ ಉಚಿತ ಲಸಿಕೆ ಕೊಟ್ಟಿರುವಂಥದ್ದು ವಿಶೇಷವಾಗಿಯೇ ಇರುವಂಥದ್ದಾಗಿದೆ. ಅದಕ್ಕೆ ಯಾರು ಕೂಡ ಅವರ ಜೇಬಿನಿಂದ ಹಣ ಕೊಡುವುದಿಲ್ಲ. ಆದರೆ, ಅದಕ್ಕೆ ಆದ್ಯತೆ ಕೊಡುವುದಕ್ಕೆ ಸಹ ಗೊತ್ತಿರಬೇಕು. ಆದ್ಯತೆ ಕೊಡುವಂಥದ್ದನ್ನು ನಮ್ಮ ಸರ್ಕಾರ ಮಾಡಿದೆ. ಅದರ ಜೊತೆಗೆ, ಉತ್ತಮವಾಗಿ ಸಂಪನ್ಮೂಲ ಬಳಕೆ ಮಾಡುವಂಥದ್ದು ಬಹಳ ಮುಖ್ಯವಾಗಿರುತ್ತದೆ. ಅದನ್ನು ಮಾಡಿ ಬಹಳಷ್ಟು ಪರಿಣಾಮಕಾರಿಯಾಗಿ ಲಸಿಕೆ ನೀಡಲಾಗಿರುತ್ತದೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ತಟ್ಟುವ ಮೂಲಕ ಡಾ: ಸಿ.ಎಸ್. ಅಶ್ವತ್ಥನಾರಾಯಣರವರ ಮಾತಿಗೆ ಬೆಂಬಲ ಸೂಚಿಸಿದರು)**

ಇನ್ನು ಸಹ ಬಹಳ ಮುಂದುವರಿದ ರಾಷ್ಟ್ರಗಳಲ್ಲಿ ಭಾರತ ದೇಶದ ಮಟ್ಟದಲ್ಲಿ, ಸಂಪೂರ್ಣವಾಗಿ ಆಯಾ ದೇಶಗಳ ಶೇಕಡ 100 ರಷ್ಟು ಜನಸಂಖ್ಯೆಗೆ ಅನುಗುಣವಾಗಿ ಲಸಿಕೆಯನ್ನು ಯಾವ ರಾಷ್ಟ್ರಗಳು ಸಹ ನೀಡಿರುವುದಿಲ್ಲ ಎನ್ನುವುದು ಸಹ ಅವರಿಗೆ ಗೊತ್ತಿರಲಿ. ಇಡೀ ವಿಶ್ವದಲ್ಲಿ ಯಾವ ರಾಷ್ಟ್ರವೂ ಸಹ ಕೊಟ್ಟಿರುವುದಿಲ್ಲ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಅದಕ್ಕೆ ನಾನು ಆಗಲೇ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸಿರುತ್ತೇನೆ.

**ವೈಸ್ ಛೇರ್ಮನ್:-** ಮಾನ್ಯ ಮರಿತಿಬ್ಬೇಗೌಡರವರೇ, ತಾವು ತಮ್ಮ ಮಾತನ್ನು ಪೂರ್ಣಗೊಳಿಸಿ.

**ಶ್ರೀ ನಸೀರ್ ಅಹ್ಮದ್(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಈ ದೇಶದಲ್ಲಿ pharmaceutical industries ಎಷ್ಟರಮಟ್ಟಿಗೆ ಬೆಳೆದಿದೆ ಎಂದರೆ, ಕೇವಲ ಭಾರತ ದೇಶಕ್ಕೆ ಮಾತ್ರವಲ್ಲದೇ, ಇಡೀ ಜಗತ್ತಿಗೆ ನಾವು ಲಸಿಕೆ ಸರಬರಾಜು ಮಾಡಿರುತ್ತೇವೆ.

**(ಗೊಂದಲ)**

**ಡಾ: ಸಿ.ಎಸ್. ಅಶ್ವತ್ಥನಾರಾಯಣ:-** ಮಾನ್ಯ ಸಭಾಪತಿಯವರೇ, ಈಗ ಅವರ ಕಾಲದಲ್ಲಿ...

**(ಗೊಂದಲ)**

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಅದನ್ನು ಕೇವಲ 2 ವರ್ಷದಲ್ಲಿ ಸಾಧನೆ ಮಾಡಿರುವುದಲ್ಲ. **(ಗೊಂದಲ)** ಈ ಬಗ್ಗೆ ಹಿಸ್ಟರಿ ತೆಗೆದು ನೋಡಿದರೆ ಗೊತ್ತಾಗುತ್ತದೆ.

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ,...

**(ಗೊಂದಲ)**

**ವೈಸ್ ಛೇರ್ಮನ್:–** ಮಾನ್ಯ ಮರಿತಿಬ್ಬೇಗೌಡರವರೇ, ತಾವು ತಮ್ಮ ಮಾತನ್ನು ಪೂರ್ಣಗೊಳಿಸಿ.

**(ಗೊಂದಲ)**

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ... ಅದು ಬಿ.ಜೆ.ಪಿ. ಲಸಿಕೆ, ಹಾಗಾಗಿ ನಾವು ಲಸಿಕೆ ತೆಗೆದುಕೊಳ್ಳುವುದಿಲ್ಲವೆಂದು ಹೇಳಿ ನಂತರ ಲಸಿಕೆ ತೆಗೆದುಕೊಳ್ಳುವುದಕ್ಕೆ ಮೊದಲನೆ ಸಾಲಿನಲ್ಲಿ ನಿಂತಿರುತ್ತಾರೆ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದವರು ಇಷ್ಟೆಲ್ಲಾ ಹೇಳುತ್ತಾರೆ ಅದೆಲ್ಲವನ್ನು ನಾನು ಒಪ್ಪುತ್ತೇನೆ. ಆದರೆ, ಕೋವಿಡ್–19 ಸಂದರ್ಭದಲ್ಲಿ ಯಾವ್ಯಾವ ಸಂಸ್ಥೆಗಳಿಂದ, ಸಾರ್ವಜನಿಕರಿಂದ, ಸಂಘ–ಸಂಸ್ಥೆಗಳಿಂದ ಬಂದಂತಹ ವಂತಿಗೆ ಎಷ್ಟು, ರಾಜ್ಯ ಸರ್ಕಾರದ ಹಣ ಎಷ್ಟು, ಕೇಂದ್ರ ಸರ್ಕಾರದ ಹಣ ಎಷ್ಟು ಮತ್ತು ಯಾವ್ಯಾವ ಕೆಲಸಕ್ಕೆ ಎಷ್ಟು ಹಣ ವಿನಿಯೋಗ ಮಾಡಿದ್ದೇವೆ ಎನ್ನುವಂಥದ್ದರ ಬಗ್ಗೆ ಈ ಸರ್ಕಾರಕ್ಕೆ ಒಂದು ಶ್ವೇತಪತ್ರ ಹೊರಡಿಸುವುದಕ್ಕೆ ಆಗಲಿಲ್ಲ ಏಕೆ? ನಾವು ಅವರು ಹೇಳುವುದನ್ನೆಲ್ಲವನ್ನು ಒಪ್ಪುತ್ತೇವೆ. ಇಷ್ಟೆಲ್ಲಾ ಕೆಲಸಗಳನ್ನು ಅವರು ಮಾಡಿದ್ದಾರೆ. ಅದೆಲ್ಲವನ್ನು ನಾವು ಒಪ್ಪಿಕೊಳ್ಳುತ್ತೇವೆ. ಇಂತಹ ಬಾಬಿನಿಂದ, ಇಂತಹ ಸಂಸ್ಥೆಗಳಿಂದ ಮತ್ತು ಇಂತಹ ಸಾರ್ವಜನಿಕ ವಲಯದಿಂದ ಇಷ್ಟು ಕೋಟಿ ಹಣ ಬಂದಿತ್ತು, ಅದನ್ನು ಇಂತಹ ಕೆಲಸಗಳಿಗೆ ಖರ್ಚು ಮಾಡಿದ್ದೇವೆಂದು ಏತಕ್ಕೆ ಒಂದು ಶ್ವೇತಪತ್ರ ಹೊರಡಿಸುವುದಿಲ್ಲ? ಈ ಶ್ವೇತಪತ್ರವನ್ನು ಹೊರಡಿಸಬೇಕೆಂದು ನಾನು ಬಹಳ ಒತ್ತಾಯ ಮಾಡುತ್ತೇನೆ. ಈ ಸರ್ಕಾರದವರು ಸತ್ಯವಾಗಿ ಅಥವಾ ಪ್ರಾಮಾಣಿಕವಾಗಿ ಹಣ ವಿನಿಯೋಗ ಮಾಡಿದ್ದರೆ ಆ ಬಗ್ಗೆ ಶ್ವೇತಪತ್ರ ಹೊರಡಿಸಬೇಕು.

**ವೈಸ್ ಛೇರ್ಮನ್:–** ತಾವು ತಮ್ಮ ಮಾತನ್ನು ಪೂರ್ಣಗೊಳಿಸಿ. ಸಮಯ ಆಯಿತು.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಇಲ್ಲ, ಇನ್ನು 15 ನಿಮಿಷ ಕಾಲಾವಕಾಶವಾದರೂ ಬೇಕು. ನಾನು ಮಾತನಾಡುವಾಗ ಮಧ್ಯದಲ್ಲಿ ಆಡಳಿತ ಪಕ್ಷದವರು intervene ಆಗುತ್ತಿದ್ದಾರೆ.

**ವೈಸ್ ಛೇರ್ಮನ್:–** ಇಲ್ಲ ನಿಮ್ಮ ಸಮಯ ಮುಗಿದಿದೆ. ಹಾಗಾಗಿ, ತಾವು ಪೂರ್ಣಗೊಳಿಸಿ. ಇದರಲ್ಲಿ ಯಾವುದೇ ಪ್ರಶ್ನೆ ಇರುವುದಿಲ್ಲ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಧ್ಯಮಾವಧಿ ವಿತ್ತೀಯ ಯೋಜನೆಯಲ್ಲಿ ಪುಟ ಸಂಖ್ಯೆ–64ರಲ್ಲಿ 1,004 ಕೋಟಿ ರೂಪಾಯಿಗಳನ್ನು ವಿವಿಧ ಕಂಪನಿಗಳಿಗೆ ಅವರು ಕೊಡಬೇಕಾದಂತಹ ತೆರಿಗೆ ಹಣವನ್ನು ಸಾಲ ಎಂದು ಕನ್ವರ್ಟ್ ಮಾಡಿದ್ದಾರೆ. ಅದು ಯಾವ ಕಂಪನಿಗಳಿಗೆ ಎಂದರೆ, ಟೊಯೋಟಾ, ಕಿರ್ಲೋಸ್ಕರ್ ಇಂತಹ ಸುಮಾರು ನೂರು ಕಂಪನಿಗಳಿಗೆ 1,004 ಕೋಟಿ ರೂಪಾಯಿ ಕೊಡಬೇಕಾದಂತಹ ತೆರಿಗೆ ಹಣವನ್ನು ಸಾಲ ಎಂದು ಕನ್ವರ್ಟ್ ಮಾಡಿರುತ್ತದೆ. ಆದರೆ, ರೈತರಿಗೆ 250 ರೂಪಾಯಿ ಸಬ್ಸಿಡಿಯನ್ನು ಪ್ರತಿ ಎಕರೆಗೆ ಡೀಸೆಲ್ ತೆಗೆದುಕೊಳ್ಳುವುದಕ್ಕೆ ಕೊಡುತ್ತಾರೆ.

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಅವರು ಅಧಿಕಾರದಲ್ಲಿದ್ದಾಗ ಒಂದು ಪೈಸೆ ಸಹ ನೀಡಿರುವುದಿಲ್ಲ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಈ ಹಿಂದೆ ಮಾನ್ಯ ಸಿದ್ದರಾಮಯ್ಯನವರು, ಮಾನ್ಯ ಹೆಚ್.ಡಿ. ಕುಮಾರಸ್ವಾಮಿಯವರು ಮತ್ತು ಮಾನ್ಯ ಹೆಚ್.ಡಿ. ದೇವೇಗೌಡರವರೆಲ್ಲರೂ ಸಹ ರೈತರ ಸಾಲ ಮನ್ನಾ ಮಾಡಿದ್ದರು. ಆದರೆ, ರೈತರು ಎಂದು ಬಿ.ಜೆ.ಪಿ.ಯವರು ಹೇಳಿದರೂ ಸಹ ಒಂದು ಬಾರಿಯೂ ಸಹ ರೈತರ ಸಾಲ ಮನ್ನಾ ಮಾಡುವುದಕ್ಕೆ ಆಗಲಿಲ್ಲ. ಆದರೆ, ಇವೊತ್ತಿನ ದಿವಸ ಖಾಸಗಿ ಕಂಪನಿಗಳಿಗೆ 1,004 ಕೋಟಿ ರೂಪಾಯಿಗಳನ್ನು ಸಾಲದ ರೂಪದಲ್ಲಿ ಕೊಡುತ್ತಾರೆ. ಇವೊತ್ತಿನ ದಿವಸ ನಿರುದ್ಯೋಗ ಸಮಸ್ಯೆ ಬಗ್ಗೆ ಸಹ ಹೇಳಬೇಕಾಗಿದೆ. ಈ ದಿವಸ ನಮ್ಮ ರಾಜ್ಯದಲ್ಲಿ ಎಷ್ಟು ನಿರುದ್ಯೋಗ ಸಮಸ್ಯೆ ನಮ್ಮನ್ನು ಕಾಡುತ್ತಿದೆ ಎಂದರೆ,..

**ವೈಸ್ ಛೇರ್ಮನ್:–** ಮಾನ್ಯ ಮರಿತಿಬ್ಬೇಗೌಡರವರೇ, ತಾವು ದಯಮಾಡಿ ತಮ್ಮ ಮಾತನ್ನು ಪೂರ್ಣಗೊಳಿಸಿ. ತಮ್ಮ ಸಮಯ ಮುಗಿದಿದೆ. ಹಾಗಾಗಿ, ತಾವು ಪೂರ್ಣಗೊಳಿಸಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, 10 ನಿಮಿಷದಲ್ಲಿ ಪೂರ್ಣಗೊಳಸುತ್ತೇನೆ. ಇವೊತ್ತಿನ ದಿವಸ ಈ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಎಲ್ಲಾ ಕೈಗಾರಿಕೆಗಳು ಖಾಸಗೀಕರಣಗೊಂಡಿರುತ್ತವೆ. ಈ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಸುಮಾರು 2 ಕೋಟಿ ಉದ್ಯೋಗ ಸೃಷ್ಠಿ ಮಾಡುತ್ತೇವೆ ಎಂದು ಹೇಳಿದವರು, ಇವೊತ್ತಿನ ದಿವಸ ಎಲ್ಲಾ ಖಾಸಗಿ ಅಥವಾ ಕಾರ್ಪೋರೇಟ್ ಕಂಪನಿಗಳಿಗೆ ಎಲ್ಲಾ ಸ್ವತ್ತುಗಳನ್ನು ಮಾರಾಟ ಮಾಡಿದ್ದಾರೆ ಹಾಗೂ ಲೀಸ್‌ಗೆ ಕೊಟ್ಟಿರುತ್ತಾರೆ. ಅಲ್ಲಿದ್ದಂತಹ ಮೀಸಲಾತಿ ಹುದ್ದೆಗಳು ಸಹ ಹೋಗಿರುತ್ತವೆ. ಇವೊತ್ತಿನ ದಿವಸ ದಲಿತರು ಮತ್ತು ಹಿಂದುಳಿದ ವರ್ಗದವರು ಮೀಸಲಾತಿ ಆಧಾರದ ಮೇರೆಗೆ ಸರ್ಕಾರಿ ಸ್ವಾಮ್ಯದಲ್ಲಿ ಯಾವ್ಯಾವ ಉದ್ಯೋಗ ಪಡೆಯುತ್ತಿದ್ದರು ಅವರ ಬಾಯಿಗೆ ಮಣ್ಣು ಹಾಕಿರುತ್ತಾರೆ. ಇವೊತ್ತಿನ ದಿವಸ ಎಲ್ಲವನ್ನೂ ಸ್ವಾಯತ್ತ ಸಂಸ್ಥೆಗಳು ಎಂದು ಮಾಡಿ, ಅವುಗಳನ್ನು ಖಾಸಗೀಕರಣಗೊಳಿಸಿ ಅವುಗಳನ್ನು ಕಾರ್ಪೋರೇಟ್ ಸೆಕ್ಟಾರ್‌ಗಳಿಗೆ ಕೊಟ್ಟಿರುತ್ತಾರೆ. ಇದರಿಂದಾಗಿ, ದೊಡ್ಡ ನಿರುದ್ಯೋಗ ಸಮಸ್ಯೆಯನ್ನು ಹುಟ್ಟು ಹಾಕಿರುತ್ತಾರೆ. ಭ್ರಷ್ಟಾಚಾರದ ಬಗ್ಗೆ ಮಾತನಾಡಬೇಕೆಂದರೆ, ಈ ಸರ್ಕಾರ ಎಷ್ಟು ಕೋಟಿ ರೂಪಾಯಿ ಹಣವನ್ನು ಸಾಲ ಮಾಡಿದೆ ಎಂದರೆ, ಸಾಲ ಮಾಡುವುದಕ್ಕೂ ಸಹ ಒಂದು ಇತಿ–ಮಿತಿ ಇರುತ್ತದೆ. ಈ ಹಿಂದಿನ ಎಲ್ಲಾ ಸರ್ಕಾರಗಳು ಸಹ ಸಾಲ ಮಾಡಿಕೊಂಡು ಬಂದಿರುತ್ತವೆ. ಅದನ್ನು ನಾನು ಒಪ್ಪುತ್ತೇನೆ. ಆದರೆ, ಎಲ್ಲಾ ಸರ್ಕಾರಗಳು ಸಾಲ ಮಾಡಿವೆ ಎಂದು, ಈಗಿನ ಸರ್ಕಾರಗಳು ಕೂಡ ಅದೇ ಪ್ರಮಾಣದಲ್ಲಿಯೇ ಯಾವುದೋ ಕಾರಣ ನೀಡಿ ಸಾಲವನ್ನು ಅತೀ ಹೆಚ್ಚಿನ ಪ್ರಮಾಣದಲ್ಲಿ ಸಾಲ ಮಾಡಿದರೆ ಹೇಗೆ? ಈ ಬಗ್ಗೆ ಹಾಸ್ಯ ಸಾಹಿತಿಯವರಾದ ಸನ್ಮಾನ್ಯ ಬೀಚಿಯವರು ತಮ್ಮ ಭಾಷಣದಲ್ಲಿ ಒಂದು ಮಾತನ್ನು ಹೇಳುತ್ತಾರೆ. ಆ ಸಂದರ್ಭದಲ್ಲಿ ಯಾರೋ ಒಬ್ಬ ವ್ಯಕ್ತಿ, "ಸ್ವಾಮಿ, ಸರ್ಕಾರಗಳು ಇಷ್ಟೊಂದು ಸಾಲ ಮಾಡುತ್ತವೆಯಲ್ಲಾ, ಇದನ್ನು ಹೇಗೆ ತೀರಿಸುತ್ತಾರೆ" ಎಂದು ಕೇಳುತ್ತಾರೆ. ಅದಕ್ಕೆ ಬೀಚಿಯವರು, "ಸಾಲ ಮಾಡುವಂತಹ ಸರ್ಕಾರಗಳಿಗೆ/ಮುಖ್ಯಮಂತ್ರಿಗಳಿಗೆ ಗೊತ್ತು. ಅದೇನೆಂದರೆ, ಸಾಲ ತೀರಿಸುವ ಸಮಯಕ್ಕೆ ನಾನು ಇರುವುದಿಲ್ಲ. ಆ ಸಮಯಕ್ಕೆ ಬೇರೆಯವರು ಬರುತ್ತಾರೆ. ಅದಕ್ಕಾಗಿ

ಅವರು ಹೆಚ್ಚು ಸಾಲ ಮಾಡುತ್ತಾರೆ" ಎಂದು ಹೇಳುತ್ತಾರೆ. ಅದು ಇವೊತ್ತಿನ ದಿವಸ ನಮಗೆ ನಿಜ ಎಂದು ಕಾಣಿಸುತ್ತದೆ. ಎರಡು ವಾರಗಳ ಹಿಂದೆ ನಾನು ಒಂದು ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯನ್ನು ಓದಿರುತ್ತೇನೆ.

**ವೈಸ್ ಛೇರ್ಮನ್:-** ಮಾನ್ಯ ಮರಿತಿಬ್ಬೇಗೌಡರೇ, please conclude.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಇನ್ನು 10 ನಿಮಿಷದಲ್ಲಿ ನನ್ನ ಮಾತನ್ನು ಪೂರ್ಣಗೊಳಿಸುತ್ತೇನೆ.

**ವೈಸ್ ಛೇರ್ಮನ್:-** ಇಲ್ಲ ಆಗುವುದಿಲ್ಲ. ತಮಗೆ ಇನ್ನು ಕೇವಲ ಒಂದು ನಿಮಿಷ ಕಾಲಾವಕಾಶ ಇದೆ. ನಾನು ಮುಂದಿನ ಹೆಸರನ್ನು ಕರೆಯುತ್ತೇನೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವಾಗ ಅನೇಕ ಸದಸ್ಯರು ಅಡ್ಡಿಪಡಿಸಿರುತ್ತಾರೆ.

**(ಗೊಂದಲ)**

**ವೈಸ್ ಛೇರ್ಮನ್:-** ತಮಗೆ ತುಂಬಾ ಸಮಯ ನೀಡಲಾಗಿದೆ. ಹಾಗಾಗಿ, ತಾವು ತಮ್ಮ ಮಾತನ್ನು ಪೂರ್ಣಗೊಳಿಸಿ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಭ್ರಷ್ಟಾಚಾರ ವಿಚಾರಕ್ಕೆ ಸಂಬಂಧಪಟ್ಟಂತೆ, ಲೋಕಾಯುಕ್ತವನ್ನು ಮೂಲೆಗೆ ದೂಡಿರುತ್ತಾರೆ. ಮಾನ್ಯ ಪ್ರಧಾನ ಮಂತ್ರಿಗಳು, "ನಾನು ಈ ದೇಶದಲ್ಲಿ ಅಧಿಕಾರಕ್ಕೆ ಬಂದರೆ, ಲೋಕ್‌ಪಾಲ್ ಮಸೂದೆಯನ್ನು ಜಾರಿಗೆ ತರುತ್ತೇನೆ" ಎಂದು ಹೇಳಿದರು. ಆದರೆ, ಆ ಲೋಕ್‌ಪಾಲ್ ಮಸೂದೆಯನ್ನು ಜಾರಿಗೆ ತರಲಿಲ್ಲ ಹಾಗೂ ಅಣ್ಣಾ ಹಜಾರೆಯವರನ್ನು ಮತ್ತು ಆ ಚಳುವಳಿಯನ್ನು ಸಹ ಮೂಲೆಗೆ ದೂಡಿರುತ್ತಾರೆ. ನಮ್ಮ ರಾಜ್ಯದಲ್ಲಿ ಲೋಕಾಯುಕ್ತವನ್ನು ಜಾರಿಗೆ ತಂದಿರುವುದಿಲ್ಲ. ನಾವು ಅಧಿಕಾರಕ್ಕೆ ಬಂದರೆ, "ಲೋಕಾಯುಕ್ತ ಸಂಸ್ಥೆಯನ್ನು ಬಲಪಡಿಸುತ್ತೇವೆ"

---

ಎಂದು ಹೇಳಿದರು. ಅದಕ್ಕೆ ಸಂಬಂಧಪಟ್ಟಂತೆ, ಎಲ್ಲಾ ಕಡೆಗಳಲ್ಲಿ ಚಳುವಳಿಗಳನ್ನು ಸಹ ಮಾಡಿದರು. ಆದರೆ, ಲೋಕಾಯುಕ್ತವನ್ನು ಬಲಪಡಿಸುವಂತಹ ವ್ಯವಸ್ಥೆ ಆಗಲಿಲ್ಲ. ಇದರಿಂದಾಗಿ, ಭ್ರಷ್ಟಾಚಾರ ಇವೊತ್ತಿನ ದಿವಸ ಹದ್ದು ಮೀರಿ ಹೋಗಿರುತ್ತದೆ. ನಾನು ಎರಡು ವಾರದ ಹಿಂದೆ ಒಂದು ಪತ್ರಿಕೆಯಲ್ಲಿ, "ಕರ್ನಾಟಕದ ಪೊಲೀಸ್ ಇಲಾಖೆಯಲ್ಲಿ ಭ್ರಷ್ಟಾಚಾರ ಹದ್ದುಮೀರಿರುತ್ತದೆ. ಇದು ಭಾರತ ದೇಶದಲ್ಲಿಯೇ 'ನಂಬರ್ ಒನ್' ಆಗಿದೆ" ಎನ್ನುವುದನ್ನು ಓದಿದೆನು.

(ಮುಂದು)

(358) 15.03.2022 5.10 ವೈಎಲ್-ಕೆಎಸ್ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಮರಿತಿಬ್ಬೇಗೌಡ (ಮುಂದು):-**

ಭಾರತೀಯ ಜನತಾ ಪಕ್ಷವು ಶೇ.40 ರಷ್ಟು ಕಮೀಷನ್ ಸರ್ಕಾರವಾಗಿದ್ದು; ಆ ವಿಚಾರವು ಮಾನ್ಯ ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರಿಗೆ ಗೊತ್ತಾಗಿದೆ.

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಯಾವ ವರದಿಯಲ್ಲಿ ಭಾರತೀಯ ಜನತಾ ಪಕ್ಷವು ಶೇ.40 ರಷ್ಟು ಸರ್ಕಾರ ಎಂದು ಇದೆ? ಮಾನ್ಯ ಮರಿತಿಬ್ಬೇಗೌಡರು ನೀಡುವಂಥ ವರದಿಯಲ್ಲಿರಬೇಕು. ಇಂತಹ ಮಾತನ್ನು ಸಹಿಸಿಕೊಳ್ಳಲು ಸಾಧ್ಯವೇ ಇಲ್ಲ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಷ್ಟ್ರಕವಿ ಕುವೆಂಪುರವರು "**ದೊರೆಯ ದೋಷಮೆ ಕಾರಣಂ ಪ್ರಜಾ ಸಂಕಟಕೆ**" ಎನ್ನುವಂಥ ಮಾತನ್ನು ಹೇಳಿದ್ದು, ಆ ದೊರೆಯ ದೋಷ ಬಿಜೆಪಿ ಸರ್ಕಾರಕ್ಕೆ ಬಂದಿದೆ. ಇವತ್ತು ಬಿಜೆಪಿ ಸರ್ಕಾರ ಮುಖ್ಯವಾಗುವುದಿಲ್ಲ, ದೇಶ ಮುಖ್ಯವಾಗುತ್ತದೆ. 60 ತಿಂಗಳು ಅಧಿಕಾರ ನೀಡಿ, ಈ ರಾಷ್ಟ್ರವನ್ನು ಬಂಗಾರ ಮಾಡುತ್ತೇವೆ ಎಂದು ಬಿಜೆಪಿ ಸರ್ಕಾರ ಹೇಳಿತ್ತು. ಆದರೆ, 60 ತಿಂಗಳುಗಳಲ್ಲಿ ಈ ದೇಶದ ಅಭಿವೃದ್ಧಿಯನ್ನು 60 ವರ್ಷಗಳಷ್ಟು ಹಿಂದೆ ಹೋಗುವ ಮಟ್ಟಕ್ಕೆ ತೆಗೆದುಕೊಂಡು ಹೋಗಿದ್ದಾರೆ. "ರಾಮರಾಜ್ಯ" ಬದಲು

"ರಾವಣರಾಜ್ಯ" ಆಗಿ ಬದಲು ಮಾಡಿದ್ದಾರೆ. ಬಿಜೆಪಿ ಶಾಸಕರು ಎಲ್ಲೆಲ್ಲಿದ್ದಾರೆ, ಅವರೆಲ್ಲರಿಗೂ ಸುಮಾರು 100.00 ಕೋಟಿ, 150.00 ಕೋಟಿ, ರೂ.200.00 ಕೋಟಿಗಳಷ್ಟು ಅನುದಾನವನ್ನು ಒಂದೊಂದು ಕ್ಷೇತ್ರಕ್ಕೆ ನೀಡುತ್ತಿದ್ದು, ಬಿಜೆಪಿ ಶಾಸಕರು ಇಲ್ಲದ ಕಡೆ ಒಂದು ರೂಪಾಯಿ ಅನುದಾನ ನೀಡುತ್ತಿಲ್ಲ. ಇಷ್ಟೆಲ್ಲಾ ಬಿಜೆಪಿ ಸರ್ಕಾರ ತಾರತಮ್ಯ ಮಾಡುತ್ತಿದ್ದು, ಯಾವ ರೀತಿ ಸಮಾನತೆ ತರುತ್ತಾರೆ. ಡಾ|| ಬಾಬಾ ಸಾಹೇಬ್ ಅಂಬೇಡ್ಕರ್‌ರವರು "ಸಂವಿಧಾನ ಎಷ್ಟೇ ಉತ್ತಮವಾಗಿದ್ದರೂ ಸಹ ಆಚರಣೆಗೆ ತರುವಂಥ ಜನರು ಉತ್ತಮರಾಗಿಲ್ಲವೆಂದರೆ, ಅದು ಬಹಳ ಕೆಟ್ಟ ಸಮಾಜ ನಿರ್ಮಾಣ ಮಾಡುತ್ತದೆ" ಎಂದು ಹೇಳಿದ್ದಾರೆ. ಆ ರೀತಿಯಾಗಿ ಒಬ್ಬೊಬ್ಬರಿಗೂ ಒಂದೊಂದು ರೀತಿ ಮಾಡಿ, ಬಿಜೆಪಿ ಶಾಸಕರಿಗೆ ರೂ.100 ಕೋಟಿ, 200 ಕೋಟಿ ಅನುದಾನ ನೀಡುತ್ತಿದ್ದು, ಬೇರೆ ಶಾಸಕರಿಗೆ ನೀಡುತ್ತಿಲ್ಲ. ಹಾಗಾದರೆ, ಆ ಭಾಗದ ಜನರು ಮತ ನೀಡಿಲ್ಲವೇ? ಈ ನಾಡಿನ ಜನರನ್ನೆಲ್ಲಾ ಒಟ್ಟಾಗಿ ತೆಗೆದುಕೊಂಡು ಹೋಗಿದ್ದಾರೆಯೇ?

ಮಾಸ್ಟರ್ ಹಿರಣ್ಣಯ್ಯನವರು "ಲಂಚವತಾರ" ನಾಟಕದಲ್ಲಿ ಅವರ ಮಗನಿಗೆ "ಲೇ ಮಗನೇ, ಈಗ ನಮ್ಮದೇ ಉತ್ತಮವಾದ ಕಾಲ. ಮುಂದೆ ಬಹಳ ಕೆಟ್ಟ ಕಾಲ ಇದ್ದು, ಚೆನ್ನಾಗಿ ಬದುಕು ನಡೆಸುವುದನ್ನು ಕಲಿತುಕೊಳ್ಳಬೇಕು, train up ಆಗಬೇಕು" ಎಂದು ಹೇಳುತ್ತಾರೆ. ಅದಕ್ಕೆ ಮಗ "ಅದು ಎಂಥದು ಅಪ್ಪ" ಕೇಳುತ್ತಾನೆ. ಅದಕ್ಕೆ ಮಾಸ್ಟರ್ ಹಿರಣ್ಣಯ್ಯನವರು "ನೋಡು ಮಗನೇ, ನಮ್ಮ ಕಾಲದಲ್ಲಿ ಸ್ವಿಚ್ ಹಾಕಿದರೆ ಪ್ಯಾನ್ ತಿರುಗುತ್ತಿದೆ, ಅದೇ ನಿಮ್ಮ ಕಾಲಕ್ಕೆ ಸ್ವೀಚ್ ಹಾಕಿ ಆ ಪ್ಯಾನ್ ಮೇಲೆ ರೂ.10.00 ಇಟ್ಟರೆ ಮಾತ್ರ ತಿರುಗುವುದು" ಎಂದು ಹೇಳುತ್ತಾರೆ. ಈ ಸರ್ಕಾರವು ಆ ರೀತಿಯಾಗಿದೆ. ಈ ಸರ್ಕಾರದ ಆಡಳಿತ ವ್ಯವಸ್ಥೆ ಯಾವ ರೀತಿ ಇದೆ ಎಂದರೆ, ಇಡೀ ದೇಶದಲ್ಲಿಯೇ ನಮ್ಮ ರಾಜ್ಯ ಭ್ರಷ್ಟಚಾರದಲ್ಲಿ ನಂ.1 ಆಗಿದೆ. ಬಡ ಜನರಿಗೆ ಏಳಿಗೆ ಇಲ್ಲ, Corporate Sector ಗಳಿಗೆ ಅವರ ಆಡಳಿತ ವ್ಯವಸ್ಥೆ ಮುಗಿಲು ಮುಟ್ಟಿ ಹೋಗಿದೆ.

**ವೈಸ್ ಛೇರ್ಮನ್:-** ಮಾನ್ಯ ಮರಿತಿಬ್ಬೇಗೌಡರೆ, conclude ಮಾಡಿ, ಸಾಕು ಕುಳಿತುಕೊಳ್ಳಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಕೊನೆಯದಾಗಿ ಒಂದು ಲೈನ್ ಮಾತನಾಡುತ್ತೇನೆ. ಕುವೆಂಪುರವರು ಒಂದು ಕವನವನ್ನು ಹೇಳಿದ್ದಾರೆ.

**ವೈಸ್ ಛೇರ್ಮನ್:-** ದಯವಿಟ್ಟು ಬೇಡ ಸಾಕು ಕುಳಿತುಕೊಳ್ಳಿ. ಇನ್ನೊಂದು ದಿವಸ ಮಾತನಾಡಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಒಂದೇ ಒಂದು ವಿಚಾರವನ್ನು ಹೇಳುತ್ತೇನೆ. ರಾಷ್ಟ್ರಕವಿ ಕುವೆಂಪುರವರು ತಮ್ಮ ಕವನದಲ್ಲಿ ಈ ಕೆಳಗಿನಂತೆ ತಿಳಿಸಿದ್ದಾರೆ.

"ಸುಳ್ಳಿನ ಮಾಲೆಯ ಕೊರಲಲಿಗೆ ಸೂಡಿ"

"ಕಳ್ಳನೊಬ್ಬನನ್ನು ಗುರುವನು ಮಾಡಿ"

"ಬಡವರ ಹಣವನ್ನು ಕಾಣಿಕೆ ನೀಡಿ"

"ಧರ್ಮವ ಮೆರೆದರು ನೋಡಯ್ಯ!"

ಎನ್ನುವ ಹಾಗೆ ಇದೆ ಈ ಸಾಲಿನ ಬಜೆಟ್.

**ವೈಸ್ ಛೇರ್ಮನ್:-** ಆಯಿತು ಧನ್ಯವಾದಗಳು ಕುಳಿತುಕೊಳ್ಳಿ. ಮಾನ್ಯ ವೀಣಾ ಅಚ್ಚಯ್ಯರವರೆ ಮಾತನಾಡಿ.

**ಶ್ರೀ ಮರಿತಿಬ್ಬೇಗೌಡ;-** ಮಾನ್ಯ ಸಭಾಪತಿಯವರೇ, ಒಂದೇ ಒಂದು ನಿಮಿಷ ಮಾತನಾಡಿ ಮುಗಿಸುತ್ತೇನೆ.

**ವೈಸ್ ಛೇರ್ಮನ್:-** ಮಾನ್ಯ ಮರಿತಿಬ್ಬೇಗೌಡರವರೆ ದಯವಿಟ್ಟು ಕುಳಿತುಕೊಳ್ಳಿ. ತುಂಬಾ ಸದಸ್ಯರು ಮಾತನಾಡಬೇಕಾಗಿದೆ. ತಾವು ಉಪ ಸಭಾಪತಿಯಾಗಿ ಕರ್ತವ್ಯ ನಿರ್ವಹಿಸಿದ್ದೀರಿ. Conclude ಮಾಡಿ ಎಂದು ಹೇಳಿದರೆ ಕಥೆ ಹೇಳುತ್ತಿದ್ದೀರಿ.

**ಶ್ರೀ ಮರಿತಿಬ್ಬೇಗೌಡ;–** ಮಾನ್ಯ ಸಭಾಪತಿಯವರೇ, ಆಯಿತು. ಒಂದೇ ಒಂದು ನಿಮಿಷ ನನ್ನ ಮಾತನ್ನು ಮುಗಿಸುತ್ತೇನೆ. ನಮ್ಮ ಊರಿನ ಪಕ್ಕದಲ್ಲಿ ಒಂದು ಘಟನೆ ನಡೆಯಿತು. ಒಬ್ಬ ವ್ಯಕ್ತಿ ಬಹಳ ಅಪಾಪೋಲಿಯಾಗಿದ್ದ ನಂತರ ಅನಾರೋಗ್ಯದಿಂದ ತೀರಿಕೊಂಡನು. ಆತನ ಅಭಿಮಾನಿಗಳೆಲ್ಲಾ ಸೇರಿಕೊಂಡು ಆತನ ಅಂತ್ಯಕ್ರಿಯೆಯ ದಿನ ಊರಿನ ಮನೆ–ಮನೆಗಳಿಗೆ "ಅಣ್ಣಾ ಮತ್ತೆ ಹುಟ್ಟಿ ಬಾ" ಎಂದು ಎಲ್ಲಾ ಕಡೆ ಆತನ ಫೋಟೋವನ್ನು ಅಂಟಿಸಿದ್ದರು. ಅದಲ್ಲದೇ ಆತನ ಶಾಲೆಗೂ ಸಹ ಹೋಗಿ ಆ ಫೋಟೋವನ್ನು ಅಂಟಿಸಿ ಬಂದರು. ಅದರ ಮಾರನೇ ದಿನ ಮುಖ್ಯೋಪಾಧ್ಯಾಯರು ಇದೇನಪ್ಪ "ಅಣ್ಣಾ ಮತ್ತೆ ಹುಟ್ಟಿ ಬಾ" ಎಂದು ಅಂಟಿಸಿದ್ದಾರೆ ಎಂದು ನೋಡಿ, ಒಬ್ಬ ವಿದ್ಯಾರ್ಥಿಗೆ ಆ ಫೋಟೋವನ್ನು ತೆಗೆದುಕೊಂಡು ಬಾ ಎಂದು ಹೇಳಿ, "ಅಣ್ಣಾ ಮತ್ತೆ ಹುಟ್ಟಿ ಬಾ" ಎಂದು ಏನು ಬರೆದಿತ್ತು, ಅದರ ಕೆಳಗೆ "ನಮ್ಮ ಊರಿನಲ್ಲಿ ಮಾತ್ರ ಬೇಡ" ಎಂದು ಬರೆಸಿದ್ದರು. ಆ ರೀತಿಯಾಗಿ ಮುಂದಿನ ಚುನಾವಣೆಯಲ್ಲಿ ಈ ನಾಡಿನ ಜನ "ಮತ್ತೊಮ್ಮೆ ಈ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುವುದು ಬೇಡ" ಎಂದು ಇತಿಹಾಸ ಬರೆಯುತ್ತಾರೆ. ಅಂತಹ ಚುನಾವಣಾ ಬಜೆಟ್ ನೀಡಿದ್ದಾರೆ. ಇದೊಂದು ಚುನಾವಣಾ ಬಜೆಟ್ ಆಗಿದೆ.

**ವೈಸ್ ಛೇರ್ಮನ್:–** ಮಾನ್ಯ ಮರಿತಿಬ್ಬೇಗೌಡರವರೆ, ಆಯಿತು. ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಮರಿತಿಬ್ಬೇಗೌಡ;–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕಲ್ಪಿಸಿದಕ್ಕೆ ಧನ್ಯವಾದಗಳು.

**(ಗೊಂದಲ)**

**ಶ್ರೀ ಎಸ್.ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ನನಗೆ ಅವಕಾಶ ಕಲ್ಪಿಸಿದಕ್ಕೆ ಧನ್ಯವಾದಗಳು. ಪ್ರಥಮವಾಗಿ ಈಗಾಗಲೇ ಡಾ॥ ವೈ.ಎ.ನಾರಾಯಣಸ್ವಾಮಿಯವರು ಸರ್ಕಾರದ ಮುಖ್ಯ ಸಚೇತಕರಾಗಿ ಆಯ್ಕೆಯಾಗಿದ್ದು, ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವ 2022–23ನೇ ಸಾಲಿನ ಆಯವ್ಯಯದಲ್ಲಿ ದಿವಂಗತ ಎಂ.ಗೋಪಾಲಕೃಷ್ಣ ಅಡಿಗ ಕವಿತೆಯನ್ನು ಉಲ್ಲೇಖಿಸಿ, "ಸರ್ವವ್ಯಾಪಿ,

ಸರ್ವಸ್ಪರ್ಶಿ, ಸರ್ವ ಅಭಿವೃದ್ಧಿ ದೃಷ್ಟಿಕೋನದೊಂದಿಗೆ ಕಾರ್ಯನಿರ್ವಹಿಸುವುದಾಗಿ" ಹೇಳಿದ್ದಾರೆ. ನಾನು ಯಾವಾಗಲೂ ಮಾತನಾಡುವಾಗ ಮಾನ್ಯ ಸಭಾಪತಿಯವರು ಕೊಡಗಿನ ಬಗ್ಗೆಯೇ ಮಾತನಾಡುತ್ತಾರೆ ಎಂದು ಹೇಳುತ್ತಾರೆ. ಕೊಡಗಿನ ಬಗ್ಗೆ ಮಾತನಾಡದೇ ವಿಧಿ ಇಲ್ಲದಂತ ಸಂದರ್ಭ ಬಂದಿದೆ. ಹಾಗಾಗಿ ಕೊಡಗಿನ ಕೆಲವು ವಿಚಾರದೊಂದಿಗೆ ಎಲ್ಲವನ್ನೂ ಸೇರಿಸಿ ಮಾತನಾಡುತ್ತೇನೆ. ನನ್ನ ತವರಿನ ಊರು ಕೊಡಗು ಆಗಿದ್ದು, ಕೊಡಗಿನಲ್ಲಿ ಅನೇಕ ಸಮಸ್ಯೆಗಳಿವೆ. ಒಂದೊಂದಾಗಿ ಅದರ ಬಗ್ಗೆ ಹೇಳುವುದು ನನ್ನ ಧರ್ಮ. ಮೊದಲನೆಯದಾಗಿ, ಕಾಫಿ ಬೆಳೆಗಾರರ ಸಮಸ್ಯೆ ಬಗ್ಗೆ ಹೇಳುತ್ತೇನೆ. ಬಹುಶಃ ಆಯವ್ಯಯ ಪುಸ್ತಕದಲ್ಲಿ ಕಾಫಿ ಬೆಳೆಗಾರರಿಗೆ ಸಂಬಂಧಿಸಿದಂತೆ ಯಾವುದೇ ಉಲ್ಲೇಖವನ್ನು ಮಾಡಲಿಲ್ಲ. ಕಾಫಿ ಬೆಳೆಗಾರರು ಎಂದಾಕ್ಷಣ ಕೊಡಗು, ಚಿಕ್ಕಮಗಳೂರು, ಮಲೆನಾಡು ಪ್ರದೇಶಗಳೆಲ್ಲಾ ಒಳಗೊಂಡಿರುತ್ತದೆ. ಕಾಫಿ ಬೆಳೆಗಾರರು ಎಷ್ಟು ಸಂಕಷ್ಟದಲ್ಲಿದ್ದಾರೆ ಎಂದರೆ, ಹೇಳುವುದಕ್ಕೆ ಸಾಧ್ಯವಿಲ್ಲ ಅಷ್ಟು ಸಂಕಷ್ಟದಲ್ಲಿದ್ದಾರೆ. ಬಹುಶಃ ಮಳೆಯ ವೈಪರೀತ್ಯದಿಂದಾಗಿ ಅಥವಾ ವಿಪರೀತ ಮಳೆಯಿಂದಾಗಿ ರೈತರು ತುಂಬಾ ಸಂಕಷ್ಟದಲ್ಲಿದ್ದಾರೆ. ಹಾಗೆಯೇ ಕೊಡಗಿನ ಕಾಫಿ ಬೆಳೆಗಾರರ ಬಗ್ಗೆ ಹೇಳುವುದಾದರೆ, ಕೊಡಗಿನ ಅವಮಾನ ಬೇರೆಯಾಗಿದ್ದು, ಅಲ್ಲಿ ಬೆಳೆಯುವ ಬೆಳೆಗಳು ಸಹ ಬೇರೆಯಾಗಿದೆ. ವಾಣಿಜ್ಯ ಬೆಳೆ ಎಂದು ಹೇಳಿ, ಯಾವುದೇ ರೀತಿಯ ಅನುಕೂಲ ಮಾಡದ ಹಾಗೆ ಸರ್ಕಾರ ನಡೆಸಿಕೊಂಡಿದೆ. ಎಲ್ಲಾ ಸರ್ಕಾರವನ್ನು ತೆಗೆದುಕೊಂಡು ಮಾತನಾಡುತ್ತಿದ್ದೇನೆ. ಬೇರೆ ಜಿಲ್ಲೆಗಳಲ್ಲಿ ಅನೇಕ ಬೆಳೆಗಳನ್ನು ಬೆಳೆಯುವವರಿಗೆ 10 ಹೆಚ್.ಪಿ. ವರೆಗೂ ಉಚಿತ ವಿದ್ಯುಚ್ಛಕ್ತಿ ನೀಡಿದ್ದಾರೆ. ಕೇವಲ ಎರಡು ತಿಂಗಳು ಮಾತ್ರ ಅಂದರೆ ಮಾರ್ಚ್ ಮತ್ತು ಏಪ್ರಿಲ್‌ನಲ್ಲಿ ಮಾತ್ರ ವಿದ್ಯುಚ್ಛಕ್ತಿ ಬಳಸಿ, sprinkler ಮಾಡಲು ಸಾಧ್ಯವಾಗುವುದು. ಅದು ಸಹ ಕೇವಲ ಕಾಫಿ ಬೆಳೆಗೆ ಮಾತ್ರ, ನೀರನ್ನು ಹಾಯಿಸುವಂಥ ವ್ಯವಸ್ಥೆ ಇದೆ. ಆದರೂ ಸಹ ಸರ್ಕಾರ ಕಾಫಿ ಬೆಳೆಗಾರರ ರೈತರ ಕೂಗು ಇದ್ದರೂ ಸಹ ಈ ಸಾಲಿನ ಆಯವ್ಯಯದಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರು ಪರಿಹಾರ ಕಲ್ಪಿಸುತ್ತಾರೆ ಎಂದು ಯೋಚನೆ ಮಾಡಿದ್ದೆವು. ಆದರೆ, ಯಾವುದೇ ಪರಿಹಾರ ಸಿಗಲಿಲ್ಲ. ಇದು ಕೊಡಗಿನ ದುರಂತವೆಂದು ಹೇಳಿದರೆ ತಪ್ಪಾಗುವುದಿಲ್ಲ, ಆ ಮಟ್ಟಿಗೆ ಇದೆ. ನಾವು ಮಾರ್ಚ್ ೦೮ ರಂದು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಿದ್ದೆವು. ಆದರೆ, ಈ ಆಯವ್ಯಯ ಪುಸ್ತಕದಲ್ಲಿ ಮಹಿಳೆಯರ ಬಗ್ಗೆ ಹೆಚ್ಚು ಉಲ್ಲೇಖ ಮಾಡಿಲ್ಲ. ಈಗಾಗಲೇ ಮಾತನಾಡುವಾಗ "ಸ್ತ್ರೀ ಶಕ್ತಿ

ಗುಂಪು" ರಚನೆ ಮಾಡಿದ್ದೇವೆ ಎಂದು ಮಾನ್ಯ ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರ ಹೆಸರನ್ನು ಉಲ್ಲೇಖಿಸಿದ್ದರು. ನಾವು ಸಹ ಅದನ್ನು ಒಪ್ಪಿಕೊಳ್ಳಲೇಬೇಕು. ಆದರೆ, ಕಾಂಗ್ರೆಸ್ ಪಕ್ಷದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ.ಕೃಷ್ಣನವರ ಕಾಲದಲ್ಲಿ ಶ್ರೀಮತಿ ಮೋಟಮ್ಮನವರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವರಾಗಿದ್ದ ಸಂದರ್ಭದಲ್ಲಿ ಕರ್ನಾಟಕ ರಾಜ್ಯದಲ್ಲಿ ಮೊದಲ ಬಾರಿಗೆ "ಸ್ತ್ರೀ ಶಕ್ತಿ ಗುಂಪು" ತಂದ ಕೀರ್ತಿ ನಮ್ಮ ಸರ್ಕಾರದ್ದಾಗಿದೆ. ಅದಕ್ಕೂ ಮೊದಲು ಕೇಂದ್ರ ಸರ್ಕಾರದಲ್ಲಿ ಮಾಜಿ ಕೇಂದ್ರ ಸಚಿವರಾದ ಮಾನ್ಯ ಜನಾರ್ಧನ ಪೂಜಾರಿಯವರು ವಿತ್ತ ಸಚಿವರಾಗಿದ್ದ ಸಂದರ್ಭದಲ್ಲಿ ಮಹಿಳೆಯರಿಗೆ ರೂ.5000 ವರೆಗೂ ಸಾಲ ನೀಡುವಂಥ "ಸಾಲ ಮೇಳ" ಅನ್ನು ಸಹ ಮಾಡಿದ್ದರು. ಅಂದಿನ ದಿವಸ ಮಹಿಳೆಯರು ಮನೆಯಿಂದ ಹೊರಗೆ ಬಂದು ಬ್ಯಾಂಕಿಗೆ ಹೋಗಿ ಸಾಲ ತೆಗೆದುಕೊಳ್ಳುವಂಥ ವ್ಯವಸ್ಥೆ ಆಗಿತ್ತು. ಅದೆಲ್ಲವನ್ನೂ ನಾವು ಪರಿಗಣನೆಗೆ ತೆಗೆದುಕೊಳ್ಳಬೇಕಾಗಿದೆ. ನಂತರ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸುವ ಸಂದರ್ಭದಲ್ಲಿ ಸರ್ಕಾರ ಮಹಿಳೆಯರಿಗೆ ಹೆಚ್ಚಿನ ಆದ್ಯತೆಯನ್ನು ನೀಡಬೇಕಾಗಿತ್ತು. ಆದರೆ, ಅದ್ಯಾವುದು ಸಹ ಪರಿಗಣನೆಗೆ ಬಂದಿಲ್ಲ. ಮಹಿಳೆಯರಿಗೆ ಸರ್ಕಾರವು "ಸ್ವ-ಸಹಾಯ ಸಂಘಗಳ" ಮೂಲಕ ಸಾಲ ಒದಗಿಸುತ್ತಿದ್ದು, ಅದರ ಬಡ್ಡಿಯನ್ನು ಮನ್ನಾ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ.

(ಮುಂದು...)

(359) 15.03.2022/5.20/ಎಸ್‌ಕೆ-ಕೆಎಸ್ (ವೈಸ್‌ಛೇರ್ಮನ್‌ರವರ ಉಪಸ್ಥಿತಿ)

**ಶ್ರೀಮತಿ ವೀಣಾ ಅಚ್ಚಯ್ಯ (ಮುಂದು):-**

ಇದರ ಜೊತೆಗೆ ಅನೇಕ ಸಮಸ್ಯೆಗಳವೆ. ಈ ಸದನದಲ್ಲಿ ಮಂತ್ರಿಗಳು ಯಾರೂ ಕೂಡ ಹಾಜರಿಲ್ಲ. ನಮ್ಮ ಕೊಡಗಿನಲ್ಲಿ ಹರಿಯುವಂತವ ನದಿ ಕಾವೇರಿ ನದಿ. ಆ ನದಿ ನೀರು ಹರಿದು ಕರ್ನಾಟಕದಿಂದ ತಮಿಳುನಾಡು ರಾಜ್ಯಕ್ಕೆ ಹರಿದು ಹೋಗುತ್ತಿದೆ. ಅ ನದಿ ನೀರನ್ನು ಕುಡಿಯುವ ನೀರು ಮತ್ತಿತ್ತರ ಯೋಜನೆಗಳಲ್ಲಿ ಬಳಸಿಕೊಳ್ಳುತ್ತಾರೆ. ಇವತ್ತು ಕಾವೇರಿ ನದಿಯನ್ನು ಪುನಃಶ್ಚೇತನಗೊಳಿಸುವಂತಹ

ವ್ಯವಸ್ಥೆಯೂ ಕೂಡ ಈ ಅಯವ್ಯಯದಲ್ಲಿ ಉಲ್ಲೇಖ ಮಾಡಿಲ್ಲ. ಅದರ ಸ್ವಚ್ಛತೆಯನ್ನು ಕೂಡ ಮಾಡಬೇಕಾಗುತ್ತದೆ. ಇವತ್ತು ಸ್ವಚ್ಛ ಭಾರತ್ ಎಂದು ಹೇಳಿ, ಕೇಂದ್ರ ಸರ್ಕಾರದ ಯೋಜನೆ ಕೂಡ ಇದೆ. ಅದು ಯಾವ ಮಟ್ಟದಲ್ಲಿ ಇದೆ ಎಂಬ ಬಗ್ಗೆ ಕೇಳುವಂತಹ ಪರಿಸ್ಥಿತಿ ಬಂದೊದಗಿದೆ. ಅಭಿವೃದ್ಧಿ ಇರುವ ಬೇಡಿಕೆ ಕುರಿತು ಸರ್ಕಾರ ದಿವ್ಯ ನಿರ್ಲಕ್ಷ್ಯವನ್ನು ಕೂಡ ತಾಳಿದೆ. ನಮ್ಮ ಕೊಡಗು ಜಿಲ್ಲೆಯಿಂದ ಕ್ರೀಡಾ ಪಟುಗಳು  ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಕ್ರೀಡಾ ಕೂಟದಲ್ಲಿ ಭಾಗವಹಿಸುತ್ತಾರೆ. ಕ್ರೀಡೆಗೆ ಉತ್ತಮವಾದ ವಿಶ್ವವಿದ್ಯಾಲಯ ಬೇಕು ಎಂದು ನಾನು ಕೇಳಿದ್ದೇನೆ. ಕೊಡಗು ಜಿಲ್ಲೆಯ ಕ್ರೀಡಾಪಟುಗಳು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಕೊಡುಗೆಯನ್ನು ಕೊಟ್ಟಿದ್ದಾರೆ. ಆ ಜಿಲ್ಲೆಗೆ ಕ್ರೀಡಾ ವಿಶ್ವವಿದ್ಯಾಲಯ ಬೇಕೆಂದು ನಾವು ಕೇಳಿದ್ದೇನೆ. ಆದರೂ ಕೂಡ ಇಲ್ಲಿಯವರೆವಿಗೂ ಕೊಟ್ಟಿಲ್ಲ.

ಮಾನ್ಯ ಸಭಾಪತಿಯವರೇ, ಯೋಧರ ಬಗ್ಗೆ ಮಾತನಾಡಬೇಕೆಂಬ ನನ್ನ ಅನಿಸಿಕೆಯಾಗಿದೆ. ಕೊಡಗು ಜಿಲ್ಲೆಯಿಂದ ಅನೇಕ ಯೋಧರನ್ನು ದೇಶ ಸೇವೆಗಾಗಿ ಕಳುಹಿಸುತ್ತಿದ್ದೇವೆ. ಒಂದು ಉದಾಹರಣೆ ಹೇಳುವುದಾದರೆ, ಒಂದು ತಿಂಗಳ ಹಿಂದೆ ಒಬ್ಬ ಮುಸ್ಲಿಂ ಯೋಧ ಹಿಮದಲ್ಲಿ ಬಿದ್ದು, ವೀರ ಮರಣವನ್ನಪ್ಪಿದ.  ನಾವೆಲ್ಲರೂ ಕೂಡ ಸೇರಿಕೊಂಡು ಅವರ ಶವ ಸಂಸ್ಕಾರವನ್ನು ಮಾಡಿದ್ದೇವೆ. ಅಲ್ಲಿನ ಘಟನೆಯನ್ನು ನೋಡಿದರೆ, ಪ್ರತಿಯೊಬ್ಬ ಜನರ ಕಣ್ಣಿನಲ್ಲಿ ಕಣ್ಣೀರು ಬರುವಂತಹ ಸನ್ನಿವೇಶವಾಗಿತ್ತು. ಆ ಮೃತ ಯೋಧನಿಗೆ ಒಬ್ಬ ವೃದ್ಧೆ ತಾಯಿ ಮತ್ತು ಒಬ್ಬ ಪತ್ನಿ ಇಬ್ಬರು ಮಕ್ಕಳು ಇದ್ದಾರೆ. ಆ ಪಾರ್ಥಿವ ಶರೀರ ಬಂದಂತಹ ಸಂದರ್ಭದಲ್ಲಿ, ಪತ್ನಿ ಮತ್ತು ಇಬ್ಬರು ಮಕ್ಕಳನ್ನು ಕರೆದುಕೊಂಡು ಬಂದರು. ಅವೆರಡು ಪುಟ್ಟ ಮಕ್ಕಳಿಗೂ army dress ಹಾಕಿಕೊಂಡು ಬಂದಿರುವುದನ್ನು ನಾವು ಕಣ್ಣಾರೆ ನೋಡಿದ್ದೇವೆ. ಆ ಮಕ್ಕಳು ತಂದೆಗೆ ಅಂತಿಮ ನಮನ ಸಲ್ಲಿಸಬೇಕಾದರೆ, ಅರ್ಮಿ ಸ್ಟೈಲ್‌ನಲ್ಲಿ salute ಹೊಡೆದರು.  ಅದನ್ನು ನೋಡಿ ನಮಗೆಲ್ಲರಿಗೂ ಕರುಳು ಕಿತ್ತು ಬರುವಂತಹ ಸನ್ನಿವೇಶವಾಗಿತ್ತು.  ಅಲ್ಲಿ ತಾಯಿ ಕುಸಿದು ಬಿದ್ದರು. ಅಂತಹ ಸಂದರ್ಭದಲ್ಲಿ ಇವತ್ತು ಏನಾಗಿದೆ ಎಂದರೆ, ತಾಯಿಗೆ ವಯಸ್ಸಾಗಿದೆ. ಆತನ ಹೆಂಡತಿ ಮತ್ತು ತಾಯಿಗೆ ವಾಸ ಮಾಡಲು ಮನೆ ಇಲ್ಲ. ಅಂತಹ ಪರಿಸ್ಥಿಯಲ್ಲಿದ್ದರೂ ಕೂಡ ಕೊಡಗಿನಿಂದ ಹೋಗಿ, ವೀರ ಮರಣವನ್ನಪ್ಪಿದ್ದಾರೆ. ಸರ್ಕಾರ ಏನಾದರೊಂದು ಮಾಡಬೇಕಾಗಿದೆ?

ಬಹುಶಃ ಮೃತ ಯೋಧನ ಸರ್ವಿಸ್ ಮಾಡದ್ದಂತಹ ಕೆಲವು ಪರಿಹಾರಗಳು ಪತ್ನಿಗೆ ಸಿಗಬಹುದು. ಆದರೆ ತಾಯಿಯನ್ನು ನೋಡಿಕೊಳ್ಳುವವರು ಯಾರು? ಈ ಕುಟುಂಬದ ಕಷ್ಟವನ್ನು ಕೇಳುವವರು ಯಾರು? ಆತನ ತಾಯಿ ಸಿದ್ಧಾಪುರದಲ್ಲಿ ನೆಲೆಸಿದ್ದಾಳೆ. ಆತನ ಹೆಂಡತಿ ವೀರಾಜಪೇಟೆಯಲ್ಲಿ ನೆಲೆಸಿದ್ದಾಳೆ. ಆತನ ತಾಯಿಯನ್ನು ನೋಡಿಕೊಳ್ಳುವವರು ಯಾರೂ ಇಲ್ಲ. ಆಕೆ ತನ್ನ ತಂಗಿಯ ಮನೆಯಲ್ಲಿದ್ದಾಳೆ. ಮಗ ಕಳುಹಿಸುವ ಅಲ್ಪ-ಸ್ವಲ್ಪ ಹಣದಲ್ಲಿ ತಾಯಿ ಜೀವನ ನಡೆಸುತ್ತಿದ್ದಳು. ಇದೀಗಾ ಅದೂ ಕೂಡ ಇಲ್ಲದಂತಾಗಿದೆ. ಆ ಕುಟುಂಬಕ್ಕೆ ವಾಸ ಮಾಡಲು ಮನೆ ಕೂಡ ಇಲ್ಲ. ನಾನು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುವುದೇನೆಂದರೆ, ಆ ಒಂದು...

**ವೈಸ್ ಛೇರ್ಮನ್:-** ಆತನ ತಾಯಿ ಮನೆ ಬೇಕೆಂದು ಆಶ್ರಯ ಯೋಜನೆಯಡಿಯಲ್ಲಿ ಮನೆಗೆ ಅರ್ಜಿ ಹಾಕಿಲ್ಲವೇ?

**ಶ್ರೀಮತಿ ವೀಣಾ ಅಚ್ಚಯ್ಯ:-** ಆಕೆಗೆ ವಾಸ ಮಾಡಲು ಮನೆಯಿಲ್ಲದೇ ಇರುವುದರಿಂದ ಅವರ ತಂಗಿಯ ಮನೆಯಲ್ಲಿದ್ದಾರೆ.

**ವೈಸ್ ಛೇರ್ಮನ್:-** ತಾವು ಅವರಿಗೆ ಅರ್ಜಿಯನ್ನು ಹಾಕಿಸಿ. ಸರ್ಕಾರದವರು ಆಶ್ರಯ ಮನೆಯನ್ನು ಕೊಡುತ್ತಾರೆ. ತಮ್ಮ ಮಾತನ್ನು ಮುಂದುವರೆಸಿ.

**ಶ್ರೀಮತಿ ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಯವರೇ, ಆತನ ತಾಯಿ ಮತ್ತು ಹೆಂಡತಿ ಕೂಡ ವಾಸ ಮಾಡಲು ಮನೆ ಇಲ್ಲ. ಅವರು ಅಲ್ಪಸಂಖ್ಯಾತರು. ಆ ಮಕ್ಕಳನ್ನು ಏನಾಗಬೇಕೆಂದು ಕೇಳಿದರೆ, ಸೈನ್ಯಕ್ಕೆ ಸೇರಬೇಕೆಂದು ಹೇಳಿದರು. ನಾನು ತಮ್ಮ ಮೂಲಕ ಸರ್ಕಾರಕ್ಕೆ ಹೇಳಬಯಸುವುದೇನೆಂದರೆ, ಅವರೆಡು ಸಣ್ಣ ಮಕ್ಕಳನ್ನು ಅರ್ಮಿ ಶಾಲೆಗೆ ಕಳುಹಿಸಿ ಓದಿಸುವಂತಹ ವ್ಯವಸ್ಥೆಯನ್ನು ಖಂಡಿತವಾಗಿಯೂ ಮಾಡಬೇಕು. ನಾನು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುತ್ತಿದ್ದೇನೆ. ಆ ಮಕ್ಕಳ ಪೂರ್ತಿ ವಿವರಗಳನ್ನು ಸರ್ಕಾರಕ್ಕೆ ತಂದು ಕೊಡುತ್ತೇನೆ. ಅವೆರಡು ಮಕ್ಕಳನ್ನು ಸೈನಿಕ ಶಾಲೆಗೆ ಕಳುಹಿಸಿ, ಅವರ ಇಚ್ಛೆಯಂತೆ, ಸೈನ್ಯಕ್ಕೆ ಸೇರುವಂತಹ ವ್ಯವಸ್ಥೆಯನ್ನು ಖಂಡಿತವಾಗಿ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ತಮ್ಮ ಮೂಲಕ ಸರ್ಕಾರವನ್ನು

ಒತ್ತಾಯಿಸುತ್ತೇನೆ. ಒಂದು ಕಾಲಘಟ್ಟದಲ್ಲಿ ಕೊಡಗು ಜಿಲ್ಲೆ ಪ್ರತ್ಯೇಕ ರಾಜ್ಯವಾಗಿತ್ತು. ಆ ರಾಜ್ಯದಲ್ಲಿ ನಮ್ಮದೇ ಆದ ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳು ಸಹ ಇದ್ದರು. ಅಲ್ಲಿ ನಮ್ಮದೇ ಆದ ಕೆಲಸ-ಕಾರ್ಯಗಳು ನಡೆಯುತ್ತಿತ್ತು. ಇವತ್ತು ನಮ್ಮ ಜಿಲ್ಲೆಯ ಯಾವುದೇ ಬೇಡಿಕೆಗಳಿದ್ದರೂ ಕೂಡ ಅದನ್ನು ಈಡೇರಿಸುವಂತಹ ಕೆಲಸವನ್ನೂ ಮಾಡಿಲ್ಲ. ಕೊಡಗು ಜಿಲ್ಲೆಯನ್ನು ಸಂಪೂರ್ಣವಾಗಿ ಕಡೆಗಣಿಸಿದ್ದಾರೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅನೇಕ ವೀರ ಯೋಧರರು ಮತ್ತು ಕ್ರೀಡಾಪಟುಗಳನ್ನು ಕೊಟ್ಟಂತಹ ನಾಡು. ಕೊಡಗು ಜಿಲ್ಲೆಯಿಂದ ಅನೇಕ ಜನರಿಗೆ ಕುಡಿಯುವ ನೀರು ಕೊಟ್ಟಿರುವಂತಹದ್ದಾಗಿದೆ. ಇದೆಲ್ಲಾ ಪರಿಗಣಿಸಿದರೆ, ಎಲ್ಲಾ ಜಿಲ್ಲೆಗಳಿಗಿಂತ ಹೆಚ್ಚಿನ ಆದ್ಯತೆಯನ್ನು ನಮ್ಮ ಜಿಲ್ಲೆಗೆ ಕೊಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತೇನೆ. ಬಹುಶಃ ನಮ್ಮ ದುರದೃಷ್ಟಕರವೇನೆಂದರೆ, ಮೂರು ಕ್ಷೇತ್ರವಿದ್ದಂತಹದ್ದು, ಎರಡು ಕ್ಷೇತ್ರವಾಯಿತು. ಎರಡು ಕ್ಷೇತ್ರಗಳಲ್ಲಿ ಬಿ.ಜೆ.ಪಿ. ಪಕ್ಷದವರೇ ನಿರಂತರವಾಗಿ ಗೆಲ್ಲುತ್ತಿದ್ದಾರೆ. ಬಿ.ಜೆ.ಪಿ. ಪಕ್ಷದಿಂದ ಒಬ್ಬ ಎಂ.ಎಲ್.ಸಿ. ಗೆಲ್ಲುತ್ತಾರೆ. ನನ್ನ ಅವಧಿ ಜೂನ್ 14 ಕ್ಕೆ ಮುಗಿಯುತ್ತದೆ. ಅವರು ಆಡಳಿತ ಪಕ್ಷದವರಾಗಿದ್ದು, ಸರ್ಕಾರದ ಜೊತೆ ಜಗಳ ಮಾಡುವುದಕ್ಕಾಗುವುದಿಲ್ಲ ಮತ್ತು ಕೇಳುವುದಕ್ಕಾಗುವುದಿಲ್ಲ. ಕೊಡಗಿನ ಪರಿಸ್ಥಿತಿ ಏನಾಗಬಹುದು ಎಂಬ ಬಗ್ಗೆ ಯೋಚನೆ ಮಾಡಿ. ಕೊಡಗಿನ ಬಗ್ಗೆ ಧ್ವನಿ ಎತ್ತುವವರು ಯಾರು? ಪ್ರತಿ ದಿನ ಕಾಡಾನೆಗಳ ಹಾವಳಿ, ಹುಲಿ ದಾಳಿ ಇರಬಹುದು. ಇವೆಲ್ಲ ನಿರಂತರವಾಗಿ ನಡೆಯುತ್ತಲೇ ಇದೆ.

ಮಾನ್ಯ ಸಭಾಪತಿಯವರೇ, ಸ್ಥಳೀಯ ಪತ್ರಿಕೆಯನ್ನು ತೆಗೆದು ನೋಡಿದರೆ, ಕೊಡಗು ಜಿಲ್ಲೆಯ ಪರಿಸ್ಥಿತಿ ಏನಾಗಿದೆ ಎಂಬ ಬಗ್ಗೆ ತಮಗೆ ಗೊತ್ತಾಗುತ್ತದೆ. ರೈತ ಸಂಘ, ಬೇರೆ ರೈತರು, ಆದಿವಾಸಿಗಳು, ಬೇರೆ ಸಂಘ-ಸಂಸ್ಥೆಗಳು ಇರಬಹುದು. ಪ್ರತಿ ದಿನ ನಿರಂತರ ಪ್ರತಿಭಟನೆ ನಡೆಯುತ್ತಲೇ ಇದೆ. ಇದಕ್ಕೆ ಯಾರು ಕಾರಣ? ಇದಕ್ಕೆ ಉತ್ತರವನ್ನು ಯಾರು ಕೊಡುತ್ತಾರೆಂಬುದರ ಬಗ್ಗೆ ನಮಗೆ ಗೊತ್ತಾಗುವುದಿಲ್ಲ. ಮೊನ್ನೆ ತಾನೇ ನಾನು ಮಾತನಾಡುವಾಗ, ಈ ಜಿಲ್ಲೆಗೆ ಸಂಬಂಧಪಟ್ಟಂತಹವರೇ ಉಸ್ತುವಾರಿ ಸಚಿವರಾಗಿ ಬರುವುದಿಲ್ಲ. ಹೊರಗಿನವರು ಉಸ್ತುವಾರಿ ಸಚಿವರಾಗಿ ಬರುತ್ತಾರೆ. ಅವರು ಬರುವಾಗ ಮಾತ್ರ ಕೊಡಗು ರೀತಿ ಕಾಣುತ್ತದೆ. ಆದರೆ ಅವರು ಪುನಃ ಬೆಂಗಳೂರಿಗೆ ಹೋದ ಮೇಲೆ,

ನಮ್ಮ ಸಮಸ್ಯೆಯನ್ನು ಯಾರು ಕೇಳುತ್ತಾರೆ? ನಮ್ಮ ಜಿಲ್ಲೆಯಲ್ಲಿ ನಿರಂತರವಾಗಿ ಗೆಲ್ಲುವಂತಹ ಶಾಸಕರಿಗೆ ಮಂತ್ರಿ ಸ್ಥಾನವನ್ನು ಕೊಡುವುದಿಲ್ಲ. ನಮ್ಮ ಜಿಲ್ಲೆಗೆ ಸಂಬಂಧಪಟ್ಟವರು ಉಸ್ತುವಾರಿ ಸಚಿವರಿದ್ದರೆ, ನಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಕೊಡುತ್ತಾರೆ. ಈ ರೀತಿಯ ಸಮಸ್ಯೆಗಳು ನಡೆಯುತ್ತಿದೆ. ಇಂತಹ ಅನೇಕ ವಿಚಾರಗಳು ಸರ್ಕಾರದ ಗಮನಕ್ಕೆ ಇದೆ. ಇನ್ನೊಂದು ವಿಚಾರವನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುವುದೇನೆಂದರೆ, ನಮ್ಮ ಸರ್ಕಾರವಿದ್ದಾಗ, ಏನಮ್ಮ ಕೊಡಗಿನವರು ಶ್ರೀಮಂತರು ಎಂದು ಎರಡ್ಮೂರು ಬಾರಿ ಹೇಳಿದ್ದಾರೆ. ನಾವು ಶ್ರೀಮಂತರಲ್ಲ. ಹಮ್ಮಿಯಾಲ, ಮುಟ್ಲು, ಅಚ್ಚಿನಾಡ್ ಮರ್‍ನಾಲ್ಕು ಗ್ರಾಮಗಳಿವೆ. ಆ ಗ್ರಾಮಗಳು interior ನಲ್ಲಿ ಇವೆ. ಆ ಗ್ರಾಮಗಳಲ್ಲಿರುವ ಮಕ್ಕಳು ಬೆಂಗಳೂರಿನ ಬ್ಯಾಂಕ್‌ಗಳಲ್ಲಿ ಗನ್‌ಮ್ಯಾನ್, ವಾಚ್‌ಮ್ಯಾನ್ ಆಗಿ ಕೆಲಸ ಮಾಡುತ್ತಿದ್ದಾರೆ. ಆ ಮಕ್ಕಳೆಲ್ಲಾ ಆ ಗ್ರಾಮಗಳನ್ನು ತೊರೆದು ಬೆಂಗಳೂರಿಗೆ ಬಂದಿದ್ದಾರೆ. ಆ ಮೂರು ಗ್ರಾಮಗಳಲ್ಲಿ ವಿಪರೀತ ಮಳೆ ಇರುವುದರಿಂದ, ಅಲ್ಲಿ ಬದುಕುವುದಕ್ಕಾಗುವುದಿಲ್ಲ. ಆ ಮಕ್ಕಳು ತಂದೆ-ತಾಯಿಯನ್ನು ಬಿಟ್ಟು, ಬೆಂಗಳೂರಿನಲ್ಲಿ ಸೇರಿಕೊಂಡಿದ್ದಾರೆ. ಮೊನ್ನೆ ದಿನ ನಾನು ಜೀಪ್‌ನಲ್ಲಿ ಮನೆಗೆ ಹೋಗುತ್ತಿರಬೇಕಾದರೆ, ಒಬ್ಬ ವೃದ್ಧ ಸುಮಾರು 75-80 ವರ್ಷಗಳಾಗಿರಬಹುದು. ಆ ವೃದ್ಧನು ತನ್ನ ತಲೆಯ ಮೇಲೆ ಸೌಧೆಯನ್ನಿಟ್ಟುಕೊಂಡು, ಮಂಟಿ ಹತ್ತಿಕೊಂಡು ಹೋಗುತ್ತಿದ್ದಾನೆ. ಇಂತಹ ಪರಿಸ್ಥಿತಿಯನ್ನು ನೋಡಿದರೆ, ಕರಳು ಎಷ್ಟು ಚುರಕು ಎನ್ನುತ್ತದೆ. ನಾವು "ಸಬ್ಕಾ ವಿಕಾಸ್" ಎಂದು ಹೇಳುತ್ತೇವೆಯೆಲ್ಲಾ, ಕೆಲವು ಕಡೆ ಯಾವ ವಿಕಾಸವೂ ಇಲ್ಲ. ಆ ರೀತಿ ಪರಿಸ್ಥಿತಿ ನಮ್ಮ ಕೊಡಗು ಜಿಲ್ಲೆಯಲ್ಲಿದೆ ಎಂಬ ಬಗ್ಗೆ ನೇರವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಹೆಚ್ಚಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಕೊಡಗು ಜಿಲ್ಲೆಯ ಜನರು ತುಂಬಾ ನೊಂದಿದ್ದೇವೆ. ಈ ಜಿಲ್ಲೆಗೆ ಯಾವುದೇ ಒಂದು ಅವಕಾಶ ಕೂಡ ಇಲ್ಲ. ನಾವು ಕೇಳಿರುವಂತಹದ್ದರ ಬಗ್ಗೆ ಯಾವುದೂ ಕೂಡ ಈಡೇರುತ್ತಿಲ್ಲ. ಪ್ರತಿ ದಿನ ಪತ್ರಿಕೆಯಲ್ಲಿ ನೋಡಿದರೆ, ಸಂಘ-ಸಂಸ್ಥೆಯವರು, ರೈತ ಮುಖಂಡರು ಕೂಡ ಪ್ರತಿಭಟನೆ ಮಾಡುತ್ತಿದ್ದಾರೆ. ಕಾಡಾನೆಗಳು ಮತ್ತು ಹುಲಿಯ ದಾಳಿಯಿಂದ ಜನರು ತತ್ತರಿಸಿದ್ದಾರೆ. ಎಲ್ಲಾ ಇಲಾಖೆಗಳಲ್ಲಿ ಸಮರ್ಪಕವಾಗಿ ಕೆಲಸ ನಡೆಯುತ್ತಿಲ್ಲ ಎಂಬ ಬಗ್ಗೆ ಇದನ್ನೆಲ್ಲಾ ಉಲ್ಲೇಖ ಮಾಡಿದ್ದೇನೆ. ಎರಡ್ಮೂರು

ಅಧಿವೇಶನದಲ್ಲಿ ಕೆಲವೊಂದು ಸಮಸ್ಯೆಯ ಬಗ್ಗೆ ಕಂದಾಯ ಮಂತ್ರಿಗಳಿಗೆ ನಾನು ಮನವಿಯನ್ನು ಮಾಡಿಕೊಂಡಿದ್ದೇನೆ. ಕೊಡಗಿಗೆ ಪ್ರತ್ಯೇಕವಾದ ಜಮ್ಮಾ ಬಾಣೆ ಎನ್ನುವುದು ಯಾವ ಜಿಲ್ಲೆಗಳಲ್ಲಿ ಇಲ್ಲ. ಅದು ನಮ್ಮ ಜಿಲ್ಲೆಯಲ್ಲಿ ಇದೆ. ಜಮ್ಮಾ ಏನೆಂದು ಹೇಳಿದರೆ, ಬಹುಶಃ ಚಿಕ್ಕಮಗಳೂರವರಿಗೆ ಕೊಟ್ಟ ಹಾಗೇ, ಬೆಟ್ಟ ಅಂತದ್ದಲ್ಲ. ನಮಗೆ ಪೂರ್ವಜರು ರಾಜರ ಕಾಲದಲ್ಲಿ ಕೊಟ್ಟಿರುವಂತಹ ಬಳುವಳಿ. ಹಾಗಾಗಿ, ನಮಗೆ ಕೋವಿ ಹಕ್ಕು ಸಹ ಅದರಲ್ಲಿಯೇ ಬಂದಿದ್ದು. ಹಾಗಾಗಿ ಕೋವಿ ಹಕ್ಕು ಯಾರ ಪರವಾನಿಗೆ ಬೇಡ. ಅದು ನಮ್ಮ ಕೊಡಗಿನವರ ಜನ್ಮ ಸಿದ್ಧ ಹಕ್ಕು. ಯಾವುದೇ ಪರವಾನಿಗೆ ಬೇಡ. ಆದರೆ ಪರವಾನಿಗೆ ಬೇಕಾಗಿದ್ದರೂ, ಅಷ್ಟೊಂದು ಕಷ್ಟವಿಲ್ಲ. ಅದು ಬೇಗ ಸಿಗುತ್ತದೆ. ಪಟ್ಟೆದಾರ್ ಎನ್ನುವವರು ಮುಂಚೆ ಇದ್ದರು. ಈಗಲೂ ಕೂಡ ಇದ್ದಾರೆ. ಪಟ್ಟೆದಾರ್ ಸತ್ತು ಹೋದರೆ, ಆ ಮನೆಯ ಹಿರಿಯ ಇನ್ನೊಬ್ಬ ಪಟ್ಟೆದಾರ್ ಆದರೆ, ಅವರಿಗೆ ಖಾತೆಯನ್ನು ಬದಲಾವಣೆ ಮಾಡಿ, ನೋಂದಣಿಯನ್ನು ಮಾಡಬಹುದೆಂಬುದೆಲ್ಲಾ ಇತ್ತು. ಈಗ ಹೊಸ ಕಾನೂನನ್ನು ತಂದಿದ್ದಾರೆ. ಪಟ್ಟೆದಾರ್ ಸತ್ತು ಹೋದರೆ, ಅವರ ಅವನ ಮಗ ಅಥವಾ ಕುಟುಂಬದವರು ಯಾರಾದರೂ ಆಗಬೇಕು ಎನ್ನುವುದು ಸೂಕ್ತವಲ್ಲ. ಆ ರೀತಿಯಾದರೆ, ಯಾರಿಗೂ ಕೂಡ ಕೆಲಸ ಮಾಡುವುದಕ್ಕಾಗುವುದಿಲ್ಲ. ಇವನು ಖಾತೆ ಬದಲಾವಣೆ ಮಾಡಿಕೊಡುವುದಿಲ್ಲ. ಇದನ್ನು ನಾನು criticize ಮಾಡುವುದು ಅಂತಲ್ಲ. ಈ ಒಂದು ಕಂದಾಯ ದಾಖಲೆ ಮನೆ ಬಾಗಿಲಿಗೆ ಸರ್ಕಾರದ ದಿಟ್ಟ ಹೆಜ್ಜೆ.

(ಮುಂದು)

(360) 15-03-2022 5.30 ಟಿಸಿಹೆಚ್-ಕೆಎಸ್ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀಮತಿ ವೀಣಾ ಅಚ್ಚಯ್ಯ (ಮುಂದು):-**

ಅದು ಕೊಡಗಿನಲ್ಲಿ ಮಕಂದೂರು ಗ್ರಾಮ ಪಂಚಾಯಿತಿಯಲ್ಲಿ ಮೊದಲು ಪ್ರಾರಂಭವಾಯಿತು. ನಾವೆಲ್ಲಾ ಅಲ್ಲಿಗೆ ಹೋಗಿ ಮಾಡಿದ್ದೇವೆ. ಅದರಲ್ಲಿ ಆರ್.ಟಿ.ಸಿ., ಮತ್ತು ಜಾತಿ ದೃಢೀಕರಣ ಪತ್ರ ಮಾತ್ರ ಕೊಟ್ಟಿದ್ದಾರೆ. ನಮಗೆ ಸಿಂಗಲ್ ಆರ್.ಟಿ.ಸಿ., ಕೊಡಬೇಕೆಂಬುದು ನಮ್ಮ ವಾದ. ಆರ್.ಟಿ.ಸಿ., ಯಲ್ಲಿ 7-8 ಜನರ ಹೆಸರು ಇರುತ್ತದೆ. ಸರ್ವೇ ನಂಬರ್ ಬೇರೆ ಬೇರೆ ಇರುತ್ತದೆ. ಆದರೆ ನಮಗೆ ಪ್ರತ್ಯೇಕವಾದ

ಆರ್.ಟಿ.ಸಿ., ಕೊಟ್ಟಾಗ ಮಾತ್ರ 'ಮನೆ ಬಾಗಿಲಿಗೆ ಸರ್ಕಾರದ ದಿಟ್ಟ ಹೆಜ್ಜೆ' ಯೋಜನೆಗೆ ಅರ್ಥ ಸಿಗುತ್ತದೆ. ಈಗಾಗಲೇ ಮಾನ್ಯ ಶಾಸಕರು ಹೇಳಿದಂತೆ ಆನ್‌ಲೈನ್ ವ್ಯವಸ್ಥೆ ಮಾಡಿದರೆ ನಮ್ಮ ಮನೆ ಬಾಗಿಲಿಗೆ ಬಂದು ತಲುಪುತ್ತದೆ. ಬರೀ ಅದನ್ನು ಕೊಡುವುದಕ್ಕೆ ಸರ್ಕಾರ ಕೋಟ್ಯಂತರ ರೂಪಾಯಿಗಳನ್ನು ಖರ್ಚು ಮಾಡುವುದನ್ನು ನಾನು ಒಪ್ಪುವುದಿಲ್ಲ. ಏಕೆಂದರೆ ನಾನು ಕೊಡಗಿಗೆ ಸೀಮಿತವಾಗಿ ಹೇಳುತ್ತಿದ್ದೇನೆ. ಬಹುಶಃ ಬೇರೆಯವರಿಗೆ ಸಿಂಗಲ್ ಆರ್.ಟಿ.ಸಿ., ಸಿಗುತ್ತದೆಯೋ ಏನೋ ನನಗೆ ಗೊತ್ತಿಲ್ಲ. ಇದ್ಯಾವುದು ಏನೂ ಪರಿಹಾರ ಅಲ್ಲವೇ ಅಲ್ಲ. ಈ ಯೋಜನೆ ಕೊಡಗಿಗೆ ಬೇಡವೇ ಬೇಡ. ಇಂತಹ ಯೋಜನೆಯಿಂದ ನಮಗೆ ಏನೂ ಪ್ರಯೋಜನವಾಗುವುದಿಲ್ಲ. ಈಗಾಗಲೇ ಶ್ರೀಮತಿ ಭಾರತಿ ಶೆಟ್ಟಿಯವರು ಕೊಡಗಿನ ಹಳ್ಳಿಗಾಡಿನಲ್ಲಿ ಫೋನ್‌ನೆಟ್ ವರ್ಕ್ ಕೂಡ ಸಿಗುವುದಿಲ್ಲವೆಂದು ಹೇಳಿದರು. ಮೇಡಂ, ಅದೆಲ್ಲಾ ಸಿಗುತ್ತದೆ. ನಮಗೆ ಸಿಂಗಲ್ ಆರ್.ಟಿ.ಸಿ., ಕೊಡಬೇಕು.

**ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ರೀತಿಯ ಡಾಕ್ಯುಮೆಂಟ್ಸ್ ಬರೀ ಕೊಡಗಿಗೆ ಮಾತ್ರವಲ್ಲ, ಬೇರೆ ಯಾವ ಜಿಲ್ಲೆಯವರಿಗೂ ಕೊಡುವುದು ಬೇಡ. ಕೊಡಗು ಸಹ ಕರ್ನಾಟಕ ರಾಜ್ಯದ ಒಂದು ಜಿಲ್ಲೆ ಆಗಿದೆ. ಸಾಮಾನ್ಯವಾಗಿ ಈಗ ಏನು ಆರ್.ಟಿ.ಸಿ., ಮತ್ತು ಜಾತಿ ದೃಢೀಕರಣ ಪತ್ರಗಳು ಇವೆ, ಅವು ಸಿಗುತ್ತವೆ. ಶ್ರೀಮತಿ ವೀಣಾ ಅಚ್ಚಯ್ಯನವರು ಹೇಳಿದಂತೆ ಒಂದು ಆರ್.ಟಿ.ಸಿ., ಯಲ್ಲಿ ಸುಮಾರು 7–8 ಜನ ಇರುತ್ತಾರೆ. ಸರ್ವೇ ನಂಬರ್ ಒಂದೇ ಇರುತ್ತದೆ. Individual ಆಗಿ ಆರ್.ಟಿ.ಸಿ., ಬೇಕೆಂದರೆ ಪೋಡಿ ಆಗಬೇಕು. ಆ ಪೋಡಿ ಕೆಲಸ ಮಾಡಿಕೊಡಿ ಎಂದು ಹೇಳುತ್ತಿದ್ದಾರೆ. ಅದು ಕೊಡಗು ಬೇರೆಯಲ್ಲ, ಕರ್ನಾಟಕದ ಇನ್ನಿತರೆ ಜಿಲ್ಲೆಗಳು ಬೇರೆಯಲ್ಲ.

**ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು):–** ಮಾನ್ಯ ಸಭಾಪತಿಯವರೇ, ಮೈಸೂರಿನಲ್ಲಿ ನಾನೇ ಸುಮಾರು 2 ಗಂಟೆಗಳ ಕಾಲ ನಿಂತುಕೊಂಡು ಆರ್.ಟಿ.ಸಿ., ಮತ್ತು ಜಾತಿಪ್ರಮಾಣ ಪತ್ರವನ್ನು ಕೊಟ್ಟಿದ್ದೇನೆ. ಇದು ಬಹಳ ಒಳ್ಳೆಯ ಸ್ಕೀಂ. ಒಂದು ಗ್ರಾಮ ಪಂಚಾಯಿತಿಗೆ ಅವುಗಳನ್ನು ಪೂರ್ತಿ ಕೊಟ್ಟಾಗ ಜನ ನೂರಕ್ಕೆ ನೂರರಷ್ಟು ಖುಷಿ ಪಡುತ್ತಾರೆ. ಈಗ ನಾಡ ಕಚೇರಿಗಳು ಏನಿವೆ, ಆ ನಾಡ ಕಚೇರಿಗಳಿಗೆ ಅಲೆದಾಡುವುದು ತಪ್ಪಿತು. ಹಾಗಾಗಿ, ಮಾನ್ಯ

ಸಿ.ಎನ್.ಮಂಜೇಗೌಡರವರೇ, ಅವರಿಗೆ ಒಂದು Caste Certificate ಇರಬೇಕು. ಎಲ್ಲವನ್ನೂ ಬಹಳ ವ್ಯವಸ್ಥಿತವಾಗಿ ಮಾಡಿದ್ದಾರೆ.

**(ಗೊಂದಲ)**

**ಶ್ರೀ ಸಿ.ಎನ್.ಮಂಜೇಗೌಡ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. . .

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರು ಅದನ್ನು ಇತ್ತೀಚೆಗೆ ಪ್ರಾರಂಭ ಮಾಡಿದ್ದಾರೆ. ಎಲ್ಲಾ ಜಿಲ್ಲೆಗಳಗೂ ಹೋಗಿ ಅದನ್ನು ಮಾಡಿದರೆ ನೂರಕ್ಕೆ ನೂರರಷ್ಟು ಒಳ್ಳೆಯದಾಗುತ್ತದೆ. ಇದರಲ್ಲಿ ಏನಾಗುತ್ತದೆಂದು ನಮಗೆಲ್ಲರಿಗೂ ಗೊತ್ತು. ಅವರು ನಾಡ ಕಛೇರಿ, ತಾಲ್ಲೂಕು ಕಛೇರಿ ಹಾಗೂ ಎ.ಸಿ., ಯವರ ಕಛೇರಿಗಳಗೆ ಅಲೆದು ಸುಸ್ತಾಗಿಬಿಟ್ಟಿರುತ್ತಾರೆ. At least, ಈ ಸ್ಕೀಂ ಜಾರಿಗೆ ತಂದಿರುವುದರಿಂದ ಒಳ್ಳೆಯದಾಗುತ್ತದೆ.

**(ಗೊಂದಲ)**

**ಶ್ರೀ ಸಿ.ಎನ್.ಮಂಜೇಗೌಡ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. . .

**ವೈಸ್ ಛೇರ್ಮನ್:-** ಮಾನ್ಯ ಸಿ.ಎನ್.ಮಂಜೇಗೌಡ ರವರೇ, ನೀವು ಪ್ರತಿಕ್ರಿಯೆ ಕೊಟ್ಟಿದ್ದೀರಿ. ತಾವು ಮಾತನಾಡಿದ್ದು ಸಾಕು. ಈಗ ಅಷ್ಟು ಸಮಯವಿಲ್ಲ.

**(ಗೊಂದಲ)**

**ಶ್ರೀ ಸಿ.ಎನ್.ಮಂಜೇಗೌಡ:-** ಮಾನ್ಯ ಸಭಾಪತಿಯವರೇ, ನಿಜವಾಗಲೂ ಅದರಿಂದ ಏನೂ ಪ್ರಯೋಜನವಿಲ್ಲ. ಜನಕ್ಕೆ ಬೇಕಾಗಿರತಕ್ಕಂಥ ಪೋಡಿ ಮತ್ತು ದರಖಾಸ್ತು. ಅದರ ಸಲುವಾಗಿ ನಾನು ಹೇಳುತ್ತಿದ್ದೇನೆ. ಸಾಮಾನ್ಯವಾಗಿ ಆರ್.ಟಿ.ಸಿ., ಸಿಕ್ಕೇ ಸಿಗುತ್ತದೆ.

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ಸಿ.ಎನ್.ಮಂಜೇಗೌಡ ರವರೇ, ನೀವು ಅದರ ಬಗ್ಗೆ ಎರಡನೇ ಬಾರಿಗೆ ಹೇಳಿದ್ದೀರಿ. ತಾವು ಮಾತನಾಡಿದ್ದು ಸಾಕು.

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು, ದಯವಿಟ್ಟು ಈ ವಿಚಾರವನ್ನು ಮಾನ್ಯ ಕಂದಾಯ ಸಚಿವರ ಗಮನಕ್ಕೆ ತಂದು ಅವರಿಗೆ ಮನವರಿಕೆ ಮಾಡಿಕೊಡಬೇಕು. ನಮಗೆ ಸಪರೇಟ್ ಆದಂತಹ ವ್ಯವಸ್ಥೆ ಆಗಲೇಬೇಕು. ಅದಿಲ್ಲದೆ ಈ ಪ್ರಕಾರ ಮಾಡುವುದಾದರೆ, ಖಂಡಿತವಾಗಿಯೂ ನಾವು ಇಲಾಖೆಗಳಿಗೆ ಹೋಗಿ ಅಲೆಯುವುದು ತಪ್ಪುವುದಿಲ್ಲ. ಆಮೇಲೆ ನಾನು ಮಾಜಿ ಸೈನಿಕರ ಬಗ್ಗೆ ಇಲ್ಲಿ ಹಲವಾರು ಬಾರಿ ಪ್ರಸ್ತಾಪ ಮಾಡಿದ್ದೇನೆ. ನಮ್ಮ ಭಾಗದಲ್ಲಿ ತುಂಬಾ ಜನ ಮಾಜಿ ಸೈನಿಕರಿದ್ದಾರೆ. ಅಲ್ಲಿ ಏನಾಗಿದೆಯೆಂದರೆ, ಸಾಧಾರಣವಾಗಿ ಯೋಧರು ಸುಮಾರು 25 ವರ್ಷಗಳ ಕಾಲ ಆರ್ಮಿಗೆ ಹೋಗಿರುತ್ತಾರೆ. ಅವರು ನಿವೃತ್ತಿಯಾಗಿ ತಮ್ಮ ಊರಿಗೆ ವಾಪಸ್ಸು ಬಂದಾಗ, ಅವರ ಅಣ್ಣ-ತಮ್ಮಂದಿರು ಯಾವುದೋ ಪ್ರಭಾವ ಬೀರಿ ಅವರ ಆಸ್ತಿಯನ್ನೂ ಕೂಡ ಕಬಳಿಕೆ ಮಾಡಿರುತ್ತಾರೆ. ಅವರು ಸೇನೆಯಿಂದ ವಾಪಸ್ಸು ಬಂದಾಗ ಅವರ ಹತ್ತಿರ ಆಸ್ತಿ ಇಲ್ಲದಂಥ ಪರಿಸ್ಥಿತಿ ಬಂದಿದೆ. ಅನೇಕ ವರ್ಷಗಳ ಹಿಂದೆ ಸರ್ಕಾರ ಮಾಜಿ ಯೋಧರಿಗೆ ಸುಮಾರು 5-10 ಎಕರೆ ಜಾಗವನ್ನು ಮಂಜೂರು ಮಾಡುವಂಥ ಒಂದು ವ್ಯವಸ್ಥೆ ಕೂಡ ಇತ್ತು. ಅದು ಈಗ ಕೊಡಗಿನಲ್ಲಿ ಆಗುತ್ತಿಲ್ಲ. ಅನೇಕ ಜನರು ಅರ್ಜಿಗಳನ್ನು ಕೊಟ್ಟಿದ್ದಾರೆ, ಆದರೆ ಅವರಿಗೆ ಜಾಗ ಸಿಗುತ್ತಿಲ್ಲ. ಈ ವಿಚಾರವನ್ನೂ ಕೂಡ ಮಾನ್ಯ ಕಂದಾಯ ಸಚಿವರ ಗಮನಕ್ಕೆ ತರಬೇಕು. ಆ ಮಾಜಿ ಯೋಧರು ಯಾರ್ಯಾರು ಅರ್ಜಿಗಳನ್ನು ಹಾಕಿದ್ದಾರೋ ಅವರಿಗೆಲ್ಲರಿಗೂ ಕೂಡ ಜಾಗ ಮಂಜೂರು ಮಾಡಬೇಕು. ಅದರ ಜೊತೆಗೆ ಮಾಜಿ ಯೋಧರ ಯೋಗಕ್ಷೇಮ ವಿಚಾರಿಸಿಕೊಳ್ಳುವುದಕ್ಕೆ ಅವರಿಗೆ ಒಂದು ವಿಶ್ರಾಂತಿ ಕೇಂದ್ರವನ್ನು ಕೂಡ ಸ್ಥಾಪನೆ ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಏಕೆಂದರೆ ಅಲ್ಲಿ ವಯಸ್ಸಾದವರೆಲ್ಲಾ ಇದ್ದಾರೆ, ಬಹುಶಃ ಅವರ ಮಕ್ಕಳು-ಮೊಮ್ಮಕ್ಕಳು ಸಹ ನೋಡಿಕೊಳ್ಳದಂಥವರು ಕೂಡ ಇದ್ದಾರೆ, ಅಂತಹವರಿಗೊಂದು ಆಶ್ರಯ ಕೊಡಬೇಕು. ಏಕೆಂದರೆ ಅವರು ದೇಶಕ್ಕಾಗಿ ದುಡಿದು ಬಂದಿರುವಂಥ ಮಾಜಿ ಯೋಧರು. ಸರ್ಕಾರ ಅವರಿಗೆ ಗೌರವ ಕೊಡಲೇಬೇಕಾಗುತ್ತದೆ. ಆ ನಿಟ್ಟಿನಲ್ಲಿ ಸರ್ಕಾರ ಆ ಕೆಲಸವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ

ಹೇಳುವುದಕ್ಕೆ ಬಯಸುತ್ತೇನೆ. ಎಲ್ಲದಕ್ಕಿಂತ ಮಿಗಿಲಾಗಿ ಇವತ್ತಿನ ದಿವಸ ಕೊಡಗಿನಲ್ಲಿ ಹಲವು ಯೋಜನೆಗಳು ನೆನೆಗುದಿಗೆ ಬಿದ್ದಿವೆ. ಕೊಡಗಿನಲ್ಲಿ ಅಬಕಾರಿ ಭವನ ಇದೆ. ಅಲ್ಲಿ ಮರಗಿಡಗಳೆಲ್ಲಾ ಬೆಳೆದುಕೊಂಡು ಕಾಡಿನಂತಾಗಿದೆ. ಅಬಕಾರಿ ಭವನ ಇತ್ತು. ಅದನ್ನು maintain ಮಾಡುವುದಕ್ಕೆ ಆಗುವುದಿಲ್ಲವೆಂದು ಸುಮಾರು ರೂ. ೬೦,೦೦೦/-ಗಳನ್ನು ಕೊಟ್ಟು ಒಂದು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. ಅಲ್ಲಿ ಹಳೆಯ ಕಟ್ಟಡ ಇರತಕ್ಕಂಥ ಒಂದು ಜಾಗವಿದೆ. ಅಲ್ಲಿ ಅಬಕಾರಿ ಭವನ ಕೂಡ ನಿರ್ಮಾಣವಾಗಬೇಕು. 'ಹೆರಿಟೇಜ್ ಸೆಂಟರ್' ಮತ್ತು 'ಸುವರ್ಣ ಭವನ' ಇದೆಲ್ಲಾ ongoing works ಆಗಿದ್ದು, ಯಾವುದೂ ಸರಿಯಾಗಿ ನಡೆಯುತ್ತಿಲ್ಲ. ಎಲ್ಲಕ್ಕಿಂತ ಮಿಗಿಲಾಗಿ ಕೂಟಿಯಾಲ ಸೇತುವೆ ನಿರ್ಮಾಣ ಮಾಡಲಾಗಿದೆ. ಆ ಸೇತುವೆಗೆ ಕೋಟ್ಯಂತರ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಫಾರೆಸ್ಟ್‌ನವರು ಆ ಸೇತುವೆಯನ್ನು ಬಳಸುವುದಕ್ಕೆ ಬಿಡುತ್ತಿಲ್ಲ. ಮತ್ತೆ ಹೆರಿಟೇಜ್ ಸೆಂಟರ್ ಕೂಡ ಅರ್ಧಂಬರ್ಧ ಕಾಮಗಾರಿ ಆಗಿದೆ. ಇವತ್ತಿನ ದಿವಸ ಅನೇಕ ಕಾಮಗಾರಿಗಳು ನೆನೆಗುದಿಗೆ ಬಿದ್ದಿವೆ. ಹಾಗಾಗಿ, ನಾನು ಸರ್ಕಾರವನ್ನು ಒತ್ತಾಯ ಮಾಡುವುದೇನೆಂದರೆ, ಕೊಡಗಿನಲ್ಲಿ ಇಂತಹ ಅನೇಕ ಸಮಸ್ಯೆಗಳು ಇವೆ. ದಯವಿಟ್ಟು ಮಾನ್ಯ ಕಂದಾಯ ಸಚಿವರು ಹಾಗೂ ಅರಣ್ಯ ಸಚಿವರಿಬ್ಬರಿಗೂ ಕೂಡ ನಾನು ಒತ್ತಾಯ ಮಾಡುತ್ತಿದ್ದೇನೆ. ಮಾನ್ಯ ಅರಣ್ಯ ಸಚಿವರು ಏಪ್ರಿಲ್ ಮೊದಲನೇ ವಾರದಲ್ಲಿ ಕೊಡಗಿಗೆ ಬರುತ್ತೇನೆಂದು ಒಪ್ಪಿದ್ದಾರೆ. ಅದೇ ರೀತಿ ಮಾನ್ಯ ಕಂದಾಯ ಸಚಿವರು ಕೂಡ ಖಂಡಿತವಾಗಿ ಈ ವಿಚಾರವಾಗಿ ಅಲ್ಲಿಗೆ ಬರಲೇಬೇಕಾಗುತ್ತದೆ. ಆ ನಿಟ್ಟಿನಲ್ಲಿ ತಾವು ಕೂಡ ಅವರ ಗಮನಕ್ಕೆ ತರಬೇಕೆಂದು ಹೇಳುತ್ತಿದ್ದೇನೆ. ಬಹುಶಃ ಮಾತನಾಡಲು ಇನ್ನೂ ಅನೇಕ ವಿಚಾರಗಳಿದ್ದರೂ ಕೂಡ ಸರ್ಕಾರ ನಾನು ಹೇಳಿದ್ದೆಲ್ಲವನ್ನೂ ಪರಿಗಣನೆಗೆ ತೆಗೆದುಕೊಂಡು ಮಾಡಬೇಕಾಗಿದೆ. ಮತ್ತೆ ಈ ವರ್ಷದ ಆಯವ್ಯಯದಲ್ಲಿ ಅಂತಹ ಒಂದು ಸಮಾಧಾನಕರವಾದಂಥ ಅಂಶ ಯಾವುದೂ ಕಾಣುತ್ತಿಲ್ಲ. ಹಾಗಾಗಿ, ಇವತ್ತಿನ ದಿವಸ ನಾವೇನು ಸದಸ್ಯರುಗಳು ಮಾತನಾಡಿದ್ದೇವೆ, ಅದನ್ನೆಲ್ಲವನ್ನೂ ಪರಿಗಣನೆಗೆ ತೆಗೆದುಕೊಂಡು ಸರ್ಕಾರ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಈಗಾಗಲೇ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಅನುದಾನವನ್ನು ಕಡಿತಗೊಳಿಸುತ್ತಿದ್ದಾರೆಂದು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಹಾಗಾಗಿ, ಅದನ್ನೂ ಕೂಡ ಆದಷ್ಟು ಬೇಗ ಕೊಡಬೇಕೆಂದು ಕೇಳುತ್ತಿದ್ದೇನೆ. ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, 24 ಗಂಟೆಗಳಿಂದ ನನ್ನ ಹೆಸರು ಕರೆಯುತ್ತಾರೆಂದು ಕಾಯುತ್ತಿದ್ದೆನು. ಕೊನೆಗೂ 24 ಗಂಟೆಗಳಾದ ನಂತರ ನನಗೆ ಅವಕಾಶ ಸಿಕ್ಕಿದೆ. ಅದಕ್ಕೆ ಧನ್ಯವಾದಗಳು. ಮೊದಲಿಗೆ...

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. . .

**ವೈಸ್ ಛೇರ್ಮನ್:-** ಈಗ ಮಾನ್ಯ ಎಸ್.ಎಲ್.ಭೋಜೇಗೌಡರು ಮಾತನಾಡುವುದಕ್ಕೆ ಯಾರು ಅಧಿಕಾರ ಕೊಟ್ಟಿದ್ದಾರೋ ಗೊತ್ತಾಗಲಿಲ್ಲ. Please sit down. ಮಾನ್ಯ ಅರುಣ್‌ರವರೇ ಮಾತನಾಡಿ.

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೇ, ನಾನು ಬಜೆಟ್ ಬಗ್ಗೆ ಮಾತನಾಡುವುದಕ್ಕೆ ಮುಂಚೆ ಇವತ್ತು ಕರ್ನಾಟಕ ಹೈಕೋರ್ಟ್ ಒಂದು 'ಐತಿಹಾಸಿಕ ತೀರ್ಪ'ನ್ನು ಕೊಟ್ಟಿದೆ. ಆ ತ್ರಿಸದಸ್ಯ ನ್ಯಾಯಪೀಠಕ್ಕೆ ನಮ್ಮೆಲ್ಲರ ಪರವಾಗಿ ಹೃತ್ಪೂರ್ವಕವಾದಂಥ ಅಭಿನಂದನೆಗಳು ಹಾಗೂ ಧನ್ಯವಾದಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಶಾಸಕರು ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

ನಿನ್ನೆ ದಿವಸ ಸಂಜೆ 5.30 ರಿಂದ 6.00 ಗಂಟೆಗೆ ಅಧಿವೇಶನ ಮುಗಿಸಿಕೊಂಡು ನಾವೆಲ್ಲರೂ ಕ್ರಿಕೆಟ್ ಪಂದ್ಯಾವಳಿಯನ್ನು ನೋಡಲು ಹೋಗೋಣವೆಂದು ಮಾತನಾಡಿಕೊಂಡಿದ್ದೆವು. ಆದರೆ ಮೂರೇ ದಿವಸಕ್ಕೆ ಆ ಟೆಸ್ಟ್ ಕ್ರಿಕೆಟ್ ಪಂದ್ಯವು ಭಾರತದ ಶ್ರೀ ರೋಹಿತ್ ಶರ್ಮಾರವರ ನೇತೃತ್ವದಲ್ಲಿ ಗೆದ್ದು ಸರಣಿಯನ್ನು ಕೂಡ ತನ್ನದಾಗಿಸಿಕೊಂಡಿದೆ. ಭಾರತದ ಕ್ರಿಕೆಟ್ ತಂಡಕ್ಕೆ ಹಾಗೂ ನಾಯಕರಾದ ಶ್ರೀ ರೋಹಿತ್ ಶರ್ಮಾರವರಿಗೂ ಕೂಡ ಈ ಸದನದ ಪರವಾಗಿ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅದೇ ರೀತಿ ಈಗಾಗಲೇ ಡಾ.ವೈ.ಎ.ನಾರಾಯಣಸ್ವಾಮಿಯವರು ಸರ್ಕಾರದ ಮುಖ್ಯ ಸಚೇತಕರಾಗಿ ಕೆಲಸ ಮಾಡುತ್ತಿದ್ದರು. ಇವತ್ತು ಅವರು ಅಧಿಕೃತವಾಗಿ

ಆಯ್ಕೆಯಾಗಿರುವುದಕ್ಕೆ ಅವರಿಗೆ ಹೃತ್ಪೂರ್ವಕವಾದಂಥ ಧನ್ಯವಾದಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಶಾಸಕರು ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

**ವೈಸ್ ಛೇರ್ಮನ್:-** ಮಾನ್ಯ ಡಿ.ಎಸ್.ಅರುಣ್‌ರವರೇ, ಅವರ ಬಟ್ಟೆ ಬಣ್ಣ ಮಾತ್ರ ಕಾಮ್ರೆಡ್ ಬಣ್ಣ ಇದೆ.

**(ಈ ಹಂತದಲ್ಲಿ ಶ್ರೀ ಹೆಚ್.ಎಂ.ರಮೇಶ್‌ಗೌಡರವರು ತಮ್ಮ ಸ್ಥಾನದಲ್ಲಿ ಕುಳಿತುಕೊಂಡು ಮಾತನಾಡಿದರು)**

**ವೈಸ್ ಛೇರ್ಮನ್:-** ಮಾನ್ಯ ರಮೇಶ್ ಗೌಡರವರೇ, this is not good. ತಾವು ಕುಳಿತುಕೊಂಡು ಮಾತನಾಡಬಾರದು, no.

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೇ, 24 ಗಂಟೆಗಳ ಹಿಂದೆ ಬಜೆಟ್ ಬಗ್ಗೆ ಮಾತನಾಡಲು ನಾನು ಹಾಕಿಕೊಂಡಿದ್ದ ಪಾಯಿಂಟ್ಸ್ ಸುಮಾರು ನಾಲ್ಕು ಪುಟಗಳಿದ್ದವು. ಆದರೆ ಇವತ್ತು ಅದು ಸುಮಾರು 15 ಪುಟಗಳವರೆಗೆ addition ಆಗುತ್ತಾ ಹೋಯಿತು. ಸನ್ಮಾನ್ಯ ಮುಖ್ಯಮಂತ್ರಿಯವರಾದ ಮಾನ್ಯ ಬಸವರಾಜ ಬೊಮ್ಮಾಯಿಯವರು ಈ ವರ್ಷದ ಬಜೆಟ್ ಮಂಡನೆ ಮಾಡುವುದಕ್ಕಿಂತ ಮುಂಚೆ ನಾವೇ ಬಜೆಟ್ ಬಗ್ಗೆ ಟೀಕೆ ಮಾಡುವಂತಹ ಪರಿಸ್ಥಿತಿ ಬರುತ್ತದೆ. ಏಕೆಂದರೆ ಕೋವಿಡ್-19 ಸಂದರ್ಭದಲ್ಲಿ ಸುಮಾರು ಎರಡು ವರ್ಷಗಳಿಂದ ಯಾವುದೇ ರೀತಿಯ ಆರ್ಥಿಕ ಚಟುವಟಿಕೆಗಳು ಸಮರ್ಪಕವಾಗಿ ನಡೆಯದಿರುವ ಕಾರಣದಿಂದಾಗಿ ಬೇರೆ ಬೇರೆ ದೇಶಗಳು ಸಹ ಆರ್ಥಿಕ ವ್ಯವಸ್ಥೆಯಲ್ಲಿ ಪೂರ್ತಿ ಕುಗ್ಗಿಹೋಗಿ ದಿವಾಳಿ ಎದ್ದಿರುವಂಥದ್ದನ್ನು ನಾವು ಮಾಧ್ಯಮಗಳಲ್ಲಿ ನೋಡುತ್ತಿದ್ದೇವೆ. ಕರ್ನಾಟಕದಲ್ಲೂ ಕೂಡ ಅದೇ ಸ್ಥಿತಿ ಆಗಬಹುದು. ಪ್ರತಿಪಕ್ಷದವರು ಹಾಗೂ ಆಡಳಿತ ಪಕ್ಷದವರು ಮುಂದಿನ ದಿನಗಳಲ್ಲಿ ಬಜೆಟ್ ಅಧಿವೇಶನದಲ್ಲಿ ಬರೀ ಬಯ್ಯುವಂಥದ್ದು ಆಗುತ್ತದೆಂದು ನನಗೆ ಅನಿಸುತ್ತಿತ್ತು.

(361)15.3.2022/5.40/ಎಂ.ಎಂ-ಜಿ.ಆರ್ (ವೈಸ್ ಚೇರ್ಮನ್ ಉಪಸ್ಥಿತಿ)

**ಶ್ರೀ ಡಿ.ಎಸ್. ಅರುಣ್ (ಮುಂದು):-**

ಪ್ರತಿಪಕ್ಷದವರು ಮತ್ತು ಆಡಳಿತ ಪಕ್ಷದವರಿಬ್ಬರೂ ಮುಂದಿನ ದಿನಗಳಲ್ಲಿ ಬಜೆಟ್ ಅಧಿವೇಶನದಲ್ಲಿ ಬರೀ ಬೈಯುವುದಾಗುತ್ತದೆ ಎಂದು ನನಗನ್ನಿಸುತ್ತಿತ್ತು. ಬಜೆಟನ್ನು ಮಂಡನೆ ಮಾಡಿದ ಮೇಲೆ ಅದರ ಬಗ್ಗೆ ಯಾವುದೇ ರೀತಿಯ ಉಲ್ಲೇಖ ಮಾಡುವಂತಹ ಪ್ರತಿಪಕ್ಷಗಳಾಗಲೀ ಅಥವಾ Economists ಆಗಲೀ ಯಾರೂ ಇದನ್ನು ವಿರೋಧ ಮಾಡಿದಂತಹ ಬಜೆಟ್ ಇದಾಗಲಿಲ್ಲ. ಅದ್ಭುತವಾದ ಬಜೆಟನ್ನು ಮಂಡನೆ ಮಾಡಿರುವುದಕ್ಕೆ ಮುಖ್ಯಮಂತ್ರಿಯವರಾದ ಮಾನ್ಯ ಬಸವರಾಜ ಬೊಮ್ಮಾಯಿಯವರಿಗೆ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಹೇಳಲಿಚ್ಛಿಸುತ್ತೇನೆ. ಒಂದು stable Government ಯಾವ ರೀತಿ ಆಗಬೇಕೆಂಬ ಆರ್ಥಿಕ ವ್ಯವಸ್ಥೆಯನ್ನು, ಇನ್ನು ಮುಂದೆ ಬರುವಂತಹ ಒಂದು ವರ್ಷಗಳ ಕಾಲ ಯಾವ ರೀತಿ ನಡೆಸಬೇಕು ಎಂಬುದಕ್ಕೆ ಇದೊಂದು ದಿಕ್ಸೂಚಿಯಾಗಿದೆ. ನನ್ನ ದೃಷ್ಟಿಯಲ್ಲಿ ಇದೊಂದು progressive and balanced Budget. Balanced Budget ಎಂಬುದಕ್ಕೆ ಮೂರು ಕಾರಣಗಳಿವೆ. ಒಂದು regional balance . ನೀವು ಕರಾವಳಿ ಭಾಗಕ್ಕೆ ಹೋಗುತ್ತೀರೋ, ಉತ್ತರ ಕರ್ನಾಟಕಕ್ಕೋ, ಮಲೆನಾಡು ಭಾಗಕ್ಕೆ ಹೋಗುತ್ತೀರೋ, ಬೆಂಗಳೂರು, ಹಳೇ ಮೈಸೂರು ಭಾಗಕ್ಕೆ ಹೋಗುತ್ತೀರೋ ಎಲ್ಲದಕ್ಕೂ ಸಮನಾಗಿ ಬೇಕಾಗಿರುವಂತಹ ಎಲ್ಲಾ ವ್ಯವಸ್ಥೆಯನ್ನು ಮಾಡಿರುವುದು regional balance ಆಗಿದೆ. ಇನ್ನೊಂದು social balance; ಏತಕ್ಕೆ ಎಂದರೆ ಎಲ್ಲಾ ಸಮುದಾಯಗಳವರಿಗೆ ಬೇಕಾಗಿರುವುದನ್ನು ಕೊಟ್ಟಿರುವಂತಹದ್ದು ಮತ್ತು ಅಲ್ಲಿಗೆ ಬೇಕಾಗಿರುವಂತಹ ವ್ಯವಸ್ಥೆಯನ್ನು ಮಾಡುತ್ತಿರುವಂತಹದ್ದು social balance. ಇನ್ನೊಂದು sectorial balance. ನೀವು ಕೃಷಿ, ನೀರಾವರಿ, ಮೂಲಸೌಕರ್ಯಗಳನ್ನು ತೆಗೆದುಕೊಳ್ಳುತ್ತೀರೋ, ಪ್ರವಾಸೋದ್ಯಮ, ಶಿಕ್ಷಣ, ಸಮಾಜ ಕಲ್ಯಾಣ ಈ ರೀತಿಯ ಎಲ್ಲಾ ಕ್ಷೇತ್ರಗಳನ್ನು ಸಮನಾಗಿ ನೋಡಿ ಅದನ್ನು balanced ಆಗಿ ಮಾಡಿರುವುದಕ್ಕೆ progressive and balanced Budget ಎನ್ನುವುದಕ್ಕೆ ಇದು ಬಹಳ ಅತ್ಯುತ್ತಮವಾದಂತಹ ಉದಾಹರಣೆಯಾಗಿದೆ. 2022-23ನೇ ಸಾಲಿನ ಬಜೆಟ್ ಗಾತ್ರ ರೂ. 02,65,720 ಕೋಟಿ ಅಂದರೆ ಕಳೆದ ವರ್ಷಕ್ಕಿಂತ ಸುಮಾರು 15,000 ಕೋಟಿ

ರೂಪಾಯಿಗಳಷ್ಟು ಜಾಸ್ತಿಯಾಯಿತು. ನಾವು ಬಜೆಟನ್ನು ನೋಡಿದಾಗ ಎಷ್ಟು ಸೊನ್ನೆಗಳಿವೆ ಎಂದು ನೋಡುತ್ತಿದ್ದೆವು. ನಾನೊಬ್ಬ ಬಿ.ಬಿ.ಎಂ., ಪದವೀಧರನಾಗಿದ್ದೇನೆ. ನಾನು ಪ್ರತಿ ಸಲ ಬಜೆಟನ್ನು ವಿಶ್ಲೇಷಣೆ ಮಾಡಬೇಕಾದರೆ ಶಿವಮೊಗ್ಗದಲ್ಲಿ ಯಾವುದಾದರೂ ಡಿಬೆಟ್‌ಗೆ ಹೋದರೆ ಬಜೆಟ್ ಬಂದ ಕೂಡಲೇ ನಮ್ಮೂರಿಗೆ ಎಷ್ಟು ಬಂತು ಎಂದು ಕೇಳುತ್ತಿದ್ದರು. ನಮಗೆ ಎಷ್ಟು ಸಿಕ್ಕಿತು, ನಮಗೆ ಏನು ಅನುಕೂಲ? ಎರಡು ದಿನ ಚರ್ಚೆಯಾಗುತ್ತದೆ ಅದಾದ ಮೇಲೆ ಅದರ implementation ಇಡೀ ವರ್ಷದ ಕೊನೆಗೆ ಏನಾದರೂ ನೋಡಿದರೆ ಅಷ್ಟೊಂದು ಹಣ ಎಲ್ಲಿ ಹೋಯಿತು ಎಂದು ನಮಗೆ ಅನಿಸುವುದಕ್ಕೆ ಶುರುವಾಯಿತು. ಆದರೆ ಈ ಸಲ ಬಹಳ ವ್ಯವಸ್ಥಿತವಾಗಿ ಮತ್ತು ಪ್ರಾಕ್ಟಿಕಲ್ ಆಗಿದೆ. ೨೦೦6ನೇ ಇಸವಿಯಿಂದಲೂ ಬಹಳ ಅತ್ಯುತ್ತಮ ಬಜೆಟನ್ನು ನಮ್ಮ ಶಿವಮೊಗ್ಗ ಜಿಲ್ಲೆಗೆ ಕೊಡಲಾಗಿದೆ. ಇದನ್ನು ಬಹಳ ಪ್ರಾಕ್ಟಿಕಲ್ ಆಗಿ ಉಪಯೋಗ ಮಾಡಬೇಕೆನ್ನುವುದು; ಈ ದೇಶದಲ್ಲಿ ಮತ್ತು ಈ ರಾಜ್ಯದಲ್ಲು ಕೂಡ ಹಲವಾರು ಅಭಿವೃದ್ಧಿ ಕಾರ್ಯಗಳಾಗುತ್ತವೆ. ನಾನು ಒಂದೊಂದೇ ಅಂಶವನ್ನು ಹೇಳಬಯಸುತ್ತೇನೆ. ಏಕೆಂದರೆ, ನಾವೆಲ್ಲರೂ ಸಾಯಂಕಾಲ 6.3೦ ಗಂಟೆಗೆ ಚಲನಚಿತ್ರ ನೋಡುವುದಕ್ಕೆ ಹೋಗಬೇಕಾಗಿದೆ ಆದ್ದರಿಂದ ಅಷ್ಟರೊಳಗೆ ಮುಗಿಸುತ್ತೇನೆ. ಈ ಬಜೆಟ್‌ನಲ್ಲಿ ನಾನು ಮುಖ್ಯವಾದ ಅಂಶಗಳನ್ನು ಮಾತ್ರ, ನಾನು ಗಮನಿಸಿರುವ ಅಂಶಗಳನ್ನು ಮಾತ್ರ ಮಾತನಾಡುತ್ತೇನೆ. ಅಭಿವೃದ್ಧಿಯಾಗಬೇಕಾದರೆ ಒಂದಷ್ಟು ಅರಣ್ಯ ನಾಶ ಅಥವಾ ಮರಗಳನ್ನು ಕಡಿಯುವುದು ಆಗುತ್ತದೆ. ಅದರ ಸರ್ವೆ ಆಗುತ್ತದೆ. ಸರ್ವೆ ಆಗಿ eco-deficit ಅನ್ನು ಸರಿ ಮಾಡಬೇಕೆನ್ನುವುದಕ್ಕೆ ಅದ್ಭುತವಾದ ಗ್ರೀನ್ ಬಜೆಟನ್ನು ಕೊಟ್ಟಿರುವುದು ಈ ನಮ್ಮ ಬಜೆಟ್‌ನಲ್ಲಿ ಆಗಿದೆ. ಯಾವತ್ತೂ ಹೀಗೆ ಮಾಡಿರಲಿಲ್ಲ. ಮರಗಳು ಎಷ್ಟು ನಾಶವಾಗುತ್ತದೆ, ಮತ್ತೆ ಅದಕ್ಕೆ ಎಷ್ಟು ಪರಿಹಾರ ಮಾಡಬೇಕು, ಅದಕ್ಕೆ ಎಷ್ಟು ಬಜೆಟನ್ನು ಕೊಡಬೇಕು ಎನ್ನುವುದನ್ನು ಬಹಳ ವ್ಯವಸ್ಥಿತವಾಗಿ ಮಾಡಿದ್ದು ಇದೊಂದು ಗ್ರೀನ್ ಬಜೆಟ್ ಎಂದು ಹೇಳುವುದಕ್ಕೆ ಬಹಳ ಹೆಮ್ಮೆಯಾಗುತ್ತದೆ. ಅದೇ ರೀತಿ ಮೈಕ್ರೋ ಲೆವಲ್‌ನಲ್ಲಿ ಬಜೆಟನ್ನು ಹಂಚಿಕೆ ಮಾಡಿರುವುದು. ಕೃಷಿಗೆ, ನೀರಾವರಿಗೆ ಉತ್ತೇಜನ ಕೊಡಬೇಕೆಂದು ಅದನ್ನು ಕೂಡ ಬಹಳ ವ್ಯವಸ್ಥಿತವಾಗಿ ಮಾಡಿರುವುದು ಮತ್ತು ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳಾದ ಎತ್ತಿನಹೊಳೆ, ಮೇಕೆದಾಟು, ತುಂಗಭದ್ರ ಈ ರೀತಿಯ ಯೋಜನೆಗಳಗೂ ಅನುದಾನ ಕೊಟ್ಟಿದ್ದಾರೆ. ಅದನ್ನೆಲ್ಲಾ ಬಹಳ ಉಲ್ಲೇಖ ಮಾಡುವುದಕ್ಕೆ ಹೋಗುವುದಿಲ್ಲ. ನಮಗೆಲ್ಲರಿಗೂ ಆದಾಯವನ್ನು ಹೇಗೆ ಜಾಸ್ತಿ ಮಾಡುತ್ತಾರೆ ಎಂದು

ಅನಿಸುತ್ತಿತ್ತು. ಆದಾಯವನ್ನು ಜಾಸ್ತಿ ಮಾಡಬೇಕೆಂದರೆ ತೆರಿಗೆ ಹಾಕಬೇಕು. ಇರುವಂತಹ ವ್ಯವಸ್ಥೆಯಲ್ಲಿ ತೆರಿಗೆ ಹಾಕಿದರೆ ಮಾತ್ರ ಆದಾಯ ಜಾಸ್ತಿಯಾಗುತ್ತದೆ. ಆದರೆ ಬಹಳ ಹುಷಾರಾಗಿ ಎಲ್ಲಿಯೂ ಕೂಡ ತೆರಿಗೆಯನ್ನು ಹೆಚ್ಚಳ ಮಾಡದೇ ಈ ಬಜೆಟನ್ನು ಮಂಡನೆ ಮಾಡಿರುವುದು ಬಹಳ ವಿಶೇಷವಾಗಿದೆ. ಯಾವುದರ ಮೇಲೂ ಹೆಚ್ಚಿನ ತೆರಿಗೆ ಹಾಕಲಿಲ್ಲ. ಸರ್ಕಾರಕ್ಕೆ ಬಹಳ ಸುಲಭವಾಗಿ ಸಿಗುವುದು ಪೆಟ್ರೋಲ್, ಡೀಸೆಲ್ ಮೇಲೆ ತೆರಿಗೆಯನ್ನು ಜಾಸ್ತಿ ಹಾಕುವುದು. ಆದರೆ ಸರ್ಕಾರ ಅದನ್ನು ಮುಟ್ಟಿಲ್ಲ. ಎಲ್ಲರಿಗೂ ಮಾರ್ಚ್ ತಿಂಗಳು ಬಂದರೆ ಸಾಕು ಅಬಕಾರಿ ಇಲಾಖೆಯಲ್ಲಿ ತೆರಿಗೆಯನ್ನು ಜಾಸ್ತಿ ಮಾಡುತ್ತಾರೆ ಎಂಬ ನಿರೀಕ್ಷೆ ಇತ್ತು. ತುಂಬಾ ವೈನ್ ಶಾಪ್, ಬಾರ್ ಅಂಗಡಿಗಳವರು ಅದನ್ನು ಸ್ಟಾಕ್ ಮಾಡಿಟ್ಟುಕೊಂಡಿದ್ದರು. ಇದರ ಮೇಲೆ ತೆರಿಗೆಯನ್ನು ಜಾಸ್ತಿ ಹಾಕುತ್ತಾರೆ, ನಾಳೆಯಿಂದ ಇದರ ಬೆಲೆ ಜಾಸ್ತಿಯಾಗುತ್ತದೆ ಎಂದು ಕೂಡ ಕಾಯುತ್ತಿದ್ದರು. ಅದ್ಯಾವುದನ್ನೂ ಮಾಡಲಿಲ್ಲ. ಅಬಕಾರಿ ಇಲಾಖೆಯಲ್ಲೂ ಕೂಡ ತೆರಿಗೆಯನ್ನು ಜಾಸ್ತಿ ಮಾಡದ ರೀತಿಯಲ್ಲಿ ನೋಡಿಕೊಂಡು ಇರುವಂತಹ ತೆರಿಗೆಯನ್ನು ಮುಂದಿನ ದಿನಗಳಲ್ಲಿ ಯಾವ ರೀತಿ ಸಂಗ್ರಹ ಮಾಡಬೇಕು, ಯಾವ ರೀತಿ ವಿನಿಯೋಗ ಮಾಡಬೇಕೆಂಬುದನ್ನು ಈ ಬಜೆಟ್‌ನಲ್ಲಿ ಬಹಳ ಅದ್ಭುತವಾಗಿ ಮಾಡಿರುವುದು. ಬಹಳ ಬೇಕಾಗಿರುವಂತಹ "ಯಶಸ್ವಿನಿ ಯೋಜನೆ" ಇಲ್ಲಿಯವರೆಗೆ ನಿಂತಿತ್ತು ಅದನ್ನು ಪುನಃ ಪ್ರಾರಂಭ ಮಾಡಿರುವುದನ್ನು ನಾವೆಲ್ಲರೂ ಶ್ಲಾಘನೆ ಮಾಡಲೇಬೇಕು.

ರಾಷ್ಟ್ರೀಯ ಹೆದ್ದಾರಿಗಳನ್ನು ಬಹಳ ಅದ್ಭುತವಾಗಿ ಎಲ್ಲಾ ಇಡೀ ದೇಶದಲ್ಲಿ; ಮುಂಚೆ ಒಂದು ದಿನಕ್ಕೆ ಇಷ್ಟು ಕಿಲೋ ಮೀಟರ್ ಎನ್ನುವುದನ್ನು ಹತ್ತು ಪಟ್ಟು ಜಾಸ್ತಿ ಮಾಡಿರುವುದು ಮತ್ತು ಕರ್ನಾಟಕದಲ್ಲಿ 2275 ಕಿ.ಮೀ., ರಸ್ತೆ ಮಾಡುವುದನ್ನು ಇದರಲ್ಲಿ ಸೇರಿಸಿರುವುದು ಗಮನೀಯವಾದುದು. ನಾವು ಹೆದ್ದಾರಿ ಮಾಡಬೇಕಾದರೆ ಅಕ್ಕ ಪಕ್ಕ ಕೆರೆಗಳಿರುತ್ತವೆ. ನಾವು global warming ಬಗ್ಗೆ ಮಾತನಾಡುತ್ತೇವೆ. ಉಷ್ಣಾಂಶ ಜಾಸ್ತಿಯಾಗುತ್ತಿದೆ, ಅದನ್ನು ಕಡಿಮೆ ಮಾಡಬೇಕೆಂಬ ಬಗ್ಗೆ ಮಾತನಾಡುತ್ತೇವೆ. ಈ ಬಜೆಟ್‌ನಲ್ಲಿ ರಾಷ್ಟ್ರೀಯ ಹೆದ್ದಾರಿಗಳನ್ನು ಮಾಡಬೇಕಾದರೆ ಕೆರೆಗಳನ್ನು ಪುನಶ್ಚೇತನ ಮಾಡಬೇಕೆನ್ನುವ ಬಗ್ಗೆ ಅದ್ಭುತವಾಗಿ ಯೋಚನೆ ಮಾಡಲಾಗಿದೆ. ಕೆರೆಗಳ ಪುನಶ್ಚೇತನವಾದರೆ ಅಂತರ್ಜಲ ಅಭಿವೃದ್ಧಿಯಾಗುತ್ತದೆ. ಬಿಸಿಲನ್ನು ಕಾಯುವುದರಲ್ಲಿ ಶಕ್ತಿ ಇದೆ

ಎನ್ನುವುದನ್ನು ಈ ಬಜೆಟ್‌ನಲ್ಲಿ ಗಮನ ಸೆಳೆದಿದ್ದಾರೆ. ಸಾಕಷ್ಟು ಗ್ರಾಮೀಣ ಭಾಗಗಳಿಗೆ ಮಳೆಯಿಂದ ಸಾಕಷ್ಟು ಸಮಸ್ಯೆಗಳಾಯಿತು. ರಸ್ತೆಗಳನ್ನು ಪುನಶ್ಚೇತನ ಮಾಡಲು ವಿಶೇಷವಾದ ಒತ್ತನ್ನು ಕೊಟ್ಟಿದೆ. ಈ ಭಾಗದಲ್ಲಿ ಮಳೆಯಿಂದ ಹಾಳಾದ ರಸ್ತೆಗಳನ್ನು ಸರಿಪಡಿಸಲು ಒತ್ತು ಕೊಡಲಾಗಿದೆ.

ಜಲಜೀವನ್ ಮಿಷನ್ ಯೋಜನೆ ಬಗ್ಗೆ ಸಾಕಷ್ಟು ಚರ್ಚೆಗಳಾಗುತ್ತಿದೆ. ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಇದಕ್ಕೆ ವಿಶೇಷವಾದ ಒತ್ತನ್ನು ಕೊಟ್ಟು, ಕಳೆದ ಒಂದು ವರ್ಷದಿಂದ ಪ್ರತಿಯೊಂದು ಮನೆಗೆ ನೀರನ್ನು ಕೊಡಬೇಕೆನ್ನುವ ಉದ್ದೇಶವನ್ನಿಟ್ಟುಕೊಂಡಿದ್ದಾರೆ. ಸ್ವಾತಂತ್ರ್ಯ ಬಂದು ಸುಮಾರು 75 ವರ್ಷಗಳಾದರೂ ತುಂಬಾ ಮನೆಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಇರಲಿಲ್ಲ. ಮಾನ್ಯ ಪ್ರಧಾನಮಂತ್ರಿಯವರು ಮತ್ತು ನಮ್ಮ ಸರ್ಕಾರ "ಜಲ ಜೀವನ್ ಮಿಷನ್"ನಿಂದ ಸುಮಾರು 25 ಲಕ್ಷ ಮನೆಗಳಿಗೆ ಕುಡಿಯುವ ನೀರನ್ನು ಕೊಡುವ ತೀರ್ಮಾನವನ್ನು ಕೈಗೊಂಡಿದ್ದಾರೆ.

ವಿಶೇಷವಾಗಿ ಮಹಿಳೆಯರ ಬಗ್ಗೆ ಉಲ್ಲೇಖ ಮಾಡಲೇಬೇಕಾಗುತ್ತದೆ. ಸ್ವಸಹಾಯ ಸಂಘಗಳಿಗೆ ಮಹಿಳೆಯರಿಗೆ ಉದ್ಯೋಗಾವಕಾಶ ಕೊಡಬೇಕೆಂದು ಮಹಿಳಾ ಸಬಲೀಕರಣಕ್ಕೆ ಉತ್ತೇಜನ ಕೊಡುವುದು, ವಿಶೇಷವಾಗಿ ಮಹಿಳೆಯರಿಗೋಸ್ಕರ ಸಾಕಷ್ಟು ಯೋಜನೆಗಳನ್ನು ತರುವುದು, ನಿಜವಾಗಿಯೂ "ಓಬವ್ವ ಆತ್ಮರಕ್ಷಣೆ ಕಲೆ ಯೋಜನೆ" ಇವತ್ತಿನ ಹೆಣ್ಣುಮಕ್ಕಳಿಗೆ ಬಹಳ ಅವಶ್ಯಕವಾಗಿದೆ. ಹಾಸ್ಟೆಲ್‌ಗಳಲ್ಲಿರುವ ಹೆಣ್ಣುಮಕ್ಕಳಿಗೆ ಓಬವ್ವ ಆತ್ಮರಕ್ಷಣೆ ಕಲೆ ಯೋಜನೆಯಡಿಯಲ್ಲಿ ಅವರ ಸ್ವಯಂ ರಕ್ಷಣೆಗೋಸ್ಕರ ಜುಡೋ, ಕರಾಟೆ ಕಲಿಸುವುದು ಕೂಡ ಆಗಿದೆ. ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡಗಳ 300 ಮಹಿಳಾ ಪದವೀಧರರಿಗೆ ಉದ್ಯಮಗಳನ್ನು ಸ್ಥಾಪಿಸಲು ಪೂರಕವಾಗುವಂತೆ ಪ್ರತಿಷ್ಠಿತ ಐ.ಐ.ಎಂ., ಬೆಂಗಳೂರಿನಲ್ಲಿ ಉದ್ಯಮಶೀಲತಾ ತರಬೇತಿಯನ್ನು ನೀಡಲಾಗುವುದು ಎಂದು ಘೋಷಿಸಿದೆ. ಇದೇ ರೀತಿ ಹಲವಾರು ಯೋಜನೆಗಳನ್ನು ಮಾನ್ಯ ಮುಖ್ಯಮಂತ್ರಿಯವರ ನೇತೃತ್ವದ ಸರ್ಕಾರ ಈ ಬಜೆಟ್‌ನಲ್ಲಿ ಘೋಷಣೆ ಮಾಡಿದೆ.

ರೈತರಿಗೆ ಸಾಕಷ್ಟು ಯೊಜನೆಗಳನ್ನು ಕೊಡಲಾಗಿದೆ. ಅದೇ ರೀತಿ ಆರೋಗ್ಯ ಮತ್ತು ಶಿಕ್ಷಣಕ್ಕೆ ನಮ್ಮ ಮಾನ್ಯ ಮುಖ್ಯಮಂತ್ರಿಯವರಾದ ಬಸವರಾಜ ಬೊಮ್ಮಾಯಿಯವರ ನೇತೃತ್ವದಲ್ಲಿ ಹೆಚ್ಚು ಒತ್ತನ್ನು ಕೊಟ್ಟಿರುವುದಾಗಿದೆ. ಎರಡು ವರ್ಷದಿಂದ ಕೊರೋನಾದಿಂದ ಜಗತ್ತೇ ನಲುಗಿದರೂ ಕೂಡ

ಎಲ್ಲಿಯೂ ಸಮಸ್ಯೆಯಾಗದ ರೀತಿಯಲ್ಲಿ ದೊಡ್ಡ ದೊಡ್ಡ ಯೋಜನೆಗಳಿಗೆ ಒತ್ತು ಕೊಟ್ಟು ಅದಕ್ಕೆ ಬಜೆಟ್ ಕೂಡ ಕೊಡಲಾಗಿದೆ. ಮೇಕೆದಾಟು ಯೋಜನೆಗೆ 1,000 ಕೋಟಿ ರೂಪಾಯಿಗಳನ್ನು ಕೊಡಲಾಗಿದೆ. ಇಲ್ಲಿ ಒಂದು ಉಲ್ಲೇಖ ಮಾಡಬೇಕಾಗಿದೆ. ಹಿಂದಿನ ಸರ್ಕಾರ 50,000 ಕೋಟಿ ರೂಪಾಯಿಗಳನ್ನು ಘೋಷಿಸಿ ಅದರಲ್ಲಿ 500 ಕೋಟಿ ರೂಪಾಯಿಗಳನ್ನೂ ಕೊಡುವುದಕ್ಕೆ ಆಗಿರಲಿಲ್ಲ. ಇವತ್ತು ಅದಕ್ಕೆ 1,000 ಕೋಟಿ ರೂಪಾಯಿಗಳನ್ನು ಮೀಸಲಿಟ್ಟು ಮುಂದಿನ ದಿನಗಳಲ್ಲಿ ಈ ಯೋಜನೆಗೆ ಕೊಡಲಾಗಿದೆ. ಕೃಷ್ಣಾ ಮೇಲ್ದಂಡೆ ಯೋಜನೆಗೆ 5,000 ಕೋಟಿ ಹಣವನ್ನು ಮೀಸಲಿಟ್ಟಿದೆ. ಕಾಶಿ ಯಾತ್ರೆಯನ್ನು ಕೈಗೊಳ್ಳುವ ಪ್ರಯಾಣಿಕರಿಗೆ 30,000 ಜನರಿಗೆ ರೂ. 5,000 ರೂಪಾಯಿ ಪ್ರೋತ್ಸಾಹ ಧನ ಕೊಟ್ಟಿರುವುದು ನಿಜವಾಗಿಯೂ ಶ್ಲಾಘನೀಯವಾದುದು.

(ಮುಂದು)

(362) 15-03-2022 KH/MD 5-50 (ವೈಸ್ ಛೇರ್‌ಮನ್‌ರವರ ಉಪಸ್ಥಿತಿ)

**ಶ್ರೀ ಡಿ.ಎಸ್.ಅರುಣ್ (ಮುಂದು):-**

ಅದೇ ರೀತಿ ಸಾಕಷ್ಟು ದೇವಸ್ಥಾನಗಳಿಗೆ ಬೇಕಾಗಿರುವಂತಹ ಅನುದಾನವನ್ನು ಕೊಟ್ಟಿರುವಂತಹದ್ದಾಗಿದೆ. ಆರೋಗ್ಯ ಇಲಾಖೆಗೆ 13,982 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿರುವುದನ್ನು ಉಲ್ಲೇಖ ಮಾಡಬೇಕಾಗಿದೆ. ನಾವು ಆರೋಗ್ಯ ಮತ್ತು ಶಿಕ್ಷಣಕ್ಕೆ ಒತ್ತು ಕೊಡಬೇಕೆಂದು ಹೇಳುತ್ತೇವೆ. ಅದರಂತೆ, ಅದನ್ನು ಪ್ರಯೋಗಿಕವಾಗಿ ಉತ್ತರ ಕರ್ನಾಟಕದ ಹುಬ್ಬಳ್ಳಿ ಜಿಲ್ಲೆಯಲ್ಲಿ ಜಯದೇವ ಆಸ್ಪತ್ರೆಯನ್ನು ಪ್ರಾರಂಭ ಮಾಡುವುದಕ್ಕೆ 250 ಕೋಟಿ ರೂಪಾಯಿಗಳನ್ನು ಆಯವ್ಯಯದಲ್ಲಿ ಮೀಸಲಿಟ್ಟಿರುವ ಬಗ್ಗೆ ಗಮನಹರಿಸಬೇಕು. ಹಲವಾರು ಯೋಜನೆಗಳನ್ನು ಮಾನ್ಯ ಮುಖ್ಯಮಂತ್ರಿಯವರಾದ ಬಸವರಾಜ ಬೊಮ್ಮಾಯಿಯವರ ನೇತೃತ್ವದಲ್ಲಿ ಮಾಡಿರುವುದನ್ನು ನಾವು ಉಲ್ಲೇಖ ಮಾಡಬೇಕು. ಇವತ್ತಿನ ದಿವಸ ಒಟ್ಟು digitalization system ನಲ್ಲಿ ಒಂದು, ಎರಡು generation ಮುಂದೆ ಬಂದಾಗ ಇಡೀ ದೇಶದಲ್ಲಿ ಏನು ನಡೆಯುತ್ತಿದೆ, ಅವರಿಗೆ ಬೇಕಾಗಿರುವಂತಹ ವ್ಯವಸ್ಥೆಯನ್ನು ಕೂಡ ಮಾಡುತ್ತಿರುವಂತಹದ್ದಾಗಿದೆ. ಬಹಳ ವಿಶೇಷವಾಗಿ Drone Survey ಗೆ 287 ಕೋಟಿ

ರೂಪಾಯಿಗಳನ್ನು ಆಯವ್ಯಯದಲ್ಲಿ ಮೀಸಲಿಟ್ಟಿದ್ದಾರೆ. ರೆವಿನ್ಯೂ ಇಲಾಖೆ ಇರಬಹುದು, ಈಗಾಗಲೇ ಕೇಂದ್ರ ಸರ್ಕಾರ ರೈಲ್ವೆ ಇಲಾಖೆಯ ಎಲ್ಲಾ ಯೋಜನೆಗಳಿಗೆ Drone Survey ಮುಖಾಂತರ ಬಜೆಟ್ ಅನ್ನು ಅಲೋಕೇಟ್ ಮಾಡುವಂತಹದ್ದನ್ನು ನೋಡಬಹುದು. ಇದು ಪೂರ್ಣವಾದ ಮೇಲೆ Drone Survey ಮುಗಿದ ಮೇಲೆ ಅದರ ಬಿಲ್ ಅನ್ನು ಮಾಡುವಂತಹದ್ದನ್ನು ಕೂಡ ನೋಡಿದ್ದೇವೆ. ಕರ್ನಾಟಕ ಸರ್ಕಾರ Drone Survey ಗೆ ವಿಶೇಷವಾಗಿ ಅನುದಾನವನ್ನು ಇಟ್ಟಿರುವಂತಹದ್ದು ಬಹಳ ಗಮನೀಯವಾಗಿದೆ. ನಾನು last-mile connectivity ಬಗ್ಗೆ ಹೇಳುತ್ತೇನೆ. ವಿಶೇಷವಾಗಿ ಬಜೆಟ್‌ನಲ್ಲಿ Bike Taxi ಬಗ್ಗೆ ಕೂಡ ಉಲ್ಲೇಖವಾಗಿದೆ. ಮುಂದಿನ ದಿನಗಳಲ್ಲಿ ಇಲ್ಲಿರುವಂತಹ ಹಲವು ಜನ ವಿದ್ಯಾರ್ಥಿಗಳು, ಬಡವರು ಇರಬಹುದು, ಅವರಿಗೆ Bike Taxi ಮುಖಾಂತರ ವಿಶೇಷವಾಗಿ ಈ ಬಜೆಟ್‌ನಲ್ಲಿ ಹೇಳಿರುವಂತಹದ್ದು. Electric Two-Wheeler ಅನ್ನು ಮುಂದಿನ ದಿನಗಳಲ್ಲಿ ಒಂದಷ್ಟು ಬದಲಾವಣೆ ಆಗಬೇಕಾಗಿದೆ.

ಬಜೆಟ್‌ನಲ್ಲಿ ನೀರಾವರಿ ಇಲಾಖೆಗೆ ಹೆಚ್ಚು ಒತ್ತು ಕೊಟ್ಟಿರುವಂತಹದ್ದು. ಮಹಿಳೆಯರ ಸಬಲೀಕರಣಕ್ಕೆ, ಆಶಾ ಕಾರ್ಯಕರ್ತೆಯರಿಗೆ ಹೆಚ್ಚು ಅನುದಾನವನ್ನು ಕೊಡುವಂತಹದ್ದು ಕೂಡ ಆಗಿದೆ. ಇರುವಂತಹ ಕೆಲವೇ limited resources ನಲ್ಲಿ ಇವತ್ತಿನ ದಿವಸ ತೈಲಾ ಬೆಲೆ ಜಾಸ್ತಿಯಾಗಿರುವಂತಹ ಸಂದರ್ಭದಲ್ಲೂ ಕೂಡ semi-conductor chips 76 ಸಾವಿರ ಕೋಟಿ ರೂಪಾಯಿಗಳು ಆಗಿರುವಂತಹದ್ದು ಕೂಡ ಈ ಬಜೆಟ್‌ನಲ್ಲಿ ಉಲ್ಲೇಖ ಆಗಿರುವಂತಹದ್ದನ್ನು ನೋಡಬಹುದು. ನೆನ್ನೆಯಿಂದ ಈ ಸರ್ಕಾರದವರು 72 ಸಾವಿರ ಕೋಟಿ ರೂಪಾಯಿಗಳ ಸಾಲ ಮಾಡಿದೆ ಎಂದು ಹೇಳುತ್ತಿದ್ದಾರೆ. ಈ ಸಾಲವನ್ನು ಏಕೆ ಮಾಡಿದೆ ಎಂದು ಸುಮ್ಮನೆ ಗಮನಹರಿಸಿದರೆ, ಮಾಜಿ ಮುಖ್ಯಮಂತ್ರಿಯವರಾದ ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು 2018-19ನೇ ಸಾಲಿನ ಆಯವ್ಯಯ ಬಜೆಟ್ ಅನ್ನು ಮಂಡನೆ ಮಾಡಿರುವಂತಹದ್ದು ಇದೆ. ಅಲ್ಲಿ ಅವರು "2018-19ನೇ ಸಾಲಿನಲ್ಲಿ ಒಟ್ಟು ಜಮೆಗಳು 2,30,730 ಕೋಟಿ ರೂಪಾಯಿಗಳಾಗುತ್ತದೆ ಎಂದು ಅಂದಾಜು ಮಾಡಲಾಗಿದೆ. ಇದರಲ್ಲಿ 1,81,863 ಕೋಟಿ ರೂಪಾಯಿಗಳು ರಾಜಸ್ವ ಜಮೆಗಳು ಹಾಗೂ 48,600 ಕೋಟಿ ರೂಪಾಯಿಗಳ ಸಾಲ ಸೇರಿದಂತೆ ಎಂದು ಹೇಳಿದ್ದಾರೆ. ಇದು ಬಹಳ ಸ್ಪಷ್ಟವಾಗಿ ಈ ಬಜೆಟ್

ಪುಸ್ತಕದಲ್ಲಿ ಇದೆ. 2018-19ನೇ ಸಾಲಿನಲ್ಲಿ ಮಾಜಿ ಮುಖ್ಯಮಂತ್ರಿಯವರಾದ ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಆವತ್ತಿನ ದಿವಸ 48,601 ಕೋಟಿ ರೂಪಾಯಿಗಳು ಸಾಲದ ರೂಪದಲ್ಲಿ ಎಂದು ಬಜೆಟ್‌ನಲ್ಲಿಯೇ ತಿಳಿಸಿದ್ದಾರೆ. ಇವತ್ತಿನ ದಿವಸ ಇವರು 72 ಸಾವಿರ ಕೋಟಿ ರೂಪಾಯಿಗಳ ಬಗ್ಗೆ ಹೇಳುತ್ತಿದ್ದಾರೆ. 48,601 ಕೋಟಿ ರೂಪಾಯಿಗಳಿಗೆ ಶೇಕಡಾ 7 ರಷ್ಟು ಬಡ್ಡಿ ಸೇರಿಸಿದರೆ, ಇವತ್ತಿನ ದಿವಸ ಎಷ್ಟು ಬಡ್ಡಿಯಾಗುತ್ತದೆ ಎಂದು ಒಂದು ಬಾರಿ ಯೋಚನೆ ಮಾಡಿ. ಇದು ಬೇರೆ ಯಾವುದೂ ಅಲ್ಲ. ಇತ್ತೀಚೆಗೆ 2018-19ನೇ ಸಾಲಿನಲ್ಲಿ ಆಗಿರುವಂತಹದ್ದಾಗಿದೆ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾವು 28 ಸಾವಿರ ಕೋಟಿ ರೂಪಾಯಿಗಳ ಸಾಲವನ್ನು ಮನ್ನಾ ಮಾಡಿದ್ದೇವೆ. ಇದು ಇತಿಹಾಸ.

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಆಗ ಯಾವ ಕೋವಿಡ್-19 ಇರಲಿಲ್ಲ. ಈ ಸ್ಥಿತಿ ಕೂಡ ಇರಲಿಲ್ಲ. ಆಗ ರೆವಿನ್ಯೂ ಚೆನ್ನಾಗಿತ್ತು. ಎಲ್ಲಾ ಚೆನ್ನಾಗಿ ನಡೆಯುತ್ತಿತ್ತು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಕೆ.ಸಿ.ನಾರಾಯಣ ಗೌಡ (ಕ್ರೀಡೆ, ಯುವಜನ, ರೇಷ್ಮೆ ಸಚಿವರು):-** ಮಾನ್ಯ ಸಭಾಪತಿಯವರೇ, ರೆವಿನ್ಯೂ ಚೆನ್ನಾಗಿ ಬಂದಿದೆ ಎಂದರೆ, ಚಿಕ್ಕಮಗಳೂರು ಕಡೆ ಬಂದಿದೆ ಎಂದು ಹೇಳಿದೆಯಷ್ಟೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಚಿವರೇ, ತಮ್ಮ ಮಂಡ್ಯ ಜಿಲ್ಲೆಗೂ ಬಂದಿದೆ.

**ವೈಸ್ ಛೇರ್‌ಮನ್:-** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ಮಾನ್ಯ ಡಿ.ಎಸ್.ಅರುಣ್‌ರವರು ಮಾತನಾಡಿ ಮುಗಿಸಲಿ. ಈಗಾಗಲೇ 6 ಗಂಟೆಯಾಯಿತು. 6 ಗಂಟೆಗೆ ಇನ್ನು 6 ನಿಮಿಷಗಳಿವೆ.

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೇ, ನೆನ್ನೆಯಿಂದ ಬಜೆಟ್ ವಿಚಾರವಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರದ ಬಗ್ಗೆ ಎಳೆದಿದ್ದಾಯಿತು. ಕೇಂದ್ರ ಸರ್ಕಾರದ ಹಲವು ಯೋಜನೆಗಳನ್ನು ಬಹಳ ವರ್ಷಗಳಿಂದ ನೋಡುತ್ತಿದ್ದೇವೆ. 2014ನೇ ಸಾಲಿನಿಂದ ಹಲವಾರು ಯೋಜನೆಗಳನ್ನು ಅನುಷ್ಠಾನ ಮಾಡಬೇಕಾಗಿರುವಂತಹದ್ದು ರಾಜ್ಯ ಸರ್ಕಾರದ ಜವಾಬ್ದಾರಿಯಾಗಿತ್ತು. 2019ನೇ ಸಾಲಿನವರೆಗೂ ಯೋಜನೆಗಳು ಎಲ್ಲಿ ಅನುಷ್ಠಾನವಾಗಿದೆ ಎಂಬುದು ನಮಗೆ ಗೊತ್ತಿಲ್ಲ. ಕೇಂದ್ರ ಸರ್ಕಾರದ ಹಲವು ಯೋಜನೆಗಳನ್ನು ಕೂಡ ವಾಪಸ್ಸು ಹೋಯಿತು. ಇದರ ಜೊತೆಗೆ ಮಾನ್ಯ ಪ್ರಧಾನ ಮಂತ್ರಿಯವರಾದ ನರೇಂದ್ರ ಮೋದಿಯವರ ನೇತೃತ್ವದಲ್ಲಿ "Investors Meet" ಚೈನಾಗೆ ಹೋಗಬೇಕೆಂದು ಕರೆದಾಗಲೂ ಕೂಡ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಹೋಗಲಿಲ್ಲ. 36 ರಿಂದ 40 ಸಾವಿರ ಕೋಟಿ ರೂಪಾಯಿಗಳ ಇನ್ವೆಸ್ಟ್‌ಮೆಂಟ್ ಪಕ್ಕದ ರಾಜ್ಯವಾದ ಮಹಾರಾಷ್ಟ್ರಕ್ಕೆ ಹೋಗಿರುವುದನ್ನು ಕೂಡ ನೋಡಬಹುದು. ಈ ರೀತಿಯ ಅಭಿವೃದ್ಧಿಯ ಬಗ್ಗೆ ನಂಬಿಕೆ ಇಲ್ಲದೆ ಇರುವಂತಹ ಕಾಂಗ್ರೆಸ್‌ನವರು ಈ ರೀತಿ ಮಾತನಾಡಿದಾಗ ಬಹಳ ನೋವಾಗುತ್ತದೆ. ಮಾನ್ಯ ಪ್ರಧಾನ ಮಂತ್ರಿಯವರಾದ ನರೇಂದ್ರ ಮೋದಿಯರವರು ಮಾಡಿರುವಂತಹ ಕೆಲಸವನ್ನು ನೋಡಿದಾಗ ಗೊತ್ತಾಗುತ್ತದೆ. ಮಾಜಿ ಪ್ರಧಾನ ಮಂತ್ರಿಯವರಾದ ಮನಮೋಹನ್ ಸಿಂಗ್‌ರವರು ಒಬ್ಬ ಹಣಕಾಸು ಮಂತ್ರಿಗಳಾದಾಗ ಈ ದೇಶದ ಅತ್ಯಂತ ಒಳ್ಳೆಯ ಆರ್ಥಿಕ ತಜ್ಞರು ಎಂದು ಹೇಳಿದರು. ಅವರ ಬಗ್ಗೆ ನಮಗೆ ಬಹಳ ಅಪಾರವಾದಂತಹ ಗೌರವ ಇದೆ. 2004ನೇ ಸಾಲಿನಿಂದ 2014ನೇ ಸಾಲಿನವರೆಗೆ ಅವರು ಹಣಕಾಸು ಮಂತ್ರಿಗಳಾಗಿಯೇ ಇದ್ದಿದ್ದರೆ ನಾವು ಖುಷಿಯಾಗಿಯೇ ಇರುತ್ತಿದ್ದೆವು. ಈ ದೇಶದ ಪ್ರಧಾನ ಮಂತ್ರಿಯಾಗಿ ಅವರ್ಯಾರದೋ ಕೈಯಲ್ಲಿ ಸಿಕ್ಕಿ ಹಾಕಿಕೊಂಡು, ನಾವು ಆಕಾಶದಲ್ಲಿಯೂ ನೋಡಿದ್ದೇವೆ. ನೆಲದ ಮೇಲೆ ನೋಡಿದ್ದೇವೆ. ಭೂಮಿಯ ಮೇಲೆ ನೋಡಿದ್ದೇವೆ. ಆ ಮೂರು ಭಾಗಗಳಲ್ಲೂ ನಾವು ನೋಡಿಬಿಟ್ಟಿದ್ದೇವೆ. ಆರ್ಥಿಕ ತಜ್ಞರನ್ನು ಸುಮ್ಮನೆ ಕೂರಿಸಿ, ಈ ದೇಶದಲ್ಲಿ ಏನೇನು ಅನುಹುತಗಳಾಯಿತು ಎನ್ನುವುದನ್ನು ನಾವು ಗಮನಿಸಬೇಕಾಗಿದೆ. 2014ನೇ ಸಾಲಿನಿಂದ 2022 ಮಾರ್ಚ್‌ವರೆಗೂ ಒಂದೇ ಒಂದು ಭ್ರಷ್ಟಚಾರ ರಹಿತವಾದಂತಹ ಸರ್ಕಾರವನ್ನು ಮಾನ್ಯ ಪ್ರಧಾನ ಮಂತ್ರಿಯವರಾದ ನರೇಂದ್ರ ಮೋದಿಯವರು ನಡೆಸಿಕೊಂಡು ಬರುತ್ತಿದ್ದಾರೆ. ಇದರ ಬಗ್ಗೆ ನಮ್ಮೆಲ್ಲರಿಗೂ ಹೆಮ್ಮೆ ಇದೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಮಾನ್ಯ ಸದಸ್ಯರುಗಳು ಮೇಜು ತಟ್ಟಿ ಖುಷಿಯನ್ನು ವ್ಯಕ್ತಪಡಿಸಿದರು)**

**ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಡಿ.ಎಸ್.ಅರುಣ್‌ರವರು ಮೊದಲ ಬಾರಿ ಮಾತನಾಡುತ್ತಿದ್ದಾರೆ. ಈ ದೇಶದಲ್ಲಿ ಶೇಕಡಾ 40 ರಷ್ಟು ಕಮೀಷನ್ ಬಗ್ಗೆ ಜಗಜ್ಜಾಹೀರಾಗಿದೆ.

**ವೈಸ್ ಛೇರ್‌ಮನ್:-** ಮಾನ್ಯ ಸಲೀಂ ಅಹಮದ್‌ರವರೇ, ಅವರು ಮಾತನಾಡಿ ಮುಗಿಸಲಿ.

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಡಿ.ಎಸ್.ಅರುಣ್‌ರವರೇ, ರಫೆಲ್ ಬಗ್ಗೆ ಕೂಡ ಹೇಳಿ.

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೇ, ಇವತ್ತು ಈ ದೇಶ ವಿಶ್ವಗುರು ಆಗುತ್ತದೆ ಎನ್ನುವಂತಹ ಕಲ್ಪನೆ ಕೂಡ ಇದೆ. ಆ ರೀತಿ ಹಾಗೇ ಆಗುತ್ತದೆ. ಒಳ್ಳೆಯವರ ಕೈಯಲ್ಲಿ ಇದ್ದರೆ ಏನಾಗುತ್ತದೆ ಎನ್ನುವುದು ಗೊತ್ತಿದೆ. ಇತ್ತೀಚೆಗೆ ನಡೆದಂತಹ ಚುನಾವಣೆಯೂ ನಮ್ಮ ಕಣ್ಣ ಮುಂದೆ ಇದೆ. ಒಳ್ಳೆಯ ಕೆಲಸ ಮಾಡಿದರೆ, ಮತ್ತೊಮ್ಮೆ ಬರುತ್ತೇವೆ ಎನ್ನುವುದಕ್ಕೆ ಉತ್ತರಪ್ರದೇಶ, ಉತ್ತರಾಖಂಡ ಇರಬಹುದು, ಪಂಜಾಬ್‌ನಲ್ಲಿ ಏನಾಯಿತು ಎನ್ನುವಂತಹದ್ದು ಕೂಡ ನಮಗೆ ಗೊತ್ತಿದೆ. ಮಾನ್ಯ ಸದಸ್ಯರು ಮಾತನಾಡಬೇಕಾದರೆ ಮತ್ತೊಮ್ಮೆ ಬರುವುದಕ್ಕೆ ಆಗುವುದಿಲ್ಲ ಎಂದು ಹೇಳಿದರು. ಇದು ಪಂಜಾಬ್‌ನಲ್ಲಿ ಪ್ರೂವ್ ಆಗಿದೆ. ಈ ರಾಜ್ಯಕ್ಕೆ ಅತ್ಯಂತ ಹೆಚ್ಚು ಅನುದಾನ ಕೇಂದ್ರ ಸರ್ಕಾರದಿಂದ ಬಂದಿದೆ. ಏಕೆಂದರೆ, ಕೇಂದ್ರ ಸರ್ಕಾರದ ಬಗ್ಗೆ ಬಹಳ ಉಲ್ಲೇಖಗಳನ್ನು ಮಾಡಿದರು. "ಜೀವನ್ ಜ್ಯೋತಿ ಭೀಮಾ ಯೋಜನೆ"ಯಲ್ಲಿ ಕರ್ನಾಟಕಕ್ಕೆ ಬಂದ ಪಾಲು ಒಟ್ಟು ಚಂದದಾರರು ಅವರಿಗೆ ಸಿಕ್ಕಿರುವಂತಹ ಪಿಂಚಣಿ 22,06,967 ಲಕ್ಷ ರೂಪಾಯಿಗಳು ಬಂದಿದೆ. ಅದೇ ರೀತಿ ಮಾನ್ಯ ಪ್ರಧಾನ ಮಂತ್ರಿ "ಮುದ್ರಾ ಯೋಜನೆ"ಯಡಿ ಕರ್ನಾಟಕಕ್ಕೆ ಬಂದ ಪಾಲು 1,67,136 ಕೋಟಿ ರೂಪಾಯಿಗಳಷ್ಟು ಬಂದಿದೆ. "ಮುದ್ರಾ ಯೋಜನೆ"ಯಡಿ ಕರ್ನಾಟಕದ ಇಲ್ಲಿನ Start-ups ಇರಬಹುದು, ಹಲವಾರು Industrialists ಅವರಿಗೆ ಕೊಟ್ಟಿರುವಂತಹದ್ದಾಗಿದೆ. ಕರ್ನಾಟಕಕ್ಕೆ ಹಲವಾರು ಯೋಜನೆಗಳನ್ನು

ಕೊಟ್ಟಿದ್ದೇವೆ. ಬೀದಿ ವ್ಯಾಪಾರಿಗಳ "ಆತ್ಮನಿರ್ಭರ್" ಬಗ್ಗೆ ಉಲ್ಲೇಖ ಮಾಡಬೇಕು. 1,42,331 ಖಾತೆಗಳಿಗೆ ಹಣ ನೀಡಿರುವಂತಹದ್ದು ಆಗಿದೆ. ಹಾಗೆಯೇ, ಇದಕ್ಕೆ ಕೇಂದ್ರ ಸರ್ಕಾರ ಹೆಚ್ಚು ಅನುದಾನವನ್ನು ಕೊಟ್ಟಿದೆ. ಮಾನ್ಯ ಪ್ರಧಾನ ಮಂತ್ರಿ "ಜನ್‌ಧನ್" ಯೋಜನೆಯಡಿ ಇಲ್ಲಿಯವರೆಗೂ "ಕ್ರೆಡಿಟ್ ಕಾರ್ಡ್" ಯೋಜನೆಯಡಿ ಇಲ್ಲಿಯವರೆಗೆ 19,950 ಕೋಟಿ ರೂಪಾಯಿಗಳು ದೊರೆತಿದೆ. 2014ನೇ ಸಾಲಿನಿಂದ 2019ನೇ ಸಾಲಿನವರೆಗೆ ನಮ್ಮ ಸರ್ಕಾರ ಅಧಿಕಾರದಲ್ಲಿ ಇರಲಿಲ್ಲ. ತೆರಿಗೆ ಹಂಚಿಕೆಯಾಯಿತು. ಕೇಂದ್ರ ಸರ್ಕಾರದ ತೆರಿಗೆಯಲ್ಲಿ ಕರ್ನಾಟಕದ ಪಾಲು ಬರಬೇಕಾಗಿದುದ್ದು. ಕೇಂದ್ರದ ಅನುದಾನ 2009ನೇ ಸಾಲಿನಿಂದ 2014ನೇ ಸಾಲಿನವರೆಗೆ ಒಟ್ಟು 39,828 ಕೋಟಿ ರೂಪಾಯಿಗಳು, ಇದರೊಳಗೆ ನಮ್ಮ ಸರ್ಕಾರ ಇತ್ತು. ಕೇಂದ್ರ ಸರ್ಕಾರದ ಅನುದಾನ ಕೇವಲ 39,828 ಕೋಟಿ ರೂಪಾಯಿಗಳು ನಮಗೆ ದೊರೆತಿದೆ. ತೆರಿಗೆಯಲ್ಲಿ ನಮ್ಮ ಕೇಂದ್ರ ಸರ್ಕಾರದಿಂದ 91,374 ಕೋಟಿ ರೂಪಾಯಿಗಳು ದುಪ್ಪಟ್ಟು ಬಂದಿದೆ. ಶೇಕಡಾ 132 ರಷ್ಟು ನಮಗೆ ಕೇಂದ್ರ ಸರ್ಕಾರದಿಂದ ಅನುದಾನ ಬಂದಿದೆ. ಕೇಂದ್ರ ಸರ್ಕಾರ ಬೆಂಬಲ ಮಾಡುತ್ತಿಲ್ಲ ಎನ್ನುವುದನ್ನು ಹೇಳುವಂತಹದ್ದಾಗಿದೆ.

**ವೈಸ್ ಛೇರ್‌ಮನ್:-** ಮಾನ್ಯ ಡಿ.ಎಸ್.ಅರುಣ್‌ರವರೇ, 2-3 ನಿಮಿಷಗಳಲ್ಲಿ ಮಾತನಾಡಿ ಮುಗಿಸುವುದಕ್ಕೆ ಸಹಕರಿಸಬೇಕು.

**(ಮುಂದು)**

(363) ಎಸ್‌ಪಿಆರ್/ಎಂಡಿ/6:00/15/03/2022 (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಡಿ.ಎಸ್.ಅರುಣ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಬೇಗನೇ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮ್ಮ ಸರ್ಕಾರಕ್ಕೆ ಒಂದಿಷ್ಟು ಕೆಲವು ಸಲಹೆಗಳನ್ನು ನೀಡಬೇಕೆನ್ನುವ ವಿಚಾರವೂ ಸಹ ನನಗೆ ಇದೆ. ಆಯವ್ಯಯದಲ್ಲಿ ನಾನು ಪ್ರತಿನಿಧಿಸುವ ಊರಿಗೆ ಏನೇನು ಅನುಕೂಲಗಳು ದೊರೆತವು ಎನ್ನುವ ಬಗ್ಗೆ ನಾನು ಹೇಳಿದ್ದೇನೆ. ಅನೇಕ ವರ್ಷಗಳಿಂದ ನಮ್ಮ ಊರಿಗೆ ಒಳ್ಳೊಳ್ಳೆಯ ಯೋಜನೆಗಳನ್ನು ಈ ಹಿಂದಿನ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪ ಹಾಗೂ ಮಂತ್ರಿಗಳಾದ ಶ್ರೀ ಕೆ.ಎಸ್.ಈಶ್ವರಪ್ಪನವರಾದಿಯಾಗಿ ಎಲ್ಲಾ ಶಾಸಕ ಮತ್ತು ಸಂಸದರು ನೀಡಿದ್ದಾರೆ. ಇವರ ಜೊತೆಗೆ ಮಾಜಿ ಸಭಾಪತಿಗಳಾದ . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಶ್ರೀ ಡಿ.ಎಸ್.ಅರುಣ್‌ರವರು ನಾಳೆಯ ದಿನ ತಮ್ಮ ಭಾಷಣವನ್ನು ಮುಂದುವರೆಸಲಿ.

**ವೈಸ್ ಛೇರ್ಮನ್:–** ಇಲ್ಲ ಶ್ರೀ ಡಿ.ಎಸ್.ಅರುಣ್‌ರವರು ಇವತ್ತೇ ತಮ್ಮ ಮಾತುಗಳನ್ನು ಮುಗಿಸುತ್ತಾರೆ ಹಾಗೂ ಇದಕ್ಕೆ ಅವರು ಒಪ್ಪಿಕೊಂಡಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಅವರು ನಾಳೆಯ ದಿನ ಮುಂದುವರೆಸಲಿ.

**ವೈಸ್ ಛೇರ್ಮನ್:–** ಸಭಾನಾಯಕರೇ, ಇಲ್ಲ; ಇನ್ನೂ ಮಾತನಾಡುವವರ ತುಂಬಾ ಜನರ ಪಟ್ಟಿ ಇದೆ, ಹೀಗಾಗಿ ಇವರು ಇವತ್ತೇ ಮುಗಿಸಲಿ.

**ಶ್ರೀ ಡಿ.ಎಸ್.ಅರುಣ್:–** ಮಾನ್ಯ ಸಭಾಪತಿಯವರೇ, ಇನ್ನು ಐದು ನಿಮಿಷಗಳಲ್ಲಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ. ಶ್ರೀ ನಾರಾಯಣ ಗುರು ರವರ ಬಗ್ಗೆ ಎಲ್ಲರೂ ಮಾತನಾಡಿದ್ದು ಆಯಿತು ಹಾಗೂ ಶ್ರೀ ನಾರಾಯಣ ಗುರು ವಸತಿ ಶಾಲೆಯನ್ನು ಅನುಷ್ಠಾನಗೊಳಿಸುವ ಯೋಜನೆಯನ್ನು ನಮ್ಮ ಸರ್ಕಾರವು ಕೈಗೆತ್ತಿಕೊಂಡಿದೆ. ಈ ವಸತಿ ಶಾಲೆಯು ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಾಗುತ್ತಿದೆ. ನಮ್ಮ ಸರ್ಕಾರವು ಶಿವಮೊಗ್ಗ ಜಿಲ್ಲೆಯಲ್ಲಿ ಆಯುಷ್ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುತ್ತಿದೆ. ಪ್ರಸ್ತುತ ಇಡೀ ಪ್ರಪಂಚವು ಆರ್ಯುವೇದದ ಬಗ್ಗೆ ಮಾತನಾಡುತ್ತಿದೆ. ಇಂತಹ ಸಂದರ್ಭದಲ್ಲಿ ಯಾವುದೇ ಸರ್ಕಾರವು ಆಯುಷ್ ವಿಶ್ವವಿದ್ಯಾನಿಲಯವನ್ನು ಅನುಷ್ಠಾನಗೊಳಿಸುತ್ತಿದೆ ಎಂದರೆ, ಅದು ನಮ್ಮ ಸರ್ಕಾರವಾಗಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ವಿಮಾನ ನಿಲ್ದಾಣವನ್ನೂ ಸಹ ನಿರ್ಮಿಸಲಾಗುತ್ತಿದೆ. ಮುಂದಿನ 6–7 ತಿಂಗಳುಗಳಲ್ಲಿ ವಿಮಾನ ನಿಲ್ದಾಣದ ಕಾಮಗಾರಿಯು ಪೂರ್ಣಗೊಳ್ಳುತ್ತದೆ; ಏಕೆಂದರೆ ನಮ್ಮದು 'ಡಬಲ್ ಇಂಜಿನ್' ಮಾದರಿಯ ಸರ್ಕಾರವಾಗಿದೆ. ನಮ್ಮ ಸರ್ಕಾರಕ್ಕೆ ಕೆಲವೊಂದು ಸಲಹೆಗಳನ್ನು ನೀಡಲಿಚ್ಛಿಸುತ್ತೇನೆ. ನಾನು ಈ ಸದನದ ಸದಸ್ಯನಾಗಿ ಆಯ್ಕೆಗೊಳ್ಳುವ ಪೂರ್ವದಲ್ಲಿ ಎರಡು ವರ್ಷಗಳ ಕಾಲ ನಿಗಮದ ಅಧ್ಯಕ್ಷನಾಗಿದ್ದೆನು. ಶ್ರೀ ಬಿ.ಎಸ್.ಯಡಿಯೂರಪ್ಪನವರು ಹಾಗೂ ಎಲ್ಲಾ ಶಾಸಕರುಗಳು ಸೇರಿ ನನ್ನನ್ನು ಕರ್ನಾಟಕ ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮದ ಅಧ್ಯಕ್ಷನನ್ನಾಗಿ ನೇಮಿಸಿದ್ದರು. ಈ ನಿಗಮವು ಹೊಸದಾಗಿ

ಪ್ರಾರಂಭವಾಗಿತ್ತು; ನಾನು ಅದರ ಎರಡನೇ ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸಿದ್ದೇನೆ. ನನ್ನ ಅಧಿಕಾರಾವಧಿಯ ಎರಡು ವರ್ಷದಲ್ಲಿ ನನಗಾದ ಅನುಭವ ಮತ್ತು ಸರ್ಕಾರದ ಜೊತೆಗಿನ ಸಂಬಂಧ; ಇಲಾಖಾಧಿಕಾರಿಗಳನ್ನು ಯಾವ ರೀತಿಯಾಗಿ ಬಳಸಿಕೊಳ್ಳಬೇಕು ಎನ್ನುವುದು ನನಗೆ ಅಧ್ಯಕ್ಷನಾಗಿದ್ದ ಅವಧಿಯಲ್ಲಿ ಅನುಭವವಾಯಿತು. ಅದು ಸಣ್ಣ ನಿಗಮವಾಗಿದ್ದು, ಆಯವ್ಯಯದಲ್ಲಿ ಅಲ್ಪ ಪ್ರಮಾಣದ ಅನುದಾನವು ಲಭ್ಯವಾಗಿತ್ತು. ಆ ನಿಗಮದಲ್ಲಿ ಸ್ವಲ್ಪ ಪ್ರಮಾಣದ ಪಾರದರ್ಶಕತೆಯನ್ನು ತರಬೇಕು ಹಾಗೂ ಅಲ್ಲಿನ ಆಡಳಿತವನ್ನು ಗಟ್ಟಿಯಾಗಿ ಮಾಡಬೇಕು ಎನ್ನುವ ಅಭಿಲಾಷೆಯು ನನ್ನದಾಗಿತ್ತು. ನಿಗಮದಿಂದ ಎರಡು ಯೋಜನೆಗಳನ್ನು ಪ್ರಾರಂಭಿಸಲಾಯಿತು. ನಾನು ಯಾವ ಕಾರಣಕ್ಕಾಗಿ ಇದನ್ನು ಹೇಳುತ್ತಿದ್ದೇನೆಂದರೆ, ಇವತ್ತಿನ ದಿವಸ ವಿವಿಧ ಜಾತಿ ಹಾಗೂ ಸಮುದಾಯದ ಸಾಕಷ್ಟು ಅಭಿವೃದ್ಧಿ ನಿಗಮಗಳಿವೆ. ಪ್ರಸ್ತುತ ನಾವು ಆರ್ಥಿಕ ವರ್ಷದ 12 ನೇ ತಿಂಗಳಿನಲ್ಲಿದ್ದೇವೆ. ಈ ಹಂತದಲ್ಲಿ ಯೋಜನೆಗಳನ್ನೂ ಸಹ ನಮಗೆ ಮಾಡುವುದಕ್ಕಾಗುತ್ತಿಲ್ಲ. ಕೆಲವೊಂದು ಇಲಾಖಾಧಿಕಾರಿಗಳು ಮಾಡುತ್ತಿರುವ ಸಮಸ್ಯೆಗಳಿಂದ, ಅವರ ನ್ಯೂನತೆ ಹಾಗೂ ಅವರುಗಳು ಮಾಡುತ್ತಿರುವ ತಪ್ಪುಗಳಿಂದಾಗಿ ನಮಗೆ ಸಾಕಷ್ಟು ತೊಂದರೆಗಳಾಗುತ್ತಿವೆ. ಇನ್ನು 10 ನಿಮಿಷದಲ್ಲಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಮಾನ್ಯ ಸಭಾಪತಿಯವರೇ, ತಾವು ನಾಳೆಯ ದಿನ ಸಮಯಾವಕಾಶ ನೀಡಿದರೆ ಪರವಾಗಿಲ್ಲ.

**ವೈಸ್ ಛೇರ್ಮನ್:-** ಇಲ್ಲ ಇವತ್ತಿನ ದಿವಸವೇ ನಿಮ್ಮ ಭಾಷಣವನ್ನು ಮುಗಿಸಿ. Please conclude. ಇನ್ನು 3 ನಿಮಿಷಗಳ ಕಾಲಾವಕಾಶವನ್ನು ನೀಡುತ್ತೇನೆ.

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೇ, 3 ನಿಮಿಷ ಸಾಕಾಗುವುದಿಲ್ಲ. ಇನ್ನು 10 ನಿಮಿಷದಲ್ಲಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ವೈಸ್ ಛೇರ್ಮನ್:-** ವಾಸ್ತವವಾಗಿ ಸದನವನ್ನು ಸಂಜೆ 6:00 ಗಂಟೆಗೆ ಮುಂದೂಡಬೇಕಾಗಿತ್ತು. ಇದರ ಜೊತೆಗೆ ತಾವೂ ಸಹ ಎಲ್ಲಿಯೋ ಹೋಗಬೇಕಾಗಿತ್ತು ಎಂದು ತಿಳಿಸಿದ್ದೀರಿ. ಹೀಗಾಗಿ 6 ಗಂಟೆ 5 ನಿಮಿಷಕ್ಕೆ ನಾವು ಸದನದ ಕಲಾಪಗಳನ್ನು ಮುಂದೂಡಬೇಕೆಂಬ ಉದ್ದೇಶವನ್ನಿಟ್ಟುಕೊಂಡಿದ್ದೇವೆ. Please conclude.

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೇ, ನಿಗಮಗಳಿಗೆ ಸ್ವಲ್ಪ ಹೆಚ್ಚಿನ ಒತ್ತನ್ನು ನೀಡಬೇಕೆನ್ನುವ ಸಲಹೆಯನ್ನು ನಾನು ಸರ್ಕಾರಕ್ಕೆ ನೀಡುತ್ತೇನೆ. ಬೇರೆ ಸದಸ್ಯರುಗಳು ಹೇಳಿದಂತೆ, ನಿಗಮಗಳು ಗಂಜಿ ಹಾಗೂ ಪುನರ್ವಸತಿ ಕೇಂದ್ರಗಳಂತಾಗಬಾರದು. ನಿಗಮಗಳಿಗೆ ಒತ್ತನ್ನು ನೀಡಿ ಸ್ವಲ್ಪ ಸಹಾಯ ಮಾಡಿದಾಗ, ಅವುಗಳು ಖಂಡಿತವಾಗಿಯೂ ಸಹ ಒಳ್ಳೊಳ್ಳೆಯ ಕೆಲಸಗಳನ್ನು ಮಾಡುತ್ತವೆ. ಹಲವಾರು ಯೋಜನೆಗಳನ್ನು ಇನ್ನೂ ಸಹ ಅನುಷ್ಠಾನಗೊಳಿಸಿಲ್ಲ; ಹೀಗಾಗಿ ಇಲಾಖಾಧಿಕಾರಿಗಳು ಇದನ್ನು ಆದಷ್ಟು ಬೇಗ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಸರ್ಕಾರವು ಗೋಮಾಳ ಹಾಗೂ ಗೋವುಗಳ ರಕ್ಷಣೆಯನ್ನು ಮಾಡಬೇಕು. 'ಗೋಪಾಲಕರು' ಎನ್ನುವ ಹುದ್ದೆಯನ್ನು ಸರ್ಕಾರವು ಸೃಜಿಸಿದರೆ, ಖಂಡಿತವಾಗಿಯೂ ಸಹ ಅನುಕೂಲವಾಗುತ್ತದೆ. ಏಕೆಂದರೆ ಈ ಹಿಂದೆ ಹಳ್ಳಿಗಳಲ್ಲಿ ಇದ್ದಂತೆ ಒಬ್ಬನೇ ಗೋಪಾಲಕನು ಎಲ್ಲಾ ಹಸುಗಳನ್ನು ಮೇಯಿಸುವುದಕ್ಕೆ ಕರೆದುಕೊಂಡು ಹೋಗುವ ಸ್ಥಿತಿಯು ಇವತ್ತಿನ ದಿವಸ ಇಲ್ಲ. ಹೀಗಾಗಿ ಸರ್ಕಾರವು ಗೋಪಾಲಕರ ಹುದ್ದೆಗಳನ್ನು ಸೃಜಿಸಿದಲ್ಲಿ ಖಂಡಿತವಾಗಿಯೂ ಸಹ ನಮಗೆ ಅನುಕೂಲವಾಗುತ್ತದೆ. ಸರ್ಕಾರವು ಪ್ರತಿ ತಾಲ್ಲೂಕಿಗೆ ಇಂತಿಷ್ಟು ಗೋಪಾಲಕರು ಎಂದು ನೇಮಿಸಿ, ಅವರಿಗೆ ಇಂತಿಷ್ಟು ಸಹಾಯಧನ ಎಂದು ನೀಡಿದರೆ, ಇದರಿಂದ ಮುಂದಿನ ದಿನಗಳಲ್ಲಿ ಖಂಡಿತವಾಗಿಯೂ ಸಹ ಬಹಳ ಅನುಕೂಲವಾಗುತ್ತದೆ.

KIADB (Karnataka Industrial Areas Development Board) ಸಂಸ್ಥೆಯ ಬಗ್ಗೆಯೂ ಸಹ ಬಹಳಷ್ಟು ಉಲ್ಲೇಖವಾಗಿದೆ. ನಾನೊಬ್ಬ ಕೈಗಾರಿಕೋದ್ಯಮಿಯಾಗಿದ್ದೇನೆ. ಈ ಸಂಸ್ಥೆಗೆ ಆದಷ್ಟು ಬೇಗನೇ ಸರಿಯಾದ ರೂಪವನ್ನು ನೀಡಬೇಕು. ಇವತ್ತಿನ ದಿವಸ ಈ ಸಂಸ್ಥೆಯು ರಿಯಲ್ ಎಸ್ಟೇಟ್ ಏಜೆಂಟ್ ರೀತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದೆ. ಈ ಸಂದರ್ಭದಲ್ಲಿ ನಾನು ಶಿವಮೊಗ್ಗ ಜಿಲ್ಲೆಯ ಉದಾಹರಣೆಯೊಂದನ್ನು ನೀಡಬಯಸುತ್ತೇನೆ. ಶಿವಮೊಗ್ಗ ಜಿಲ್ಲೆಯ ಹತ್ತಿರ ಅಭಿವೃದ್ಧಿಗೋಸ್ಕರ ಕೆ.ಐ.ಎ.ಡಿ.ಬಿ. ಸಂಸ್ಥೆಯು 100 ಎಕರೆಯಷ್ಟು ಜಮೀನನ್ನು ವಶಪಡಿಸಿಕೊಳ್ಳುತ್ತದೆ. ಆಗ ಅಲ್ಲಿನ ರೈತ ಅಥವಾ ಜಮೀನು ಮಾಲೀಕರಿಗೆ ಎಕರೆಗೆ 13 ಲಕ್ಷ ರೂಪಾಯಿಗಳನ್ನು ನೀಡುತ್ತದೆ. ಅದೇ ಜಮೀನನ್ನು ಒಬ್ಬ ಉದ್ಯಮಿಗೆ 65 ಲಕ್ಷ ರೂಪಾಯಿಗಳಿಗೆ ಘೋಷಿಸುತ್ತದೆ. ಈ ಹಿಂದಿನ ಸರ್ಕಾರದ ಅವಧಿಯಲ್ಲಿ ಈ ರೀತಿಯ ಕೆಲಸಗಳಾಗಿವೆ. ಈ ಬಗ್ಗೆ ನಾನು ಹಲವಾರು ಬಾರಿ ಹೇಳಿದ್ದೇನೆ. ಕೆ.ಐ.ಎ.ಡಿ.ಬಿ. ಸಂಸ್ಥೆಯು ಈ ರೀತಿಯಾಗಿ ರೈತರಿಂದ ಎಕರೆಗೆ 13 ಲಕ್ಷ ರೂಪಾಯಿಗಳಿಗೆ ಜಮೀನು ಖರೀದಿಸಿ, ಉದ್ಯಮಿಗಳಿಗೆ 65 ಲಕ್ಷ ರೂಪಾಯಿಗಳಿಗೆ ನೀಡುವುದಾದರೆ, ಕೆ.ಐ.ಎ.ಡಿ.ಬಿ. ಸಂಸ್ಥೆಯಿಂದ ಯಾವ ರೀತಿಯ ಅನುಕೂಲವಾಗುತ್ತದೆ ಎಂದು ನಾನು ಕೇಳಬಯಸುತ್ತೇನೆ. ಈ ಸಂಸ್ಥೆಯು

ಅಷ್ಟೊಂದು ರೀತಿಯಲ್ಲಿ ವಶಪಡಿಸಿಕೊಂಡ ಭೂಮಿಯನ್ನು ಅಭಿವೃದ್ಧಿ ಪಡಿಸಿರುವುದಿಲ್ಲ. ಹೀಗಾಗಿ ಕೆ.ಐ.ಎ.ಡಿ.ಬಿ. ಸಂಸ್ಥೆಗೆ ಸರಿಯಾದ ವ್ಯವಸ್ಥೆಗಳನ್ನು ಮಾಡಬೇಕು. ಇದು ಬಹಳ ಪ್ರಮುಖವಾದ ವಿಷಯವಾಗಿದ್ದು, ಈ ಬಗ್ಗೆ ಈ ಹಿಂದೆಯೂ ಸಹ ನಾನು ಪ್ರಸ್ತಾಪಿಸಿದ್ದೇನೆ. ಇದರ ಬಗ್ಗೆ ಆಯವ್ಯಯದಲ್ಲಿ ಘೋಷಣೆ ಮಾಡಲಾಗುತ್ತದೆ ಎಂದು ನಾನು ಭಾವಿಸಿದ್ದೇನೆ. ಈ ಸದನಕ್ಕೆ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ 25 ಸದಸ್ಯರುಗಳು ಆಯ್ಕೆಗೊಂಡು ಬಂದಿದ್ದೇವೆ. ಹೀಗಾಗಿ ಗ್ರಾಮ ಪಂಚಾಯಿತಿ ಸದಸ್ಯರುಗಳಿಗೆ ಗೌರವ ಧನ ಹೆಚ್ಚಳ ಮಾಡಬೇಕೆಂದು ಹೇಳುತ್ತಿದ್ದೇವೆ. ಖಂಡಿತವಾಗಿಯೂ ಸಹ ಸರ್ಕಾರವು ಈ ಬಗ್ಗೆ ಗಮನಿಸಬೇಕು.

ಕೊನೆಯದಾಗಿ ನಮ್ಮ ಕ್ಷೇತ್ರಾಭಿವೃದ್ಧಿಗಾಗಿ ಹಾಲಿ ನೀಡಲಾಗುತ್ತಿರುವ 2 ಕೋಟಿ ರೂಪಾಯಿಗಳು ಯಾವುದಕ್ಕೂ ಸಾಕಾಗುತ್ತಿಲ್ಲ. ಹೀಗಾಗಿ ಸರ್ಕಾರವು ಇದನ್ನು 10 ಕೋಟಿ ರೂಪಾಯಿಗಳವರೆಗೆ ಹೆಚ್ಚಳ ಮಾಡಬೇಕೆಂದು ವಿನಂತಿಸುತ್ತೇನೆ. ಇಷ್ಟು ಅಂಶಗಳನ್ನು ಇಲ್ಲಿ ಪ್ರಸ್ತಾಪಿಸಲು ನನಗೆ ಕಡಿಮೆ ಸಮಯಾವಕಾಶ ದೊರೆತಿದೆ. ಸರ್ಕಾರವು ಪ್ರಸ್ತುತ ಮಂಡಿಸಿರುವ ಆಯವ್ಯಯವು ಅದ್ಭುತವಾಗಿದೆ. ಹೀಗಾಗಿ ರಾಜ್ಯದ ಮುಖ್ಯಮಂತ್ರಿಗಳಿಗೆ ಹಾಗೂ ಸಚಿವರಿಗೆ ನನ್ನ ಅಭಿನಂದನೆಗಳನ್ನು ತಿಳಿಸಲಿಚ್ಛಿಸುತ್ತಾ, ನಾನು ನನ್ನ ಮಾತುಗಳಿಗೆ ವಿರಾಮ ನೀಡುತ್ತೇನೆ.

**ವೈಸ್ ಛೇರ್ಮನ್:-** ಸಭಾನಾಯಕರೇ, ನೀವು ಈ ಹಿಂದೆ ಮಡಿಕೇರಿ ಜಿಲ್ಲೆಗೆ ಉಸ್ತುವಾರಿ ಮಂತ್ರಿಗಳಾಗಿದ್ದಿರಿ. ಶ್ರೀಮತಿ ವೀಣಾ ಎಸ್.ಅಚ್ಚಯ್ಯರವರು ಬಹಳ ಮನಸ್ಸು ಕರಗುವಂತಹ ವಿಚಾರವೊಂದನ್ನು ಪ್ರಸ್ತಾಪಿಸಿದರು. ಮಡಿಕೇರಿ ಜಿಲ್ಲೆಯ ಸೈನಿಕರೊಬ್ಬರು ಹಿಮಪಾತಕ್ಕೆ ಸಿಲುಕಿ ಹುತಾತ್ಮರಾದರು. ಹುತಾತ್ಮ ಸೈನಿಕರಿಗೆ ತಾಯಿ, ವಿಧವಾ ಪತ್ನಿ ಹಾಗೂ ಮಕ್ಕಳಿದ್ದಾರೆ. ಇವರುಗಳಿಗೆ ವಾಸಿಸಲು ಮನೆಯೇ ಇಲ್ಲ. ಸದಸ್ಯರು ಈ ವಿಷಯವನ್ನು ಪ್ರಸ್ತಾಪಿಸಿದಾಗ ತಾವು ಸದನದಲ್ಲಿ ಉಪಸ್ಥಿತರಿರಲಿಲ್ಲ; ಹೀಗಾಗಿ ಇದನ್ನು ನೋಟ್ ಮಾಡಿಕೊಳ್ಳಲಾಗಲಿಲ್ಲ. ಈ ಕಾರಣಕ್ಕಾಗಿ ನಾನು ಈ ಸಂಗತಿಯನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ದಯಮಾಡಿ ತಾವು ಈಗಿನ ಜಿಲ್ಲಾ ಉಸ್ತುವಾರಿ ಸಚಿವ ಶ್ರೀ ನಾಗೇಶ್‌ರವರಿಗೆ ಹೇಳಿ, ಈ ಕೂಡಲೇ, ಹುತಾತ್ಮ ಸೈನಿಕರ ಕುಟುಂಬಕ್ಕೆ ಆಶ್ರಯ ಯೋಜನೆಯಡಿ ಮನೆಯನ್ನು ಹಂಚಿಕೆ ಮಾಡಬೇಕು ಹಾಗೂ ಈ ಬಗ್ಗೆ ಸದನದಲ್ಲಿ ಹೇಳಿಕೆಯೊಂದನ್ನೂ ಸಹ ಮಾಡಬೇಕು. ಈ ಹೇಳಿಕೆಯನ್ನು ನೀವು ಮಾಡುತ್ತೀರೋ ಅಥವಾ ಜಿಲ್ಲಾ ಉಸ್ತುವಾರಿ ಸಚಿವರಿಂದ ಮಾಡಿಸುತ್ತೀರೋ ನೋಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನಾನು ಈ ಬಗ್ಗೆ ಕೂಡಲೇ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ನಾಗೇಶ್‌ರವರೊಂದಿಗೆ ಮಾತನಾಡಿ, ಹುತಾತ್ಮ ಸೈನಿಕರ ಕುಟುಂಬಕ್ಕೆ ಮನೆಯನ್ನು ಮಂಜೂರು ಮಾಡಿಸುವ ವ್ಯವಸ್ಥೆಯನ್ನು ಮಾಡುತ್ತೇನೆ.

**ವೈಸ್ ಛೇರ್ಮನ್:-** ಸಭಾನಾಯಕರೇ, ಧನ್ಯವಾದಗಳು.

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, ಹುತಾತ್ಮ ಸೈನಿಕರ ಕುಟುಂಬಕ್ಕೆ ಆಶ್ರಯ ಯೋಜನೆಯಡಿ ಏಕೆ ಮನೆಯನ್ನು ಮಂಜೂರು ಮಾಡಿಸಬೇಕು? ಅದರ ಬದಲಾಗಿ ಬಹಳ ಸುಸಜ್ಜಿತವಾದ ಮನೆ ಎಂದು ಹೇಳಿ.

**ವೈಸ್ ಛೇರ್ಮನ್:-** ಮಡಿಕೇರಿ ಭಾಗದಲ್ಲಿ ಬೇರೆ ರೀತಿಯ ಮನೆಗಳಿವೆ. ಪ್ರಾಯಶಃ ನೀವು ಅವುಗಳನ್ನು ನೋಡಿಲ್ಲವೆಂದು ನಾನು ಭಾವಿಸುತ್ತೇನೆ. ಆದರೆ ನಾನು ಅವುಗಳನ್ನು ನೋಡಿದ್ದೇನೆ. ಈ ಹಿಂದಿನ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ.ಕುಮಾರಸ್ವಾಮಿರವರ ಅಧಿಕಾರಾವಧಿಯಲ್ಲಿ ಅಲ್ಲಿ ಬಹಳ ಒಳ್ಳೆಯ ಮನೆಗಳನ್ನು ನಿರ್ಮಿಸಿದ್ದಾರೆ. ಈ ಬಗ್ಗೆ ನನಗೆ ತಿಳಿದಿದೆ. ಅವುಗಳು ಬಹಳ ವೆಚ್ಚದ ಮನೆಗಳೂ ಸಹ ಆಗಿವೆ.

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, ....

**ವೈಸ್ ಛೇರ್ಮನ್:-** ಸದಸ್ಯರೇ, ದಯಮಾಡಿ ಕುಳಿತುಕೊಳ್ಳಿ. ಸದನವನ್ನು ನಾಳೆ ಬೆಳಗ್ಗೆ 10:30 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಸಂಜೆ 6 ಗಂಟೆ 7 ನಿಮಿಷಕ್ಕೆ ಮುಕ್ತಾಯಗೊಂಡು,**
**ಪುನಃ ದಿನಾಂಕ 16 ನೇ ಮಾರ್ಚ್ ಮಾಹೆ 2022 ರ ಬುಧವಾರದಂದು**
**ಬೆಳಗ್ಗೆ 10:30 ಗಂಟೆಗೆ ಸೇರಲು ನಿಶ್ಚಯಿಸಿತು)**

**<><><>**